# ಪ್ರಬುದ್ಧ ಕರ್ಣಾಟಕ

ಸಂಪುಟ ೫೦ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೯

# ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ, ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ, ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟನೆಯ ವರ್ಷ ಹಾಗೂ ಸಂಬಂಧಿಸಿದ ಪುಟ ಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

**ನರಸಿಂಹಾಚಾರ್, ಡಿ. ಎಲ್.,** ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬,

**Sreekantaiya, T. N.,** 'A century and a half of Literary Activity in Kannada,' **Kannada Studies**, Vol. 1. No. 2 (Mysore 1965). p. 62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

# ಪ್ರಬುದ್ಧ ಕರ್ಣಾಟಕ

ಸಂಪುಟ ೫೦ ಸಂಚಿಕೆ ೪

೧೯೮



ಕೀಲಕ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೯

PRABUDDHA KARNATAKA, Kannada Quarterly of the *University of Mysore*. Volume 50, Number 4, January 1969. Edited by Dr. H. Manappa Nayak and H. Thipperudra Swamy.



ಪ್ರಧಾನ ಸಂಪಾದಕರು

ಪ್ರೊಫೆಸರ್ ದಿ. ಜವರೇಗೌಡ

ಸಂಪಾದಕರು

ಡಾ. ಎಚ್. ಮಾನಪ್ಪನಾಯಕ

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

## ವಿಷಯ ಸೂಚಿಕೆ

## ಈ ಸಂಚಿಕೆಯ ಲೇಖಕರು

ಕುವೆಂಪು ....ಕರ್ಣಾಟಕದ ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು.

ಕೆ. ವಿರೂಪಾಕ್ಷಗೌಡ ....ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿಯ ತರುಣ ಲೇಖಕರು. ಈಗಾಗಲೇ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಎಸ್. ನಾಗರಾಜು ....ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಹಾಗೂ ಪ್ರಾಕ್ತನಶಾಸ್ತ್ರ ಇಲಾಖೆಯಲ್ಲಿ ಅಧ್ಯಾಪಕರು.

ಎಂ. ರಾಮರಾವ್ ....ಮಾನಸಗಂಗೋತ್ರಿ ಇಂಗ್ಲಿಷ್ ವಿಭಾಗದಲ್ಲಿ ಅಧ್ಯಾಪಕರು.

ಭೀಮರಾವ್ ಚಿಟಗುಪ್ಪಿ ....ಮುಂಬಯಿನ ಒಬ್ಬ ಕನ್ನಡ ಸಂಶೋಧನ ಲೇಖಕರು.

ಎನ್. ಬಾಲಸುಬ್ರಹ್ಮಣ್ಯ ....ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರು; ಈಗ ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ಕಾರ್ಯದ ಸಂಪಾದಕರಲ್ಲಿ ಒಬ್ಬರು.

ಜಿ. ಎಸ್. ಗಾಯಿ ....ಮೈಸೂರಿನಲ್ಲಿರುವ ಕೇಂದ್ರಶಾಸನ ಇಲಾಖೆಯ ಮುಖ್ಯಾಧಿಕಾರಿಗಳು.

ಸಿ.ಪಿ.ಕೆ. ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿರುವ ಸಿ. ಪಿ. ಕೃಷ್ಣಕುಮಾರ್.

ಎಚ್. ದೇವೀರಪ್ಪ ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗ್ರಂಥಸಂಪಾದನಾ ವಿಭಾಗದ ನಿರ್ದೇಶಕರು.

ಕೆ. ಶಿವರಾಮ ಐತಾಳ ....ಮೈಸೂರು ಶಾರದಾವಿಲಾಸ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

ಎನ್. ಬೋರಲಿಂಗಯ್ಯ ....ಮೈಸೂರು ವಿಶ್ವವಿದ್ಯಾನಿಲಯದ ಸಂಜೆಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

ಕೆ. ಕೆಂಪೇಗೌಡ ....ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಭಾಷಾಶಾಸ್ತ್ರ ಅಧ್ಯಾಪಕರು.

ಮಹೇಶ್ವರಪ್ಪ ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಭಾಷಾಂತರಕಾರರು.

ಜಿ.ವಿ.ಡಿ. ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ. ವಿದ್ಯಾರ್ಥಿ ಜಿ. ವಿ. ದಾಸೇಗೌಡ

'ಉಮಾಶಂಕರ' ....'ಪ್ರಸಾರಾಂಗ'ದ ಗ್ರಂಥಸೂಚಿ ವಿಭಾಗದಲ್ಲಿ ಸಂಶೋಧನ ಸಹಾಯಕ ಟಿ. ಎಚ್. ಹೊನ್ನಗಂಗಪ್ಪ.

ಸಂ. ನ. ರಾಮಸ್ವಾಮಿ ....ಮಾನಸಗಂಗೋತ್ರಿ ಸಸ್ಯವಿಜ್ಞಾನ ವಿಭಾಗದಲ್ಲಿ ಸಂಶೋಧನ ವಿದ್ಯಾರ್ಥಿ.

ಕುವೆಂಪು



# ದೀಕ್ಷಾಯಾತ್ರೆ*

ಪೂಜ್ಯ ಸ್ವಾಮಿ ಸಿದ್ಧೇಶ್ವರಾನಂದರು, ಶ್ರೀ ಮಹಾಪುರುಷಜಿಯವರ ಪದತಲದಲ್ಲಿ ಕುಳಿತು ಅವರ ದೀಕ್ಷಾನುಗ್ರಹಕ್ಕೆ ನಾನು ಪಾತ್ರನಾಗಬೇಕೆಂದು, ಸಲಹೆ ಇತ್ತಾಗ ನಾನು ಹಿಗ್ಗಿನಿಂದಲೆ ಸಮ್ಮತಿಸಿದ್ದೆ. ಆದರೆ ನಾನು ಒಪ್ಪಿದುದಕ್ಕೆ ಮುಖ್ಯ ಕಾರಣ ಅಥವಾ ಪ್ರೇರಣ ಎಷ್ಟರಮಟ್ಟಿಗೆ ಆಧ್ಯಾತ್ಮಿಕವಾಗಿತ್ತೊ, ನಾನು ಹೇಳಲಾರೆ. ನಾನು ಒಪ್ಪಿದುದು, ಮುಖ್ಯವಾಗಿ, ಆ ಸಲಹೆ ಗೋಪಾಲ ಮಹಾರಾಜರಿಂದ ಬಂದುದರಿಂದಲೆ; ಎರಡನೆಯದಾಗಿ, ದೇಶಸಂಚಾರದ ಹೊಸ ಹೊಸ ಅನುಭವಗಳನ್ನು ಪಡೆಯುವ ಅಭಿಲಾಷೆಯಿಂದಲೂ ಇರಬಹುದು.

ಗೋಪಾಲ ಮಹಾರಾಜರು (ನಾವು ಸ್ವಾಮಿ ಸಿದ್ಧೇಶ್ವರಾನಂದರನ್ನು ಆ ಅಕ್ಕರೆಯ ಹೆಸರಿನಿಂದಲೆ ಕರೆಯುತ್ತಿದ್ದುದು ರೂಢಿ.) ನನ್ನನ್ನು ರಕ್ಷಿಸಿ, ನನ್ನ ಬದುಕನ್ನು ಕತ್ತಲೆಯಿಂದ ಬೆಳಕಿಗೆ ತಂದ ದಿವ್ಯ ವ್ಯಕ್ತಿಯಾಗಿದ್ದುದರಿಂದ ಅವರ ಯಾವ ಸಲಹೆಯನ್ನಾಗಲಿ ನಾನು ತಿರಸ್ಕರಿಸುತ್ತಿರಲಿಲ್ಲ. ಇನ್ನು ಶ್ರೀ ರಾಮಕೃಷ್ಣಪರಮಹಂಸರ ಅಂತರಂಗ ಶಿಷ್ಯರಲ್ಲೊಬ್ಬರಾಗಿ, ಸಾಕ್ಷಾತ್ಕಾರದ ಶಿಖರವೇರಿ, ಆಧ್ಯಾತ್ಮಿಕ ವಿಭೂತಿಪುರುಷರಾಗಿ, ಶ್ರೀ ರಾಮಕೃಷ್ಣ ಮಿಶನ್ನಿನ ಸರ್ವೋಚ್ಚ ಅಧ್ಯಕ್ಷರಾಗಿದ್ದ ಮಹಾಪುರುಷ ಸ್ವಾಮಿ ಶಿವಾನಂದರಿಂದ, ನನ್ನ ಜೀವನ ಸಮಸ್ತವನ್ನೂ ಅಲ್ಪತ್ವದಿಂದ ಮೇಲಕ್ಕೆತ್ತಿ, ನನ್ನಾತ್ಮವನ್ನು ಭೂಮತ್ವದಲ್ಲಿ ಸಂಸ್ಥಾಪಿಸುವ ಸಂಸ್ಕಾರವೊಂದಕ್ಕೆ ನನ್ನನ್ನು ಪಾತ್ರನಾಗುವಂತೆ ಮಾಡುತ್ತೇನೆ ಎಂದು ಅವರು ತಮ್ಮ ಅಹೈತುಕೀ ಪ್ರೀತಿಯಿಂದ ಆಶ್ವಾಸನವಿತ್ತರೆ, ಆದಕ್ಕೆ ಎಂದಾದರೂ ಒಲ್ಲೆ ಎನ್ನುವುದು ಸಾಧ್ಯವೇ?

ಆದರೆ ಆಗ ನನ್ನ ಚೇತನ ಆ ದಿವ್ಯಸಂಪತ್ತಿಗೆ ಸಿದ್ಧವಾಗಿತ್ತೇ? ಅದನ್ನು ಬುದ್ಧಿಪೂರ್ವಕವಾಗಿಯಾದರೂ ಅಪೇಕ್ಷಿಸಿತ್ತೇ? ಎಂದು ಯಾರಾದರೂ ಕೇಳಿದರೆ, ನಾನು ಧೈರ್ಯವಾಗಿ, ನಿರ್ನಿಷೇಧಾರ್ಥಕವಾಗಿ ಉತ್ತರಿಸಲಾರೆ. ನನ್ನ ಬದುಕಿನಲ್ಲಿ

---

* "ಸ್ವಾಮಿ ಶಿವಾನಂದ ಸ್ಮೃತಿಸಂಗ್ರಹ" ಬಂಗಾಳಿ ಗ್ರಂಥಕ್ಕಾಗಿ ಬರೆದುದು. ಸ್ವಾಮಿ ಅಪೂರ್ವಾನಂದರು ಭಾಷಾಂತರಿಸಿ ಅದರಲ್ಲಿ ಅಚ್ಚುಮಾಡಿದ್ದಾರೆ.

ನನಗೆ ಒದಗಿರುವ ಯಾವ ಪ್ರೇಯಸ್ಸಾಗಲಿ ಶ್ರೇಯಸ್ಸಾಗಲಿ ನನ್ನ ಪ್ರಯತ್ನದಿಂದ ಬಂದಂತೆ ನನಗೆ ಎಂದೂ ಭಾಸವಾಗಿಲ್ಲ. ಯಾವುದೋ ನನಗರಿಯದ ಮಹಾಕೃಪೆ ನನ್ನ ಅರ್ಹತೆಯನ್ನೂ ಅಭೀಪ್ಸೆಯನ್ನೂ ಗಮನಿಸದೆ, ಕೆಲವೊಮ್ಮೆ ನನ್ನ ಅಹಂಕಾರದ ಇಷ್ಟಕ್ಕೆ ಇದಿರಾಗಿಯೆ, ನನ್ನನ್ನು ಮಂಗಳದ ಕಡೆಗೆ ಎಳೆದೊಯ್ದಿದೆ; ಮತ್ತು ಇಂದಿಗೂ ಎಳೆದೊಯ್ಯುತ್ತಿದೆ. ಆ ಮಹಾಕೃಪೆಯೆ ಸ್ವಾಮಿ ಸಿದ್ಧೇಶ್ವರಾನಂದರ ರೂಪದಲ್ಲಿ ನನ್ನನ್ನು ಪರಮಪೂಜ್ಯ ಸ್ವಾಮಿ ಶಿವಾನಂದರ ಪಾದಾರವಿಂದದೆಡೆಗೆ ಕರೆದೊಯ್ದಿತು!

೧೯೨೨ನೆಯ ಅಕ್ಟೋಬರ್ ತಿಂಗಳು ಮೂರನೆಯ ತೇದಿ ಗುರುವಾರ ಅಪರಾಹ್ನ ಎರಡೂವರೆ ಘಂಟೆಗೆ ನಾನು ಮತ್ತು ನನ್ನ ಒಬ್ಬ ಮಿತ್ರರು ಸ್ವಾಮಿ ಸಿದ್ಧೇಶ್ವರಾನಂದ ರೊಡನೆ ಮೈಸೂರು ಶ್ರೀ ರಾಮಕೃಷ್ಣಾಶ್ರಮದಿಂದ ಹೊರಟು ರೈಲು ನಿಲ್ದಾಣಕ್ಕೆ ಬಂದು ಬೆಂಗಳೂರಿಗೆ ಹೊರಟುನಿಂತಿದ್ದ ರೈಲುಬಂಡಿಗೆ ಹತ್ತಿದಾಗ, ನನ್ನ ಜೀವಮಾನವನ್ನೆ ಸಂಪೂರ್ಣವಾಗಿ ಪರಿವರ್ತಿಸಲಿರುವ ಎಂತಹ ಮಹದ್ ಘಟನೆಯ ಸಂಭವಕ್ಕಾಗಿ ನಾನು ಪ್ರಯಾಣಮಾಡುತ್ತಿದ್ದೇನೆ ಎಂಬುದರ ಅರಿವು ನನಗಿರಲಿಲ್ಲ. ಸಹ್ಯಾದ್ರಿಯ ಅರಣ್ಯ ಮಧ್ಯೆಯ ಕುಗ್ರಾಮವೊಂದರಿಂದ ಮೈಸೂರು ನಗರಕ್ಕೆ ವಿದ್ಯಾರ್ಥಿಯಾಗಿ ಬಂದ ನನಗೆ ಅಕಸ್ಮಾತ್ತಾಗಿ ಸಾರ್ವಜನಿಕ ಗ್ರಂಥಾಲಯದಲ್ಲಿ ದೊರೆತ ಶ್ರೀ ರಾಮಕೃಷ್ಣ-ವಿವೇಕಾನಂದ ಸಾಹಿತ್ಯಪರಿಚಯದಿಂದಾಗಿ ಆ ಮಹದ್ ವ್ಯಕ್ತಿಗಳ ವೈದ್ಯುತಿಕ ಪ್ರಭಾವಕ್ಕೆ ವಶನಾಗಿ ಅಧ್ಯಾತ್ಮಪರವಾದ ಮನೋಧರ್ಮವನ್ನು ಪಡೆದಿದ್ದೆನಾದರೂ ಯಾವನಾದರೊಬ್ಬ ಗುರುವಿನಿಂದ ಮಂತ್ರದೀಕ್ಷೆ ತೆಗೆದುಕೊಳ್ಳುವಂತಹ ಸಂಪ್ರದಾಯಮಾರ್ಗದ ವಿಚಾರದಲ್ಲಿ ನಾನು, ನಿರಾಸಕ್ತನಾಗಿದ್ದೆ ಮಾತ್ರವಲ್ಲ, ಸ್ವಲ್ಪಮಟ್ಟಿಗೆ ತಿರಸ್ಕಾರಿಯೂ ಆಗಿದ್ದೆ. ವಿಶೇಷವಾಗಿ ಅದ್ವೈತಪರವಾದ ಜ್ಞಾನಮಾರ್ಗವನ್ನೆ ಬೋಧಿಸುವಂತಿದ್ದ ಸ್ವಾಮಿ ವಿವೇಕಾನಂದರ ಉಪನ್ಯಾಸಗಳಿಂದ ಪ್ರಭಾವಿತವಾಗಿದ್ದ ನನ್ನ ಮನಸ್ಸು ಮಂತ್ರದೀಕ್ಷಾದಿ ಜಪಮಣಿಯ ಸಾಂಪ್ರದಾಯಕ ಆಚಾರಕ್ಕೆ ವಿಮುಖವಾಗಿತ್ತು. ಆದ್ದರಿಂದ ದೀಕ್ಷೆಯ ವಿಚಾರದಲ್ಲಿ ನನ್ನ ಹೃದಯದಲ್ಲಿ ಅಂತಹ ಹೇಳಿಕೊಳ್ಳುವ ಭಾವಸಂಚಾರವೇನೂ ಇರಲಿಲ್ಲ. ದೀಕ್ಷೆ ಕೊಡಲಿರುವ ಗುರುವಿನ ಹಿರಿಮೆಯೂ ಆಗ ನನಗೆ ದೂರ ದಿಗಂತ ವಿಷಯವಾಗಿಯೆ ಇತ್ತು. ಆ ದೂರದ ದಿವ್ಯ ಗುರುವಿನೆಡೆಗೆ ನನ್ನನ್ನೊಯ್ಯುತ್ತಿದ್ದ ಈ ಹತ್ತಿರದ ಗುರುವಿನ ಪ್ರೀತಿ ವಿಶ್ವಾಸಗಳೆ ನನಗೆ ಆಧಾರಭೂತ ಪ್ರಧಾನ ಭರವಸೆಯಾಗಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ನನ್ನ ಬದುಕಿನ ಹಾದಿಯಲ್ಲಿ ನನಗೆ ಸಂಧಿಸದೆ ಇದ್ದಿದ್ದರೆ ಅದರ ದಿಕ್ಕೆ ಬೇರೆಯಾಗಿರುತ್ತಿತ್ತೇನೊ!

ನಾವು ನಿಲ್ದಾಣಕ್ಕೆ ಬಂದಾಗಲೆ ಮಳೆ ಹೊಯ್ಯತೊಡಗಿತ್ತು. ಬರಬರುತ್ತಾ ಚಂಡ ಮಾರುತವೂ ಎದ್ದಿತು. ಬಿರುಮಳೆ ಮತ್ತೂ ಜೋರಾಗಿ ಬೀಳತೊಡಗಿ ಬಹಳ ಹೊತ್ತಿನ ಮೇಲೆ ನಿಂತಿತು. ನಮ್ಮ ಪಯಣಕ್ಕೆ ಶುಭಕೋರಿ ಆಕಾಶವೆ ಆಶೀರ್ವದಿಸಿದಂತಿತ್ತು, ಆ ಮಳೆ ಹೊಯ್ದುದ್ದು. ಆಶ್ವೀಜಮಾಸದ ಸಸ್ಯಶಾಲಿನಿ ಪೃಥ್ವೀಮಾತೆ ನಮ್ಮನ್ನು, ನಾವು ಪಯಣ ಹೊರಟಿದ್ದ ಮಂಗಳಕಾರ್ಯಕ್ಕಾಗಿ, ನಗೆಗೂಡಿ ನೋಡಿ ಹರಸುವಂತಿತ್ತು.

ಸ್ವಾಮಿಗಳು ನಮ್ಮನ್ನು ಆಶೀರ್ವದಿಸಿ "ಗುರುಮಹಾರಾಜರು ನಿಮಗೆ ಕೃಪೆಮಾಡಲಿ! ಮಹಾಪುರುಷಜಿಯವರ ಅನುಗ್ರಹ ನಿಮಗೆ ದೊರೆಯಲಿ!" ಎಂದು ಹೃದಯತುಂಬಿ ಹಾರೈಸಿದರು.

ಮತ್ತೆ ಮುಂದಿನ ಎರಡು ದಿನಗಳು ಕಲ್ಕತ್ತಾಭಿಮುಖವಾಗಿ ಚಲಿಸುತ್ತಿದ್ದ ರೈಲುಬಂಡಿಯೆ ನಮ್ಮ ಪ್ರಪಂಚವಾಗಿತ್ತು.

ಮರುದಿನ ಪ್ರಾತಃಕಾಲದಲ್ಲಿ ರೈಲಿನ ಕಿಟಕಿಯಿಂದ ಹೊರಗೆ ನೋಡಿದಾಗ ಎಂತಹ ಸುಮನೋಹರ ದೃಶ್ಯ ಕಂಗೊಳಿಸುತ್ತಿತ್ತು? ಶಾಲಿವನ ರೂಪಿಣಿಯಾದ ಭಗವತಿಯ ನಿಸರ್ಗಲೀಲಾ ಶರೀರವು ಚೇತೋಹಾರಿಯಾಗಿ ಶೋಭಾಯಮಾನವಾಗಿತ್ತು! ರೈಲು ರಸ್ತೆಯ ಇಕ್ಕೆಲದಲ್ಲಿ ಹಸುರಿನ ನಿಸ್ತರಂಗಸಾಗರ ಸೀಮೆಯೆ ನಿರ್ದಿಗಂತವಾಗಿ ಹಸರಿಸಿತ್ತು. ಭರತಖಂಡದ ಪೂರ್ವ ತೀರಪ್ರದೇಶವು ಆಶ್ವೀಜಮಾಸದಲ್ಲಿ ನೂರಾರು ಮೈಲಿ ಹಬ್ಬಿದ ಹಸುರಿನ ಹಾಸಗೆಯಂತೆ ಅತ್ಯಂತ ಮನಮೋಹಕವಾಗಿರುತ್ತದೆ. ಸ್ವಾಮಿ ಸಿದ್ಧೇಶ್ವರಾನಂದರು ದಾರಿಯುದ್ದಕ್ಕೂ ನಮ್ಮನ್ನು ಸಂಧಿಸುತ್ತಿದ್ದ ಐತಿಹಾಸಿಕ ಸ್ಥಳಗಳನ್ನೂ ನದಿಗಳನ್ನೂ ನಗರಗಳನ್ನೂ ಪಟ್ಟಣಗಳನ್ನೂ ಪುಣ್ಯಕ್ಷೇತ್ರಗಳನ್ನೂ ಆಂಧ್ರ ಉತ್ಕಲಾದಿ ವಿಶಿಷ್ಟ ಪ್ರದೇಶಗಳ ಪರಿಚಯವನ್ನೂ ಮಾಡಿಕೊಡುತ್ತಿದ್ದರು. ಜೊತೆಗೆ ವಿವಿಧ ಭಾಷೆಯ, ವಿವಿಧ ವೇಷದ, ವಿವಿಧ ವರ್ಣದ ಜನರ ಚಿತ್ರವಿಚಿತ್ರ ಪರಿಚಯವೂ ನಮಗೆ ವಿನೋದಕರವಾಗಿತ್ತು!

ಹೌರಾ ರೈಲುನಿಲ್ದಾಣದಲ್ಲಿ ಗಾಡಿ ನಿಂತಿತು. ಗಂತವ್ಯ ಇನ್ನೇನು ದೊರೆತು ಬಿಡುತ್ತದೆ ಎಂಬ ಸಂಭ್ರಮೋಲ್ಲಾಸದಿಂದ ಮನಸ್ಸು ಉತ್ಸಾಹಿತವಾಯಿತು. ಇದುವರೆಗೆ ಗಂಗಾ, ದಕ್ಷಿಣೇಶ್ವರ, ಬೇಲೂರು ಎಲ್ಲವೂ ಪುಸ್ತಕಗಳಲ್ಲಿ ಓದಿದ ವಿಷಯಗಳಾಗಿದ್ದುವು; ಈಗ ಕಣ್ಣಿಗೇ ಗೋಚರವಾಗಿಬಿಡುತ್ತವೆ! ಆ ಒಂದೊಂದು ಹೆಸರಿನ ಹಿಂದೆಯೂ ಸುಪ್ತವಾಗಿದ್ದ ಭಾವಕೋಶ ಎಚ್ಚತ್ತು ನನ್ನ ಹೃದಯವೆಲ್ಲ ಉಲ್ಲೋಲ ಕಲ್ಲೋಲವಾದ ಭಾವ ಸಮುದ್ರದಂತಾಯಿತು. ಯಾರನ್ನು ಲೋಕವೆಲ್ಲ ಅವತಾರ ಪುರುಷನೆಂದು ಪೂಜಿಸುವುದೋ ಅಂಥಾ ಮಹಾವಿಭೂತಿ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸ ಗುರುದೇವನು ಬದುಕಿ ಬಾಳಿ ಪವಿತ್ರಗೈದ ನೆಲಕ್ಕೆ ನಾನು,—ಸಾವಿರಾರು ಮೈಲಿ ದೂರದ ಸಹ್ಯಾದ್ರಿಯ ಅರಣ್ಯದಲ್ಲಿ ಹುಟ್ಟಿ ಬೆಳೆದ ಯಃಕಶ್ಚಿತ ನಾನು,—ಆತನ ಅಡಿಯ ಪುಡಿಯಿಂದ ದಿವ್ಯೋದಿವ್ಯವಾದ ನೆಲದಮೇಲೆ ಇನ್ನೇನು ಕಾಲಿಡಲಿದ್ದೇನೆ! ನನಸೋ? ಬರಿಯ ಹೊಂಗನಸೋ? ಅಲ್ಲದೆ ಕಾವ್ಯದ ಮೇಲೆ ಕಾವ್ಯದಲ್ಲಿ, ಕವಿಯ ಮೇಲೆ ಕವಿ, ಸಾವಿರಾರು ವರ್ಷಗಳಿಂದ ಬಣ್ಣಿಸುತ್ತ ಬಂದಿರುವ ದೇವಗಂಗಾ ಮಾತೆಯ ಪ್ರಪ್ರಥಮ ದರ್ಶನ ಸ್ಪರ್ಶನಗಳಿಂದ ರಸಪ್ಲಾವಿತನಾಗುವುದರಲ್ಲಿದ್ದೇನೆ! ಜಾಹ್ನವಿ, ಗಂಗಾ, ಭಾಗೀರಥಿ, ಮಂದಾಕಿನಿ ಇತ್ಯಾದಿ ಎಷ್ಟೊಂದು ಹೆಸರುಗಳು ಆ ಪೂಜ್ಯ ವಾಹಿನಿಗೆ!

ನಿಲ್ದಾಣಕ್ಕೆ ಬೇಲೂರು ಮಠದಿಂದ ಶ್ರೀ ರಾಮನಾಥ ಮಹಾರಾಜ್ ಬಂದಿದ್ದರು,

ನಮ್ಮನ್ನು ಕರೆದೊಯ್ಯಲು. ಒಂದು ಟ್ಯಾಕ್ಸಿಯಲ್ಲಿ ಕುಳಿತು ಹೊರಟೆವು. ಹೆದ್ದಾರಿ ಕಿರುದಾರಿಗಳಲ್ಲಿ ಕಾರು ಸಂಚರಿಸುತ್ತಿದ್ದಂತೆ, 'ಅರಮನೆಗಳ ಪಟ್ಟಣ' ಎಂದು ನಾವು ಹುಡುಗರಾಗಿದ್ದಾಗ ಭೂವಿವರಣೆಯ ಪಾಠಗಳಲ್ಲಿ ಓದಿದ್ದ ಕಲ್ಕತ್ತಾ ಮಹಾನಗರವೂ ಇತರ ಅಂತಹ ನಗರಗಳಂತೆಯೆ ಕೊಳಕು ಬೆಳಕು ಎರಡರಿಂದಲೂ ಕೂಡಿರುವುದನ್ನು ಮನಸ್ಸಿಗೆ ತರುವಂತಿತ್ತು : ಕೆಲವೆಡೆ ಮಳೆಬಿದ್ದು ಕೊರಕಲು ಬೀದಿಗಳಿಂದ ಹಾರುತ್ತಿದ್ದ ಕೆಸರು ನೀರು ! ಮತ್ತು ಹಲವು ಅಂತಸ್ತುಗಳ ಸೌಧಗಳ ನಡುನಡವೆ ಮುದುಗಿ ನಿಂತಿದ್ದ ಮುರುಕು ಮನೆ ಮತ್ತು ಗುಡಿಸಲುಗಳು !

ಇದ್ದಕ್ಕಿದ್ದಂತೆ ಉದ್ಘೋಷಿಸಿದರು, ಉಚ್ಚ ಭಾವಮಯ ಕಂಠದಿಂದ, ಹರ್ಷೋನ್ಮಾದವಾದಂತೆ, ಸ್ವಾಮಿ ಸಿದ್ಧೇಶ್ವರಾನಂದಜಿ !

"ಜಯ್ ಗುರುಮಹಾರಾಜ್‌ಕೀ ಜಯ್ ! ನೋಡದೇ ಬೇಲೂರು ಮಠ ! ನೋಡದೋ ಸ್ವಾಮಿಜಿಯ (ವಿವೇಕಾನಂದರ) ಸಮಾಧಿ ಮಂದಿರ ! ನೋಡಲ್ಲಿ ದಕ್ಷಿಣೇಶ್ವರ ದೇವಾಲಯ ! ಜಯ್, ಗುರು ಮಹಾರಾಜ್ ಕೀ ಜಯ್ !"

ಮತ್ತೆ ಅದೇ ವಾತ್ಸಲ್ಯದ ಸುಸ್ವಾಗತ, ನಮ್ಮನ್ನು ಎದುರುಗೊಂಡಿತು, ಮನೆಯ ಮಗಳು ತವರಿಗೆ ಮರಳಿ ಬಂದಳೆಂಬಂತೆ !

ಅತಿಥಿಗೃಹಕ್ಕೆ ಹೋಗಿ ನಮ್ಮ ಗಂಟುಮೂಟೆ ಇಟ್ಟು, ಅಲ್ಲಿ ಸ್ವಾಮಿ ಶರ್ವಾನಂದರಿಗೂ ಸ್ವಾಮಿ ಅನಂತಾನಂದರಿಗೂ ನಮಸ್ಕಾರ ಮಾಡಿದೆವು. ತರುವಾಯ ಸ್ನಾನಮಾಡಿ ಪ್ರಯಾಣದ ಧೂಳೀ ಧೂಸರತೆಯಿಂದ ಪಾರಾಗಿ ಮಡಿಯಾದೆವು. ಅಲ್ಲಿಂದ ಗೋಪಾಲ ಮಹಾರಾಜರ ನೇತೃತ್ವ ಮತ್ತು ಮಾರ್ಗದರ್ಶನಗಳಲ್ಲಿ ಶ್ರೀ ಮಹಾಮಾತೆಯ, ಸ್ವಾಮಿ ಬ್ರಹ್ಮಾನಂದರ ಮತ್ತು ಸ್ವಾಮಿ ವಿವೇಕಾನಂದರ ಸಮಾಧಿ ಮಂದಿರಗಳಿಗೆ ನಡೆದು ದರ್ಶನ ತೆಗೆದುಕೊಂಡೆವು. ಅಲ್ಲಿಂದ ಪರಮ ಪವಿತ್ರ ಸ್ಥಾನವಾದ ಶ್ರೀ ಶ್ರೀ ಗುರುಮಂದಿರಕ್ಕೆ ಹೋಗಿ ಭಕ್ತಿಭಾರದಿಂದ ಮಣಿದು ಅಡ್ಡಬಿದ್ದೆವು. ಇಲ್ಲಿಯೆ ಇದೆ ಅಲ್ಲವೆ, ಸ್ವಾಮಿ ವಿವೇಕಾನಂದರು ತಮ್ಮ ತಲೆಯಮೇಲೆ ಹೊತ್ತು ತಂದಿಟ್ಟ ಶ್ರೀ ಗುರುಮಹಾರಾಜರ ಲೌಕಿಕಾವಶೇಷದ ಭಸ್ಮಾಸ್ಥಿ ಮಂಜೂಷೆ 'ಆತ್ಮಾರಾಮ'?— ಓ ಆ ಭಾವಾನುಭವವನ್ನೆಂತು ಬಣ್ಣಿಸುವುದೀ ತಣ್ಣನೆಯ ನಿರ್ಜೀವ ಲೇಖನಿ? ಕೈಮುಗಿದು ಮತ್ತೆ ಮತ್ತೆ ಅಡ್ಡಬಿದ್ದು ಧನ್ಯಜೀವರಾದೆವು, ಜನ್ಮಸಾರ್ಥಕವಾಯಿತೆಂದು !

ಮಹಾಪುರುಷಜಿ ಆಗ ಇಳಿವಯಸ್ಸಿನ ಕಾರಣ ಅಸ್ವಸ್ಥರಾಗಿದ್ದುದರಿಂದ ಅವರ ಮಧ್ಯಾಹ್ನ ವಿಶ್ರಾಂತಿಗೆ ಭಂಗತರಬಾರದೆಂದು ಅವರ ಸಾನ್ನಿಧ್ಯಕ್ಕೆ ಹೋಗಲಿಲ್ಲ. ಊಟಮಾಡಿ ವಿಶ್ರಾಂತಿ ತೆಗೆದುಕೊಂಡ ತರುವಾಯ ಅಪರಾಹ್ನ ಅವರ ಅನುಕೂಲ ಸಮಯ ತಿಳಿದು, ದರ್ಶನಕ್ಕೆ ಹೋಗುವುದೆಂದು ನಿಶ್ಚಯಿಸಿಕೊಂಡೆವು.

ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರ ವಿಚಾರವಾಗಿ ನಾನು ಅವರ ಜೀವನಚರಿತ್ರೆಯಲ್ಲಿ ತುಸುಮಟ್ಟಿಗೆ ಓದಿಕೊಂಡಿದ್ದೆ. ಆದರೆ ತರುಣರಾಗಿದ್ದ ನನ್ನಂತಹರ ಮನಸ್ಸು ಹೃದಯಗಳನ್ನೆಲ್ಲ ಆ ಕಾಲದಲ್ಲಿ ಸಂಪೂರ್ಣವಾಗಿ ಆಕ್ರಮಿಸಿದ್ದವರು ಸ್ವಾಮಿ

ವಿವೇಕಾನಂದರೊಬ್ಬರೇ! ಸ್ವಯಂ ಭಗವಾನ್ ಶ್ರೀರಾಮಕೃಷ್ಣರು ಕೂಡ ನಮಗೆ ಸ್ವಾಮಿ ವಿವೇಕಾನಂದರ ಗುರುಗಳಾಗಿಯೆ ಪೂಜ್ಯರಾಗಿದ್ದರು ಎಂದಮೇಲೆ ಇನ್ನು ಇತರ ಅವರ ಶಿಷ್ಯರು ನಮಗೆ ಅಷ್ಟೇನೂ ಮನಸ್ಸನ್ನು ಸೂರೆಗೊಳ್ಳುವಷ್ಟು ಮುಖ್ಯರಾಗಿರಲಿಲ್ಲ. ಏಕೆಂದರೆ, ತಾರುಣ್ಯವು ತನ್ನನ್ನು ಯಾವುದು ಬೆರಗುಗೊಳಿಸುವುದೊ ಅದಕ್ಕೆ ಮಾತ್ರ ಬಹುಬೇಗನೆ ಮಾರುಹೋಗುತ್ತದೆ: ಪ್ರಸಿದ್ಧಿಯನ್ನೆ ಅದು ಸಿದ್ಧಿಗೆ ಲಕ್ಷಣವನ್ನಾಗಿ ಭಾವಿಸುತ್ತದೆ; ಬೆಳ್ಳಗಿರುವುದೆ ಅದಕ್ಕೆ ಹಾಲು; ಹೊಳೆಯುವುದೆ ಅದಕ್ಕೆ ಹೊನ್ನು; ಬಹುಜನರ ಸ್ತುತಿಗೂ ಗೌರವಕ್ಕೂ ಪಾತ್ರನಾಗಿರುವಾತನೆ ಅದಕ್ಕೆ ಆದರ್ಶ ಪುರುಷ. ಪತ್ರಿಕಾ ಪ್ರಕಟಣೆಯ ಕೀರ್ತಿಯನ್ನೆ ಅಂತಃಸತ್ತ್ವವೆಂದು ಅದು ನಂಬಿಬಿಡುತ್ತದೆ. ಅದಕ್ಕೆ ಆಧ್ಯಾತ್ಮಿಕ ಮೌಲ್ಯದ ಸ್ವರೂಪವನ್ನರಿಯುವ ಶಕ್ತಿ ಇನ್ನೂ ಕಣ್ದೆರೆದಿರುವುದಿಲ್ಲ. ಬಾಹ್ಯವೈಭವವನ್ನೆ ಅಂತರೈಶ್ವರ್ಯಕ್ಕೆ ಸಂಕೇತ ಎಂದು ಅದು ಭ್ರಮಿಸುತ್ತದೆ. ಅದಕ್ಕೆ ಪ್ರಶಾಂತತೆ, ನೀರವತೆ, ವಿವಿಕ್ತತೆ, ನಿರಾಡಂಬರತೆ ಇವುಗಳ ಹಿಂದೆ ಮರೆಯಲ್ಲಿರುವ ನೈಜ ಆಧ್ಯಾತ್ಮಿಕ ವಿಭೂತಿಯನ್ನು ಗುರುತಿಸುವ ಸಾಮರ್ಥ್ಯವೂ ಇರುವುದಿಲ್ಲ, ತಾಳ್ಮೆಯೂ ಇರುವುದಿಲ್ಲ.

ಅಂದಿನ ಲೋಕನಯನಕ್ಕೆ ಸ್ವಾಮಿ ವಿವೇಕಾನಂದರು ಸಮೀಪದ ಸೂರ್ಯ; ಸ್ವಾಮಿ ಶಿವಾನಂದರು ದೂರದ, ಬಹುದೂರದ ನಕ್ಷತ್ರ. ಆದರೆ ಸುಕೃತವಶಾತ್ ನನ್ನ ಭಾಗಕ್ಕೆ, ಸ್ವಾಮಿ ಸಿದ್ಧೇಶ್ವರಾನಂದ ರೂಪದ ದೂರದರ್ಶಕಯಂತ್ರದಿಂದ ಆ ನಕ್ಷತ್ರವನ್ನು ನನ್ನ ದೃಷ್ಟಿ ಸಾಮರ್ಥ್ಯಾವಧಿಯಾಗಿ ವೀಕ್ಷಿಸಿದ್ದ ನನ್ನ ಭಾಗಕ್ಕೆ, ಮತ್ತು ನನ್ನ ಭಾಗ್ಯಕ್ಕೆ, ಸ್ವಾಮಿ ಶಿವಾನಂದರು ಸೂರ್ಯನಂತಲ್ಲದಿದ್ದರೂ ಚಂದ್ರನಷ್ಟಾದರೂ ಗೋಚರರಾಗಿದ್ದರು. ಬಹುಶಃ ಅವರು ಸೂರ್ಯನಂತಾಗಿದ್ದರೆ ನನ್ನಂತಹರು ಹತ್ತಿರಕ್ಕೆ ಹೋಗಲೂ ಸಾಧ್ಯವಾಗುತ್ತಿರಲಿಲ್ಲವೇನೊ? ಆಲಂಕಾರಿಕವಾಗಿ ಮಾತ್ರವಲ್ಲದೆ ನಿಜವಾಗಿಯೂ ಅವರು ಚಂದ್ರನಂತೆಯೆ ಸೌಮ್ಯರಾಗಿ, ಪ್ರಶಾಂತರಾಗಿ, ಸುಖಶೀತಲರಾಗಿದ್ದುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ.

ಅಪರಾಹ್ನ ಮೂರು ಘಂಟೆಯಾದ ಮೇಲೆ ಪೂಜ್ಯಪಾದ ಶ್ರೀಮತ್ ಸ್ವಾಮಿ ಶಿವಾನಂದ ಮಹಾರಾಜರ ದರ್ಶನಕ್ಕಾಗಿ ನಾವು ಮೂವರೂ ಹೊರಟೆವು,—ಸ್ವಾಮಿ ಸಿದ್ಧೇಶ್ವರಾನಂದರು, ಮಾನಪ್ಪ ಮತ್ತು ನಾನು.

ಸಂತೋಷ ಮತ್ತು ಭಯಭಕ್ತಿ ಸಂಮಿಶ್ರವಾದ ಏನೊ ಒಂದು ಅನಿರ್ವಚನೀಯ ಭಾವಕ್ಷೋಭೆ ನನ್ನ ಹೃದಯದಲ್ಲಿ ಸಂಚಾರಿಯಾಗಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ನಾವು ಹೇಗೆ ಹೇಗೆ ವರ್ತಿಸಬೇಕೆಂಬ ವಿಚಾರವಾಗಿ ನಮಗೆ ಸಲಹೆ ಕೊಡುತ್ತಿದ್ದರು. ಮೆಟ್ಟಿಲು ಹತ್ತಿ ಮಹಡಿಗೆ ಹೋದೆವು. ಗಂಭೀರ ಧ್ಯಾನಮಯ ನಿಶ್ಯಬ್ದತೆಯ ವಲಯವನ್ನು ನಾವು ಪ್ರವೇಶಿಸಿದ್ದೆವು. ಇನ್ನೇನು ಗೋಚರವಾಗಲಿರುವ ರಹಸ್ಯಪೂರ್ಣ ದೃಶ್ಯವೊಂದಕ್ಕಾಗಿ ನನ್ನ ಸಮಸ್ತ ಚೇತನವೂ ಕಾತರ ಕುತೂಹಲಿಯಾಯಿತು. ಸ್ವಾಮಿ ಸಿದ್ಧೇಶ್ವರಾನಂದರ ಹಿಂದೆಹಿಂದೆಯೆ ಮಹಾಪುರುಷಜಿಯ ಕೊಠಡಿಯನ್ನು ಪ್ರವೇಶಿಸಿದೆ.

ನಿರೀಕ್ಷಿಸಿದಂತೆ ಅಲ್ಲಿ ಯಾವ ಅದ್ಭುತವೂ ನಮ್ಮನ್ನು ಚಕಿತಗೊಳಿಸಲು ಕಾದಿರಲಿಲ್ಲ; ಬೆಂಗುಬಡಿಸುವ ಯಾವ ನಾಟಕೀಯತೆಯೂ ಅಲ್ಲಿ ಕಾಣಲಿಲ್ಲ : ಬಾಹ್ಯ ವೈಭವದ ಚಿಹ್ನೆ ಯಾವುದೂ ಅಲ್ಲಿ ಲವಲೇಶವೂ ಇರಲಿಲ್ಲ. ಮೂರ್ತಿವೆತ್ತ ಕರುಣೆಯಂತೆ, ಮೈಗೊಂಡ ಅಕ್ಕರೆಯಂತೆ, ಮನುಷ್ಯಾಕಾರವಾಂತ ಭಗವಂತನ ವಾತ್ಸಲ್ಯವೆಂಬಂತೆ ಪೂಜ್ಯವಾಗಿ ಕಾಣುತ್ತಿದ್ದ ವೃದ್ಧ ಮೂರ್ತಿಯೊಂದು ಅತ್ಯಂತ ನಿರಾಡಂಬರ ಭಂಗಿಯಲ್ಲಿ ಒಂದು ಆರಾಮ ಕುರ್ಚಿಯ ಮೇಲೆ ಒರಗಿ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದುದು ಕಣ್ಣಿಗೆ ಬಿತ್ತು. ನಮ್ಮ ಕೈಗಳು, ಅವು ಕಾಣಿಕೆಕೊಡಲು ತಂದಿದ್ದ ವಸ್ತುಗಳನ್ನು ಹಿಡಿದಿದ್ದರೂ, ತಮಗೆ ತಾವೆ ಮುಗಿದಿದ್ದುವು, ಅಂಜಲಿಬದ್ಧವಾಗಿ !

ಸ್ವಲ್ಪಮಟ್ಟಿಗೆ ಸ್ಥೂಲಕಾಯರಾಗಿ ವೃದ್ಧಾಪ್ಯದ ಮತ್ತು ಅಸ್ವಸ್ಥತೆಯ ದೆಸೆಯಿಂದ ದಣಿದಂತೆ ತೋರುತ್ತಿದ್ದ ಅವರ ದೇಹ, ಅವರ ಆಂತರಿಕ ಸ್ವಭಾವದ ಮೃದುಲತೆಯನ್ನು ಪ್ರತಿಕ್ಷೇಪಿಸುವಂತೆ, ಎಳಬಿಸಿಲಿನಲ್ಲಿಯೂ ನಸು ಬಸವಳಿದ ತಳಿರಿನಂತೆ ಸ್ನಿಗ್ಧಕೋಮಲವಾಗಿ, ನೋಡಿದವರಲ್ಲಿ ಮಾತೃತ್ವದರ್ಶನ ಭಾವವನ್ನು ಪ್ರಚೋದಿಸುತ್ತಿತ್ತು. ಒಂದು ಅಪಾರ್ಥಿವ ಪ್ರಶಾಂತಿಯ ಪರಿವೇಷ ಅವರನ್ನು ಸುತ್ತುವರಿದು, ಅವರ ಮಡಿಲಿಗೆ ಬಿದ್ದ ನನ್ನ ಚೇತನವನ್ನೆಲ್ಲ ಶಿಶುಗೈದು ತೊಟ್ಟಿಲಿಗೆ ಹಾಕಿ ತೂಗಿದಂತಾಯ್ತು. ಅವರ ಸಂಪೂರ್ಣ ನಿರಹಂಕಾರದ ಮಹಾ ಪ್ರಪಾತದ ಅಂಚಿನಲ್ಲಿ ಹೆದರಿ ನಿಂತು ತತ್ತರಿಸಿತ್ತು, ನನ್ನ ಅಲ್ಪ ಅಹಂಕಾರ !

ಮಾತಿಲ್ಲದೆ ನಿಂತಿದ್ದ ಒಂದೆರಡು ಕ್ಷಣಕಾಲದಲ್ಲಿ ನನ್ನ ದೃಷ್ಟಿ ಅತ್ತಿತ್ತ ಹರಿದು ಆ ಕೊಠಡಿಯ ದಿವ್ಯ ಸರಳತೆಯನ್ನು ಗ್ರಾಸಮಾನವಾಗಿ ಅವಲೋಕಿಸಿತ್ತು. ಅವರ ಮುಂದುಗಡೆ ಒಂದು ಹುಕ್ಕಾ ಇತ್ತು. ಗೋಡೆಗಳ ಮೇಲೆ ನಾಲ್ಕೈದು ಪಟಗಳಿದ್ದುವು: ಅವರ ಮಲಗುವ ಮಂಚ ಒಂದು ಪಕ್ಕಕ್ಕಿತ್ತು ; ಮತ್ತೊಂದು ಕಡೆ ಕೆಲವು ಪುಸ್ತಕ; ಇನ್ನೊಂದೆಡೆ ಒಂದು ಸಣ್ಣ ಮೇಜು ಆದರೆ ಅವುಗಳನ್ನೆಲ್ಲ ಕಣ್ಣು ನೋಡುತ್ತಿತ್ತೇ ಹೊರತು ಮನಸ್ಸಲ್ಲ.

ಸ್ವಾಮಿ ಸಿದ್ಧೇಶ್ವರಾನಂದರು ಮೊದಲು ಸಾಷ್ಟಾಂಗ ಪ್ರಣಾಮ ಮಾಡಿದರು. ತರುವಾಯ ಮಾನಪ್ಪನು ನಾವು ಮೈಸೂರಿನಿಂದ ತಂದಿದ್ದ ಶ್ರೀ ಚಾಮುಂಡಿಮಾತೆಯ ಬೆಳ್ಳಿಯ ವಿಗ್ರಹವನ್ನು ಅರ್ಪಿಸಿ ಅಡ್ಡಬಿದ್ದನು. ನಾನು ಊದಿನ ಕಡ್ಡಿಗಳ ಕಟ್ಟುಗಳನ್ನು ಪದತಲಕ್ಕೆ ನಿವೇದಿಸಿ ನೆಲಕ್ಕೆ ಹಣೆಮುಟ್ಟಿ ನಮಸ್ಕಾರ ಮಾಡಿದೆ.

ಪೂಜ್ಯ ಮಹಾಪುರುಷಜಿ ಹರ್ಷವದನರಾಗಿ ಅನುಗ್ರಹ ಪೂರ್ವಕವಾದ ದೃಷ್ಟಿಯಿಂದ ಆಶೀರ್ವದಿಸುತ್ತಾ ಕುಳಿತಿದ್ದರು.

ಗೋಪಾಲ ಮಹಾರಾಜರು ನಮ್ಮ ಪರಿಚಯ ಹೇಳಿ "ಇವರು ನಿಮ್ಮನ್ನೆ ನೆಮ್ಮಿದ್ದಾರೆ. ಇವರು ನಿಮ್ಮ ಮಾನಸಪುತ್ರರು. ಇವರನ್ನು ಅನುಗ್ರಹಿಸಿ ಕಾಪಾಡಬೇಕು" ಎಂದು ಭಕ್ತಿನಮ್ರರಾಗಿ ನಿವೇದಿಸಿದರು.

ಅಸಂಪೂರ್ಣವಾದ ಅಕೃತಕ ಸ್ವರದಿಂದ ಮಹಾಪುರುಷನ ಮೃದುವಾಣಿ

ಹೊಮ್ಮಿತು: "ನಾನು ಯಾರು? ನಾನು ಯಾರು? ನಾನು ಯಾರು?" ಎಂದು ಮೂರು ಸಾರಿ ಗಂಭೀರವಾಗಿ ಉಚ್ಚರಿಸಿ "ಎಲ್ಲ ಗುರುಮಹಾರಾಜ್! ಎಲ್ಲ ಗುರುಮಹಾರಾಜ್! ನಾನು ಯಾರು? ಎಲ್ಲ ಅವರೇ! ಅವರ ಇಚ್ಛೆ ಇದ್ದಂತಾಗಲಿ!" ಎಂದು ಅರ್ಧ ನಿಮೀಲಿತ ನಯನರಾದರು. ಮತ್ತೆ ತುಸುಹೊತ್ತಿನಲ್ಲಿಯೆ ಕಣ್ಣು ತೆರೆದು ನಮ್ಮತ್ತ ಕೃಪಾಕಟಾಕ್ಷ ಬೀರಿ ನಮ್ಮನ್ನೆ ಪ್ರಶ್ನಿಸುವಂತೆ ಹೇಳಿದರು: "ನನಗೇನು ಗೊತ್ತು? ನನಗೇನು ಗೊತ್ತು? ನಾನು ಆತನ ಆಜ್ಞಾಪಾಲಕ!"

ಅವರ ಆ ಉಕ್ತಿಯ ತಾತ್ಪರ್ಯವಾಗಲಿ, ಅದರ ಹಿಂದಣ ದರ್ಶನಧ್ವನಿಯಾಗಲಿ ನನಗೆ ಅಂದು ಸಂಪೂರ್ಣವಾಗಿ ಗ್ರಾಹ್ಯವಾಗಿರಲಿಲ್ಲ. ದೊಡ್ಡವರು ವಿನಯಕ್ಕಾಗಿ ಹೇಳುವ ಮರ್ಯಾದೆಯ ಮಾತುಗಳು ಎಂದು ಮಾತ್ರ ಗ್ರಹಿಸಿದ್ದೆ. ಅವುಗಳ ನಿಜವಾದ ಅರ್ಥ ನನ್ನ ಪ್ರಜ್ಞೆಗೆ ಗೋಚರವಾಗಿ, ಬುದ್ಧಿಗೆ ಗ್ರಾಹ್ಯವಾದದ್ದು ಬಹುಕಾಲದ ಮೇಲೆ: ಸ್ವಾಮಿ ಅಪೂರ್ವಾನಂದರು ಬಂಗಾಳಿಯಲ್ಲಿ ಬರೆದಿದ್ದ "ಶಿವಾನಂದ ವಾಣಿ" ಎಂಬ ಹೆಸರಿನ ಮಹಾಪುರುಷ ಮಹಾರಾಜರ ಮಾತುಕತೆಗಳನ್ನು "For Seekers of God" ಎಂಬ ಅದರ ಇಂಗ್ಲಿಷ್ ಭಾಷಾಂತರದಲ್ಲಿ ಓದಿ, ಅದನ್ನು "ಗುರುವಿನೊಡನೆ ದೇವರಡಿಗೆ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಮಾಡುವ ಸುಯೋಗಕ್ಕೆ ನಾನು ಪಾತ್ರನಾದಂದು! ಶ್ರೀ ಮಹಾಪುರುಷಜಿ ತಮ್ಮತನವನ್ನೆಲ್ಲ ಒಂದಿನಿತೂ ಉಳಿಯದಂತೆ ಶ್ರೀ ಗುರುಮಹಾರಾಜರಲ್ಲಿ ಸಂಪೂರ್ಣವಾಗಿ ಸಮರ್ಪಿಸಿ ಅವರಲ್ಲಿ ಐಕ್ಯರಾಗಿದ್ದರು ಎಂಬ ಸತ್ಯವನ್ನು ನಾವು ಅವರ ಆ ಮಾತುಕತೆಗಳಲ್ಲಿ ಸಂದೇಹಕ್ಕೆ ಅವಕಾಶವಿಲ್ಲದಂತೆ ಕಾಣುತ್ತೇವೆ. ಶ್ರೀ ಮಹಾಪುರುಷಜಿಯ ಮಹೋನ್ನತ ಆಧ್ಯಾತ್ಮಿಕ ಅವಸ್ಥೆ ಮತ್ತು ಸಿದ್ಧಿ ಆ ಮಾತುಕತೆಗಳಲ್ಲಿ ನಮಗೆ ಪ್ರಕಾಶಿತವಾಗುವಂತೆ ಮತ್ತೆಲ್ಲಿಯೂ ಆಗುವುದಿಲ್ಲ.

ಮತ್ತೆ ಮಹಾಪುರುಷಜಿ ನಮ್ಮ ಹೆಸರು ಕೇಳಿದರು.

ನಾವು ಹೇಳಿದುದನ್ನು ನೆನಪಿನಲ್ಲಿಟ್ಟುಕೊಳ್ಳಲು ಗಟ್ಟಿಪಾಠಮಾಡುವವರಂತೆ ನಮ್ಮಿಬ್ಬರ ಹೆಸರುಗಳನ್ನೂ ಅವರೇ ಉಚ್ಚರಿಸಿದರು, ಎರಡೆರಡು ಸಾರಿ: "ಪುಟ್ಟಪ್ಪ—ಮಾನಪ್ಪ, ಪುಟ್ಟಪ್ಪ—ಮಾನಪ್ಪ!"

ಅವರು ಹಾಗೆ ಮಾಡಿದುದು ಅಂದು ನನಗೆ ಸ್ವಲ್ಪ ವಿನೋದಕರವಾಗಿಯೆ ತೋರಿತ್ತು. ಇಂದು ಅದನ್ನು ಕುರಿತು ಬರೆಯುತ್ತಿರುವ ನನಗೆ ರೋಮಾಂಚನವಾಗುತ್ತಿದೆ! ಯಃಕಶ್ಚಿತ ಮನುಷ್ಯನಾದ ನನ್ನ ಹೆಸರು ಅಂತಹ ಭಗವತ್ ಪುರುಷನ ದಿವ್ಯಜಿಹ್ವೆಯಲ್ಲಿ! ತಾಯಿ, ನೆಲದ ಮೇಲೆ ಅಂಬೆಗಾಲಿಕ್ಕಿ ಹುಡಿಯಲ್ಲಿ ಹೊರಳುತ್ತಿರುವ, ತನ್ನ ಕಂದನನ್ನು ಬಾಗಿ ತೋಳುಚಾಚಿ ಎತ್ತಿಕೊಳ್ಳುವಂತೆ ನಮ್ಮನ್ನವರು ತಮ್ಮ ವಾತ್ಸಲ್ಯದ ಮಡಿಲಿಗೆ ಎತ್ತಿಕೊಂಡಿದ್ದರು, ನಮ್ಮ ಹೆಸರನ್ನು ಉಚ್ಚರಿಸುವ ನೆವದಲ್ಲಿ!

ಅಂದಿನ ನನ್ನ ದಿನಚರಿಯಲ್ಲಿ ಈ ಭಾವ ಧ್ವನಿಸುವಂತೆ ಬರೆದಿದ್ದೇನೆ: "ಶ್ರೀ ಗುರುಮಹಾರಾಜರು ಹೇಗಿದ್ದರು ಎಂಬುದು ಸ್ವಲ್ಪವಾದರೂ ಗೊತ್ತಾಗುತ್ತದೆ, ಮಹಾಪುರುಷಜಿಯವರನ್ನು ನೋಡಿದರೆ. ಅವರು ಭಗವಾನ್ ಶ್ರೀ ರಾಮಕೃಷ್ಣರ

ಆಧ್ಯಾತ್ಮಿಕ ಪ್ರತಿಮೂರ್ತಿ. ಅವರ ಸಾನ್ನಿಧ್ಯದಲ್ಲಿ ನಿಂತಾಗ ಮಹಾವಿಭೂತಿಯೊಬ್ಬನ ಮುಂದೆ ನಿಂತಿದ್ದೇವೆ ಎಂಬುದು ಸ್ವಸಂವೇದ್ಯವಾಗುತ್ತದೆ. ಅಹಂತಾ ವೇಲೆಯನ್ನೆಲ್ಲ ನಿರ್ದಿಗಂತಗೊಳಿಸಿರುವ ಅವರ ಭೂಮವ್ಯಕ್ತಿತ್ವ ಅಕ್ಷುಬ್ಧ ಅಸೀಮ ಸಾಗರದಂತೆ ಪ್ರಶಾಂತ ಭವ್ಯವಾಗಿದೆ."

ಮರುದಿನ ಪೂರ್ವಾಹ್ನದಲ್ಲಿ ನಮಗೆ ದೀಕ್ಷೆಯ ಅನುಗ್ರಹವಾಗುತ್ತದೆ ಎಂಬುದನ್ನು ಮಹಾಪುರುಷಜಿಯವರ ಸೇವಾಶುಶ್ರೂಷೆಯಲ್ಲಿ ನಿರತರಾಗಿದ್ದ ಅನುಚರ ಸಾಧುಗಳಿಂದ ಗೊತ್ತುಮಾಡಿಕೊಂಡ ಮೇಲೆ ಗೋಪಾಲ್ ಮಹಾರಾಜರು ನಮ್ಮನ್ನು ಸ್ವಾಮಿ ವಿವೇಕಾನಂದರ ಕೊಠಡಿಗೆ ಕರೆದೊಯ್ದರು. ಪೂಜ್ಯವೂ ಇತಿಹಾಸಪ್ರಸಿದ್ಧವಾಗಿ ಲೋಕ ವಿಖ್ಯಾತವೂ ಆಗಿರುವ ಆ ಕೊಠಡಿಯನ್ನು ನಾವು ಒಂದು ಪುಣ್ಯಕ್ಷೇತ್ರಕ್ಕೆಂತೊ ಅಂತೆ ಪ್ರವೇಶಿಸಿದೆವು. ಸ್ವಾಮಿಜಿ ಇಹಲೋಕವನ್ನು ಬಿಡುವಾಗ ಆ ಕೋಣೆ ಹೇಗೆ ಇದ್ದಿತೊ ಹಾಗೆಯೆ ಅದನ್ನಿಟ್ಟಿದ್ದರು. ನೋಡುವವರಿಗೆ 'ಸ್ವಾಮಿಗಳು ಈಗತಾನೆ ಎಲ್ಲಿಗೊ ಕ್ಷಣಕಾಲ ಹೊರಗೆ ಹೋಗಿದ್ದಾರೆ; ಇನ್ನೇನು ಬಂದುಬಿಡುತ್ತಾರೆ. ದರ್ಶನಕ್ಕಾಗಿ ಕಾದುಕೊಂಡಿರೋಣ!' ಎನ್ನುವ ಹಾಗಿತ್ತು. ಅಲ್ಲಿಯೆ ಇಟ್ಟಿದ್ದ ಅವರ ಪಾದುಕೆಗಳಿಗೆ ನಮಿಸಿ, ನಿಂತು ಸುತ್ತಲೂ ಕಣ್ಣು ಹಾಯಿಸಿದೆ:

ಕೊಠಡಿಯ ಒಂದು ಭಾಗದಲ್ಲಿ ಅವರು ಮಲಗುತ್ತಿದ್ದ ವಿಶಾಲ ಮಂಚವಿತ್ತು. ಒಂದು ಮೇಜೂ ಕುರ್ಚಿಯೂ ಅವರು ಉಪಯೋಗಿಸುತ್ತಿದ್ದಲ್ಲಿಯೆ ಹಾಗೆಯೆ ಇದ್ದುವು. ಇತ್ತೀಚೆಗೆ ಇಟ್ಟಿದ್ದಂತೆ, ಬುದ್ಧದೇವನ ಒಂದು ಧ್ಯಾನಸ್ತಿಮಿತಭಂಗಿಯ ವಿಗ್ರಹವೂ ಆ ಕ್ಷೇತ್ರದ ಪ್ರಶಾಂತ ಗಂಭೀರತೆಗೆ ಪ್ರತಿಮಾಸ್ವರೂಪವಾಗಿತ್ತು. ಅವರು ಉಪಯೋಗಿಸುತ್ತಿದ್ದ ತಂಬೂರಿ, ಕೊಡೆ, ಊರುಗೋಲು, ಬಟ್ಟೆಬರೆ ಪುಸ್ತಕ ಎಲ್ಲವೂ ಅಲ್ಲಿಯೆ ವಿನೀತ ಸಾಕ್ಷಿಗಳಂತಿದ್ದುವು. ಪರಮಹಂಸರ ಮತ್ತು ಸ್ವಾಮಿಜಿಯ ತೈಲಚಿತ್ರಗಳೂ ಬಂದ ಯಾತ್ರಿಕರನ್ನು ಆಶೀರ್ವದಿಸುವಂತಿದ್ದುವು. ಮಂಚದ ಮೇಲೆ ಬಿಚ್ಚಿದ ಹಾಸಗೆಯ ಮೇಲೆ ಸ್ವಾಮಿಜಿಯ ಪಟ ರಾರಾಜಿಸಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ಅಲ್ಲಿಯ ಪವಿತ್ರ ನಿಶ್ಶಬ್ದತೆಗೆ ಭಂಗಬಾರದಂತೆ ನನ್ನ ಕಿವಿಯಲ್ಲಿ ಉಸುರಿದರು: "ಸ್ವಾಮಿಜಿ ಇಲ್ಲಿ ಮಲಗುತ್ತಲೆ ಇರಲಿಲ್ಲ. ಅಲ್ಲಿ ಹೊರಗಡೆ ವರಾಂಡದಲ್ಲಿ ಒಂದು ಬರಿಯ ಚಾಪೆಯ ಮೇಲೆ ಮಲಗುತ್ತಿದ್ದರು!"

ಮಹಡಿಯ ಮೇಲಣ ಆ ವರಾಂಡಕ್ಕೆ ಹೋಗಿ ನಿಂತಾಗ, ಎಂತಹ ದೃಶ್ಯ ನಮ್ಮನ್ನು ಎದುರುಗೊಂಡಿತು! ತುಂಬಿ ಹರಿಯುತ್ತಿದ್ದ ಬಿತ್ತರದೆದೆಯ ಗಂಗಾಮಾತೆ ಕೆಂಗಾವಿಯುಟ್ಟಂತೆ ಕೆಂಪಗೆ ಹರಿಯುತ್ತಿದ್ದಳು; ಅಲ್ಲಲ್ಲಿ ದೋಣಿಗಳು, ಜಹಜುಗಳು; ಇಕ್ಕೆಲಗಳಲ್ಲಿಯ ನದಿಯ ತೀರದಲ್ಲಿ ಮಹಾಸೌಧಗಳ ಸಾಲು; ಅಲ್ಲಲ್ಲಿ ದಟ್ಟವಾಗಿ ತಳಿರಿಡಿದು ಹಸುರುಕ್ಕುವ ಮರಗಳ ತೋಪುಗಳು; ಆಗಲೆ ಕವಿಯುತ್ತಿದ್ದ ಮುಂಗಪ್ಪಿನಲ್ಲಿ ದೂರ ದಿಗಂತಸ್ಥವೆಂಬಂತೆ ದಕ್ಷಿಣೇಶ್ವರದ ದೇವಾಲಯಗಳ ಗೋಪುರ ಪಂಕ್ತಿ: ಬೇಲೂರುಮಠ ಸ್ಥಾಪನೆಗೆ ಸ್ಥಳವನ್ನಾಯ್ದ ದಿವ್ಯ ಸಂನ್ಯಾಸಿಯ ಸೌಂದರ್ಯಪ್ರಜ್ಞೆಗೆ ಸಾಕ್ಷಿಯಾಗಿತ್ತು ಆ ಕಂಗೊಳಿಸುವ ನೋಟ!

ಅಷ್ಟರಲ್ಲಿ ಸಂಧ್ಯಾ ಮಂಗಳಾರತಿಗೆ ಸಮಯ ಸನ್ನಿಹಿತವಾದ್ದರಿಂದ ನಾವೆಲ್ಲ ದೇವರಮನೆಗೆ, ಎಂದರೆ ಶ್ರೀಗುರು ಮಂದಿರಕ್ಕೆ, ಹೋಗಿ ಪೂಜೆಯಲ್ಲಿ ಭಾಗಿಗಳಾದೆವು, ದೇವರ ಗುಡಿಯನ್ನು ಎದೆತುಂಬಿ ಕಣ್ಣುತುಂಬ ನೋಡಿ ತಣಿದೆವು: ಹಾಲುಗಲ್ಲಿನ ನುಣುಪಾದ ನೆಲದ ತಣ್ಪು; ಒಳಗೆ ಪೀಠದಲ್ಲಿ ಶ್ರೀ ಗುರುಮಹಾರಾಜರ ಒಂದು ಸಣ್ಣ ಶಿಲಾವಿಗ್ರಹ; ನಿರಾಡಂಬರ ಮತ್ತು ನಿರಾಭರಣವಾಗಿದ್ದ ಅಲ್ಲಿಯ ಆ ಸರಳತೆಯಲ್ಲಿ ಅದೆಂತಹ ಭವ್ಯತೆಯ ಅನುಭವವಾಗುತ್ತದೆ ಭಕ್ತರಿಗೆ!

ಮಠದ ಹೊರ ಅಂಗಳದಲ್ಲಿ ಗೋವುಗಳಿಗಾಗಿ ತಮ್ಮ ಸ್ವಹಸ್ತದಿಂದಲೆ ಹುಲ್ಲು ಕೊಯ್ಯುತ್ತಿದ್ದ ಸಾಧುಗಳು ಕತ್ತಲಾದ ಮೇಲೆ ಒಳಗೆ ಹೋದರು.

ನವರಾತ್ರಿಯ ಪೂಜೆಗಾಗಿ ದುರ್ಗಾದೇವಿಯ ವಿಗ್ರಹವನ್ನು ಸಿಂಗರಿಸುವುದರಲ್ಲಿ ಕೆಲವರು ಉದ್ಯುಕ್ತರಾಗಿದ್ದರು. ಆಹ! ಎಂತಹ ಸುಂದರ ವಿಗ್ರಹ ಅದು! ಶೃಂಗಾರ ದಲ್ಲಿಯೂ ಏನು ಅಸದೃಶ ಚಮತ್ಕಾರ! ಒಂದು ಕಡೆ ಲಕ್ಷ್ಮಿ; ಒಂದು ಕಡೆ ಸರಸ್ವತಿ; ಒಂದೆಡೆ ಗಣೇಶ; ಒಂದೆಡೆ ಸುಬ್ರಹ್ಮಣ್ಯ; ಮಲಗಿ ಮಲೆತಿರುವ ಮಹಿಷಾಸುರನ ಕಣ್ಣುಗಳೊ ಅದೆಷ್ಟು ಉಜ್ವಲ! ಆ ಹಾವೋ, ಆ ಸಿಂಹವೋ! ಆದರೂ ಅಲಂಕೃತಳಾದ ತಾಯಿ ಭಯಂಕರಿಯಾಗಿ ತೋರಲಿಲ್ಲ; ಮಕ್ಕಳನ್ನು ಕಂಡು ಮುಗುಳುನಗೆದೋರಿ ಹರಸುವಂತಿದ್ದಳು, ರಾಮಣೀಯಕವಾಗಿ!

ನಕ್ಷತ್ರ ಕಾಂತಿಯ ಅಂಧಕಾರದಲ್ಲಿ ನಾನೊಬ್ಬನೆ ಮಠದ ಮುಂದೆ ಗಂಗೆಗೆ ಚಾಚಿಕೊಂಡಿರುವ ಸೋಪಾನ ಪಂಕ್ತಿಯ ವೇದಿಕೆಯ ಮೇಲೆ ತಿರುಗಾಡುತ್ತಾ ಆ ದಿನದ ವಿವಿಧ ರೂಪದ ಅನುಭವಗಳನ್ನು ಕುರಿತು ಧ್ಯಾನಿಸಿದೆ. ಅನುಭವಗಳ ರೂಪ ವಿವಿಧ ವಾಗಿದ್ದರೂ ಅವುಗಳಲ್ಲಿ ಏಕಸೂತ್ರದ ಒಂದು ಐಕ್ಯಸ್ವರೂಪವಿತ್ತು. ನಾಳೆ ನನಗೊದಗ ಲಿರುವ ಮಹಾಗುರುವಿನ ಅನುಗ್ರಹಕ್ಕೆ ಆ ಅನುಭವಗಳೆಲ್ಲವೂ ಸೇರಿ ಒಂದು ಆಧ್ಯಾತ್ಮಿಕ ವಾದ ಸಂಸ್ಕಾರಭಿತ್ತಿಯನ್ನು ಸಿದ್ಧಗೊಳಿಸಿದಂತಿತ್ತು, ನನ್ನ ಹೃದಯದಲ್ಲಿ.

ಮರುದಿನ ೮-೧೦-೧೯೨೨, ಆಶ್ವೀಜ ಶುದ್ಧಷಷ್ಠಿ, ಸ್ವಾಮಿ ಸಿದ್ಧೇಶ್ವರಾ ನಂದರು ಹೇಳಿದರು: "ಈವೊತ್ತು ನಿಜವಾಗಿಯೂ ಪ್ರಶಸ್ತವಾದ ದಿನ; ಸರಸ್ವತೀ ಆವಾಹನೆಯ ಶುಭದಿನ. ಕವಿಯಾಗಿರುವ ನಿನಗೆ ಈ ದಿನ ದೀಕ್ಷೆ ದೊರೆಯುತ್ತಿರುವುದ ರಲ್ಲಿ ತುಂಬ ಅರ್ಥವಿದೆ, ಧ್ವನಿಯಿದೆ!"

ಅಂದು ಔಪಚಾರಿಕ ಪ್ರಶಂಸೆ ಎಂಬಂತೆ ತೋರಿತ್ತು, ಅವರ ಆ ಉಕ್ತಿ; ಇಂದು ಮೂವತ್ತೆಂಟು ವರ್ಷಗಳ ಅನಂತರ, ಅದನ್ನು ಕುರಿತು ಬರೆಯುತ್ತಿರುವಾಗ, ಅವರ ಸರಳ ಸಾಧಾರಣವಾಗಿದ್ದ ಆ ವಾಕ್ಕು ಎಂತಹ ಪ್ರವಾದಶಕ್ತಿಯಿಂದ ಕೂಡಿ ಎಷ್ಟು ಸತ್ಯಗರ್ಭಿತವಾಗಿತ್ತು ಎಂಬುದು ಸುಸ್ಪಷ್ಟವಾಗಿದೆ. ಅಂದು ನನಗೊದಗಿದ ಆಶೀರ್ವಾದದ ತಪೋಬಲವೆ ನನ್ನನ್ನು ಬದುಕಿನ ಕುಟಿಲ ಜಟಿಲವಾದ ಹಾದಿಯುದ್ದಕ್ಕೂ ಕೈಹಿಡಿದು ನಡೆಸಿ, ನನ್ನಿಂದ ಸಾಹಿತ್ಯಕ ಮಹಾಕೃತಿಗಳನ್ನು ಸೃಷ್ಟಿಸಿ, ನನ್ನ ಜೀವನವನ್ನು ಧನ್ಯವನ್ನಾಗಿ ಮಾಡಿದೆ!

ಇನ್ನು ದೀಕ್ಷೆಯ ವಿಷಯ? ಏನನ್ನು ಹೇಳುವುದು? ಏನನ್ನು ಹೇಳಿದರೆ ತಾನೆ ಅದರ ದಿವ್ಯ ಮಹೋನ್ನತಿಗೆ ತಗುವ ಗೌರವವೆಸಗಿದಂತಾಗುತ್ತದೆ? ಅದನ್ನು ನೇರವಾಗಿ ಕುರಿತಾಡುವ ನುಡಿಗಳೆಲ್ಲ ಅದರ ಗುರುತ್ವಕ್ಕೆ ಭಂಗ ತರುತ್ತವೆ; ಅದನ್ನು ಲಘುಗೊಳಿಸುತ್ತವೆ! ಅನಧಿಕಾರಿಗಳ ಮುಂದೆ ಅದನ್ನು ಹೀಯಾಳಿಸಿದಂತೆಯೂ ಆಗುತ್ತದೇನೊ? ಆ ಅಪಚಾರಕ್ಕೆ ನಾನು ಕೈಹಾಕುವುದಿಲ್ಲ. ಅದಕ್ಕೆ ಬದಲಾಗಿ 'ಅನುಕ್ತ' ಎನಿಸುವ ಅನ್ಯರೀತಿಯಿಂದ ಅದರ ಅಮರ ಮಹಿಮೆಯನ್ನು ಇನಿತೆ ಸೂಚಿಸಲು ಪ್ರಯತ್ನಿಸುತ್ತೇನೆ. ಅಂದು ಬರೆದಿರುವ ನನ್ನ ದಿನಚರಿಯೂ ನನಗೆ ಯಾವ ನೆರವನ್ನೂ ನೀಡಲೊಲ್ಲದೆ ತುಟಿಬಿಗಿದು ಮೌನವಾಗಿದೆ: "ಇಂದು ನನ್ನ ಜೀವಮಾನದಲ್ಲಿ ಅತ್ಯಂತ ಶ್ರೇಷ್ಠವಾದ ದಿನಗಳಲ್ಲಿ ಒಂದು ದಿನ. ಏಕೆಂದರೆ ಇಂದು ಶ್ರೀಮತ್ ಸ್ವಾಮಿ ಶಿವಾನಂದ ಸ್ವಾಮಿಗಳಿಂದ ನನಗೆ ದೀಕ್ಷೆ ಲಭಿಸಿತು. ಇದರ ವಿಷಯ ರಹಸ್ಯವಾಗಿರಬೇಕಾದ್ದರಿಂದ ನಾನು ಇಲ್ಲಿ ಬರೆಯುವುದಿಲ್ಲ" ಎಂದಿದೆ ಅಲ್ಲಿಯ ಲಿಖಿತ!

ತಮ್ಮ ಮಂತ್ರದೀಕ್ಷಾ ವಿಧಾನದ ವಿಚಾರವಾಗಿ ಸ್ವಯಂ ಮಹಾಪುರುಷಜಿಯೆ, [ಸ್ವಾಮಿ ಅಪೂರ್ವಾನಂದರಿಂದ ಸಂಗ್ರಹಗೊಂಡಿರುವ 'ಶಿವಾನಂದ ವಾಣಿ'ಯಲ್ಲಿ,] ಹೀಗೆ ಹೇಳಿದ್ದಾರೆ: "ನಮ್ಮ ದೀಕ್ಷಾ ಪ್ರದಾನದಲ್ಲಿ ಯಾವ ಭಟ್ಟಾಚಾರ್ಜಿಗಿರಿಯೂ ಇರುವುದಿಲ್ಲ. ಅಲ್ಲದೆ ಅಂಥಾ ಅಂತ್ರ ಮಂತ್ರ ಯಾವುದೂ ವಿಶೇಷವಾಗಿ ನನಗೆ ಗೊತ್ತೂ ಇಲ್ಲ; ಅವನ್ನು ತಿಳಿದುಕೊಳ್ಳುವುದರಿಂದ ಪ್ರಯೋಜನವೂ ಇದೆ ಎಂದು ನಾನು ಭಾವಿಸಿಯೂ ಇಲ್ಲ. ನನಗೆ ಗೊತ್ತಿರುವುದು, ಠಾಕೂರರು.—ಅವರೇ ಸರ್ವಸ್ವ. ಅವರದೆ ನಾಮ, ಅವರದೆ ಶಕ್ತಿ. ಅವರ ಇಚ್ಛೆಯಮೇರೆಗೆ ಅವರದೆ ಹೆಸರನ್ನು ಎಲ್ಲರಿಗೂ ಕೊಡುತ್ತೇನೆ. ಮತ್ತೆ ಪ್ರಾರ್ಥನೆ ಮಾಡುತ್ತೇನೆ,—'ಠಾಕೂರ್, ಇವರನ್ನು ಕೃಪೆಯಿಟ್ಟು ಸ್ವೀಕರಿಸಿ; ಇವರಿಗೆ ಭಕ್ತಿ ವಿಶ್ವಾಸಗಳನ್ನು ದಯಪಾಲಿಸಿ; ದಯೆ ತೋರಿ; ಎಂದು."

ಇನ್ನೊಮ್ಮೆ ಅವರು ಮಂತ್ರದ ವಿಚಾರವಾಗಿ ಮಾತನಾಡುತ್ತಾ ಹೀಗೆ ಹೇಳಿದ್ದಾರೆ: "ಮಂತ್ರಕ್ಕೆ ಮತ್ತೇನು ಅರ್ಥ? ಮಂತ್ರ ಭಗವಂತನ ಹೆಸರು. ಅದರ ಜೊತೆಗಿರುವ ಬೀಜವಿದೆಯಲ್ಲಾ ಅದು ಬೇರೆ ಬೇರೆ ದೇವದೇವಿಯರನ್ನು ಕುರಿತ ಭಾವ ಪ್ರಕಾಶಕ ಶಬ್ದ. ಬೀಜ ಮತ್ತು ನಾಮ ಒಟ್ಟಾದರೆ ಮಂತ್ರ. ಒಟ್ಟಿನಲ್ಲಿ ಮಂತ್ರ ಭಗವಂತನನ್ನು ನೆನೆಯಿಸುವ ವಿಧಾನ. ಮಂತ್ರಜಪ ಮಾಡುವುದೆಂದರೆ ದೇವರನ್ನು ಕರೆದಂತೆಯೆ."

ದೀಕ್ಷಾಗುರುವಾಗಿ ಮಂತ್ರದೀಕ್ಷೆ ಕೊಡುವ ತಮ್ಮ ನಿಲವೇನು ಎಂಬುದರ ವಿಚಾರವಾಗಿಯೂ ಅವರ ಮಾತುಕತೆಗಳಲ್ಲಿ ಒಂದು ಅದ್ಭುತ ಪ್ರಸಂಗ ಬರುತ್ತದೆ, ಕಾಶಿಯಲ್ಲಿ ಮಹಾಪುರುಷಜಿ ಅನೇಕರಿಗೆ ದೀಕ್ಷೆಕೊಟ್ಟ ಸಂದರ್ಭದಲ್ಲಿ: ಕಾಶಿ ಶಿವಕ್ಷೇತ್ರವಾದ್ದರಿಂದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಾರದಾನಂದರು ಮೊದಲಾದ ಶ್ರೀ ರಾಮಕೃಷ್ಣ ದೇವರ ಪ್ರಮುಖ ಅಂತರಂಗ ಶಿಷ್ಯರಲ್ಲಿ ಯಾರೂ ಅಲ್ಲಿ ಮಂತ್ರದೀಕ್ಷೆ ಕೊಡಲು

ಅಷ್ಟಲ್ಲದೆ ಏನು? ಕಲ್ಕತ್ತಾಭಿಮುಖವಾಗಿ ಹೊರಟಿದ್ದ ನಾವು ವಿಶಾಲ ವಿಶ್ವದಲ್ಲಿ ನಗಣ್ಯರಾದ ಯಃಕಶ್ಚಿತ ವ್ಯಕ್ತಿಗಳಾಗಿದ್ದರೂ ದಕ್ಷಿಣೇಶ್ವರ ದೇವಮಾನವನ ಶಿಷ್ಯೋತ್ತಮನ ಸನ್ನಿಧಿಗೆ ದೀಕ್ಷಾರ್ಥಿಗಳಾಗಿ ಹೊರಟಿದ್ದ ನಮ್ಮ ಉದ್ದೇಶ್ಯವು ಭೂಮ ಸಂಬಂಧಿಯಾಗಿದ್ದುದರಿಂದ ವಿಶ್ವಮಾತೆಯ ಸುವಿಶೇಷ ಗಮನಕ್ಕೆ ಅದು ಬಂದಿದ್ದರೆ ಆಶ್ಚರ್ಯಪಡಬೇಕಾಗಿಲ್ಲವಲ್ಲವೆ!

ನಾವು ಬೆಂಗಳೂರಿನ ನಿಲ್ದಾಣವನ್ನು ತಲುಪಿದಾಗ ಚೆನ್ನಾಗಿ ಕತ್ತಲೆಯಾಗಿತ್ತು. ಮದರಾಸಿಗೆ ಹೊರಡುವ ರಾತ್ರಿಯ ರೈಲಿಗೆ ನಮ್ಮ ಸಾಮಾನುಗಳನ್ನೆಲ್ಲ ಬದಲಾಯಿಸಿದೆವು. ಅಷ್ಟರಲ್ಲಿ ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದಿಂದ ನಮ್ಮನ್ನು ಅಭಿನಂದಿಸಿ ಬೀಳುಕೊಳ್ಳಲು ಬಂದಿದ್ದರು, ಸ್ವಾಮಿ ಸಂವಿದಾನಂದರು, ಎಳೆಯ ತಂಬಿ, ಮತ್ತು ಇತರ ಆಶ್ರಮದ ಭಕ್ತರು. 'ಕವಿಗಾಗಿ ಈ ಹೂವು ತಂದಿದ್ದೇನೆ!' ಎಂದು ಕೊಟ್ಟ ಸ್ವಾಗತಾಶೀರ್ವಾದವಿತ್ತರು ಸ್ವಾಮಿ ಸಂವಿದಾನಂದರು. ಅವರೆಲ್ಲರ ಮಾತುಕತೆ, ಸಂತೋಷ ಭಂಗಿ, ಸ್ವಾಗತೋತ್ಸಾಹ, ಅಭಿನಂದನಾ ರೀತಿ ಇವು ಒಂದೊಂದೂ ನನ್ನ ಮನಸ್ಸಿಗೆ ನಾವು ಹೋಗುತ್ತಿದ್ದ ಕಾರ್ಯದ ಹಿರಿಮೆಯನ್ನೂ ಶ್ಲಾಘ್ಯತೆಯನ್ನೂ ತಂದುಕೊಟ್ಟು, ನನ್ನ ಪುಣ್ಯಶಾಲಿತ್ವವನ್ನೂ ನನಗೆ ಸಂಭವಿಸಲಿದ್ದ ಮಹಾಶ್ರೇಯಸ್ಸಿನ ಲೋಕೋತ್ತರತೆಯನ್ನೂ ಹೃದಯಕ್ಕೆ ಘೋಷಿಸಿ ತಿವಿದು ಹೇಳುವಂತಿತ್ತು.

ಮದರಾಸಿಗೆ ಹೊರಟಿದ್ದ ನನ್ನ ಪರಿಚಯದ ಹಿರಿಯ ಪ್ರಾಧ್ಯಾಪಕರೊಬ್ಬರು ನಾವು ಕೂತಿದ್ದ ಗಾಡಿಗೇ ಹತ್ತಿದರು. ನಾನು ಬೇಲೂರು ಮಠಕ್ಕೆ ಹೋಗುತ್ತಿದ್ದೇನೆ ಎಂಬುದನ್ನು ಕೇಳಿ ಅಭಿನಂದಿಸುತ್ತಾ ಹೇಳಿದರು: "ಹೌದಪ್ಪಾ, ಈಗಲೇ ಹೋಗಬೇಕು. ಮುಂದೆ ಸಂಸಾರದ ತಾಪತ್ರಯಗಳು ಬಂದುಬಿಟ್ಟರೆ ತುಂಬಾ ತೊಂದರೆಯಾಗುತ್ತೆ. ನನಗೂ ಆಧ್ಯಾತ್ಮಿಕ ಪಿಪಾಸೆ ಇತ್ತು. ಆದರೆ ನಿಮಗೆ ಈಗ ದೊರೆಯುತ್ತಿರುವಂತೆ ನನಗೆ ಆಗ ಅವಕಾಶ ಸಿಕ್ಕಲಿಲ್ಲ. ತಾರುಣ್ಯದಲ್ಲಿಯೆ ರಕ್ಷಿತವಾಗದಿದ್ದ ಆಧ್ಯಾತ್ಮಿಕತೆ ತರುವಾಯದ ಲೌಕಿಕ ಜೀವನದ ಚಪ್ಪಡಿಯಡಿ ಸಿಲುಕಿ ವಿನಷ್ಟವಾಯಿತು. ಅದನ್ನು ನೆನೆದು ಈಗ ನನ್ನ ಮನಸ್ಸು ವಿಷಾದಿಸುತ್ತದೆ. ಆದರೇನು ಮಾಡುವುದು? ........ ಸಿದ್ಧ ಗುರುವರ್ಯರ ಅನುಗ್ರಹಕ್ಕೆ ಪಾತ್ರವಾಗುವ ನೀವೇ ಧನ್ಯರು."

ರೈಲು ಹೊರಡುವ ಸಿಳ್ಳು ಕೇಳಿಸಿದಾಗ ವಯಸ್ಸಿನಲ್ಲಿ ತುಂಬಾ ಮುಂದಿದ್ದು ಮುದುಕರಾಗಿದ್ದ ಎಳೆಯತಂಬಿ ಸ್ವಾಮಿ ಸಿದ್ಧೇಶ್ವರಾನಂದರಿಗೆ ಕಾಲುಮುಟ್ಟಿ ನಮಸ್ಕರಿಸಲು ಪ್ರಯತ್ನಿಸಿದರು. ಆದರೆ ಸ್ವಾಮಿಜಿ ಬಿಡಲಿಲ್ಲ. ಆಗ ಎಳೆಯತಂಬಿ "ಈ ನಮಸ್ಕಾರಗಳು ನಿಮಗಲ್ಲ, ಮಹಾಪುರುಷ ಮಹಾರಾಜರಿಗೆ ಮತ್ತು ಸ್ವಾಮಿ ಶರ್ವಾನಂದರಿಗೆ!" ಎಂದು ಕಾಲಿಗೆ ಅಡ್ಡಬಿದ್ದೇಬಿಟ್ಟರು. ನಾನು ಸ್ವಾಮಿ ಸಂವಿದಾನಂದರಿಗೆ ಕಾಲುಮುಟ್ಟಿ ನಮಸ್ಕರಿಸಿದೆ. ಅವರೆಂದರು "ಇದು ರೈಲಪ್ಪಾ, ಹೀಗೆಲ್ಲ ಮಾಡಿದರೆ ಜನರೇನು ಅಂದುಕೊಂಡಾರು?"

ಮರುದಿನ ಬೆಳಿಗ್ಗೆ ಮದರಾಸಿನಲ್ಲಿ ರೈಲಿನಿಂದಿಳಿದು ಮೈಲಾಪುರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮಕ್ಕೆ ಹೋದೆವು. ಮೊದಲು ದೇವರ ಮನೆಗೆ ಹೋಗಿ ಶ್ರೀ ಗುರುಮಹಾರಾಜರಿಗೆ ಪ್ರಣಾಮ ಸಲ್ಲಿಸಿದೆವು. ಶುಚಿಯಾಗಿ, ನಿಃಶಬ್ದವಾಗಿ, ಜನ ಸಂದಣಿಯ ಪಟ್ಟಣದಲ್ಲಿದ್ದರೂ ಶಾಂತಿದಾಯಕವಾಗಿ ಪವಿತ್ರವಾಗಿತ್ತು ಆಶ್ರಮದ ಸಾನ್ನಿಧ್ಯ. ನಾನು ಮದರಾಸಿಗೆ ಬರುತ್ತಿದ್ದುದು ಅದೇ ಮೊದಲ ಸಲವಾಗಿದ್ದರೂ ಎಷ್ಟೋ ಕಾಲದಿಂದ ಚಿರಪರಿಚಿತವಾಗಿದ್ದ ನನ್ನ ಸ್ವಂತ ನೆಲೆಗೇ ಬಂದಂತಿತ್ತು. ಮೈಸೂರಾದರೇನು? ಬೆಂಗಳೂರಾದರೇನು? ಮದರಾಸಾದರೇನು? ಶ್ರೀ ರಾಮಕೃಷ್ಣ ಆಶ್ರಮಕ್ಕೆ ಸೇರಿದ ಸಂನ್ಯಾಸಿಗಳ ಸಂಗದಿಂದ ಪೂತವಾಗಿದ್ದ ಎಲ್ಲ ಸ್ಥಾನಗಳೂ ನನ್ನ ಸ್ವಂತದ ತವರು ನೆಲೆಗಳೆಂಬುದು ದಿನ ದಿನಕ್ಕೂ ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುತ್ತಿತ್ತು.

ಎಂತಹ ಸ್ನೇಹ? ಎಷ್ಟು ವಾತ್ಸಲ್ಯ? ಏನು ಆದರ? ನಾನು ಅವರೆಲ್ಲರಿಗೂ ಸೇರಿದವನು ಎಂಬ ಅದೆಂತಹ ಅಭಿಮಾನ ವಿಶ್ವಾಸ? ಸಂನ್ಯಾಸಿಗಳು, ಬ್ರಹ್ಮಚಾರಿಗಳು, ಈಶ್ವರಾನಂದರು, ಅಸಂಗಾನಂದರು, ಗಣೇಶ ಮಹಾರಾಜ್, ಇಂದು ಮಹಾರಾಜ್, ಪುರುಷೋತ್ತಮ ಮಹಾರಾಜ್,—ಒಬ್ಬರೇ? ಇಬ್ಬರೇ? ಎಲ್ಲರೂ ನನಗೆ ತೋರಿದ ಪ್ರೀತಿಯಿಂದ ನಾನು ಸೋತುಹೋದೆ. ಬಹುಕಾಲದ ಮೇಲೆ ಮನೆಗೆ ಮರಳಿದ್ದ ಮಗಳಿಗೆ ತಾಯಿ ತೋರಬಹುದಾದ ಅಕ್ಕರೆಗೂ ಮೀರಿತ್ತು ಅದು. ಆ ಪ್ರೀತಿಯಲ್ಲಿ ನನ್ನ ಚೇತನ ಅದ್ದಿ ಆರ್ದ್ರವಾಗಿಹೋದಂತಿತ್ತು, ಮುಂದೆ ಮಹಾಪುರುಷಜಿಯ ಸಾನ್ನಿಧ್ಯದಲ್ಲಿ ನಾನು ಅನುಭವಿಸಲಿದ್ದ ಅಪಾರ ದೈವೀಪ್ರೇಮಕ್ಕೆ ಮುನ್‌ಸೂಚಕವಾದ ಒಂದು ತರಂಗಾಸ್ಫಾಲನೆಯೋ ಎಂಬಂತೆ!

ಮದರಾಸಿನಲ್ಲಿ ನಾವು ಎರಡು ಹಗಲು ಒಂದು ರಾತ್ರಿ ತಂಗಿದ್ದೆವು. ಪ್ರೇಕ್ಷಣೀಯ ವಾದ ಮನುಷ್ಯ ಕೃತ ಸ್ಥಾನಗಳನ್ನೂ ನಿಸರ್ಗ ಸ್ಥಾನಗಳನ್ನೂ ನೋಡಿದೆವು. ಅವು ಗಳಲೆಲ್ಲ ಚಿರಸ್ಮರಣೀಯವಾಗಿರುವುದೆಂದರೆ—ಸಮುದ್ರದರ್ಶನ!—ಪ್ರಪ್ರಥಮ ಸಮುದ್ರ ದರ್ಶನ! ಕವಿಯಾದ ನನಗೆ ಅದೊಂದು ಮಹನೀಯ ಭಗವದನುಭವವಾಗಿತ್ತು. ನಾನು ಯಾವ ಮಹಾಗುರುವಿನ ಬಳಿಗೆ ಮಂತ್ರದೀಕ್ಷಾರ್ಥಿಯಾಗಿ ಹೋಗುತ್ತಿದ್ದೆನೋ ಆ ದಿವ್ಯಗುರುವಿನ ಮತ್ತೊಂದು ನೈಸರ್ಗಿಕ ರೂಪವೇ ನನ್ನೆದುರು ಮೈದೋರಿ ನನ್ನನ್ನು ಅನಂತತೆಗೆತ್ತಿ ಅಪಾರಕ್ಕೆ ಬೀಸಿದಂತಾಗಿತ್ತು, ತೀರದಲ್ಲಿ ನಿಂತು ವೀಕ್ಷಿಸುತ್ತಿದ್ದ ನನ್ನ ಚೇತನಕ್ಕೆ: ಅಚಂಚಲ ಆಕಾಶದ ಅನಂತತೆ, ಸುಚಂಚಲ ಸಾಗರದ ಅಪಾರತೆ ಮತ್ತು ಸುಸ್ಥಿರಾ ಭೂಗೋಲದ ಅಸೀಮ ಸುವಿಶಾಲತೆ;—ಅನೇಕ ಭವ್ಯತಾ ವಿಭೂತಿ ಸಂಗಮ ಸ್ಥಾನವಲ್ಲವೆ ಸಮುದ್ರವೇಲೆ?

ಹೊರಡುವ ದಿನ ಸಂಜೆ ಮಂದಿರದಲ್ಲಿ ಮಂಗಳಾರತಿಯಾದಮೇಲೆ, ಪ್ರಸಾದ ಸ್ವೀಕಾರಮಾಡಿ, ಆಶ್ರಮವಾಸಿಗಳಿಗೆ ನಮಸ್ಕರಿಸಿ ರೈಲು ನಿಲ್ದಾಣಕ್ಕೆ ಹೊರಟಾಗ, ಅಂದು ಮದರಾಸು ಆಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯಪಾದ ಶ್ರೀ ಯತೀಶ್ವರಾನಂದ

ಸಮ್ಮತಿಸಿರಲಿಲ್ಲ. ಸ್ವಾಮಿ ಶಿವಾನಂದರು ಆ ನಿಯಮಕ್ಕೆ ವ್ಯತಿಕ್ರಮವಾಗಿ ದೀಕ್ಷೆ ಕೊಟ್ಟಿದ್ದು ಅನೇಕ ಸಾಧು ಮತ್ತು ಸೇವಾನುಚರರ ಮನಸ್ಸಿನಲ್ಲಿ ಏನೊ ತುಸು ಕಳವಳದ ಸಂದೇಹಕ್ಕೆ ಕಾರಣವಾಗಿತ್ತು. ಆ ವಿಚಾರವಾಗಿ ಪ್ರಶ್ನಿಸಿದಾಗ ಮಹಾ ಪುರುಷಜಿ ಹೇಳಿದರು: "ನೋಡಯ್ಯಾ, ನಾನು ಯಾರಿಗಾದರೂ ದೀಕ್ಷೆ ಕೊಡುತ್ತೇನೆ ಎಂಬ ಬುದ್ಧಿ ನನ್ನ ಮನಸ್ಸಿನಲ್ಲಿ ಇರುವುದೇ ಇಲ್ಲ. ಶ್ರೀ ಠಾಕೂರರ ಕೃಪೆಯಿಂದ ನನ್ನಲ್ಲಿ ಗುರುಬುದ್ಧಿ ಯಾವತ್ತೂ ತಲೆಹಾಕಿಲ್ಲ. ಜಗದ್ಗುರುವಾಗಿದ್ದಾನೆ ಆ ಶಂಕರ ಮಹಾದೇವ;—ಈ ಯುಗದಲ್ಲಿ ಶ್ರೀ ರಾಮಕೃಷ್ಣದೇವ. ಆತನೆ ಭಕ್ತರ ಹೃದಯದಲ್ಲಿ ಪ್ರೇರಣೆಯಾಗಿ ಇಲ್ಲಿಗೆ ಅವರನ್ನು ಕಳುಹಿಸುತ್ತಾನೆ. ಇತ್ತ ಆತನೆ ನನ್ನಲ್ಲಿ ಕುಳಿತು ಏನು ಹೇಳಿಸುತ್ತಾನೊ ಅದನ್ನು ನಾನು ಮಾಡುತ್ತೇನೆ. ಶ್ರೀ ಠಾಕೂರರೇ ನನ್ನ ಅಂತರಾತ್ಮವಾಗಿದ್ದಾರೆ."

ಯಾರನ್ನು ಜಗತ್ತು ಸನಾತನ ಪೂರ್ಣಬ್ರಹ್ಮದ ವರಿಷ್ಠಾವತಾರ ಎಂದು ಆರಾಧಿಸುತ್ತಿದೆಯೊ ಅಂತಹ ಭಗವಂತನ ನಿತ್ಯಸಂಗಿ ಪಾರ್ಷದರಲ್ಲಿ ಅಗ್ರಪಂಕ್ತಿಗೆ ಸೇರಿದವನಾಗಿ, ಅವತಾರಪುರುಷೋತ್ತಮನ ಲೋಕಸಂಗ್ರಹ ಕಾರ್ಯದಲ್ಲಿ ಸಹಯೋಗಿಗಳಾಗಿ ಮತ್ತು ಸೇವಾ ಸಹಾಯಕರಾಗಿ ಆತನೊಡನೆ ಅವತೀರ್ಣರಾಗಿದ್ದ ಅಂತರಂಗ ಶಿಷ್ಯರಲ್ಲಿ ಈಶ್ವರಕೋಟಿಯೆಂದೂ ನಿತ್ಯಸಿದ್ಧನೆಂದೂ ಪರಿಗಣಿತನಾಗಿರುವ ಮಹಾಪುರುಷನಿಂದ ದೀಕ್ಷೆ ಪಡೆಯುವುದೆಂದರೆ ಭವಭವಾಂತರ ಸುಕೃತ ಕೃಪೆಯಲ್ಲದೆ ಮತ್ತೇನು? ಅದರ ಧನ್ಯತೆ ಎಂತಹ ಧ್ಯಾನಕ್ಕೂ ಅಗಮ್ಯವಾಗಿಯೆ ಉಳಿಯುತ್ತದೆ; ಪರಿಭಾವಿಸಿದಷ್ಟೂ ಭವ್ಯತರವಾಗಿ ತೋರುತ್ತದೆ ಅದರ ಮಹತ್ತು!

ದೀಕ್ಷಾನಂತರ ದುರ್ಗಾಪೂಜೆಯ ಕೊನೆಯ ದಿನದವರೆಗೂ ನಾವು ಬೇಲೂರು ಮಠದಲ್ಲಿದ್ದೆವು, ಭೌಗೋಲಿಕವಾಗಿ; ಆಧ್ಯಾತ್ಮಿಕವಾಗಿ, ಮಹಾಪುರುಷಜಿಯ ಸಾನ್ನಿಧ್ಯದ ಕೃಪಾವಕ್ಷನೀಡದಲ್ಲಿ ಪಕ್ಷಿಶಿಶುಗಳಾಗಿದ್ದೆವು! ನನ್ನನ್ನು ಮಹಾಗುರುವಿನೆಡೆಗೆ ಕರೆದೊಯ್ದ ಗುರು ಸ್ವಾಮಿ ಸಿದ್ಧೇಶ್ವರಾನಂದರ ಸಂತೋಷಕ್ಕಂತೂ ಮೇರೆ ಇರಲಿಲ್ಲ. ಗರಿಬಲಿತ ಮೇಲೆ ಗೂಡಿನಿಂದ ಮೊತ್ತಮೊದಲನೆಯ ಬಾರಿಗೆ ಹೊರಗೆ ಹಾರಿದ ತನ್ನ ಮರಿಗಳನ್ನು ತಾಯಿಹಕ್ಕಿ ಯಾವ ಹಿಗ್ಗಿನಿಂದ ಈ ಗಿಡದಿಂದ ಆ ಗಿಡಕ್ಕೆ, ಈ ಮರದಿಂದ ಆ ಮರಕ್ಕೆ, ಈ ಹೂವಿನಿಂದ ಆ ಹೂವಿಗೆ, ಈ ಹಣ್ಣಿನಿಂದ ಆ ಹಣ್ಣಿಗೆ ತಣಿವಿಲ್ಲದ ಹೆಮ್ಮೆಯಿಂದ ಹಾರಿಸಿಕೊಂಡು ಹೋಗಿ ಭೂವ್ಯೋಮಾಕಾಶಗಳ ಪರಿಚಯಮಾಡಿಕೊಡುವುದೋ ಹಾಗೆಯೆ ಅವರು ನಮ್ಮನ್ನು ದರ್ಶನೀಯ ಸ್ಥಾನಗಳಿಗೂ ಸಂದರ್ಶನೀಯ ವ್ಯಕ್ತಿಗಳ ಬಳಿಗೂ ಕರೆದೊಯ್ದು ನಮ್ಮ ಅನುಭವಕೋಶವನ್ನು ಶ್ರೀಮಂತಗೊಳಿಸಿದರು: ಮುಖ್ಯವಾಗಿ, ದಕ್ಷಿಣೇಶ್ವರಕ್ಕೆ; ಮಾಸ್ಟರ್ ಮಹಾಶಯರ ಪೂಜ್ಯ ಸನ್ನಿಧಿಗೆ; ಮತ್ತು ಸ್ವಾಮಿ ಅಭೇದಾನಂದರೆಡೆಗೆ! ಜೊತೆಗೆ, ಬಂಗಾಳಿ ಸಾಹಿತ್ಯದ ಶ್ರೇಷ್ಠ ಕವಿಗಳ ಕೆಲವು ಕೃತಿಗಳ ಪರಿಚಯವೂ ಮೂಲದಲ್ಲಿಯೆ ದೊರೆಯುವಂತೆ ಮಾಡಿದರು. ಸ್ವಾಮಿ ಶಾಶ್ವತಾನಂದರೂ ಸ್ವಾಮಿ ವಿಜಯಾನಂದರೂ ರವೀಂದ್ರನಾಥಠಾಕೂರ, ಮೈಕೇಲ್

ಮಧುಸೂದನ ದತ್ತ, ನಸ್ರೂಲ್ ಇಸ್ಲಾಂ ಮುಂತಾದವರ ಭಾವಗೀತಾ ಕೃತಿಗಳನ್ನೂ, ಬ್ಲಾಂಕ್‌ವರ್ಸ್‌ನಲ್ಲಿ ಬರೆದ 'ಮೇಘನಾದ ವಧ' ಕಾವ್ಯವನ್ನೂ ಛಂದೋಬದ್ಧವಾಗಿ ಹಾಡಿಯೂ ಓದಿಯೂ ಕನ್ನಡ ಸರಸ್ವತಿಗೆ ಮಹತ್ ಸೇವೆ ಸಲ್ಲಿಸಿದರು.

ಅಲ್ಲಿಂದ ಹೊರಡುವ ಮುನ್ನ ಮಹಾಪುರುಷಜಿಯವರನ್ನು ಸಂದರ್ಶಿಸಿ, ಪ್ರಣಾಮ ಸಲ್ಲಿಸುವ ಭಾಗ್ಯ ನಾಲ್ಕು ಐದುಸಾರಿ ನಮಗೆ ದೊರೆಕೊಂಡಿತ್ತು. ಅವರು ದೇಹದಲ್ಲಿ ತುಂಬ ಅಸ್ವಸ್ಥರಾಗಿದ್ದುದರಿಂದ ದೀರ್ಘ ಸಂಭಾಷಣೆಗೆ ಅವಕಾಶವಿರಲಿಲ್ಲ. ಪ್ರತಿಸಲವೂ ಅವರು ನಮ್ಮ ಊಟ, ವಸತಿ, ಆರೋಗ್ಯ ಇವುಗಳ ವಿಷಯದಲ್ಲಿ ಮಾತೃಸದೃಶವಾದ ಆಸಕ್ತಿಯಿಂದ ವಿಚಾರಿಸುತ್ತಿದ್ದರು. ನಾವು ದಕ್ಷಿಣ ದೇಶದವರಾದುದರಿಂದ ನಮಗೆ ಬಂಗಾಳಿಯ ಭಕ್ಷ್ಯಭೋಜ್ಯ ಭೋಜನಾದಿಗಳು ಸೇರುತ್ತವೆಯೊ ಇಲ್ಲವೊ ಎಂಬ ಕಾತರ ಅವರಿಗೆ!

ಕೊನೆಯ ಸಾರಿ ಬೀಳ್ಕೊಳ್ಳುವ ಮೊದಲು ಅವರಿಗೆ ಪ್ರಣಾಮ ಸಲ್ಲಿಸಲು ಹೋದಾಗ ಅವರು ಆಶೀರ್ವದಿಸಿದ ಕೊನೆಯ ಮಾತುಗಳಿವು: "ಶ್ರೀ ಗುರು ಮಹಾರಾಜರು ನಿಮ್ಮ ಬಳಿಯೆ ಸದಾ ಇರುವರು!"

ದೀಪ್ತ ಚೇತಸನಾಗಿ, ದಿವ್ಯ ಸಾನ್ನಿಧ್ಯವನ್ನು ಹೃದಯದಲ್ಲಿ ಹೊತ್ತು, ಊರಿಗೆ ಹಿಂತಿರುಗಿದ ಮೇಲೆ, ಇತರರಿಗಿಂತಲೂ ನಾನು ತುಸು ಎತ್ತರವಾಗಿಬಿಟ್ಟಂತೆ ನನಗೆ ಅನುಭವವಾಗತೊಡಗಿತು; ಮಾನಸಿಕವಾಗಿ ಮಾತ್ರವೆ ಅಲ್ಲ, ದೈಹಿಕವಾಗಿಯೂ ಅದು ಪ್ರತಿಫಲಿತವಾದಂತೆ ತೋರುತ್ತಿತ್ತು! ಅದನ್ನು ಕುರಿತು ಹಿರಿಯರೊಬ್ಬರೊಡನೆ ಪ್ರಸ್ತಾಪಿಸಿದಾಗ ಅವರು ಹೇಳಿದರು: "ಹೌದು, ದೀಕ್ಷಾನಂತರ ಹಾಗೆ ಆಗುತ್ತದೆ: ಚೇತನ ತನ್ನ ಊರ್ಧ್ವಮುಖ ಉದ್ಧಾರವನ್ನು ಆ ಪ್ರತಿಮೆಯೊಡ್ಡಿ ಅನುಭವಿಸುತ್ತದೆ."

ಶ್ರೀ ಮಹಾಪುರುಷಜಿ ನನ್ನ ಚೇತನವನ್ನು ತಮ್ಮ ಕೃಪಾಶಕ್ತಿಯಿಂದ ಉನ್ನತ ಗೊಳಿಸಿದ್ದರು ಎಂಬುದರಲ್ಲಿ ಸಂದೇಹವೆಲ್ಲಿ ಬಂತು?

ತಮ್ಮ ಮಾತುಕತೆಗಳಲ್ಲಿ ಅವರೆ ಹೇಳಿದ್ದಾರೆ:

"ಯಾರು ಠಾಕೂರರನ್ನು ನೋಡಲಾಗಲಿಲ್ಲವೋ ಆದರೆ ನಮ್ಮನ್ನು ನೋಡು ತ್ತಿದ್ದಾರೆಯೋ ಅವರಿಗೂ ಕಲ್ಯಾಣವಾಗುತ್ತದೆ. ನಾವೂನೂ ಠಾಕೂರರದೇ ಅಂಶ."

ದಿವ್ಯಗುರು ಅನುಗ್ರಹಿಸಿದ ಆ ಮಂತ್ರರಥವನ್ನೇರಿ ತರುವಾಯದ ನನ್ನ ಬಾಳು ಪುಣ್ಯಪಥದಲ್ಲಿ ನೇರವಾಗಿ ಏಳುಬೀಳುಗಳಿಲ್ಲದೆ ಸಾಗಿತು ಎಂದು ಯಾರೂ ಊಹಿಸದಿರಲಿ. ಸಾಮಾನ್ಯ ಬದ್ಧಜೀವವೊಂದು ಮುಗ್ಗರಿಸಬಹುದಾದ ಎಡೆಗಳಲ್ಲೆಲ್ಲ ನನ್ನ ಜೀವವೂ ಮುಗ್ಗರಿಸಿದೆ; ಮೃತ್ಯುವಿನ ಇದಿರು ತತ್ತರಿಸಿದೆ; ಪಾಪದ ಪಂಕದಲ್ಲಿ ಬಿದ್ದು ಲಿವಿಲಿವಿ ಒದ್ದಾಡಿದೆ; ಅರಿಷಡ್ವರ್ಗದ ಉರಿಯಲ್ಲಿ ಬೆಂದಿದೆ; ಅಹಂಕಾರ, ಅನ್ಯಾಯ, ಅವಹೇಳನಾದಿಗಳ ನಿಷ್ಠುರ ಮುಷ್ಟಿಯಲ್ಲಿ ಸಿಕ್ಕಿ ನೊಂದಿದೆ. ಸೋತು ಕುಗ್ಗಿದೆ; ಗೆದ್ದು ಹಿಗ್ಗಿದೆ. ಆದರೆ ಆಟದಲ್ಲಿ ಗಿರ್ರನೆ ತಿರುಗುವ ಬಾಲಕನು ಛೇಟಿಕಂಭವನ್ನು ಬಲವಾಗಿ ಹಿಡಿಯುವಂತೆ, ನನ್ನ ಚೇತನ ಶ್ರೀ ಗುರುಪಾದರೂಪದ ನಾಮ ಮಂತ್ರವನ್ನು ದೃಢ

ವಾಗಿ ಆಶ್ರಯಿಸಿ, ಒಮ್ಮೊಮ್ಮೆ ದಾರಿತಪ್ಪಿದರೂ ದಿಕ್ಕುತಪ್ಪದಂತೆ, ಗುರಿಯತ್ತ ಸಾಗುತ್ತಿದೆ.

ಶ್ರೀ ಮಹಾಪುರುಷಜಿಯವರಿಂದ ದೀಕ್ಷೆ ಪಡೆದ ಒಬ್ಬ ಶಿಷ್ಯ ತನ್ನ ಪೂರ್ವಜೀವನದಲ್ಲಿ ಕೊಳಕು ಬಾಳು ನಡೆಸಿದ್ದನು ಎಂಬ ವಿಷಯವನ್ನು ಅವರ ಗಮನಕ್ಕೆ ತಂದಾಗ, ಅವರಾಡಿದ ಈ ಮಾತುಗಳು ಸರ್ವರಿಗೂ ಸರ್ವಕಾಲಕ್ಕೂ ಧೈರ್ಯವಿತ್ತು ಮೇಲೆತ್ತುವ ಆಶೀರ್ವಚನವಾಗಿದೆ:

"ನೀನೇನೊ ಹೇಳಿದೆಯಲ್ಲವೆ, ಅವನಲ್ಲಿ ಕೆಲವು ಕೆಟ್ಟ ಚಾಳಿಗಳಿವೆ ಎಂದು? ಅದೆಲ್ಲ ನನಗೆ ಬೇಕಿಲ್ಲ; ನಡೆದುಹೋದ ಜೀವನದಲ್ಲಿ ಯಾರು ಏನು ಮಾಡಿದರು, ಏನು ಮಾಡಲಿಲ್ಲ, ಅದೆಲ್ಲ ನನಗೆ ತಿಳಿಯಬೇಕಾಗಿಲ್ಲ. ಆಗಿಹೋದದ್ದು ಆಗಿಯೆಹೋಯಿತು. ಈಗ ಅವನು ಇಲ್ಲಿಗೆ ಬಂದು ಬಿದ್ದಿದ್ದಾನೆ; ಠಾಕೂರರಿಗೆ ಶರಣಾಗತನಾಗಿದ್ದಾನೆ; ಎಲ್ಲ ತೊಳೆದು ಹೋಗುತ್ತದೆ; ಅವನು ಬದುಕುತ್ತಾನೆ. ಠಾಕೂರರು ಕಪಾಲ ಮೋಚನರು; ಏನನ್ನೂ ತೊಡೆದುಹಾಕುವ ಶಕ್ತಿ ಅವರಿಗಿದೆ. ಯುಗಾವತಾರದಲ್ಲಿ ಶರಣಾಗತನಾಗಿದ್ದಾನೆ—ಅದೇನು ಕಡಮೆ ಸಂಗತಿಯೆ? ಬಹುಸುಕೃತಿ ಇರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಗುರುಮಹಾರಾಜ್ ಆತನನ್ನು ಉದ್ಧಾರ ಮಾಡಿಯೆ ಮಾಡುತ್ತಾರೆ........ಅವರ ಹತ್ತಿರ ಎಂತಹ ಪಾಪವೂ ಅಂತಹ ದೊಡ್ಡದೇನೂ ಅಲ್ಲ. ಅವರು ಅಂತರ್ಯಾಮಿ, ನಿನ್ನ ಭೂತ ಭವಿಷ್ಯತ್ತು ವರ್ತಮಾನ ಎಲ್ಲವನ್ನೂ ತಿಳಿದೇ ಅವರು ನಿನಗೆ ಕೃಪೆದೋರಿದ್ದಾರೆ........ಅಲ್ಲದೆ, ಯಾವಾಗ ನೀನು ನನ್ನ ಬಳಿ ನಿನ್ನೆಲ್ಲ ದುಷ್ಕೃತಿ ನಿವೇದನ ಮಾಡಿದೆಯೊ ಆವಾಗಲೆ ನಿನ್ನೆಲ್ಲ ಪಾಪಕ್ಷಯವೂ ಆಗಿಹೋಯಿತೆಂದು ತಿಳಿ!........"

ನಿಜ, ಅವರು ಆಶ್ವಾಸನ ನೀಡಿರುವಂತೆ, ಬಹುಸುಕೃತಿ ಇರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ: ಕೇರಳದ ಎಲ್ಲಿಯೊ ಹುಟ್ಟಿದ ಒಬ್ಬ ಶ್ರೀ ವ್ಯಕ್ತಿ ಕರ್ಣಾಟಕದ ಎಲ್ಲಿಯೊ ಹುಟ್ಟಿದ ಇನ್ನೊಬ್ಬ ವ್ಯಕ್ತಿಗೆ ಬಂಗಾಳದ ಎಲ್ಲಿಯೊ ಅವತರಿಸಿದ ಮತ್ತೊಬ್ಬ ದಿವ್ಯವ್ಯಕ್ತಿಯಿಂದ ಮಂತ್ರದೀಕ್ಷೆ ಅನುಗ್ರಹಿಸುವ ಪವಾಡ!

೭—೬—೧೯೬೭
ಮೈಸೂರು

**ಕೆ. ವಿರೂಪಾಕ್ಷಗೌಡ**

# ಆರತಿಯ ಕೀರ್ತಿ

ಒಪ್ಪಿ ಕೈಯನು ಹಿಡಿದ ಜೀವನದ ಸಂಗಾತಿ
ತಿಳಿಯ ಒಳ್ಳೆಣ್ಣೆ ಈ ಮನೆಯ ಸ್ಥಾನ
ಎಂದಿನಿಂದಲೊ ಬಂದ ಜಗವು ಮಣ್ಣಿನ ಪ್ರಣತಿ
ಇಬ್ಬರೂ ಬತ್ತಿಯೊಲು ಹೊಸೆದ ಮಿಲನ
ದೀಪವನು ಹಚ್ಚಿದರು ಆರತಿಯ ಬೆಳಗುತ್ತ
ಸಾಸಕ್ಕಿಗಳ ಇಟ್ಟು ಗುರುಹಿರಿಯರು
ಪ್ರೇಮದಲಿ ಬೆಳಗೋಣ, ತಕ್ಕ ಬೆಳಕನು ನೀಡಿ
ಹಾರೈಸುವರದೋ ನೋಡು ನಿಂತೆಲ್ಲರು.
ಗಾಳಿಬಂದರೂ ಬೇಡ, ಹೊಯ್ದಾಟ, ಗೆಳತಿ,
ಬೂದಿಯಾಗುವ ಕಡೆಗೆ ಬರಲಿ ಸರತಿ
" ಒಂದೆತೆರ ರೆಕ್ಕೆಯಿಹ ಪಕ್ಷಿ ಕೂಡಿವೆ ಇಲ್ಲಿ,
ಇತ್ತು ಒಳ್ಳೆಯ ಜೊತೆಯು " ಎಂದೆನ್ನಲಿ.

ಎಸ್. ನಾಗರಾಜು

# ರುದ್ರವಾಡಿಯ ಎರಡು ಶಾಸನಗಳು[1]

ರುದ್ರವಾಡಿ ಗುಲ್ಬರ್ಗ ಜಿಲ್ಲೆಯ ಅಲಂದ್ ತಾಲೂಕಿನಲ್ಲಿ ಅಲಂದದಿಂದ ಸುಮಾರು ಹತ್ತು ಮೈಲಿ ಈಶಾನ್ಯಕ್ಕಿರುವ ಒಂದು ಸಣ್ಣಗ್ರಾಮ. ಪ್ರಕೃತ ಶಾಸನಗಳು ಇಲ್ಲಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದಲ್ಲಿ ಸುಖನಾಸಿ ಬಾಗಿಲ ಇಕ್ಕೆಲಗಳಲ್ಲೂ ನಿಲ್ಲಿಸಿರುವ ಎರಡು ದೊಡ್ಡ ಚಪ್ಪಡಿಗಳ ಮೇಲೆ ಇವೆ. ಹಿಂದೆ ಈ ಶಾಸನ ಕಲ್ಲುಗಳು ಯಾವುದೋ ಕಟ್ಟಡದ ಅಡಿಪಾಯದಲ್ಲಿ ಸೇರಿಹೋಗಿದ್ದುವೆಂದೂ, ಕೆಲವು ವರ್ಷಗಳ ಹಿಂದೆ ಅವನ್ನು ದೇವಾಲಯದಲ್ಲಿ ತಂದಿಡಲಾಯಿತೆಂದೂ ಸ್ಥಳೀಯರು ತಿಳಿಸಿದರು.[2] ಅಡಿಪಾಯದಲ್ಲಿದ್ದುದರಿಂದ ಅಕ್ಷರಗಳೆಲ್ಲಾ ಗಟ್ಟಿಯಾದ ಗಾರೆಯಿಂದ ತುಂಬಿಹೋಗಿವೆ. ನಯವಾದ ಕರಿಯ ಕಲ್ಲಿನ ಮೇಲೆ ಬಿಳಿಯ ಗಾರೆಯ ಅಕ್ಷರಗಳಿದ್ದುದರಿಂದ, ಸವೆದು ಹೋದ ಕೆಲವೆಡೆಗಳನ್ನುಳಿದು ಮಿಕ್ಕೆಡೆ ಅಲ್ಲಿಯೇ ಓದುವುದು ಬಹಳ ಸುಲಭವಾಗಿದ್ದಿತಾದರೂ, ಅತ್ಯುಪಯುಕ್ತವಾದ ಶಾಸನದ ಪ್ರತಿಯಚ್ಚುಗಳನ್ನು ತಯಾರಿಸಲಾಗಲಿಲ್ಲ. ಆದ್ದರಿಂದ ಶಾಸನ ಸಂಪಾದನೆಯ ಕಾಲದಲ್ಲಿ ಪಾಠದಲ್ಲಿ ಕಂಡುಬಂದ ಕೆಲವು ಅನುಮಾನಗಳನ್ನು ಪ್ರತಿಯಚ್ಚಿನ ಸಹಾಯದಿಂದ ಸರಿಪಡಿಸಲು ಸಾಧ್ಯವಾಗದೇ ಹೋಯಿತು.

### ಶಾಸನಗಳ ಕಾಲ

ಈ ಎರಡು ಶಾಸನಗಳೂ ಕಲ್ಯಾಣದ ಚಾಳುಕ್ಯರಾಜ ಆರನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲನ ಕಾಲಕ್ಕೆ ಸೇರಿದವು. ಮೊದಲನೆಯದು ಚಾಳುಕ್ಯ ವಿಕ್ರಮ ವರ್ಷದ

---

[1] ೧೯೬೬ನೆಯ ಇಸವಿ ಬೇಸಗೆಯ ರಜದಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಪ್ರಾಚ್ಯವಸ್ತು ಸಂಶೋಧನೆಗಾಗಿ ಮಾಡಿದ ನನ್ನ ಪ್ರವಾಸ ಕಾಲದಲ್ಲಿ ಈ ಶಾಸನಗಳು ದೊರೆತವು. ಈ ಪ್ರವಾಸಕ್ಕಾಗಿ ನನಗೆ ಬಹುವಿಧವಾಗಿ ಸಹಾಯಮಾಡಿದ ನನ್ನ ಗುರುಗಳಾದ ಡಾ. ಎಂ. ಶೇಷಾದ್ರಿಯವರಿಗೂ, ಶಾಸನ ಸಂಪಾದನೆಯ ಬಗ್ಗೆ ಉಪಯುಕ್ತ ಸಲಹೆಗಳನ್ನಿತ್ತ ಮಿತ್ರ ಡಾ. ಕೆ. ವಿ. ರಮೇಶ್‌ರವರಿಗೂ ಮತ್ತು ಪ್ರವಾಸಕ್ಕಾಗಿ ಧನಸಹಾಯ ಒದಗಿಸಿದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಸಹ ನಾನು ಕೃತಜ್ಞನಾಗಿದ್ದೇನೆ—ನಾ.

[2] ಡಾ. ಫ್ಲೀಟ್‌ರವರು ತಮ್ಮ Bombay Gazetter, Vol. I, Part II, ಪುಟ 449ರಲ್ಲಿ, ಎಡ್ವರ್ಡ್ ಎಲಿಯಟ್‌ರವರ Carnataka Desa Inscriptions ಎಂಬ ಹಸ್ತಪ್ರತಿಯ ಆಧಾರದ ಮೇಲೆ, ಇಲ್ಲಿಯ ಒಂದನೆಯ ಶಾಸನವನ್ನು ಉಲ್ಲೇಖಿಸಿದ್ದಾರೆ.

೨೯ನೆಯ ಸ್ವಭಾನು ಸಂವತ್ಸರದ ಪುಷ್ಯ ಶು.೧೦ ಬೃಹಸ್ಪತಿ ವಾರದಲ್ಲೂ, ಎರಡನೆಯದು ಅದೇ ಚಾಳುಕ್ಯ ವಿಕ್ರಮ ವರ್ಷದ ೪೨ನೆಯ ಹೇಮಳಂಬಿ ಸಂವತ್ಸರದ ಶ್ರಾವಣ ಬ. ೯ ಸೋಮವಾರದಲ್ಲೂ ಬರೆಯಲ್ಪಟ್ಟಿವೆ. ಸ್ವಾಮಿ ಕಣ್ಣು ಪಿಳ್ಳೆಯವರ ಭಾರತೀಯ ಪಂಚಾಂಗ (Indian Ephemeris)ದ ಪ್ರಕಾರ, ಕ್ರೈಸ್ತಗಣನೆಯರೀತ್ಯಾ ಮೊದಲನೆಯ ಶಾಸನದ ದಿನಾಂಕವು ಡಿಸೆಂಬರ್ ೧೦, ೧೧೦೩ ಬೃಹಸ್ಪತಿವಾರಕ್ಕೆ ಹೊಂದಿಕೊಳ್ಳುತ್ತದೆ. ಆದರೆ ಶಾಸನದಲ್ಲಿ, ದಾನವು ಉತ್ತರಾಯಣ ಸಂಕ್ರಮಣದಲ್ಲಿ ಕೊಡಲ್ಪಟ್ಟಿತೆಂದು ನಮೂದಿಸಿದೆ (ಪಂಕ್ತಿ ೨೨). ಉತ್ತರಾಯಣ ಸಂಕ್ರಾಂತಿಯು ಮೇಲಿನ ದಿನಾಂಕಕ್ಕಿಂತ ಹದಿನಾಲ್ಕು ದಿನಗಳ ನಂತರ ಅಂದರೆ ಪುಷ್ಯ ಬ. ೮-೯ ಬೃಹಸ್ಪತಿವಾರ (ಡಿಸೆಂಬರ್ ೨೪, ೧೧೦೩)ದಲ್ಲಿ ಬರುತ್ತದೆ. ಈ ವ್ಯತ್ಯಾಸಕ್ಕೆ ಸ್ಪಷ್ಟವಾದ ಕಾರಣವನ್ನು ಹೇಳುವುದು ಕಷ್ಟ; ಈ ದಾನವು ಶಾಸನದಲ್ಲಿ ತಿಳಿಸಿರುವ ತಿಥಿಯಲ್ಲೇ ವಾಗ್ದಾನ ಮಾಡಲ್ಪಟ್ಟು ಉತ್ತರಾಯಣ ಸಂಕ್ರಮಣ ದಂದು ಶಾಸ್ತ್ರೋಕ್ತ ರೀತಿಯಲ್ಲಿ ಕೊಡಲ್ಪಟ್ಟಿರಬಹುದು, ಅಥವಾ ೧೧೦೨ನೆಯ ಇಸವಿಯ ಉತ್ತರಾಯಣ ಸಂಕ್ರಾಂತಿಯಲ್ಲೇ ಕೊಡಲ್ಪಟ್ಟಿದ್ದು ಶಾಸನದಲ್ಲಿ ಹೇಳಿರುವ ತಿಥಿಯಲ್ಲಿ ಸ್ಥಿರೀಕರಿಸಲ್ಪಟ್ಟಿರಬಹುದು, ಅಥವಾ ಶಾಸನವು ದಾನಕೊಟ್ಟ ಕೆಲ ಕಾಲಾನಂತರದಲ್ಲಿ ಬರೆಯಲ್ಪಟ್ಟಿದ್ದು ದಿನಾಂಕವನ್ನು ತಪ್ಪಾಗಿ ನಮೂದಿಸಿರಬಹುದು. ಕ್ರೈಸ್ತ ಗಣನೆಯ ರೀತ್ಯಾ ಎರಡನೆಯ ಶಾಸನದ ದಿನಾಂಕ ಜುಲೈ ೨೫,೧೧೧೭. ಆ ದಿನವು ಬುಧವಾರ, ಶಾಸನದಲ್ಲಿ ಹೇಳಿರುವಂತೆ ಸೋಮವಾರವಲ್ಲ.

## ಲಿಪಿ-ಭಾಷೆ

ಎರಡು ಶಾಸನಗಳೂ ಹನ್ನೆರಡನೆಯ ಶತಮಾನದ ಕನ್ನಡಲಿಪಿಯಲ್ಲಿದ್ದು, ಬರವಣಿಗೆಯ ರೀತಿಯಲ್ಲಿ ವಿಶೇಷ ಗಮನೀಯ ಅಂಶಗಳೇನೂ ಕಾಣುವುದಿಲ್ಲ. ಭಾಷೆ ಬಹುಭಾಗ ಕನ್ನಡ. ಪ್ರಾರ್ಥನೆ ಮತ್ತು ಅನುಶಾಸನ ಭಾಗಗಳು ಮಾತ್ರ ಆ ಕಾಲದ ಇತರ ಶಾಸನಗಳ ರೀತಿಯಲ್ಲೇ ಸಂಸ್ಕೃತದಲ್ಲಿವೆ. ಮೊದಲನೆಯ ಶಾಸನದಲ್ಲಿ ಒಂದು ತೆಲುಗು ಪದ್ಯ ಸಹಾ ಇದೆ (ಪದ್ಯ ೧೬).

## ಕವಿ-ಕಾವ್ಯ

ಈ ಶಾಸನಗಳಲ್ಲಿ ಅವುಗಳನ್ನು ಬರೆದ ಕವಿಯ ಹೆಸರೂ ಬರುವುದು ಒಂದು ವಿಶೇಷ. ಅವನ ಹೆಸರು ವಿಷ್ಣುಭಟ್ಟ. ಎರಡನೆಯ ಶಾಸನದ ಕೊನೆಯಲ್ಲಿ ತಾನು ಭುವನಗಿರಿಯವನೆಂದು ಹೇಳಿಕೊಂಡಿದ್ದಾನೆ.[3] ಪ್ರಾಯಶಃ 'ಕವಿರತ್ನ ಭೂಷಣ' ಎಂಬ ಬಿರುದು ಸಹ ಅವನಿಗೆ ಇದ್ದಿರಬಹುದು. (ಶಾ I-ಪಂ. ೫೩ ಮತ್ತು ಶಾ II-ಪಂ. ೪೮).

---

[3] ಈ ಭುವನಗಿರಿಯು ಹೈದರಾಬಾದಿನಿಂದ ಸುಮಾರು ೩೫ ಮೈಲಿ ಪೂರ್ವಕ್ಕಿರುವ ಈಗಿನ ಭೋಂಗಿರ್ ಇರಬಹುದೆಂದು ಮಿತ್ರರೊಬ್ಬರು ಊಹಿಸುತ್ತಾರೆ.

ಮೊದಲನೆಯ ಶಾಸನದಲ್ಲಿ ಆ ಶಾಸನ ಪಾಠವನ್ನು ಕಾವ್ಯವೆಂದು ಕರೆದು, ತಾನು ಕರ್ಣಾಟಕಸಂಸ್ಕೃತಾಂಧ್ರಕವಿ ಎಂದು ಸಹಾ ಹೇಳಿಕೊಂಡಿದ್ದಾನೆ. ತನ್ನ ಆಂಧ್ರಭಾಷಾ ಜ್ಞಾನವನ್ನೂ ತೋರಿಸಲೊ ಏನೋ ಒಂದು ಕಂದಪದ್ಯವನ್ನು ತೆಲುಗಿನಲ್ಲೂ ರಚಿಸಿದ್ದಾನೆ. ಇವನ ಹೆಸರು ಈ ಶಾಸನಗಳಲ್ಲಿ ಮಾತ್ರ ಕಂಡುಬಂದಿರುವುದರಿಂದ ಪ್ರಾಯಶಃ ಇವನು ಸ್ಥಳೀಯ ಮಾಂಡಲಿಕರ ಆಶ್ರಯದಲ್ಲಿದ್ದ ಒಬ್ಬ ಸಾಮಾನ್ಯ ಕವಿ ಇರಬಹುದು.

ಎರಡು ಶಾಸನಗಳೂ ಚಂಪೂ ರೀತಿಯಲ್ಲಿವೆ. ವಿಶೇಷವಾಗಿ ಕಂದಪದ್ಯಗಳು, ಚಂಪಕಮಾಲಾ, ಮತ್ತೇಭವಿಕ್ರೀಡಿತ, ಉತ್ಪಲಮಾಲಾ ಮುಂತಾದ ಬಹು ಬಳಕೆಯ ವೃತ್ತಗಳು ಮಧ್ಯೆಮಧ್ಯೆ ಗದ್ಯಭಾಗಗಳೊಡನೆ ಉಪಯೋಗಿಸಲ್ಪಟ್ಟಿವೆ. ರಚನೆಯಲ್ಲಿ ವೈಶಿಷ್ಟ್ಯಗಳೇನೂ ಕಂಡುಬರದಿದ್ದರೂ ಮೊದಲನೆಯ ಶಾಸನದ ೧೪, ೧೫ ಮತ್ತು ೧೮ ನೆಯ ಪದ್ಯಗಳೂ, ಎರಡನೆಯ ಶಾಸನದ ೨೨, ೨೩, ೨೪ ಮತ್ತು ೨೫ನೆಯ ಪದ್ಯಗಳೂ ಉತ್ತಮ ಮಟ್ಟದವು ಎನ್ನಬಹುದು. ತೆಲುಗಿನ ಕಂದಪದ್ಯ ಒಂದು ಸಾಧಾರಣ ಕೃತಿ.

### ಶಾಸನಗಳ ಉದ್ದೇಶ

ರುದ್ರಪಾಡಿಯ ದೇವಾಲಯವೊಂದರ ಪೂಜಾದಿಕಾರ್ಯಗಳಿಗಾಗಿ ಮತ್ತು ಆ ಗ್ರಾಮದ ವಿದ್ವಜ್ಜನರಿಗಾಗಿ ಕೊಡಲ್ಪಟ್ಟ ದಾನಗಳ ಬಗ್ಗೆ ದಾಖಲು ಇಡುವುದೇ ಈ ಶಾಸನಗಳ ಉದ್ದೇಶ. ಮೊದಲನೆಯ ಶಾಸನದಲ್ಲಿ ಚಾಳುಕ್ಯ ವಿಕ್ರಮಾದಿತ್ಯನು ತನ್ನ ಸತಿ ಚಂದಲ ದೇವಿಯ ಬಿನ್ನಪದಿಂದ ರುದ್ದವಾಡಿ ಎಂಬ ಅಗ್ರಹಾರವನ್ನು ಆ ಗ್ರಾಮದ ಕೇಶವ ದೇವರಿಗೂ, ಅಲ್ಲಿಯ ಪ್ರಭು ವಾಸುದೇವ ಭಟ್ಟೋಪಾಧ್ಯಾಯನನ್ನೂ ಒಳಗೊಂಡ ಐವತ್ತು ಮಹಾಜನರಿಗೂ ದಾನವಾಗಿ ಕೊಟ್ಟ ಉಲ್ಲೇಖವಿದೆ. ಅಲ್ಲದೆ, ಮೊರಂಬದಲ್ಲಿ ಆಳುತ್ತಿದ್ದ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಮಾಗರಸನು, ಅದೇ ಕೇಶವ ದೇವರಿಗೂ ಮತ್ತು ಮಹಾಜನಗಳಿಗೂ ೩೦೦ ಮತ್ತರು ಭೂಮಿಯನ್ನು ದಾನ ಮಾಡಿರುವ ವಿಷಯ ಸಹಾ ಇದೆ. ಎರಡನೆಯ ಶಾಸನವು, ವಿಕ್ರಮಾದಿತ್ಯನು ಮನ್ನೆಯ ಕೆಱೆ ಎಂಬಲ್ಲಿ ಮಹಾಯಜ್ಞವೊಂದನ್ನು ನಡೆಸುತ್ತಿದ್ದ ಕಾಲದಲ್ಲಿ ವಿಕ್ರಮಾದಿತ್ಯ ಭಟ್ಟೋಪಾಧ್ಯಾಯ ಸೋಮಯಾಜಿ ಎಂಬುವನ ಬಿನ್ನಪದಂತೆ ರುದ್ದವಾಡಿಯ ಕೇಶವ ದೇವರು ಮತ್ತಿತರ ಇಪ್ಪತ್ತನಾಲ್ಕು ದೇವರುಗಳ ಪೂಜೆಗೆ ಮತ್ತು ಮಹಾಜನಗಳಿಗಾಗಿ ಬಾಣರಜವಳಗೆ ಮತ್ತು ಬಬ್ಬಲೇಶ್ವರ ಎಂಬ ಗ್ರಾಮಗಳನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

### ಚಾರಿತ್ರಿಕ ಅಂಶಗಳು

ಈ ಎರಡು ಶಾಸನಗಳಲ್ಲೂ ಹಲವಾರು ಚಾರಿತ್ರಿಕ ಅಂಶಗಳು ಪ್ರಾಸಂಗಿಕವಾಗಿ ಬಂದಿವೆ. ಎರಡರಲ್ಲೂ ಪ್ರಾರ್ಥನಾ ಪದ್ಯಗಳನಂತರ ಕಲ್ಯಾಣದ ಚಾಳುಕ್ಯರ ವಂಶಾವಳಿ ಕೊಟ್ಟಿದೆ. ಅದನ್ನು ಈ ರೀತಿ ವಿವರಿಸಬಹುದು :

ತೈಲ
(ಹೆಂ. ಜಾಕಲದೇವಿ)

- ಸತ್ಯಾಶ್ರಯ
- ದಶವರ್ಮ
  - ವಿಕ್ರಮಾದಿತ್ಯ
  - ಜಯಸಿಂಹ
    - ಆಹವಮಲ್ಲ
      - ಸೋಮೇಶ್ವರ
      - ತ್ರಿಭುವನಮಲ್ಲ ವಿಕ್ರಮಾದಿ

ಮೊದಲನೆಯ ಶಾಸನದ ೧೦ನೆಯ ಪದ್ಯದಲ್ಲಿ ವಿಕ್ರಮಾದಿತ್ಯನು ಚೋಳ, ಲಾಟ ಗೂರ್ಜರರ ಮತ್ತು ಪಾಂಚಾಲ ರಾಜರೊಡನೆ ಸಾಧಿಸಿದ ವಿಜಯದ ಪ್ರಸ್ತಾಪ ಮಾಡಲ್ಪಟ್ಟಿದೆ.

ವಿಕ್ರಮಾದಿತ್ಯನ ಹಿರಿಯರಸಿ ಚಂದಲದೇವಿಯೆಂದು ಮೊದಲನೆಯ ಶಾಸ (ಪಂಕ್ತಿ ೨೭-೨೮) ತಿಳಿಸುತ್ತದೆ. ವಿಕ್ರಮಾದಿತ್ಯನ ಹಲವು ಅರಸಿಯರಲ್ಲಿ ಚಂದ ದೇವಿಯೂ ಒಬ್ಬಳು. ಇವಳು ಬಿಲ್ಹಣನು ತನ್ನ ವಿಕ್ರಮಾಂಕದೇವಚರಿತದ ಹೇಳಿರುವ ಚಂದ್ರಲೇಖಾ; ಕರಹಾಟದ ಶಿಲಾಹಾರ ವಂಶದವಳೆಂದೂ ಚಂದ ದೇವಿಯೆಂದು ಕರೆಯಲ್ಪಡುತ್ತಿದ್ದಳೆಂದೂ ಅದೇ ಗ್ರಂಥದಿಂದ ತಿಳಿಯುತ್ತದೆ. ಕ್ರಿ. ಶ. ೧೦೭೭, ೧೦೯೭ ಮತ್ತು ೧೧೧೫ರ ಇತರ ಶಾಸನಗಳಲ್ಲಿ ಚಂದ ದೇವಿಯ ಹೆಸರು ಉಲ್ಲೇಖಿಸಲ್ಪಟ್ಟಿದೆ.[5] ಕ್ರಿ. ಶ. ೧೦೯೭ರ ಇನ್ನೊಂದು ಶಾಸನದ ಇವಳು ಅಭಿನವ ಸರಸ್ವತಿ ಎಂದು ಕರೆಯಲ್ಪಟ್ಟಿದ್ದಾಳೆ.[6]

ಎರಡನೆಯ ಶಾಸನದ ೨೩ನೆಯ ಪಂಕ್ತಿಯಲ್ಲಿ ವಿಕ್ರಮಾದಿತ್ಯನ ಮಗ ಯುವರಾ ಮಲ್ಲಿಕಾರ್ಜುನನ ಹೆಸರು ಬರುತ್ತದೆ. ಇವನು ಕ್ರಿ. ಶ. ೧೦೭೭ರ ಸುಮಾರಿನ ಪಾನುಂಗಲ್ಲಿನಲ್ಲಿ ಆಳುತ್ತಿದ್ದಂತೆಯೂ, ಸುಮಾರು ೧೦೯೫ರಿಂದ ೧೧೧೭ರವರೆ ಯುವರಾಜ ಪದವಿಯೊಡನೆ ತರ್ದವಾಡಿ ೧೦೦೦ ಪ್ರಾಂತ್ಯವನ್ನು ಆಳುತ್ತಿದ್ದಂತೆಯ

[4] Yazdani (Ed): Early History of Deccan, Part I–VI, 368-9.

[5] Bombay Karnatak Inscriptions 1928–29 No. 15; 1932– No. 105; Annual Report of Indian Epigraphy 1961–62 No. 54 P. B. Desai: Jainism in South India-Epigraph No. 2.

[6] South Indian Inscriptions Vol XI Part II No. 142.

ಅನಂತರ ಅವನ ಉಲ್ಲೇಖವು ಶಾಸನಗಳಲ್ಲಿ ಕಾಣಸಿಗುವುದರಿಂದ ಶಕ ೯೮೦ರಿಂದ ಮೊದಲೇ ಗತಿಸಿರಬಹುದೆಂದು ಶ್ರೀ ದೇಸಾಯಿಯವರು ಅಭಿಪ್ರಾಯಪಡುತ್ತಾರೆ.[7] ಪ್ರಸ್ತುತ ಶಾಸನವು ೧೧೧೭ರಲ್ಲಿ ಇರುವುದರಿಂದ, ಅವನ ಮರಣಕಾಲವನ್ನು ಇನ್ನು ಒಂದು ವರ್ಷ ಮುಂದೂಡಬಹುದಾಗಿದೆ. ಅಲ್ಲದೆ ಇತ್ತೀಚೆಗೆ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಸಿಕ್ಕಿರುವ ಶಾಸನವೊಂದರ ಆಧಾರದಿಂದ ಮಲ್ಲಿಕಾರ್ಜುನನ ಕಾಲವನ್ನು ಕ್ರಿ. ಶ. ೧೧೨೦ರವರೆಗೂ ವಿಸ್ತರಿಸಬಹುದು.[8] ಡಾ. ಪಿ. ಬಿ. ದೇಸಾಯಿಯವರು, ಇತ್ತೀಚಿನ ತಮ್ಮ ಸ್ವಂತ ಶಾಸನ ಸಂಗ್ರಹದ ಆಧಾರದಮೇಲೆ, ಯುವರಾಜ ಮಲ್ಲಿಕಾರ್ಜುನನ ಬಗ್ಗೆ ತಿಳಿದಂತ ಕಡೆಯವರ್ಷ ಕ್ರಿ. ಶ. ೧೧೨೩ ಎಂದು ಹೇಳುತ್ತಾರೆ.[9] ಯುವರಾಜ ಮಲ್ಲಿಕಾರ್ಜುನನು ಮೊದಲನೆ ಮತ್ತು ಸೋಮನಾಥ ಅವನ ನಂತರ ಬಂದಿತ್ತು ದೊರೆ. ವಿಕ್ರಮಾದಿತ್ಯನ ಮಗನೆಂದು ಕೆಲವು ಶಾಸನಗಳಲ್ಲಿ ಹೇಳಲ್ಪಟ್ಟಿದೆ. ಇದೇ ಯುವರಾಜ ಮಲ್ಲಿಕಾರ್ಜುನನ ಬಿಜಾಪುರ ಶಾಸನದಲ್ಲಿ ಅಧೀನನಾದ ನಾಗಚಂದ್ರನ ಸಂಸ್ಕೃತವಾದರೂ ಕನ್ನಡದಿಂದ ಆದ್ಯೃತವಾದ ಎರಡು ಪದ್ಯಗಳಿವೆ. ಈ ಶಾಸನವು ಕನ್ನಡ ಸಾಹಿತ್ಯ ಚರಿತ್ರೆಗೆ ಉಪಯುಕ್ತ ಚಾರಿತ್ರಿಕ ಮಾಹಿತಿಯನ್ನು ಒದಗಿಸುತ್ತದೆ.[10]

ಬೊಮ್ಮ ೧೪ ಎಂಬ ಅಧಿಕಾರಿ ಬಿಡಿಗ ಮತ್ತು ಅವನ್ನು ಅಳಿಯನಿದ್ದ ಮಹಾಮಂಡಳೇಶ್ವರ ಬೋಗರ ಮತ್ತು ಅವನ ಮಕ್ಕಳು ಕಲಿಗ ಮತ್ತು ಮಲ್ಲಯರಸ ದೊರೆಗಳು ಕ್ರಮವಾಗಿ ಮೊದಲಬಾರಿಗೆ ಈ ಶಾಸನಗಳಲ್ಲಿ ಬಂದಿವೆ. ಇದೇ ಶಾಸನಗಳಿಂದ, ಉದ್ರಾಣಿಯು (ಶಾಸನದ ಉದ್ರಾಣಿ) ಮತ್ತು ಮಹಾಜನರಾಗಿ ಕೆಲ್ಲ ಇದ್ದ ಸ್ಥಳವಾಗಿತ್ತೆಂದೂ, ಅಲ್ಲಿ ವಾಸುದೇವ ಭಟ್ಟೋಪಾಧ್ಯಾಯನೆಂಬುವನು ಪ್ರಮುಖನಾಗಿದ್ದನೆಂದೂ, ಅವನ ಮಗ ಮಲ್ಲ ದಂಡನಾಯಕನು ಉದ್ರಾಣಿಯಲ್ಲಿ ಶಿವ ಮತ್ತು ವಿಷ್ಣು ದೇವರುಗಳಿಗಾಗಿ ಒಂದು ಸುಂದರ ದೇವಾಲಯವನ್ನು ಕಟ್ಟಿಸಿದ್ದನೆ, ಅಲ್ಲಿ ಇಪ್ಪತ್ತನಾಲ್ಕು ವಿಷ್ಣುಮೂರ್ತಿಗಳನ್ನು ಸ್ಥಾಪಿಸಿದ್ದನೆಂದೂ ತಿಳಿದುಬರುತ್ತದೆ. ಉದ್ರಾಣಿಯು ಸ್ಥಳಗಳು ಮಹಾಗ್ರಹಾರವಾಗಿತ್ತು. ಅವನ ವಂಶಾವಳಿಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

ಮಲ್ಲ ಚಮೂಪನ ಹಿರಿಯಮಗನಾದ ಸೋಮನಾಥನು ಬೊಗಂಗಿ ಎಂಬ ಊರಿನಲ್ಲಿ ಸೂರ್ಯದೇವಾಲಯವೊಂದನ್ನು ಕಟ್ಟಿಸಿದನು.[11] ಅವನ ತಮ್ಮ ಕಂದಪ್ಪನು ಅಷ್ಟದಿಕ್ಪಾಲರ ಯುದ್ಧವನ್ನು ಮಾಡಿ ಕೀರ್ತಿಪಡೆದ ಇಪ್ಪತ್ತು ಕುದುರೆಗಳನ್ನು ದಾನ

---

[7] Yazdani (ed) : Early History of Deccan, p. 369.

[8] A. R. I. E. 1959–60 No. 214.

[9] Epigraphia Indica Vol XXVIII p. 32.

[10] ಚನ್ನಕ್ಕನವರ ಶ್ರೀನಿವಾಸಾಚಾರ್ಯ ಮತ್ತು ಡಿ. ಎಲ್. ನರಸಿಂಹಾಚಾರ್ (ಸಂ.) : ಕನ್ನಡ ಶಾಸನ ಸಂಗ್ರಹ (ಮೈಸೂರು ವಿಶ್ವವಿದ್ಯಾನಿಲಯ) ೧೯೩೪ ಪು. VIII-XVI

[11] ಶಾಸನ II ಪದ್ಯ ೧೭.

- ಬ್ರಹ್ಮ
  - ವಸಿಷ್ಠ
    - ⋮
    - ಆದಿತ್ಯ
      - ಸೋಮನಾಥ
      - ಕಂದರ್ಪ
      - ಚಾಮುಂಡ (ಹೆಂ. ಚಂದಿಕಬ್ಬೆ)
        - ಸೋಮನಾಥ
        - ವಾಸುದೇವ (ಹೆಂ. ಶ್ರೀದೇವಿ)
          - ಮಲ್ಲ ಚಮೂಪ (ಹೆಂ. ಚಂದಲದೇವಿ).
        - ಹಿರಣ್ಯಗರ್ಭ
        - ವಿಷ್ಣುದೇವ
        - ಆದಿತ್ಯ
        - ಮಾಧವ

ವಾಗಿತ್ತನು.[12] ಮಲ್ಲದಂಡನಾಯಕನ ತಾತ ಚಾಮುಂಡ ದಂಡನಾಥನು ಚಾಳುಕ್ಯರಾಜ ಜಯಸಿಂಹನ ಕಾಲದಲ್ಲಿದ್ದವನು.[13] ಮಲ್ಲದಂಡನಾಯಕನೂ ಆವನ ಹೆಂಡತಿ ಚಂದಿಕಬ್ಬೆಯೂ ಮಹಾದಾನಿಗಳು ಎಂದು ಹೊಗಳಲ್ಪಟ್ಟಿದ್ದಾರೆ.[14] ಮಲ್ಲದಂಡನಾಯಕನು ಕರಹಡದ (?) ಹಡಪದ ಅಧಿಕಾರವನ್ನೂ ಪ್ರಧಾನತ್ವವನ್ನೂ ಪಡೆದನೆಂದು ಒಂದನೆಯ ಶಾಸನದ ೧೨ನೆಯ ಪದ್ಯವು ತಿಳಿಸುತ್ತದೆ.

ಒಂದನೆಯ ಶಾಸನದಲ್ಲಿ, ಮಹಾಮಂಡಳೇಶ್ವರನೊಡನೆ ದಾನಿಗಳಾಗಿ ಕೆಲವು ರಾಜ್ಯಾಧಿಕಾರಗಳು ಉಲ್ಲೇಖಿಸಲ್ಪಟ್ಟಿರುವುದು ಗಮನಾರ್ಹವಾಗಿದೆ. ಅವರು ಪೆರ್ಗ್ಗಡೆ, ಕರಣಂಗಳು, ಅಧ್ಯಕ್ಷ, ನಿಬಂಧವರುವ? ಅರಸಿ, ಕುಮಾರರು ಮತ್ತು ಸಂಧಿವಿಗ್ರಹಿ. ದಾನವು ಇವರೆಲ್ಲರ ಕಾಣ್ಕೆಯಾಗಿ ಕೊಡಲ್ಪಟ್ಟಿದೆ.[15] ಶಾಸನದಲ್ಲಿ ಚಕ್ರವರ್ತಿಯ ದಾನಕ್ಕೆ ಸಂಬಂಧಿಸಿದಂತೆ 'ಜೋದೊರೆವಡಿಯಜು' ಎಂಬ ಇನ್ನೊಂದು ರಾಜ್ಯಾಧಿಕಾರಿಯ ಹೆಸರಿದೆ. ಜೋದೊರೆ ಈಚಿನ ಚೌಧುರಿ ಎಂಬುದರ ಸಮಾನ ಪದವಿರಬಹುದು.[16] ಕ್ರಿ.ಶ. ೧೧೦೩ರಲ್ಲಿ ಈ ಅಧಿಕಾರವನ್ನು ವಹಿಸಿಕೊಂಡಿದ್ದವನು

---

12 ಶಾಸನ II ಪದ್ಯ ೧೭

13 ಅದೇ ಪ. ೧೮

14 ಅದೇ ಪ. ೨೨–೨೪

15 ಶಾಸನ I ಪಂಕ್ತಿ ೩೨–೩೩ ಮತ್ತು ೩೭–೩೮

16 ಎಪಿಗ್ರಾಫಿಯಾ ಇಂಡಿಕಾದಲ್ಲಿ ಪ್ರಕಟವಾಗಲಿರುವ ಇದೇ ಲೇಖಕನ "ಭೂಲೋಕಮಲ್ಲನ ನಿಂಬರ್ಗ ಶಾಸನ, ಶಕ ೧೦೫೭" ಎಂಬ ಲೇಖನದಲ್ಲಿ ಸೌಮರೆ ಎಂಬ ಪ್ರಯೋಗವಿರುವುದು ಪ್ರಸ್ತಾಪಿಸಲ್ಪಟ್ಟಿದೆ.

ರೇವದಾಸ,[17] ೧೧೧೭ರಲ್ಲಿ ಭೋಗಾದಿತ್ಯ.[18] ದಾನಗಳು ಈ ಅಧಿಕಾರಿಗಳ ಆಣತಿ ಯೊಡನೆಯೇ ಕೊಡಲ್ಪಟ್ಟವು.

ಭೂಮಿಯ ಅಳತೆಯ ಬಗ್ಗೆ ಆಗಿನ ಕಾಲದಲ್ಲಿ ಬಳಕೆಯಲ್ಲಿದ್ದ ಮತ್ತರು, ಈ ಶಾಸನದಲ್ಲೂ ಬಂದಿದೆ.[19] ಅಲ್ಲದೆ ಮಾಣಿಕೇಶ್ವರದ ಕೋಲು[20] ಮತ್ತು ಬೆಂಕೊಳ್ವನ ಕೋಲು[21] ಎಂಬ ವಿಶೇಷ ಮಾನಗಳೂ ಸಹಾ ಉಲ್ಲೇಖಿಸಲ್ಪಟ್ಟಿವೆ. ಗದ್ಯಾಣ ಅಥವಾ ಪೊನ್ನು[22] ಇಲ್ಲಿ ಹೆಸರಿಸಿರುವ ನಾಣ್ಯ. ಕಾಣ್ಕೆ ಮತ್ತು ವಿಶುದ್ಧಿ[23] ತೆರಿಗೆಗಳು.

ಅಲಂದೆ[24], ಮೊರಂಬ ೯೪[25], ಮನ್ನೆ[ದ]ಡಿ[26] ಮತ್ತು ಉಜ್ಜಳಬೆ ೩೦[27] ಈ ಶಾಸನಗಳಲ್ಲಿ ಹೆಸರಿಸಿರುವ ಆಡಳಿತ ವಿಭಾಗಗಳು. ಅಲಂದೆ ಸವಕಟ್ಟು, ಅಲಂದೆ ೧೦೦೦[28] ಪ್ರಾಂತ್ಯದ ಮುಖ್ಯ ಊರಾಗಿದ್ದ, ಈಗಿನ ಗುಲ್ಬರ್ಗ ಜಿಲ್ಲೆಯ ಅದೇ ಹೆಸರಿನ ತಾಲೂಕಿನ ಮುಖ್ಯಸ್ಥಳ ಅಲಂದ್[29] ಮತ್ತು ಸುತ್ತಮುತ್ತಲಿನ ಪ್ರದೇಶ. ಮೊರಂಬ ೯೪, ಕರ್ಣಾಟಕದ ಎಲ್ಲೆಯಿಂದ ಹತ್ತಿರದಲ್ಲೇ ಇರುವ ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆ ಉಮರ್ಗಾ ತಾಲೂಕಿನ ಮುರಮ್ ಮತ್ತು ಸುತ್ತಲಿನ ಪ್ರದೇಶ. ಈ ಹಳ್ಳಿಯಲ್ಲೇ ಇರುವ ಕನ್ನಡ ಶಾಸನವೊಂದರಲ್ಲಿ ಮೊರಂಬವು ರಾಜಧಾನಿಯೆಂದು ಕರೆಯಲ್ಪಟ್ಟಿದೆ[30]. ಮನ್ನೆ[ದ]ಡಿ ಸವಕಟ್ಟು ಮನ್ನೆದಡಿ ೧೦೦೦ ಪ್ರಾಂತ್ಯ. ಇದರ ಮುಖ್ಯ ಸ್ಥಳ ಇದೇ ಗುಲ್ಬರ್ಗ ಜಿಲ್ಲೆಯ ಕಾಳ್ಗಿ. ಚಾಳುಕ್ಯರ ರಾಜ್ಯ ಕಾಲದಲ್ಲಿ, ಈ ವಿಭಾಗದಲ್ಲಿ ಒಂದು ಬಾಣವಂಶದವರು ಆಳುತ್ತಿದ್ದರು[31]. ಉಜ್ಜಳಬೆ ಯಾವುದೆಂದು ಖಚಿತವಾಗಿಲ್ಲ.

---

17 ಶಾ. I ಪಂ, ೨೭

18 ಶಾ. II ಪಂ. ೨೨

19 ಶಾ. I ಪಂ. ೩೭ ; ಶಾ. II ಪಂ. ೨೦, ೨೪

20 ಶಾ I ಪಂ. ೩೬; ಈ ಅಳತೆಯು ಇತರ ಶಾಸನಗಳಲ್ಲೂ ವಿಶೇಷವಾಗಿ ಬರುತ್ತದೆ. ಉದಾ: S. I. I. Vol. X. No. ೭೯, ೮೫, ೧೧೧, ೧೧೯, ೨೪೮ ಇತ್ಯಾದಿ

21 ಶಾ II ಪಂ. ೨೦.

22 ಶಾ I ಪಂ. ೨೬, ೩೯.

23 ಅದೇ ಪಂ. ೨೫.

24 ಶಾ I ಪಂ. ೨೮; ಶಾ II ಪಂ. ೨೪.

25 ಶಾ I ಪಂ. ೨೩, ೨೮; ಶಾ II ಪಂ. ೨೪.

26 ಶಾ II ಪಂ. ೨೨.

27 ಅದೇ ಪಂ. ೨೩.

28 E.I. xxviii No. 5; Jainism in South India, Epigraph No. 2; A.R.I.E. 1954–55 No. 126.

29 ಸ್ಥಳೀಯರು ಈಗ ಅದನ್ನು ಆಲ್ಬಿ ಎಂದು ಕರೆಯುತ್ತಾರೆ.

30 A.R.I.E. 1963-64 No. 338.

31 Jainism in South India pp. 192, 334.

ಶಾಸನಗಳಲ್ಲಿ ಇತರ ಹಲವು ಸ್ಥಳನಾಮಗಳು ಬಂದಿವೆ. ಅವು ಕಲ್ಯಾಣಪುರ[32], ರುದ್ರವಾಡಿ[33], ಬಿಜ್ಜರಗಿ[34], ಜವಳಿಗೆ[35], ಮನ್ನೆಯಕೆರೆ[36], ಜಯಂತಿಪುರ[37], ಬಬ್ಬುಲೇಶ್ವರ[38], ನೊಸಂಗಿ[39] ಮತ್ತು ಬಾಣರಜವಳಿಗೆ[40]. ಇವುಗಳಲ್ಲಿ ಕೆಲವನ್ನು ಈಗಲೂ ಗುರುತಿಸಬಹುದು. ಕಲ್ಯಾಣಪುರವು ಚಾಳುಕ್ಯರ ರಾಜಧಾನಿ. ಈಗಿನ ಬೀದರ್ ಜಿಲ್ಲೆಯ ಬಸವಕಲ್ಯಾಣ. ರುದ್ರವಾಡಿಯು ಈ ಶಾಸನಗಳು ಸಿಕ್ಕಿರುವ ರುದ್ರವಾಡಿ. ಬಿಜ್ಜರಗಿ ಆಳಂದ್-ಉಮರ್ಗಾ ರಸ್ತೆಯ ಬದಿಯಲ್ಲೇ ಹತ್ತನೆಯ ಮೈಲಿಯ ಬಳಿಯಿರುವ ಈಗಿನ ಬಿಜ್ಜರಗಿ. ಇದು ರುದ್ರವಾಡಿಯಿಂದ ಸುಮಾರು ಆರು ಮೈಲಿ ನೈಋತ್ಯಕ್ಕಿದೆ. ಜವಳಿಗೆ ರುದ್ರವಾಡಿಯಿಂದ ಸುಮಾರು ೩ ಮೈಲಿ ನೈಋತ್ಯಕ್ಕಿರುವ ಈಗಿನ ಜವಳಿ. ಬಬ್ಬುಲೇಶ್ವರ ರುದ್ರವಾಡಿಯಿಂದ ನಾಲ್ಕು ಮೈಲಿ ಪಶ್ಚಿಮಕ್ಕಿರುವ ಈಗಿನ ಬಬ್ಬುಲೇಶ್ವರ. ಈ ಗ್ರಾಮಗಳೆಲ್ಲಾ ಆಳಂದ್ ತಾಲೂಕಿನಲ್ಲೇ ಇವೆ. ಜಯಂತಿಪುರವು ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲೂಕಿನ ಈಗಿನ ಬನವಾಸಿ. ಹಿಂದೆ ಇದು ಕಲ್ಯಾಣ ಚಾಳುಕ್ಯರ ಒಂದು ಉಪರಾಜಧಾನಿಯಾಗಿತ್ತು. ಮನ್ನೆಯ ಕೆರೆಯು ಚಾಳುಕ್ಯ ವಿಕ್ರಮಾದಿತ್ಯನ ಹಲವು ಶಾಸನಗಳಲ್ಲಿ ಬರುತ್ತದೆ.[41] ಇದನ್ನು ಸರಿಯಾಗಿ ಗುರುತಿಸಲಾಗಿಲ್ಲ. ಶಾಸನದಲ್ಲಿ 'ಜಯಂತಿಪುರದ ಮನ್ನೆಯ ಕೆರೆಯೊಳ್' ಎಂದು ಹೇಳಿದೆ. ಆದ್ದರಿಂದ ಇದು ಜಯಂತಿಪುರಕ್ಕೇ ಸೇರಿದ ಒಂದು ನಗರಭಾಗವಾಗಿರಬಹುದು ಅಥವಾ ಜಯಂತಿಪುರದ ಪ್ರಾಂತ್ಯಕ್ಕೆ ಸೇರಿದ ಒಂದು ಊರಾಗಿರಬಹುದು.

ರುದ್ರವಾಡಿಯಲ್ಲಿ ಮಲ್ಲಚಿಮೂಪನು ಕಟ್ಟಿಸಿದ ಚೆನ್ನಕೇಶವ ದೇವಾಲಯವು ಅದೇ ಸ್ಥಳದಲ್ಲಿರುವ ಈಗಿನ ಮಲ್ಲಿಕಾರ್ಜುನ ದೇವಾಲಯವೇ. ಈ ಮಲ್ಲಿಕಾರ್ಜುನ ದೇವಾಲಯವು ಒಂದು ತ್ರಿಕೂಟಾಚಲ. ಈಗ ಈ ದೇವಾಲಯದಲ್ಲಿ ಪಶ್ಚಿಮದ ಗರ್ಭಗುಡಿಯಲ್ಲಿ ಲಿಂಗವೂ, ಉತ್ತರದದರಲ್ಲಿ ಕೇಶವವಿಗ್ರಹವೂ ಇದ್ದು ದಕ್ಷಿಣದ್ದು ಖಾಲಿ ಇದೆ.

---

32 ಶಾ I ಪಂ. ೨೧.

33 ಶಾ I ಪಂ. ೨೩, ೨೭; ಶಾ II ಪಂ. ೧೭.

34 ಶಾ I ಪಂ. ೩೫.

35 ಅದೇ ಪಂ. ೩೬.

36 ಶಾ II ಪಂ. ೧೯.

37 ಅದೇ.

38 ಅದೇ ಪಂ. ೨೪.

39 ಅದೇ ಪಂ. ೩೬–೩೭.

40 ಅದೇ ಪಂ. ೨೩. ಈ ಗ್ರಾಮದ ಪೂರ್ವಾರ್ಧವು ಬಾಣವಂಶದ ಸಂಬಂಧವನ್ನು ಸೂಚಿಸುತ್ತದೆ.

41 Annual Report of Indian Epigraphy 1960-61 No. 489 1961-62 No. 65 etc.

ದಲ್ಲಿ ನಮಗೆ ಚನ್ನಕೇಶವ ದೇವಾಲಯವು ತ್ರಿಕೂಟಾಚಲದಿಂದ ಕರೆಯಲ್ಪಟ್ಟಿದು ದೇ ಇಲ್ಲಿ ಶಿವ ಮತ್ತು ವಿಷ್ಣು ದೇವರುಗಳ ಆಲಯಗಳಿಂದ ನಮಗೆ ತಿಳಿಯುತ್ತದೆ. ಈಗ ಈ ದೇವಾಲಯದಲ್ಲಿ ಗರ್ಭಗುಡಿಗಳು ಮತ್ತು ನವರಂಗದ ಸ್ವಲ್ಪಭಾಗ ಮಾತ್ರ ಉಳಿದಿದ್ದು ಮುಖಮಂಟಪ ಮತ್ತು ಶಿಖರಗಳಿಲ್ಲ. ದೇವಾಲಯದ ಮುಂಭಾಗಕ್ಕೆ ಕಟ್ಟಿರುವರು. ಇದು ಕಾಲದಲ್ಲಿ ನಡೆದಿರುವ ಪ್ರಸ್ತುತಿಯೇ ಇದು.[43] ಈ ಕಾಲದ ದಾನಿಗಳಲ್ಲಿ, ಊರಿನ ಒಂಟಿ ಮತ್ತು ಗ್ರಾಮದೊಳಗಿಯ ಬಳಿಯೂ ಕೆಲವು ವಿಷ್ಣು ವಿಗ್ರಹಗಳೂ, ದೇವಾಲಯದ ಭಾಗಗಳೂ ಇವೆ. ದಿಲ್ಲ. ನಮಗೆ ಶಾಸನದಲ್ಲಿ ಪ್ರಕಟಿಸಿರುವ ಇಪ್ಪತ್ತನಾಲ್ಕು ವಿಷ್ಣು ಮೂರ್ತಿಗಳನ್ನೊಳಗೊಂಡಿದ್ದ ಈ ದೇವಾಲಯವಿದ್ದಿರಬಹುದು. ಈಗ ಉಳಿದಿರುವ ಸ್ವಲ್ಪವೂ ರುದ್ರಸಿದು ಮಲ್ಲಿಕಾರ್ಜುನ ದೇವಾಲಯವು ಚಾಳುಕ್ಯರ ಕಾಲದ ಒಂದು ಉತ್ತಮಪ್ಪದ. ಬಾಗಿಲ ಚೌಕಟ್ಟುಗಳು ಮತ್ತು ಕಂಭಗಳು ಸಾಮಾನ್ಯಾಗಿ ಕೆತ್ತಲ್ಪಟ್ಟಿವೆ. ಗರ್ಭಗುಡಿಯಲ್ಲಿರುವ ಕೇಶವ ವಿಗ್ರಹ ಸುಂದರವಾಗಿದೆ. ಇವುಗಳ ಒತ್ತಿರುವಲ್ಲಿ ಯವುದಾದರೆ, ಶಾಸನದಲ್ಲಿ ಬರುವ ದೇವಾಲಯದ ವರ್ಣನೆ ಕೇವಲ ಕವಿ ಕಲ್ಪನೆ ತಪ್ಪಲಿಕ್ಕಿಲ್ಲ ವಿಚಾರಿಸುತ್ತದೆ. ಪ್ರಸ್ತುತ ಶಾಸನಗಳು ಈ ದೇವಾಲಯದ ಕಾಲವನ್ನು ನಿರ್ಮಾಣ ತಿಳಿಸುತ್ತವೆ.

* * * * *

ಗುಲ್ಬರ್ಗ ಜಿಲ್ಲೆಯಲ್ಲಿ ಅಪಾರವಾದ ಶಾಸನ ಸಂಪತ್ತಿದೆ. ಆದರೆ ಇವುಗಳ ಪ್ರಕಟವಾಗಿ ನಡೆದಿರುವ ಕಾರ್ಯ ಅಲ್ಪ. ಈಚೆಗೆ ಕೇಂದ್ರ ಸರಕಾರದ ಪ್ರಾಚ್ಯ ಶಾಖೆಯ ಶಾಸನ ವಿಭಾಗದವರು ಈ ಜಿಲ್ಲೆಯ ಕೆಲವು ತಾಲೂಕುಗಳಿಂದ ನೂರಾರು ಶಾಸನಗಳನ್ನು ಪಟ್ಟಿಮಾಡಿದ್ದಾರೆ. ಆದರೆ ಪ್ರಕಟವಾಗಿರುವುದು ನೂರಾರು ಪತ್ತೆಗೆ ಸರಿಸಿ. ಈ ಲೇಖನವು ಈ ಅಲ್ಪ ಸಂಖ್ಯೆಗೆ ಇನ್ನೊಂದನ್ನು ಮಾತ್ರ ಸೇರಿಸುತ್ತದೆ.

---

42 ಶಾ. I ಸಂಖ್ಯೆ. ೧೩.

43 ಅದೇ ಪ. ೨೫.

44 A.R.I.E. ೧೯೬೦-೬೧ ಮತ್ತು ಮುಂದಿನ ಸಂಚಿಕೆಗಳು.

## ಪಾಠ

## I

ಗುಲ್ಬರ್ಗ ಜಿಲ್ಲೆ ಆಲಂದ್ ತಾಲೂಕು ರುದ್ರವಾಡಿಯಲ್ಲಿ ಮಲ್ಲಿಕಾರ್ಜುನ ದೇವಾಲಯದ ನವರಂಗದಲ್ಲಿ ಸುಖನಾಸಿಯ ಬಾಗಿಲ ಎಡಗಡೆ ನಿಲ್ಲಿಸಿರುವ ಶಾಸನ.

೧೯೪ × ೬೫ ಸೆಂಟಿಮೀಟರುಗಳು.

[ಛಂದಸ್ಸು : ಪದ್ಯ ೧, ೨, ಶ್ಲೋಕ; ೩, ೪, ೫, ೬, ೭, ೮, ೯, ೧೬, ೧೭, ಕಂದ; ೧೧, ಶಾರ್ದೂಲ ವಿಕ್ರೀಡಿತ; ೧೦, ೧೨, ೧೫, ಮಹಾಸ್ರಗ್ಧರ; ೧೩, ೧೪, ಮತ್ತೇಭ ವಿಕ್ರೀಡಿತ; ೧೮, ಉತ್ಪಲಮಾಲಾ; ೧೯ ವಸಂತ ತಿಲಕ]

೧ ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ನವಮ್ । ದಕ್ಷಿಣೋನ್ನತದಂಷ್ಟ್ರಾಗ್ರವಿಶ್ರಾನ್ತಭುವನಂ ವಪುಃ ।[೧॥*]

೨ ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾ ರಂಭಮೂಳ(ಲ)ಸ್ತಂಭಾಯ ಶಂಭವೇ ॥[೨॥*]ಸ್ವ

೩ ಸ್ತಿ ಸಮಸ್ತಭುವನಸಂಸ್ತೂಯಮಾನಮಾನವ್ಯಸಗೋತ್ರರುಂ ಹಾರೀತಿ ಪುತ್ರರುಂ ಕೌಶಿಕೀವರಪ್ರ

೪ ಸಾದಲಬ್ಧಶ್ವೇತಾತಪತ್ರಾದಿರಾಜ್ಯಚಿಹ್ನರುಂ ಭಗವನ್ನಾರಾಯಣಪ್ರಸಾ ದಾಸಾದಿತವರವರಾ

೫ ಹಲಾಂಛನೇಕ್ಷಣಕ್ಷಣವಶೀಕೃತಾರಾತಿರಾಜಮಣ್ಡಳರುಂ ಸಮಸ್ತಭುವ ನಾಶ್ರಯ ಸರ್ವ್ವಲೋಕಾಶ್ರಯ

೬ ವಿಷ್ಣುವರ್ದ್ಧನ ವಿಜಯಾದಿತ್ಯಾದಿ ವಿಶೇಷಾಭಿನಾ(ಧಾ)ನರುಮೆನಿಸಿ ನೆಗಳ್ದ ರಾಜರತ್ನಂಗಳ್ಗುದ್ಭವಭೂಮಿಯಾ

೭ ದ ಚಾಳುಕ್ಯವಂಶಮದೆನ್ತುಪ್ಪುದೆನೆ ॥ ಶರಣಾಗತಭೂಭೃತ್ಪಕ್ಷ ರಕ್ಷೆಯಿಂ ವಾಹಿನೀವಿಭುತ್ವದಿನುದ್ಯತ್ಪುರು

೮ ರುಷೋತ್ತಮಶೋಭೆಯಿನಂಬುರಾಶಿಗೆಣೆಯೆನೆ ಚಳುಕ್ಯವಂಶಮದೆಸೆಗುಂ ॥ [೩॥*] ರಘುವಂಶದೊಳತುಳಬಳಂ ರಘು

೯ ವುದಯಿಪವೊಲಿ ಚಳುಕ್ಯವಂಶದೊದ[1]ಳರಿದನ್ತಿಘಟಾಪಂಚಮುಖಂ ರಟ್ಟ ಘರಟ್ಟನೆನಲ್ಕೆ ಪುಟ್ಟಿದಂ ತೈಲನೃಪಂ ॥[೪॥*]

೧೦ ಸುರರಿಪುವುಯ್ದೆಳೆಯಂ ಮುಂಮುರರಿಪು ತನ್ದನ್ತದಿನ್ದೆ ತನ್ದನವ ರಟ್ಟರ ಕಯ್ಗೆವೋದ ನೆಲನಂ ಧರೆ ನೂ

---

1 ಈ ಅಕ್ಷರ ಅನುಪಯುಕ್ತ

೧೧ ರ್ಪ್ಪುದಿಕ್ಕೈಲನೆನ್ಪು ಕೊಣ್ಡಾಡುವಿನಂ ||[೫||*] ಆ ವಿಭುವಿಂಗಂ ಜಾಕಲ ದೇವಿಗಮಾತ್ಮಭವನಪ್ಪಿ ಸತ್ಯಾಶ್ರಯನಾ ಭೂ

೧೨ ವಲ್ಲಭನಮುಜನಶೇಷಾವನಿತಳವರ್ಮ್ಮನನುಪಮಂ ದಶವರ್ಮ್ಮಂ ||[೬||*] ಆ ನೃಪನ ತನೂಜಂ ಲ

೧೩ ಕ್ಷ್ಮೀನಿಳಯಂ ತ್ಯಾಗಿ ವಿಕ್ರಮಾದಿತ್ಯಂ ತದ್ಭೂನಾಥನ ತಮ್ಮಂ ಧಾತ್ರೀ ಸುತ ಜಯಸಿಂಹನೆನಿಸಿದಂ ಜಯ

೧೪ ಸಿಂಹಂ ||[೭||*] ಧಾರಾಪುರಪುರಹರನಸಿಧಾರಾಜಳಮಗ್ನರಿಪುನೃಪಂ ಸಕಳಧರಾಧಾರಂ ತತ್ತನಯಂ ರಣ

೧೫ ಧೀರಂ ತ್ರೈಳೋಕ್ಯಮಲ್ಲನಾಹವಮಲ್ಲಂ ||[೮||*] ಆ ಮನುಜೇಶನ ತನಯಂ ಸೋಮನೃಪಂ ತದನುಜಂ ಮಹಾಸತ್ವಂ

೧೬ ಸಂಗ್ರಾಮಹರಿ ಚಕ್ರವರ್ತ್ತಿ ಶಿಖಾಮಣಿ ಶುಭಮೂರ್ತ್ತಿ ವಿಕ್ರಮಾದಿತ್ಯ ನೃಪಂ ||[೯||*] ಪರಮಾರ್ತ್ತರಂ ನಿನ್ನ ಮಾ[ದೇ]ವಿ ದ

೧೭ ಅಖಿಳ ಮಹೀದೇವಿಯಿಂ ದೇವ....ಕಾವಳ್ಗಳಾನೆಂದೆಱಗುವೊಡಱಿಯೇ ಜೋಳನುಂ ಲಾಳನುಂ ಗೂರ್ಜ್ಜ

೧೮ ರನುಂ ಪಾಂಚಾಳನುಂ ಕರ್ಣ್ನನು ಮುಱಿದೆ ಬಿಗುಱ್ತುಂ[ತ]ಮಾಱಿನೊತ್ತಿ ಡಾ ರಾಯರ ಜೀರಂ ಜೀರದಿಂ ಕಿೞ್ತುದಧಿಯೊ

೧೯ ಳಿಗಂ ರಾಯ ಬೆಂಕೊಂಡ ಭೂಪಂ ||[೧೦||*] ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ

೨೦ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕ ಚಾಳುಕ್ಯಾಭರಣ ಶ್ರೀಮತ್ತ್ರಿಭುವನಮಲ್ಲದೇವರ್ ಶ್ರೀಮಚ್ಚಾಳು

೨೧ ಕ್ಯವಿಕ್ರಮ ವರ್ಷದ ೨೯ನೆಯ ಸುಭಾನು ಸಂವತ್ಸರದ ಪುಷ್ಯ ಶು ೧೦ ಬೃಹವಾರದಂದು ಕಲ್ಯಾಣಪುರ

೨೨ ದಲ್ಲುತ್ತರಾಯಣ ಸಂಕ್ರಮಣದಲಿ ಪಲವುಂ ಮಹಾದಾನಂಗಳ ಮಾಡುವ ದಾನಕಾಲದಲ್ಲಿ ಶ್ರೀಮತ್ತ್ರಿರಿಯರಸಿ

೨೩ ಚಂದಲದೇವಿಯರ ಬಿನ್ನಪದಿಂ ಪೊರಂಬ ೯ಳಜ ಬಳಿಯಗ್ರಹಾರಂ ರುದ್ರಪಾಡಿಯಂ ಶ್ರೀ ಕೇಶವದೇವರ್ಗ್ಗೆ ವಲ್ಲಿಯ ಪ್ರ

೨೪ ಭು ವಸಿಷ್ಠಗೋತ್ರ. ವಾಸುದೇವ ಭಟ್ಟೋಪಾಧ್ಯಾಯ ಪ್ರಮುಖ ಮಹಾಜನಸಮುತ್ತಕ್ಕರಂ ತ್ರಿಭೋಗಾಭ್ಯಂತರ ಸಿದ್ಧಿ ಸರ್ವ್ವನಮಸ್ಯ

೨೫ ನಾಗುಭಯ ಸಾಮ್ಯಕ್ಕಂ ಕಾಣ್ಕೆ ವಿಶುದ್ಧಿಯೊಳಗಾಗಿ ಸರ್ವ್ವಾಯಶುದ್ಧಿ
ಖಣ್ಡಹಾನವಾಗಿ ಧರ್ಮ್ಮವತ್ತೆಳೆಯುಂ ನೂಱ

೨೬ ಇಪ್ಪತ್ತು ಗದ್ಯಾಣ ಪೊನ್ನಂ ತೆತ್ತು ಸುಖದಿಮಿಪ್ಪಂತಾಗಿ ಧಾರಾಪೂರ್ವಕದಿಂ
ಸರ್ವ್ವೋದಕಂ ಮಾಡಿದ ಸಂಬಂಧದಿಂ ಶ್ರೀ ಬಲ್ಲವರಸ

೨೭ ರ ಸಮುಖಾದೇಶದೊಳೆ ಸಮಸ್ತ ಪ್ರಧಾನರ ಪೇಳ್ಕೆಯೊಳಂ ಚೋದೋರೆವ
ಡಿಯಜ್ಜಂ ರೇವದಾಸನಾಣತಿಯೊಳಂ ಕೊಟ್ಟ ಆ

೨೮ ಲಂದೆಯ ಸಮಕಟ್ಟಿನ ನೊರಂಬ ೯೪ಜ ಬಳಿಯ ರುದ್ರವಾಡಿ ೧* ಶ್ರೀ
ಮಚ್ಚಾಳುಕ್ಯವಿಕ್ರಮ ವರ್ಷದ ೨೯ನೆಯ

೨೯ ಸುಭಾನು ಸಂವತ್ಸರದ ಪುಷ್ಯ ಬ ೧೦ ಬೃಹಸ್ಪತಿವಾರದಂದು ನೊರಂಬ ೯೪ಜ
ಮನ್ನೆಯಂ ಸಮಧಿಗತಪಂಚಮಹಾಶಬ್ದ

೩೦ ಮಹಾಮಣ್ಡಳೇಶ್ವರಂ ಕೀರ್ತ್ತ್ಯಂಗನಾಧೀಶ್ವರಂ ವೈರಿಕೃತಾಂತಂ ತುರಗ
ರೇವಂತಂ ಪರಬಳಮಲ್ಲಂ ರಿಪುಹೃದಯಶೆಲ್ಲಂ ಸತ್ಯ

೩೧ ರತ್ನಾಕರಂ ಗೋತ್ರದಿವಾಕರಂ ವಿವೇಕನಾರಾಯಣಂ ಧೈರ್ಯ್ಯಪಾರಾ
ಯಣಂ ಬಿಬ್ಬಸಂಕರಾಜಂ ಸಂಗ್ರಾಮನೀಲನಾರಿಮುನ್ನಿಬರಂ ಶೌ

೩೨ ರ್ಯ್ಯಮಂ ಮೆಚ್ಚಿವಂ ವೀರನಾರೀಭುಜಂಗಂ ನೊರಂಬದಸಿಂಗ ನಾಮಾದಿ
ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾಮಣ್ಡಳೇ

೩೩ ಶ್ವರಂ ನಾಗರಸಂ ಮಗಂ ಕಂಬರಸನುಂ ದುಮ್ಮರಸನುಂ ಮತ್ತಂ ತನ್ನ
ಮಕ್ಕಳುಂ ಪೆರ್ಗ್ಗಡೆ ಕರಣಂಗಳುಂ ಸಮಸ್ತ ಪರಿಗ್ರಹ

೩೪ ಬೆರಸುತ್ತರಾಯಣಸಂಕ್ರಮಣದಂದಾ ನೊರಂಬ ೯೪ಜ ಬಳಿಯ ರುದ್ರ
ವಾಡಿಯ ಪ್ರಭು ವಾಸುದೇವಭಟ್ಟೋಪಾ

೩೫ ಧ್ಯಾಯರ್ಗ್ಗಂ ವಲ್ಲಿಯ ಮಹಾಜನವಯ್ದಿಂಬರಿಗಂ ವಲ್ಲಿಯ ಕೇಶವ
ದೇವರಿಗಂ ವಲ್ಲಿಯ ತನ್ನ ಕೊಡಗೆಯಿ (ಯ) ಖಜ್ಜರಿ

೩೬ ಗೆಯ ಸೀಮೆಯಿಂ ಮೂಡಲ್ ಜವಳಿಗೆಯ ಸೀಮೆಯಿಂ ತೆಂಕಲ್ ಜವಳಿ
ಗೆಯ ಬಟ್ಟೆಯಿಂ ಪಡುವಲ್ ಮಾಣಿಕೇಶ್ವರನ ಕೋಲ ಮೂ

೩೭ ನೂಱು ಮತ್ತಕ್ಕೆಯ್ಯಮ[ನ]ದಱ ಬಳಿಯ ಮನೆಯು[ಂ] ಮಣ
ಯೂರ ಸಾಮ್ಯಂ ನಿಬಂಧವರುವ ಗೊಂಲರಸನರಸಿ

೩೮ ಕುಮಾರಪೆರ್ಗ್ಗಡೆ ಕರಣವಧ್ಯಕ್ಷ ಸಂಧಿವಿಗ್ರಹಿ ಇಂತಿನಿಬರಕಾಣ್ಕೆ
ಯಾಗಂ....ವೆಕ್ಕಡಿಗರ ಸಮಸ್ತಪರಿಗ್ರಹಮಾ

೩೯ ಯಹಾಯ ವೊಳಗಾದಂತನಿತುಮಂ ಸರ್ವ್ವಾಯಶುದ್ಧಿ ಸರ್ವ್ವನಮಸ್ಯ
ಸರ್ವ್ವಬಾಧಾಪರಿಹಾರವಾಗಯ್ದೂಱು ಗದ್ಯಾಣ ಪೊನ್ನಂ

೪೦ ಶ್ರೀಯಮಾನನಾಗಿ ಕೊಂಡು ಶಾಲ್ಮಲಿಕ್ಕೆ ಧಾರಾಪೂರ್ವ್ವಕಂ ಮಾಡಿಕೊಟ್ಟು
ಈ ಧರ್ಮ್ಮವಂ ಸುಧರ್ಮ್ಮದಿಂ ಪ್ರತಿಪಾಳಿಸಿದವರ್ಗೆ ಶ್ರೀ ಪಾದ[illegible]

೪೧ [illegible] ಕಪಿಲೆಯುಂ [illegible] ಬ್ರಾಹ್ಮಣರ್ಗ್ಗೆ
ಗೊಟ್ಟ ಫಲಂ ಕೆಡಿಸಿದವರ್ಗ್ಗವನಿದ ಪಾಪಂ

೪೨* [ಸ್ವಸ್ತಿ] ಯಮ್ಮ ಧರಾಮಂಡಲ[illegible] ವಾಸುದೇವೋ
[illegible] (ಗ) [illegible] ಶ್ರೀ ವಾಸುದೇವಂ ಕಲ।

೪೩. [ಕ್ಷೀರಾಬ್ಧಿ] ದೇವ[illegible] ವಾಸುದೇವ [illegible]
[illegible] ಶ್ರೀ ವಾಸುದೇವ[illegible] ।[೧೧*]

೪೪ ವರಾಹಂ [illegible] ದೇವಂ
[illegible] (ದ?) [illegible]

೪೫ [illegible] ಸತ್ಕರಿತಂ
[illegible] ।[೧೨।*]

೪೬ [illegible]
[illegible] [ನೋಕ]ಂ [illegible]
ಜಗಂಪ್ರೋಗಳಲ್ಲಿ

೪೭ [illegible]
[illegible] ಶ್ರೀ [illegible] ।[೧೩.।*]
ಅದು ಕಲ್ಲೋ।

೪೮ [illegible]
[illegible]

೪೯ ಛ [illegible]
[illegible] ।[೧೪।*] [illegible]

೫೦ [illegible]
[illegible] [ದ*]ಂ [illegible]

೫೧. ೭ ಶ್ರೀ [illegible]
[illegible]

೫೨ [illegible] ।[೧೫।*] [illegible][1]
[illegible]

[1] ಈ ಅಕ್ಷರ [illegible]

೫೩ ಭೋಜಭೂಭೃತನಿ ಮಲ್ಲವಿಭುವಿನ್ ॥ [೧೬॥*] ಸುಕವಿಗಳೀ ಕಾವ್ಯಮನೆಯ್ದೆ
ಕೇಳ್ವು ಕವಿರತ್ನಭೂಪರಾಂದಲ್ಲುರ್ಣ್ಣಾಟಕ ಸಂಸ್ಕೃತಾಂಧ್ರಕವಿಯಿಂದು
೫೪ ಕಣಾನ್ಮರ್ಯ್ಯಯಿಂ ವಿಷ್ಣುಭಟ್ಟನಂ ಕೈಕೊಳ್ವರ್ ॥[೧೬॥*] ನಿಮ್ಮರ್ಗಳರಕ್ಕೆ
ಮತ್ತರ್ಕ್ಕೆ ರೆಳೆಯುಂಬುಳಗೊಲ್ಲನಿತಕ್ಕೆ ವೃತ್ತಿ ಸತ್ಕರ್ಮ್ಮ ಸಮೇತರಕ್ಕೆ
ಧರಣೀ ದಿವಿಜರ್ಕ್ಕೆ

೫೫ ರೆಗೆಯ್ದು ಧೇನುಗಳ್ ಧರ್ಮ್ಮಜನನ್ತೆ ಧರ್ಮ್ಮದೊಳ್ ಪಾಳಿಸುಗು ಕ್ಷಿತಿಯುಂ
ನರೇಂದ್ರರೀಧರ್ಮ್ಮಮಿದಾಭವದ್ಯಪೋಸದಿರ್ಕ್ಕೆ ಶಶಾಂಕದಿನೇಶರುಳ್ಳಿನಂ ।
[೧೮॥*]

೫೬ ಯಾವ ತ್ಸ್ನನೇರುರಿಹ ಯಾವದಿನೇಂದುಬಿಂಬೇ ಯಾವದ್ಧರಾವಳ
(ಲ) ಯಮಂಬುದಯಸ್ತ್ರಯಾವತ್ । ತಾವಜ್ಜಗದ್ವಿನುತ ಮಲ್ಲಜಮೂಪಧ
೫೭ ರ್ಮ್ಮಸ್ಥೆಯಾಚ್ಚ ಶೋಭಿಸುತಮಿತ್ರಕಳ(ಲ)ತ್ರಯುಕ್ತಃ ॥[೧೯॥*]

## II

### ಅದೇ ಮಲ್ಲಿಕಾರ್ಜುನದೇವಾಲಯದ ನವರಂಗದಲ್ಲಿ
### ಸುಖನಾಸಿಯ ಬಾಗಿಲ ಬಲಗಡೆ ನಿಲ್ಲಿಸಿರುವ ಶಾಸನ

೧೯೦×೬೦ ಸೆಂಟಿಮೀಟರುಗಳು

[ಛಂದಸ್ಸು : ಗದ್ಯ ೧, ೮, ೧೧, ೧೨, ಶ್ಲೋಕ : ೨, ೩, ೪, ೫, ೬, ೭, ೧೩, ೧೪, ೧೫, ೧೬, ೧೭, ೧೮, ೨೦, ೨೧, ೨೩, ೨೪, ಕಂದ ; ೯, ಶಾಲಿನೀ ; ೧೦, ವಸಂತ ತಿಲಕ ; ೧೯, ೨೫, ಮತ್ತೇಭವಿಕ್ರೀಡಿತ ; ೨೨ ಚಂಪಕಮಾಲ.]

೧ ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣವಂ [।*]ದಕ್ಷಿ
ಣೋನ್ನತದಂಷ್ಟ್ರಾಗ್ರವಿಶ್ರಾನ್ತಭುವನಂವಪುಃ ॥[೧॥*] ಸ್ವಸ್ತಿ ಸಮಸ್ತ
೨ ಭುವನಸಂಸ್ತೂಯಮಾನಮಾನವ್ಯಸಗೋತ್ರರುಂ ಹಾರೀತಿಪುತ್ರರುಂ
ಕೌಶಿಕೀವರಪ್ರಸಾದಲಬ್ಧಶ್ವೇತಾತಪ
೩ ತ್ರಾದಿ ರಾಜ್ಯಚಿಹ್ನರುಂ ಭಗವನ್ನಾರಾಯಣಪ್ರಸಾದಾಸಾದಿತ ವರವರಾಹ
ಲಾಂಛನೇಕ್ಷಣಕ್ಷ
೪ ಣವಶೀಕೃತಾರಾತಿರಾಜಮಣ್ಡಳರುಂ ಸಮಸ್ತಭುವನಾಶ್ರಯ ಸರ್ವ್ವ
ಲೋಕಾಶ್ರಯ ವಿಷ್ಣುವರ್ಧ್ಧನ ವಿಜಯಾ
೫ ದಿತ್ಯಾದಿ ವಿಶೇಷಾಭಿಧಾನರುಮೆನಿಸಿ ನೆಗಟ್ದ ರಾಜರತ್ನಂಗಳ್ಗುದ್ಭವ
ಭೂಮಿಯಾದ ಚಾಳುಕ್ಯವಂಶಮದೆನ್ತೆನ್ದ
೬ ಡೆನೆ । ಕುಲಾಗತ ಭೂಭೃತ್ಪಕ್ಷರಕ್ಷೆಯಿಂ ವಾಹಿನೀವಿಭುತ್ವದಿ
ಭೂಭೃತ್ಪುರುಷೋತ್ತಮ ಶೋಭೆಯಿನಂಬುರಾ

೭ ಶಿರೀಷಮಿನಿ ಚಳುಕ್ಯವಂಶಮುದಿಸಿಗು ||[೨ ||*] ರಘುವಂಶದೊಳತುಳಬಳಂ
ರಘುನೃಪರಾಯೆನ್ವಿಂಬೆ ಚಳುಕ್ಯ

೮ ವಂಶದೊಳಿರದನ್ತ್ರಭೀಮಪರಾಕ್ರಮಮುಂ ರಟ್ಟಘರಟ್ಟನೆನಿಸ್ಕಿ ಪೃಟ್ಟಿದಂ
ತೈಲನೃಪಂ ||[೩ ||*] ಸುರುಚಿರವೃತ್ತಿಯಿ

೯ ಯಂ ಮುಂಮುರಿದ್ರ ತನ್ನಪ್ಪದಿನ್ದಿ ತನ್ನನಮಂ ರಟ್ಟರ ಕಯ್ಯೊಳಿರ್ದ
ನೆಲನಂ ಧರೆ ಮೂರ್ಮ್ಮಿದಿಕ್ಕೈಲನೆನ್ನು ಕೊಣ್ಡಾಡುಪಿನಂ ||[೪ ||*]

೧೦ ಅವನ ಮಗಂ ಸತ್ಯಾಶ್ರಯನವನನುಜಂ ಭುವನಸರ್ಮ್ಮ ದಶವರ್ಮ್ಮಂ
ಮತ್ತವನಮಗಂ ವಿಕ್ರ

೧೧ ಮನೃಪವನನುಜಂ ಸಿಂಹವಿಕ್ರಮಂ ಜಯಸಿಂಹಂ ||[೫ ||*] ಧಾರಾಪುರ
ಪುರಹರನಸಿಧಾರಾಜಳಮಗ್ನ

೧೨ ರಿಪುನೃಪಂ ಸಕಳ ಧರಾಧಾರಂ ತತ್ತನಯಂ ರಣಧೀರಂ ತ್ರೈಳೋಕ್ಯ
ಮಲ್ಲನಾಹವಮಲ್ಲಂ ||[೬ ||*] ಆ ಮನುಜೇಶನ ತನಯಂ

೧೩ ಸೋಮನೃಪಂ ತದನುಜಂ ಮಹಾಸತ್ವಂ ಸಂಗ್ರಾಮಹರಿ ಚಕ್ರವರ್ತ್ತಿ
ಶಿಖಾಮಣಿ ಶುಭಮೂರ್ತ್ತಿ ವಿಕ್ರಮಾದಿತ್ಯ ನೃಪಂ ||[೭ ||*]

೧೪ ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜ
ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ

೧೫ ಕುಳತಿಳಕ ಚಾಳುಕ್ಯಾಭರಣ ಶ್ರೀಮತ್ತ್ರಿಭುವನಮಲ್ಲದೇವತ್ತರಮ್ಮ
ಪರಮಾರಾಧ್ಯರಪ್ಪ ಶ್ರೀಮದಯ್ಯಂಗಳ್

೧೬ ಸರ್ವ್ವಕ್ರತುಯಾಜಿ ವಿಕ್ರಮಾದಿತ್ಯಭಟ್ಟೋಪಾಧ್ಯಾಯಸೋಮಯಾಜಿ
ಯರ ಬಿನ್ನಪದಿಂ ಮೊರಂಬು ೯೪ ೫ ಬಳಿಯ

೧೭ ರುದ್ರಪಾಣಿಯುಂ ಶ್ರೀ ಚನ್ನಕೇಶವದೇವರ [ವ]ಲ್ಲಿಯ ಚತುಷ್ಷಷ್ಟಿ
ಮೂರ್ತ್ತಿದೇವಸಂಗಭೋಗ ನಿವೇದ್ಯಕ್ಕಂ ಪಲ್ಲಿಯ ದೇವಾಲ

೧೮ ಯದ ಖಂಡಸ್ಫುಟಿತ ಜೀರ್ಣ್ನೋದ್ಧಾರಕ್ಕಂ ಆ ದೇವರ ಬ್ರಹ್ಮಪುರಿಯ
ಬ್ರಾಹ್ಮಣರಷ್ಟದಿಂಬರ್ಗ್ಗವಾಗಿ ಶ್ರೀಮಚ್ಚಾಳುಕ್ಯವಿಕ್ರಮ

೧೯ ವರ್ಷದ ೪೨ನೆಯ ಹೇಮಳಂಬಿ ಸಂವತ್ಸರದ ಶ್ರಾವಣ ಬ ೯ ಮಹಾವ್ಯದಿ
ಸೋಮವಾರದಂದು ಜಯಸಿನ್ದ್ರಪುರದ ಮನ್ನೆಯಕೆ

೨೦ ಜಿರಿಯೊಳೆ ಮಹಾಕ್ರತು ಕಲ್ಪವೃಕ್ಷ ಮಹಾದಾನ ಕಾಲದಲ್ಲಿ ಬಿಂಕೆಯ್ಯ
ನಕೋಲ ಎಂಟುಮನೆಯು ಮತ್ತಭೂರ್ಮಿಯುಂ

೨೧ ಶ್ರೀಭೋಗಾಭ್ಯಂತರಸಿದ್ಧಿಯಿಂ ಸರ್ವ್ವನಮಸ್ಯಮಾಗೆ ಧಾರಾಪೂರ್ವ್ವಕಂ ಮಾಡಿದ ಸಂಬಂಧಿಯಿಂ ಶ್ರೀಬಲ್ಲವರಸರ[1] ಸಮುಖಾದೇಶ

೨೨ ದಿಂ ಸಮಸ್ತ ಪ್ರಧಾನರ ಪೇಳ್ಕೆಯಿಂ ಚೋದೊರೆವಡಿಯರಂ ಭೋಗಾದಿತ್ಯ ನಾಣತಿಯೊಳವಯ್ಯಂಗಳ ಪರಿವರ್ತ್ತದಿಂ ಕೊಟ್ಟ ಮನ್ನೆ

೨೩ [ದ]ಡಿಯ ಸವಕಟ್ಟನುಜ್ಜಳಬೆ೩೦೮ ಬಳಿಯ ಬಾಣರಜವಳಗೆ ೧ ಶ್ರೀಮದ್ಯುವರಾಜ ಮಲ್ಲಿಕಾರ್ಜುನದೇವ

೨೪ ನ ಪರಿವರ್ತ್ತದಿಂದಲನ್ದೆಯ ಸವಕಟ್ಟನ ವೊರಂಬ ೯೪೮ ಬಳಿಯ ಬಬ್ಬಲೇಶ್ವರ ೧ ಅನ್ತು ಮತ್ತ ೯೦೦ಕ್ಕೆ ಕೊಟ್ಟ ಬಾಡ ೨

೨೫ ಬಹುಭಿರ್ವ್ವಸುಧಾ ದತ್ತಾ ರಾಜಭಿಸ್ಸಗರಾದಿಭಿಃ। ಯಸ್ಯ ಯಸ್ಯ ಯದಾ ಭೂಮಿ [ಃ*] ತಸ್ಯ ತಸ್ಯ ತದಾ ಫಲಮ್ ॥[೮॥*] ಸಾಮಾನ್ಯೋ

೨೬ ಯಂ ಧರ್ಮ್ಮಸೇತುನ್ನೃಪಾಣಾಂ ಕಾಲೇಕಾಲೇ ಪಾಲನೀಯೋ ಭವದ್ಭಿಃ ಸರ್ವ್ವಾನೇತಾನ್ ಭಾವಿನಃ ಪಾರ್ತ್ಥಿವೇಂದ್ರಾನ್ ಭೂಯೋ ಭೂಯೋ

೨೭ ಯಾಚತೇ ರಾಮಭದ್ರಃ॥ [೯॥*] ಮದ್ವಂಶಜಾವಾ[2] ಪರಮಹೀಪತಿ ವಂಶಜಾವಾ [ಪಾಪಾ]ದಪೇತ ಮನಸೋ ಭುವಿ ಭೂಮಿ ಪಾಳಾಃ(ಲಾಃ) । ಯೇ ಪಾಲ

೨೮ ಯನ್ತಿ ಮಮ ಧರ್ಮ್ಮಮಿಮಂ ಸಮಸ್ತಂ ತೇಭ್ಯೋರ್ಮ್ಮಯಾ ವಿರಚಿ ತೋಂಜಲಿರೇಷಮೂರ್ದ್ಧ್ನಿ॥ [೧೦॥*] ಆಪಹರಣೇಪಿಚ ದೋಷ ಸ್ತೇನ್ಯೈವೋಕ್ತಃ॥

೨೯ ಸ್ವದತ್ತಾಂ ಪರದತ್ತಾಂ ವಾ ಯೋಹರೇತ ವಸುಂಧರಾವಮ್ । ಷಷ್ಠಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ॥[೧೧॥*] ಗಾಮೇಕಾಂ ರ

೩೦ ತ್ನಿಕಾಮೇಕಾಂ ಭೂಮೇರಪ್ಯೇಕಮಂಗುಲಮ್ । ಹರಂ ನರಕಮಾಪ್ನೋ ತಿ ಯಾವದಾಭೂತಸಂಪ್ಲವಮ್ ॥ [೧೨॥*] ಈ ವೃತ್ತಿಕಾಜರೊಳಗೆ

೩೧ ಸಾಧುಸಂಯತಂ ವಿದ್ವಾಂಸನಾಗಿ ದ್ದೇವಕೆಯ್ಗೆ ಮನೆಗೆ ವೊಡೆಯನಾಗಿಪ್ಪ ನಂತಲ್ಲದೆ ದುಶ್ಚರಿತ್ರನಾದನನಿರಲೀಯದೆ ಪೊಜಮಡಿಸುವುದು*

೩೨ ಶ್ರೀಮತ್ತ್ರಿಭುವನಮಲ್ಲದೇವ ಶ್ರೀಪಾದಪದ್ಮೋಪಜೀವಿ ಮಲ್ಲಣಭಟ್ಟ ದಣ್ಡ ನಾಯಕನಾ ಮಹಾನುಭಾವನ ವಂಶಮದೆಂತೆನೆ॥

---

1 'ಸರ' ಅಕ್ಷರಗಳು ಮೊದಲು ಬರಹದಲ್ಲಿ ಬಿಟ್ಟುಹೋಗಿದ್ದು, ನಂತರ ಕಾಕಪಾದ ಚಿಹ್ನೆಯೊಡನೆ ೨೧–೨೨ನೇ ಸಾಲುಗಳ ಮಧ್ಯೆ ಸಣ್ಣ ಅಕ್ಷರಗಳಲ್ಲಿ ಸೇರಿಸಲ್ಪಟ್ಟವೆ.

2 ಈ ಅಕ್ಷರ ಹೆಚ್ಚಿಗೆ ಇವೆ.

೩೩ ತ್ರಿಭುವನವಿಭು ಲಕ್ಷ್ಮೀವಲ್ಲಭನಾ ಶ್ರೀವರನ ನಾಭಿಪದ್ಮದೊಳಗೆ ದಬ್ಜ
ಭವಂ ವಂದ್ಯಂ ತತ್ಪದ್ಮಭವಾನನ ಪದ್ಮಜಂ ಮಹೀದೇವ
ಕುಳಂ ||[೧೩||*]

೩೪ ಎರಡನೆಯ ಪದ್ಮಸಂಭವನರುಂಧತೀವಲ್ಲಭಂ ಶ್ರುತಿಸ್ಮೃತಿಶಾಸ್ತ್ರವರಣಾ
ಚಾರ್ಯ್ಯಂ ನಿಖಿಳಾಮರಮುನಿಪಶ್ರೇಷ್ಠನೆಸೆವನಲ್ಲಿ ವಶಿಷ್ಠ ||[೧೪||*]

೩೫ ವಿದಿತೋದಯ ಗೋತ್ರಾಗ್ರದಿ ನುದಿಯಿಸುವಾದಿತ್ಯದೇವನೆಂತಂತಂದಭ್ಯು
ದಯಕರಮಪ್ಪ ಗೋತ್ರದೊಳುದಿಯಿಸಿ ನೆಗಳ್ದಂ ಸುತೇ

೩೬ ಜದಿಂಪಾದಿತ್ಯಂ || [೧೫||*] ಮನುನಿಭರಾಸೂರಿಗೆ ಸೋಮನಾಥ
ಕಂದರ್ಪ್ಪ ಧೀರ ಚಾಮುಂಡ ಬುಧತ್ರ[೬*]ನೆಯ ಮ್ಮಾರ್ಡಿಸಿದ(ಪಾ)
ಸೋಮನಾಥನೆಸೆದಿರೆ ಮೊ

೩೭ ಸಂಗಿಯೊಳೆ ರವಿಗೃಹಮಂ ||[೧೬||*] ಅಶ್ವರಥಾಧ್ವರದೊಳ್ ಜಾತ್ಯಶ್ವ
ಶತದ್ವಯಮನಿತ್ತನುತ್ತಮಗ್ಗ್ರವು ದೇವಾಶ್ವಂಗಳೊ
ಮೇಣ್ಸಪ್ತಾಶ್ವಂಗಳೊ ಪೇಳೆ

೩೮ ನಲ್ಕೆ ಕಂದರ್ಪ್ಪ ಬುಧಂ ||[೧೭||*] ನರನುತ ಜಯಸಿಂಹ ಮಹೀಶ್ವರನಿಂ
ಚಾವುಂಡ ದಂಡನಾಥಂ ಪಡೆದಂ ಕರಗದ ಬೆಸನದೆಂದುಂಕರಗದ ಬೆಸನಂ
ಪರೋ

೩೯ ಪಕಾರ ವ್ಯಸನಂ ||[೧೮||*] ಆವಿಭುಗಂ ಚಂದಿಕಬ್ಬೆಗಂ || ವಿನಯಾಂ
ಭೋನಿಧಿ ಸೋಮನಾಥ ಬುಧನುಂ ಸನ್ಮಂಡನಂ ವಾಸುದೇವನು
ಮುತ್ಸಾಹಿ ಹಿರಣ್ಯಗರ್ಬ್ಭ

೪೦ ವಿಭುವಂ ವಿದ್ವನ್ನುತಂ ವಿಷ್ಣುದೇವನುಮಾದಿತ್ಯಸಮಾನತೇಜನೆನಿಸಿಬ್ಬಾ
ದಿತ್ಯನುಂ ತದ್ವಸಿಷ್ಠನಿಭಂ ಮಾಧವದೇವನುಂ ತನಯರನ್ತಾಭೂ

೪೧ ಸುರಾಧೀಶರೊಳ್ ||[೧೯||*] ದೇವನುತವಾಸುದೇವಂ ಶ್ರೀವನಿತೇಶಂ
ವಿನೀತನಾದಂತೆ ಮಹೀದೇವನುತ ವಾಸುದೇವಂ ಶ್ರೀವನಿತೇಶಂ
ವಿನೀತನಾದಂ ಜಗದೊಳ್ || [೨೦||*]

೪೨ ಶ್ರೀ ವಾಸುದೇವನಿಂ ಶ್ರೀದೇವಿಗೆ ಕಂದರ್ಪ್ಪನೊಗೆವವೋಲ್ಪುಟ್ಟಿದನಂತಾ
ವಾಸುದೇವನಿಂ ಶ್ರೀದೇವಿಗೆ ಸೌಜನ್ಯಮೂರ್ತ್ತಿ ಮಲ್ಲಚಮೂಪಂ
||[೨೧||*] ವೃ || ಪಡವಳೆ

೪೩ ಯೆಂತು ತೆಂಬೆರಲದೆಂತು ದಿನೇಶ[ನುದಾ]ಮಯೂಖದಭ್ಯುದಯಮದೆಂತು
ಸನ್ತತಮಶೇಷ ಜಗಕ್ಕೆ ಹಿತಾರ್ತ್ಥಮಪ್ಪ ಶೀಲದೊಳೆ ಕರಂ[ಗಳ್]

೪೪ ನನ್ತ್ರಿಗನುವ್ರನಂತೆ ಜಗಕೆ ಹಿತಾರ್ತ್ಥನೊಂದೆ ಪುಟ್ಟಿದನೆನೆ ಜನ್ಮದೊಳ್
ಸಫಳಮಾಗುದೊ ಮಲ್ಲಿಣದಂಡನಾಥನ ॥ [೨೦॥*] ಸುಲ್ಲ
ಪುಂವಾದುದಂ ಕೆಂ

೪೫ ಪೆರದಾದುದನುಗಿಯುಲಾಪ್ತ್ಯ್ರದೆಸೆಯುಕಸ್ಸುಂ ಭೂಸುರಸುರಭಿಗೆಂದು
ಪೊಗಳ್ವ ಧರೆ ಚಂದಲದಾಗೆಯುಂ ತದಾರ್ಯ್ಯನ
ಸತಿಯುಂ ॥ [೨೧॥*] ಚಂದ್ರಿ

೪೬ ಕೆಯಿಂ ಕುವಳಯಮಿತಚಂದ್ರಂ ಕಲನೆಸೆವತೆಱದೆ ಕಾಂತಿಯನಾಂತ
ಚಂದ್ರಿಕೆಯಿಂ ಸತ್ಕುವಳಯಚಂದ್ರಂ ಕಲನೆಸೆವನ್ನೆ(ನೆ)ಮ್ಮ ಮಲ್ಲ
ಚಮೂಪಂ ॥ [೨೨॥*]

೪೭ ಪುರುಷಾಕಾರದೆ ಮಲ್ಲಿನಾಥ ನೆಸಲಂ ಕೈಕೊಂಡು ಕಲ್ಪದ್ರುಮ[1]ಮಂ ಧರೆ
ಗೆತ್ತ್ರಂದುದು ನೋಡ ಕಲ್ಪಲತೆಯುಂ ಸ್ತ್ರೀನೇಪದಿಂ ಚಂದ್ರಿಕಾವ
ನಾಮಂ ಧರೆಗಾಗ

೪೮ ಕ್ಷೈಕುಜನಮಂ ತಳ್ತಿಟ್ಟಿದುಂ ತಿಂತಿರೇಂ ಪೊರೆಯಲ್ಕಕಲ್ಪನೆ ನೆನ್ನ ತಿನ್ನ
ಬುಧವಿಪ್ರವ್ರಾತಮಂ ಪ್ರೀತಿಯಿಂ ॥ [೨೩॥*] ಭುವನನಗಿಂಯ ಕವಿ
ರತ್ನಭೂಷಣ ವಿಷ್ಣು ಭ[ಟ್ಟ]ರ ಕಾವ್ಯ [॥*]

1 ಈ ಅಕ್ಷರ ಬೇಕಿಲ್ಲ.

ಎಂ. ರಾಮರಾವ್

# ನಿದ್ದೆ

"ಆಮೇಲೇನು ಬಂತು!" ಮೂರು ಹೊತ್ತೂ ಹೀಗೆ ಬಿದ್ದಿರುತ್ತಾನೆ ಕುಂಭಕರ್ಣ ನನ್ನ ಮೀರಿಸಿ!" ಎನ್ನುವ ಮಾತು ನಮ್ಮ ಕಿವಿಗಳಿಗೆ ಆಗಾಗ ಬೀಳುತ್ತಲೇ ಇರುತ್ತದೆ. ಮಾಡಬೇಕಾದ ಕೆಲಸಗಳನ್ನು ನಿರ್ಲಕ್ಷಿಸಿ ಸದಾ ನಿದ್ರಾಸಕ್ತರಾಗಿರುವವರನ್ನೇನೋ ಹೀಗೆ ಜರೆಯುವುದು ನ್ಯಾಯವೇ. ಆದರೆ ಜಗತ್ತಿನಲ್ಲಿ ಸೃಷ್ಟಿಕರ್ತನಿಂದ ನಮಗೆ ದತ್ತವಾಗಿರುವ ಅತ್ಯಂತ ಅಮೂಲ್ಯವೂ ಅಗತ್ಯವೂ ಆದ ಭಾಗ್ಯವಿಶೇಷಗಳಲ್ಲಿ ನಿದ್ದೆಯೂ ಒಂದೆಂಬುದನ್ನು ಮನುಷ್ಯಮಾತ್ರದವರಾರೂ ಅಲ್ಲಗಳೆಯುವಂತಿಲ್ಲ. ಸಕಲ ಜೀವಿಗಳಿಗೂ ಬೇಕಾದ, ಸುಲಭಲಭ್ಯವಾದ ಸುಖದ ಸಾಧನ ನಿದ್ದೆಯೊಂದೇ. ಮನುಷ್ಯರಿಗಂತೂ ಅದರ ಆವಶ್ಯಕತೆ ಇತರ ಪ್ರಾಣಿಗಳಿಗಿಂತಲೂ ಹೆಚ್ಚಾಗಿಯೇ ಇದೆ. ದಣಿದ ದೇಹಕ್ಕೆ ನೊಂದ ಮನಸ್ಸಿಗೆ ಒಟ್ಟಿಗೆ ವಿಶ್ರಾಂತಿಯನ್ನು ಕೊಡಬಲ್ಲ ಶಕ್ತಿ ನಿದ್ದೆಗಲ್ಲದೆ ಇನ್ನಾವುದಕ್ಕಿದೆ? ರೋಗರುಜಿನಗಳು, ನೋವುಬಾವುಗಳು, ಚಿಂತೆಚಿತ್ತಕ್ಷೋಭೆಗಳು—ಎಲ್ಲವನ್ನೂ ಏಕಕಾಲದಲ್ಲಿ ಶಮನಗೊಳಿಸುವ ದಿವ್ಯಪರಮೌಷಧ ಅದೊಂದೇ. ಯಾವ ಕಾರಣಕ್ಕೇ ಆಗಲಿ ನಿದ್ದೆ ಬಾರದವನ ದೌರ್ಭಾಗ್ಯಕ್ಕೆ ಸಮಬರುವ ಕಷ್ಟ ಇನ್ನೊಂದಿರಲಾರದು. "ನಿದ್ದೆಗೆಟ್ಟೆಯೋ, ಬುದ್ಧಿಗೆಟ್ಟೆಯೊ?" ಎಂಬ ಗಾದೆಯೇ ಇದೆ. ರಾತ್ರಿ ನಿದ್ದೆ ಬರದಿದ್ದರೆ ಬೆಳಗ್ಗೆ ಎದ್ದಾಗ ಶರೀರದ ಆಯಾಸ ಕಡಿಮೆಯಾಗದಿರುವುದು ಹಾಗಿರಲಿ, ಜಗತ್ತೇ ಕಾಂತಿಹೀನವಾಗಿ ಬೇಸರಕರವಾಗಿ ಕಾಣುತ್ತದೆ. ಹೊಸ ಚೈತನ್ಯ ಹೊಸ ಉತ್ಸಾಹ, ಹೊಸ ಆಲೋಚನೆಗಳು ಎಲ್ಲವೂ ಹಿಂದಿನ ರಾತ್ರಿ ಚೆನ್ನಾಗಿ ನಿದ್ದೆ ಬಂದಿದ್ದರೆ ಮಾತ್ರ ಸಾಧ್ಯ. ಆದಕಾರಣವೇ ಸಾಕಷ್ಟು ನಿದ್ದೆಯಿಲ್ಲದೆ ನರಳುವವರು ಅತಿ ದೀನರಾಗಿ ನಿದ್ರಾದೇವಿಯನ್ನು ಆಹ್ವಾನಿಸಿ ಬೇಡಿ ಅಂಗಲಾಚುವುದು. "ನೀನಿಲ್ಲದೆ ಬೆಳಗಿನ ಐಸಿರಿಯೆಲ್ಲ ಏತಕ್ಕೆ ಬಂದೀತು?" ಎಂಬ ವರ್ಡ್ಸ್‌ವರ್ತ್ ಕವಿಯ ಉದ್ಗಾರ ಅರ್ಥಪೂರ್ಣವಾದುದು. "ಒಂದು ದಿವಸಕ್ಕೂ ಇನ್ನೊಂದಕ್ಕೂ ಮಧ್ಯೆ ಇರುವ ಸುಖದಾಯಕವಾದ ಅಡ್ಡಗಟ್ಟು ನೀನು; ಬಾ," ಎಂಬ ಅವನ ಪ್ರಾರ್ಥನೆ ನಮ್ಮೆಲ್ಲರ ಹೃದಯಗಳಲ್ಲೂ ತಪ್ಪದೆ ಪ್ರತಿಧ್ವನಿಸುತ್ತದೆ. ವಿಪರೀತ ದೇಹಶ್ರಮದಿಂದ ಉತ್ಪನ್ನವಾಗುವ ಮೈ ಕೈ ನೋವಿನಿಂದ ಹೇಗೋ ಹಾಗೆಯೇ ಯಾವುದಾದರೂ ಕಾರಣಕ್ಕಾಗಿ ಅತಿಯಾಗಿ ಚಿಂತಿಸಿ ಕೊರಗುವುದರಿಂದಲೂ ಮನುಷ್ಯನ

ಸ್ವಾಸ್ಥ್ಯ ಕೆಡುತ್ತದೆ. ಅಂಥ ಸಂದರ್ಭಗಳಲ್ಲಿ ನಿದ್ದೆ ಅದೆಷ್ಟು ಸ್ವಾಗತಾರ್ಹವಾಗಿ ಹಿತಕರವಾಗಿರುತ್ತದೆ, ಸಂಜೀವಿನಿಯಂತೆ, ಯಕ್ಷಿಣಿ ಪ್ರಯೋಗದಂತೆ, ನಮಗೆ ನಮ್ಮ ಆ ಅಸಹನೀಯವಾದ ದಾರುಣಪರಿಸ್ಥಿತಿಯ ವಿಚಾರದಲ್ಲಿ ವಿಸ್ಮೃತಿಯನ್ನುಂಟುಮಾಡಿ ಸ್ವರ್ಗಸುಖವನ್ನು ನೀಡುತ್ತದೆ! "Care-charming sleep, thou easer of all woes" ("ಚಿಂತೆಯನ್ನು ಮಾಯದಿಂದ ವ್ಯೈಗರೆಸುವ ನಿದ್ದೆಯೆ, ಸರ್ವದುಃಖಪರಿಹಾರಕಳು ನೀನು") ಎಂದು ಫ್ಲೆಚರ್ ನಿದ್ದೆಯನ್ನು ಸಂಬೋಧಿಸಿರುವುದು ಎಷ್ಟು ಉಚಿತವಾಗಿದೆ ಎಂಬುದನ್ನು ಚಿಂತೆಯನ್ನೂ ಅದನ್ನು ನಿದ್ದೆ ಎಷ್ಟು ಬೇಗ ಹೋಗಲಾಡಿಸಬಹುದೆಂಬುದನ್ನೂ ನಿದ್ದೆ ಕಳೆದು ಎದ್ದ ಕೂಡಲೆ ಅದು ಹೇಗೆ ಮರುಕಳಿಸುತ್ತದೆ ಎಂಬುದನ್ನೂ ಅನುಭವದಿಂದ ಅರಿತವರೇ ಬಲ್ಲರು.

"the innocent sleep,
Sleep that knits up the ravelled sleeve of care.
The death of each day's life, sore labour's bath,
Balm of hurt minds, great nature's second course,
Chief nourisher in life's feast"

("ದೋಷವರಿಯದ ನಿದ್ದೆ
ಮನದ ಚಿಂತೆಯ ಪಟ್ಟೆನೂಲುಗಳ ತೊಡಕುಗಳ
ಬಿಡಿಸಿ ಸರಿದೂಗಿಸುವ ನಿದ್ದೆ, ಅನುದಿನದೊಳಹ
ಬಾಳಿನಳಿವದು, ನೋಯ್ವ ದುಡಿತದ ಸ್ನಾನವದು,
ಮನದ ಗಾಯಕೆ ತೈಲ, ಸೃಷ್ಟಿಯೆರಡನೆಯೂಟ,
ಬಾಳ್ವೆಯೌತಣದಿ ಮುಖ್ಯದ ಭೋಜ್ಯ"—ಡಿ.ವಿ.ಜಿ. ಯವರ ಅನುವಾದ)

ಎಂದು ಮ್ಯಾಕ್‌ಬೆತ್ ನಿದ್ದೆಯನ್ನು ವರ್ಣಿಸಿರುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ನಮ್ಮ ಸಂಸ್ಕೃತೋಕ್ತಿಯೊಂದಂತೂ ಇನ್ನೂ ಒಂದು ಹಂತ ಮುಂದೆ ಹೋಗುತ್ತದೆ:

"ಚಿತ್ತಂ ಪ್ರಸಾದಯತಿ ಲಾಘವಮಾದದಾತಿ
ಪ್ರತ್ಯಂಗಮುಜ್ಜ್ವಲ ಯತಿ ಪ್ರತಿಭಾವಿಶೇಷಂ
ದೋಷಾನುದಸ್ಯತಿ ಕರೋತಿ ಚ ಧಾತು ಸಾಮ್ಯಂ
ಆನಂದಮರ್ಪಯತಿ ಯೋಗವಿಶೇಷಗಮ್ಯಂ"

ನಿದ್ದೆಯ ಅನುಗ್ರಹವೆಂತಹುದು! ಮನಸ್ಸನ್ನು ನಿರ್ಮಲಗೊಳಿಸುತ್ತದೆ. ಅಂಗಾಂಗಗಳಿಗೆಲ್ಲಾ ಲವಲವಿಕೆಯನ್ನುಂಟುಮಾಡುತ್ತದೆ; ಶರೀರದೋಷಗಳನ್ನು ಹೋಗಲಾಡಿಸಿ ಅದನ್ನು ಸಮಧಾತುವಿನಲ್ಲಿರಿಸುತ್ತದೆ. ಅಷ್ಟು ಮಾತ್ರವೇ ಅಲ್ಲ: ಯೋಗಿಗಳಿಗೆ ಮಾತ್ರ ಲಭ್ಯವಾಗುವ ಆನಂದವನ್ನು ಕೊಡುತ್ತದೆ.)

"ಕಿಂಗ್‌ಲಿಯರ್" ನಾಟಕದಲ್ಲಿ ಹುಚ್ಚೇರಿ ದಿಕ್ಕೆಟ್ಟು ಅಲೆಯುತ್ತಿರುವ ವೃದ್ಧ ಲಿಯರನನ್ನು ಪತ್ತೆಮಾಡಿ ಅವನ ಮನಸ್ಸನ್ನು ಹದಗೊಳಿಸಲು ನಿಶ್ಚಯಿಸಿರುವ ಕಾರ್ಡೀಲಿಯಾ ವೈದ್ಯನಿಗೆ ತನ್ನ ತಂದೆಯ ಸ್ಥಿತಿಯನ್ನು ಬಣ್ಣಿಸುವಾಗ "he was met even now as mad as the vex'd sea" ("ಇದೇ ಕ್ಷಣ ಎದುರಾದರವರು ಕದಡಿದ ಕಡಲ ತೆರ ಹುಚ್ಚು"—ಮಾಸ್ತಿಯವರ ಅನುವಾದ) ಎನ್ನುತ್ತಾಳೆ. ಇದಕ್ಕೆ ಉತ್ತರವಾಗಿ ವೈದ್ಯ ಹೇಳುವ ಮಾತುಗಳಿವು :

"There is means, madam,
Our foster-nurse of nature is repose,
The which he lacks, that to provoke in him,
Are many simples operative, whose power
Will close the eye of anguish"

("ಅಮ್ಮಾಜಿ, ಅದಕೆ ದಾರಿಯಿದೆ
ವಿಶ್ರಾಂತಿ ಪ್ರಕೃತಿನಿಯಮಿತ ಧಾತ್ರಿ ಇವರಿಗದೆ
ಇಲ್ಲದಿದೆ ಇವರಿಗದು ಬರುವಂತೆ ಮಾಡುವರೆ
ಹಲವಾರು ಹಸುರಿಹವು. ಆ ಹಸುರುಗಳ ಶಕ್ತಿ
ನೋವ ಕಣ್ಣನು ಮುಚ್ಚಬಹುದು"—ಮಾಸ್ತಿಯವರ ಅನುವಾದ)

ಈ ರೀತಿಯ ಔಷಧಪ್ರಯೋಗದಿಂದ ನಿದ್ದೆ ಹೋಗಿರುವ ಲಿಯರನನ್ನು ಎಬ್ಬಿಸುವಾಗ ಅದೇ ವೈದ್ಯ ಕಾರ್ಡೀಲಿಯಾಗೆ ಹೀಗೆ ನುಡಿಯುತ್ತಾನೆ:

"Be by, good madam, when we do awake him,
I doubt not of his temperance"

("ಸದಯ ದೇವಿಯರೆ, ನಾವವರ ನೆಬ್ಬಿಸುವಂದು
ಬದಿಯಲಿರಿ. ಅವರು ಸುಸ್ವಸ್ಥವಾಗಿಹ ವಿಷಯ
ನನಗೆ ಸಂದೇಹವಿಲ್ಲ"—ಮಾಸ್ತಿಯವರ ಅನುವಾದ)

ಲಿಯರ್ ಎದ್ದಮೇಲೆ ಮತ್ತೆ ಅವನು

"Be comforted, good madam, the great rage
You see, is kill'd in him"

("ಧೈರ್ಯವಾಗಿರಿ, ಮಹಾತಾಯಿ, ಉಗ್ರಕೋಪ,
ಸನ್ನಿಧಿಯೆ ನೋಡುತಿರುವಿರಿ, ಇವರೊಳಳಿದಿದೆ"—ಮಾಸ್ತಿಯವರ ಅನುವಾದ)

ಎನ್ನುತ್ತಾನೆ. ಕವಿವಾಣಿ ಎಲ್ಲರ ಮನಸ್ಸನ್ನೂ ಪ್ರತಿಬಿಂಬಿಸುತ್ತದೆಯಷ್ಟೆ. ನಿದ್ದೆಯ ಸಾರ್ವಲೌಕಿಕ ಪ್ರಭಾವಕ್ಕೆ ಈ ನಿದರ್ಶನಗಳಿಗಿಂತಲೂ ಹೆಚ್ಚಿನ ಸಾಕ್ಷಿ ಬೇಕೇನು? ಮನುಷ್ಯರು, ಪ್ರಾಣಿಗಳು ಮಾತ್ರವೇ ಏಕೆ? ಸಸ್ಯಗಳು ಕೂಡ ನಿದ್ದೆಹೋಗುತ್ತವೆ

ಎಂದು ಡಾಕ್ಟರ್ ಜಗದೀಶ ಚಂದ್ರಬೋಸರು ತೋರಿಸಿಕೊಟ್ಟಿದ್ದಾರೆ. "ಆಲ್ ನೇಚರ್ ಸ್ಲೆಪ್ಟ್" ("ಪ್ರಕೃತಿಯೆಲ್ಲಾ ನಿದ್ದೆಹೋಗುತ್ತಿತ್ತು") ಎಂಬ ಮಾತು ಕೇವಲ ಕವಿಯೊಬ್ಬನ ಕಲ್ಪನಾಶಿಶುವಲ್ಲ, ವಾಸ್ತವವೂ ಆಗಿದ್ದಿರಬಹುದು ಎಂಬುದನ್ನು ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಿ ಕಂಡುಹಿಡಿದಿದ್ದಾರೆ.

ನಿದ್ದೆ ಹೀಗೆ ಎಲ್ಲ ಜೀವಿಗಳಿಗೂ ಉಪಯುಕ್ತವಾಗಿರುವುದು ಮಾತ್ರವೇ ಅಲ್ಲ, ಸಹಜವೂ ಆದುದು. ಸಮಯೋಚಿತವಾಗಿ ನಿದ್ದೆ ಮಾಡುವುದು ನೆಮ್ಮದಿಯ ಲಕ್ಷಣ. ದೇಹ ಆರೋಗ್ಯವಾಗಿ ಮನಸ್ಸು ನಿರ್ಮಲವಾಗಿದ್ದರೆ ನಿದ್ದೆ ಬಂದೇ ಬರಬೇಕು. ಅದು ಪ್ರಕೃತಿನಿಯಮ. ಹಾಗೆ ನಿದ್ದೆ ಬರದಿದ್ದವರಲ್ಲಿ ಏನೋ ದೋಷವಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಮ್ಯಾಕ್‌ಬೆತ್ ತಾನು ಅತಿಥಿ ಡಂಕನ್ನನನ್ನು ಸಂಹರಿಸಲು ಹೆಜ್ಜೆಯಿಟ್ಟು ಅವನು ಮಲಗಿರುವ ಕೊಠಡಿಗೆ ಹೋಗುತ್ತಿರುವ ದೃಶ್ಯವನ್ನೇ ತೆಗೆದುಕೊಳ್ಳೋಣ. ಕೃತ್ರಿಮವಾಗಲಿ ದುರಾಲೋಚನೆಯಾಗಲಿ ಇಲ್ಲದ ಡಂಕನ್ ಅಸ್ಖಲಿತವಾದ ನಿದ್ದೆಯಲ್ಲಿ ಮುಳುಗಿದ್ದಾನೆ. ಮ್ಯಾಕ್‌ಬೆತ್ ಆದರೋ ತನ್ನ ದುರಾಸೆಯ ತೃಪ್ತಿಗಾಗಿ ಆ ಮುಗ್ಧ ವೃದ್ಧನನ್ನು ಕೊಲೆಗೈಯಲು ಹೋಗುತ್ತಿದ್ದಾನೆ. ಆಗ ಅವನಿಗೇ ಅನ್ನಿಸುತ್ತದೆ ಎಂಥ ಸಮಯದಲ್ಲಿ ಎಂಥ ಕೆಲಸ ಮಾಡುತ್ತಿದ್ದೇನೆ ಎಂದು. ರಾತ್ರಿಯ ಪ್ರಶಾಂತತೆ ನಿದ್ದೆಗೆಂದೇ ಸೃಷ್ಟಿಕರ್ತನಿಂದ ನಿಯೋಜಿತವಾಗಿರುವುದು, ಹಾಗೆ ನಿದ್ದೆ ಹೋಗದವರು ದುಷ್ಟರೂ ದುರುದ್ದೇಶಗಳಿಂದ ತುಂಬಿರುವವರು ಮಾತ್ರ ಎಂದು ಅವನೇ ಯೋಚಿಸುತ್ತಾನೆ:

"Now o'er the one half world
Nature seems dead, and wicked dreams abuse
The curtained sleep, witchcraft celebrates
Pale Hecate's offerings, and wither'd murder,
Alarm'd by his sentinel, the wolf,
Whose howl's his watch, thus with his stealthy pace,
With Tarquin's ravishing strides towards his design
Moves like a ghost."

("ಈಗ ಜಗದರ್ಧದಲಿ ಸೃಷ್ಟಿ ಸತ್ತವೊಲಿಹಳು
ತೆರೆಯೊಳಗೆ ನಿದ್ದೆಯನು ಹೊಲೆಗನಸು ಕೆಡಿಸುತಿವೆ
ಮಾಂತ್ರಿಕರು ಮಾರಿಕೆಗೆ ಬಲಿಯನರ್ಪಿಸುತಿಹರು,
ಪ್ರೇತರೂಪಿನ ಹತ್ಯೆ ತನ್ನ ಬೇಹಿಗನಾದ
ತೋಳನರಚುತೆ ಹೊತ್ತನರುಹೆ, ತಾನೆಚ್ಚತ್ತು
ಕಳ್ಳತನದಡಿಯಿಡುತ ಜಾರನಂದದ ಬಾರು-
ಗಾಲಿಂದೆ, ದೆವ್ವನಂದದಿ ತನ್ನ ಗುರಿಯೆಡೆಗೆ
ಸಾಗುತ್ತಲಿಹುದು"—ಡಿ.ವಿ.ಜಿ. ಅವರ ಅನುವಾದ)

ಕೊಲೆ ಆದನಂತರ ಲೇಡಿ ಮ್ಯಾಕ್‌ಬೆತ್‌ಳೊಡನೆ ಮಾತಾಡುವಾಗ ಮತ್ತೆ ಅವನೇ "Sleep no more! Macbeth does murder sleep" ("ಮ್ಯಾಕ್‌ಬೆತ್ ನಿದ್ದೆಯನ್ನು ಕೊಲೆಗೈದಿರುವುದರಿಂದ ಇನ್ನು ಅವನು ನಿದ್ದೆ ಮಾಡಕೂಡದು" ಎಂದು ಅಶರೀರ ವಾಣಿಯೊಂದು ನುಡಿದುದನ್ನು ತಾನು ಕೇಳಿದುದಾಗಿ ಹೇಳುತ್ತಾನೆ. ನಿಜ, ಪಾತಕಿಗೆ ನಿದ್ದೆಯೆಲ್ಲಿಯದು? "ತನ್ನ ಪ್ರೀತಿಗೆ ಪಾತ್ರರಾದವರಿಗೆ ಭಗವಂತನು ನಿದ್ದೆಯನ್ನು ದಯಪಾಲಿಸುತ್ತಾನೆ" ("To His beloved He giveth sleep") ಎಂಬ ಮಾತು ಬೈಬಲಿನಲ್ಲಿದೆ. ಹಾಗೆ ನಿದ್ದೆ ಬರದವರು ದೈವದ್ರೋಹಿಗಳೆಂದರೆ ಅನೇಕ ವೇಳೆ ಸುಳ್ಳಾಗಲಾರದು. ಲಂಡನ್ ನಗರದ ರಾತ್ರಿಯ ದೃಶ್ಯವನ್ನು ಚಿತ್ರಿಸುವ "ಎ ಸಿಟಿ ನೈಟ್ ಪೀಸ್" ಎಂಬ ತನ್ನ ಪ್ರಬಂಧವೊಂದರಲ್ಲಿ ಗೋಲ್ಡ್‌ಸ್ಮಿತ್ ತಾನು ಕಂಡುದನ್ನು ಹೀಗೆ ವರ್ಣಿಸುತ್ತಾನೆ :

> "The clock has just struck too, the expiring taper rises and sinks in the socket, the watchman forgets the hour of slumber, the laborious and the happy are at rest, and nothing wakes but meditation, guilt, revelry, and despair, The drunkard once more fills the destroying bowl, the robber walks his midnight round, and the suicide lifts his guilty arm against his own sacred person"
>
> ("ಗಡಿಯಾರ ಈಗತಾನೆ ಗಂಟೆ ಎರಡನ್ನು ಹೊಡೆದು ಮುಗಿಸಿದೆ. ಆರಿಹೋಗುತ್ತಿರುವ ಮೇಣದ ಬತ್ತಿಯ ದೀಪದ ಉರಿ ಗೂಡಿನಲ್ಲಿ ಏರಿ ಇಳಿಯುತ್ತಿದೆ. ಪಹರೆಯವನು ನಿದ್ದೆಯ ಜೋಂಪಿನಲ್ಲಿ ಹೊತ್ತನ್ನು ಮರೆತಿದ್ದಾನೆ. ಶ್ರಮಜೀವಿಗಳೂ ಸುಖಜೀವಿಗಳೂ ವಿಶ್ರಾಂತಿಗೆ ಸಂದಿದ್ದಾರೆ. ಧ್ಯಾನಾಸಕ್ತರು, ತಪ್ಪಿತಸ್ಥರು, ವಿಲಾಸಿಗಳು, ಹತಾಶರು–ಇವರ ಹೊರತು ಈಗ ಇನ್ನು ಯಾರೂ ಎಚ್ಚರವಾಗಿಲ್ಲ. ಕುಡುಕನು ಮತ್ತೊಮ್ಮೆ ತನ್ನ ಹಾನಿಕರವಾದ ಬಟ್ಟಲನ್ನು ತುಂಬಿ ಬಾಯಿಗೊಯ್ಯುತ್ತಾನೆ. ಕಳ್ಳನು ನಡುರಾತ್ರಿಯ ನಗರ ಸಂಚಾರವನ್ನು ಆರಂಭಿಸುತ್ತಾನೆ. ಆತ್ಮಹತ್ಯಾಕಾರಿ ತನ್ನದೇ ಆದ ಪವಿತ್ರ ದೇಹದ ಮೇಲೆ ತನ್ನ ಪಾಪಿಹಸ್ತವನ್ನು ಎತ್ತುತ್ತಾನೆ"–ಅನುವಾದ ಎಂ. ರಾ.)

ರಾತ್ರಿಗೂ ನಿದ್ದೆಗೂ ಇರುವ ಸಂಬಂಧವನ್ನು ಕುರಿತು ಇನ್ನು ಹೆಚ್ಚು ಹೇಳಲೇಕೆ? ರಾತ್ರಿಯ ಹೊತ್ತಿನಲ್ಲಿ ಓಡಾಡುತ್ತಿರುವವರನ್ನು ನಮ್ಮವರು "ನಿಶಾಚರರು" ಎಂದು ವ್ಯಂಗ್ಯವಾಗಿ ಕರೆಯುವುದರಲ್ಲಿ ಅನೇಕ ಕಾರಣಗಳಿಗಾಗಿ ಔಚಿತ್ಯವಿದೆ. ಗೂಬೆಗಳನ್ನು ಜನ ದ್ವೇಷಿಸುವುದೂ ಇದೇ ಕಾರಣಕ್ಕಾಗಿಯೇ ಇರಬೇಕು.

ಆದರೆ ರಾತ್ರಿ ನಿದ್ದೆಹೋಗಬೇಕಾದುದು ಸಹಜ, ಪ್ರಕೃತಿನಿಯಮ ಎಂಬ ಮಾತು ಕೆಲವು ಸಂದರ್ಭಗಳಿಗೂ ಕೆಲವರು ವ್ಯಕ್ತಿಗಳಿಗೂ ಅನ್ವಯಿಸುವುದಿಲ್ಲ.

ಗೋಲ್ಡ್‌ಸ್ಮಿತ್‌ನೇ ಯಾರು ಯಾರು ಎಚ್ಚತ್ತಿರುವರು ಎಂಬುದನ್ನು ವಿವರಿಸುವಾಗ "meditation" ಎಂಬುದನ್ನು ಸೇರಿಸಿದ್ದಾನೆ. ಧ್ಯಾನಾಸಕ್ತರು, ಗಹನವಾದ ವಿಚಾರಗಳನ್ನು ಕುರಿತು ಗಂಭೀರವಾಗಿ ನಿರಾತಂಕವಾಗಿ ಆಲೋಚಿಸಲೆಳಸುವವರು, ಆವೇಶಭರಿತರಾಗಿ ಕಾವ್ಯರಚನೆಯಲ್ಲಿ ಮೈಮರೆಯುವ ಕವಿಗಳು, ಗಾಯನ ಮಾಡುವ ಹಾಡುಗಾರರು, ನವಪ್ರಣಯದ ನವೋದಯದಲ್ಲಿ ಮಧುರ ಸಂಭಾಷಣೆಯಲ್ಲಿ, ಶೃಂಗಾರ ಕೇಳಿಯಲ್ಲಿ ತೊಡಗಿರುವ ತರುಣತರುಣಿಯರು, ಜ್ಞಾನ ಸಂಗ್ರಹಣಾತುರತೆಯಿಂದ ಗ್ರಂಥವ್ಯಾಸಂಗಮಗ್ನರಾಗಿ ನಿದ್ರಾಹಾರಗಳನ್ನೂ ಕಡೆಗಣಿಸುವ ವಿದ್ವಾಂಸರು, ಇವರೇ ಮೊದಲಾದವರು ರಾತ್ರಿ ಎಷ್ಟು ಹೊತ್ತಾದರೂ ಎದ್ದೇ ಇದ್ದರೆ ಅದೊಂದು ಅಕ್ಷಮ್ಯವಾದ ಅಪರಾಧವಾಗಲಾರದು. ಅಕ್ಷಮ್ಯತೆಯ ಮಾತು ಹಾಗಿರಲಿ—ಈ ಸಂದರ್ಭಗಳಲ್ಲಿ ಎಚ್ಚತ್ತಿರುವುದೇ ಸಹಜವರ್ತನೆ, ಅದೇ ಪ್ರಕೃತಿ ನಿಯಮ. "ಯಾನಿಸಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ" ಎಂದು ಸಾಕ್ಷಾತ್ ಶ್ರೀಕೃಷ್ಣನ ಬಾಯಿಂದಲೇ ಬಂದಿದೆ. ಭಗವದ್ಗೀತೆಯ ಈ ವಾಕ್ಯ ಅವರ ಮನಸ್ಸಿನಲ್ಲಿದ್ದಿತೋ ಇಲ್ಲವೋ ಕಾಣೆ: ೧೯೪೭ರ ಆಗಸ್ಟ್ ೧೫ನೆಯ ದಿನ ರಾತ್ರಿ ಭಾರತ ಸ್ವತಂತ್ರವಾದಾಗ ಶ್ರೀ ಜವಾಹರಲಾಲ್ ನೆಹರೂರವರು "When the world sleeps India will awake to life and freedom" ("ಜಗತ್ತು ಮಲಗಿ ನಿದ್ರಿಸುತ್ತಿರುವಾಗ ಭಾರತ ಎಚ್ಚತ್ತು ಹೊಸ ಜೀವವನ್ನೂ ಸ್ವಾತಂತ್ರ್ಯವನ್ನೂ ಪಡೆಯುತ್ತಿದೆ") ಎಂದರು. ಎಂಥ ಧ್ವನಿಪೂರ್ಣವಾದ ಮಾತು!

ರಾತ್ರಿ ಮಲಗಬೇಕೆಂಬುದು ಸೃಷ್ಟಿಕರ್ತನ ಅಭಿಪ್ರಾಯವೂ ಹೌದು ಎಂಬುದನ್ನು ಆ ಸಮಯದಲ್ಲಿ ಅವನು ಕಳುಹಿಸುವ ಕತ್ತಲು, ಚಳಿ, ಮಂಜು, ಮೊದಲಾದ ಅಸಹನೀಯವೂ ಅನಾರೋಗ್ಯಕರವೂ ಆದ ವಸ್ತುಗಳೇ ಸೂಚಿಸುತ್ತವೆ. ಅದು ಹೊರಗೆ ಅಲೆದಾಡುವ ಕಾಲವಲ್ಲ, ಬೆಚ್ಚಗೆ ಹಾಸಿಗೆಯಲ್ಲೇ ಮಲಗಿರಬೇಕಾದ ಕಾಲ ಎಂದು ಅವನೇ ತೀರ್ಮಾನಗೈದಿರುವಂತಿದೆ. ಅನುಭವದಿಂದ ನಮಗೆ ತಿಳಿದುಬರುವುದೂ ಅಷ್ಟೇ. ಹಗಲಿಗಿಂತಲೂ ರಾತ್ರಿಯೇ ನಿದ್ದೆಗೆ ಹೆಚ್ಚು ಪ್ರಶಸ್ತವಾದ ಸಮಯ ಎಂಬುದು ನಾನಾ ಕಾರಣಗಳಿಂದ ಸ್ಪಷ್ಟವಾಗುತ್ತದೆ. ಗಲಭೆಗೊಂದಲಗಳಿಲ್ಲದೆ ನಿಶ್ಶಬ್ದವಾದ ವಾತಾವರಣದಲ್ಲಿ ಮಲಗಿ ನಿಜವಾದ ವಿಶ್ರಾಂತಿಯನ್ನು ಅನುಭವಿಸಬಹುದಾದ ಸಾಧ್ಯತೆ ಒಂದು ಕಡೆ ಇದ್ದರೆ ಬೇಕಿಲ್ಲದವರು ಬಂದು ಕೂಗಿ ನಿದ್ರಾಭಂಗ ಮಾಡುವ ಅನಿಷ್ಟ ಅನುಭವವೂ ಆಗ ಇರುವುದಿಲ್ಲ. ರಾತ್ರಿಯ ನಿದ್ದೆ ಹಗಲು ನಿದ್ದೆಗಿಂತಲೂ ಆಳವಾದುದು, ಹೆಚ್ಚು ಪರಿಣಾಮಕಾರಿಯಾದುದು. ಹಗಲುನಿದ್ದೆ ಎಷ್ಟೇ ತೀವ್ರವಾದುದಾದರೂ ಅದು ನಿದ್ದೆಯ ಗಡಿಪ್ರದೇಶಕ್ಕೆ ಸೇರಿರುತ್ತದೆಯೇ ಹೊರತು ಅಂತರ್ಯಕ್ಕಲ್ಲ. ಕಿಂಚಿತು ಸದ್ದಾದರೆ, ನೆಪ ಸಿಕ್ಕಿದರೆ ಎಚ್ಚರಿಕೆಯಾಗಿಬಿಡುವುದಾದರೆ ಅದೆಂತಹ ನಿದ್ದೆ, ಅದಿನ್ನೆಷ್ಟರ ಮಟ್ಟಿನ ವಿಶ್ರಾಂತಿ ಲಭಿಸೀತು? ನಾವು ನಿಜವಾಗಿಯೂ ನಿದ್ದೆ ಮಾಡಲೆಳಸಿದರೆ ಅದಕ್ಕೆ ರಾತ್ರಿಯ ಮೊದಲ ಭಾಗಕ್ಕಿಂತಲೂ

ಉತ್ತಮವಾದ ಸಮಯ ಬೇರೊಂದಿಲ್ಲ. "ರಾತ್ರಿ ಹನ್ನೆರಡಕ್ಕೆ ಮುನ್ನ ಮಲಗುವವನು ಕದೀಮನಿರಬೇಕು" ಎಂದು ಜಾನ್ಸನ್ ಹೇಳಿದ್ದಾನೆ ನಿಜ. ಆದರೇನು? ಮಧ್ಯರಾತ್ರಿಗೆ ಮೊದಲು ಮಾಡುವ ನಿದ್ದೆಯೇ ಸರಿಯಾದ ನಿದ್ದೆ. ಅನಂತರ ಬರುವ ನಿದ್ದೆ ಆಳವಾದುದಲ್ಲ, ಆಯಾಸಪರಿಹಾರಕವೂ ಅಲ್ಲ.

ಅದೂ ಅಲ್ಲದೆ, ರಾತ್ರಿ ಹೊತ್ತಾಗಿ ಮಲಗಿದರೆ ಬೆಳಗ್ಗೆ ಅದಕ್ಕೆ ತಕ್ಕ ಹಾಗೆ ಹೊತ್ತಾಗಿ ಏಳಬೇಕಾಗುತ್ತದೆ. ಹೀಗೆ ಹೊತ್ತಾಗಿ ಹಾಸಿಗೆಯಿಂದೇಳುವುದು ದೇಹಾರೋಗ್ಯದ ದೃಷ್ಟಿಯಿಂದಾಗಲಿ ಮನಸ್ಸಿನ ಲವಲವಿಕೆಯ ದೃಷ್ಟಿಯಿಂದಾಗಲಿ ಕಾರ್ಯ ಚಟುವಟಿಕೆಯ ದೃಷ್ಟಿಯಿಂದಾಗಲಿ ಒಳ್ಳೆಯದಲ್ಲ, ಸೋಂಬೇರಿತನಕ್ಕೆ ಅದು ಸಹಕಾರಿ. ಅದರಿಂದ ಅತಿಯಾಗಿ ಮೈಬೆಳೆಯುತ್ತದೆ ಎಂದೂ ಕೆಲವರು ಹೇಳುತ್ತಾರೆ. ಮೇಲಾಗಿ, ಬೆಳಗಾದ ಅನಂತರವೂ ಮಲಗಿದ್ದರೆ ಆ ದಿನದ ಕೆಲಸದ ಪರಿಮಾಣ ಅಷ್ಟಕ್ಕಷ್ಟು ಕಡಿಮೆಯಾಗಿ ನಾವು ಮಾಡಬೇಕಾದ ಕೆಲಸವೆಲ್ಲವನ್ನೂ ಪೂರೈಸಲಿಚ್ಛಿಸುವುದಾದರೆ ಎರಡನೆಯ ರಾತ್ರಿ ಅಷ್ಟುಹೊತ್ತು ನಿಧಾನವಾಗಿ ಮಲಗಬೇಕಾಗುತ್ತದೆ. ಇಲ್ಲದಿದ್ದರೆ ಅವಸರವಸರವಾಗಿ ಕೆಲಸವನ್ನು ನೂಕಬೇಕಾದ ಅಗತ್ಯವೊದಗುತ್ತದೆ. ಹಾಗೆ ಅವಸರದಲ್ಲಿ ಮಾಡಿದ ಕೆಲಸ ಎಷ್ಟರಮಟ್ಟಿಗೆ ಯಶಸ್ವಿಯಾದೀತೆಂದು ಹೇಳಲೇಬೇಕಾಗಿಲ್ಲ. ಕಾಲ ಮಿಂಚಿ ಹೋದೀತು—ಹೋಯಿತು—ಎಂಬ ಗಾಬರಿಯಿಂದ ಕೆಲಸವೆಲ್ಲಾ ಹಾಳಾಗುತ್ತದೆ, ಅಸಮರ್ಪಕವಾಗುತ್ತದೆ.

ಆದರೆ ಈ ಆಧುನಿಕ ಯುಗದಲ್ಲಿ ಕಾರ್ಖಾನೆಗಳಲ್ಲಿ ಸರದಿಯ ಪದ್ಧತಿಯ ಪ್ರಕಾರ ಕೆಲಸ ಮಾಡಲು ಹೋಗುವವರುಂಟು. ಅಂಥವರು ಉದ್ಯೋಗದ ನಿಮಿತ್ತ ರಾತ್ರಿ ಹೊತ್ತಾಗಿ ಮನೆಗೆಬಂದು ಹೊತ್ತಾಗಿ ಮಲಗಿ ಮಾರನೆಯ ದಿನ ಬೆಳಗ್ಗೆ ಹೊತ್ತಾಗಿಯೇ ಏಳಬೇಕಾಗುತ್ತದೆ. ಇಂಥವರನ್ನು ನಾವು ಕ್ಷಮಿಸಲೇಬೇಕು. ಆದರೂ ಒಟ್ಟಿನಮೇಲೆ ಬೇಗ ಮಲಗಿ ಬೇಗ ಏಳುವ ಪದ್ಧತಿ ಎಲ್ಲರಿಗೂ ಅಗತ್ಯ ಎಂಬ ಸತ್ಯವನ್ನು ಈ ಅಪವಾದಗಳು ಅಲ್ಲಗಳೆಯಲಾರವು.

ಬೆಳಗ್ಗೆ ಹೊತ್ತಾಗಿ ಏಳುವುದೇ ಅಸಹಜವೂ ಅನುಚಿತವೂ ಆಗಿರುವಾಗ ಹಗಲು ಹೊತ್ತಿನಲ್ಲೇ ಮಲಗುವುದಕ್ಕೆ ಏನೆನ್ನೋಣ? ಕೆಲವರಂತೂ ಮಧ್ಯಾಹ್ನ ಊಟವಾದ ತರುವಾಯ "ಒಂದು ನಿದ್ದೆ ತೆಗೆ"ಯದಿದ್ದರೆ ಹುಚ್ಚರಂತೆಯೇ ಆಡಿಬಿಡುತ್ತಾರೆ. ತಾಸು ಅರೆತಾಸಿನ ಪರಿಮಿತಿಗೆ ಒಳಪಟ್ಟಿದ್ದರೆ ಇದು ಕ್ಷಮ್ಯವಾದ ದೌರ್ಬಲ್ಯವೆಂದು ಒಪ್ಪಿಕೊಳ್ಳುತ್ತೇನೆ. (ನಾನೇ ಅದಕ್ಕೆ ದಾಸನಾಗಿರುವುದೇ ಈ ಔದಾರ್ಯಕ್ಕೆ ಕಾರಣ ಎಂದು ಹೇಳಬೇಕೇನು?) ಉದ್ಯೋಗದ ಆವಶ್ಯಕತೆಗಳ ಪರಿಣಾಮವಾಗಿ ಈ ಮಧ್ಯಾಹ್ನದ ನಿದ್ದೆ ಅನೇಕರಿಗೆ ಅಸಾಧ್ಯವಾಗಿಬಿಟ್ಟಿರುತ್ತದೆ. ಅದಕ್ಕೇ ಅಲ್ಲವೆ ಅವರು ಭಾನುವಾರಕ್ಕಾಗಿ ಹಾತೊರೆಯುವುದು? ಅಧಿಕಾರಿಗಳಾದರೆ ತಮ್ಮ ಕೋಣೆಗಳಲ್ಲೇ ಬಾಗಿಲು ಬಡಿದು ಕೊಂಡು ಗೊರಕೆ ಹೊಡೆಯಬಹುದು. ಕಾರಕೂನರು? ಈ ಭಾಗ್ಯ ಲಭಿಸಬೇಕಾದರೆ ಅವರು ಭಾನುವಾರ ಬರುವುದನ್ನು ಕಾದಿರಬೇಕು. ಭಾನುವಾರವೆಂದರೆ ಇಂಥ ಎಷ್ಟೋ

ಜನಕ್ಕೆ "ಹಾಯಾಗಿ ಉಂಡು ಮಲಗುವ" ದಿನ. ಕೆಲಸದ ದಿವಸಗಳಲ್ಲಿ ಕಣ್ಣಿಗೆ ನೀರು ಹಚ್ಚಿಕೊಂಡು ನೆಟ್ಟಗೆ ಕುಳಿತಿರಬೇಕು; ಇಲ್ಲದಿದ್ದರೆ ಇದ್ದಕಡೆಯೇ-ಕೆಲಸದ ನಡುವೆಯೇ-ನಿದ್ದೆ ಹೋಗಬೇಕು.

ಕೆಲಸದ ನಡುವೆಯೇ ತೂಕಡಿಸುವುದು ಅಷ್ಟೇನೂ ಉಚಿತವೂ ಅಲ್ಲ, ಗೌರವ ಕರವೂ ಅಲ್ಲ. ಅದು ನಾವು ಜೊತೆಯಲ್ಲಿರುವವರ ದೃಷ್ಟಿಯಲ್ಲಿ ಹಾಸ್ಯಾಸ್ಪದರಾಗುವಂತೆ ಮಾಡುತ್ತದೆ. ಅದು ಹೋಗಲಿ ಎಂದರೆ ಕೆಲಸವೂ ಕೆಡುತ್ತದೆ, ಯಾವ ಯಾವ ಹಾದಿಯನ್ನೋ ಹಿಡಿಯುತ್ತದೆ. ಉದಾಹರಣೆಗೆ, ಉಪಾಧ್ಯಾಯನೊಬ್ಬನಿಗೆ ಪಾಠ-ಪ್ರವಚನದ ಮಧ್ಯೆ ನಿದ್ರೆಯೇರುತ್ತದೆ ಎನ್ನಿ (ಹಾಗೆ ನಿದ್ರೆ ಹೋಗುವುದು ವಿದ್ಯಾರ್ಥಿಗಳ ಹಕ್ಕು!) ಅವನ ಬೋಧನಾಕ್ರಮ ದಾರಿತಪ್ಪುವುದಿರಲಿ, ಬೋಧನಾವಿಷಯವೇ ಬೇರೆಯಾಗಿಬಿಡಬಹುದು. ಕಛೇರಿಗಳಲ್ಲಿ ಲೆಕ್ಕ ಬರೆಯುವವರು, ಕಾರ್ಖಾನೆಗಳಲ್ಲಿ ಯಂತ್ರ ಚಾಲಕರಾಗಿರುವವರು, ನ್ಯಾಯಾಲಯಗಳಲ್ಲಿ ವಕೀಲಿ ನಡೆಸುವವರು, ಮೊದಲಾದವರ ಕ್ಷೇತ್ರಗಳಲ್ಲಂತೂ ನಿದ್ರೆಯ ಜೋಂಪಿನಿಂದ ಆಗುವ-ಆಗಬಹುದಾದ-ಅನಾಹುತ ಅಷ್ಟಿಷ್ಟಲ್ಲ. ಇತರರೊಡನೆ ಇರುವಾಗಲಂತೂ ಈ ದೌರ್ಬಲ್ಯದ ದುಷ್ಫಲಗಳು ತೀರಾ ವಿಚಿತ್ರವಾದಾವು. ಚರ್ಚಾಕೂಟವೊಂದರಲ್ಲಿ ಭಾಗವಹಿಸುತ್ತಿರುವವರು ನಿದ್ರಾಸಕ್ತರಾದರೆ ಅವರು ಮೊದಲು ಯಾವುದನ್ನು ವಿರೋಧಿಸುತ್ತಿದ್ದರೋ ಅದನ್ನೇ ಒಪ್ಪಿಕೊಳ್ಳುವುದು, ಪಕ್ಕದಲ್ಲಿ ಕುಳಿತಿರುವವರು ಯಾರು (ಸುಂದರ ಮಹಿಳೆ, ಮೇಲಧಿಕಾರಿ, ಇತ್ಯಾದಿ) ಎಂಬುದರ ಅರಿವೇ ಹೋಗಿ ತೂಕಡಿಕೆಯಿಂದ ತಲೆದೂಗಲಾರಂಭಿಸುವುದು, ಹೀಗೆಲ್ಲಾ ಆಭಾಸವಾಗಬಹುದು. ನಾಯಿಯೊಂದು ಬೊಗಳಿದಾಗ "ಭೇಷ್" ಎನ್ನುವುದೋ "ಇದೆಂಥ ಹುಚ್ಚು!" ಎಂದು ಯಾರಾದರೂ ತಮ್ಮ ವಾದದಲ್ಲಿ ಹೇಳುತ್ತಿದ್ದರೆ "ಹೌದು, ಹೌದು, ನೀವು ಹೇಳುವುದು ನಿಜ!" ಎನ್ನುವುದೋ ಆದರೆ ಹಗಲು ನಿದ್ರೆಯ ಅಭ್ಯಾಸ ಎಷ್ಟು ಅಪಾಯಕಾರಿಯೆಂದು ಅರ್ಥವಾಗುತ್ತದೆ.

ಆದರೆ ಹಗಲುನಿದ್ರೆಯೂ ಹಿತಕಾರಿಯಾಗಬಹುದಾದ ಕೆಲವರಿದ್ದಾರೆ: ಬೆಳಗಿನಿಂದ ಒಂದೇಸಮನೆ ದುಡಿದು ದುಡಿದು "ಸತ್ತು ಸುಣ್ಣವಾಗಿ"ರುವ ಶ್ರಮಜೀವಿಗಳು, ಇಳಿವಯಸ್ಸಿನ ವೃದ್ಧರು, ಕಿರುಗೂಸುಗಳು (ಸ್ವಲ್ಪ ವಯಸ್ಸಾಯಿತೆಂದರೆ ಅವರು ನಿದ್ರೆಮಾಡಲು ಸುತರಾಂ ಒಪ್ಪುವುದಿಲ್ಲ), ಎಲ್ಲಕ್ಕಿಂತಲೂ ಮಿಗಿಲಾಗಿ ಚಿಂತೆಯ ಹಿಡಿತಕ್ಕೆ ಸಿಕ್ಕು ಸೊರಗಿರುವವರು. ಚಿಂತೆಯಿಂದ ಮನಸ್ಸು ತಳಮಳಿಸುತ್ತಿದ್ದರೆ ನಿದ್ರೆ ಹತ್ತುವುದು ಕಷ್ಟವೆಂಬುದು ನಿಜವಾದರೂ ಅಂಥವರಿಗೆ ಅದರಿಂದ ಉಂಟಾಗುವ ಸುಖ ಬೇರೆಯವರಿಗೆ ಆಗಲಾರದು. ಅಷ್ಟೇಕೆ, ಯಾವ ಚಿಂತೆಯ ಭಾರ ನಿದ್ರೆಗೆ ಶತ್ರುವೋ ಅದೇ ಚಿಂತೆಯೇ ನಿದ್ರೆಗೆ ಪ್ರೇರಕವೂ ಆಗಬಹುದು. ಚಿಂತೆ ಸದಾ ನಿದ್ರಾಘಾತಕವೆನ್ನುವುದು ತಪ್ಪಾದೀತು. ಅದು ಅವರವರ ಸ್ವಭಾವವನ್ನು ಅನುಸರಿಸಿರುತ್ತದೆ. ಈ ಸಂಕಟಪರಿಹಾರಕವಾದ ಔಷಧಪ್ರಯೋಗವನ್ನು ಪ್ರಕೃತಿಯೇ ನಿಯೋಜಿಸಿದೆ ಎಂದು ಬೇಕಾದರೂ ಹೇಳಬಹುದು. ದೇಹಕ್ಕೆ ವಿಪರೀತ ಆಯಾಸವಾದಾಗ

ಮೂರ್ಛೆ ಬರುವಂತೆಯೇ ತಡೆಯಲಾಗದಂತಹ ಚಿಂತೆ ಮನಸ್ಸನ್ನು ಕವಿವಾಗ ನಿದ್ದೆ ಬರುತ್ತದೆ. ಹಾಗಲ್ಲದ ಪಕ್ಷಕ್ಕೆ ಅತಿಕಷ್ಟದ ಅಥವಾ ಅತ್ಯಂತ ಅಪಾಯಕರವಾದ ಕಾರ್ಯಭಾರವನ್ನು ಕೈಗೊಳ್ಳುವ ಪೊಡಲು ಅನೇಕರು ನಿಶ್ಚಿಂತರಂತೆ ನಿದ್ರಾಮಗ್ನರಾಗಿ ರುವುದರ ರಹಸ್ಯವಿನ್ನೇನಿದ್ದೀತು?

ಹಗಲಾಗಲಿ ರಾತ್ರಿಯಾಗಲಿ ನಿದ್ದೆ ಯಾವಾಗಲೂ ಆಪ್ಯಾಯಮಾನವಾದುದೆ. ಅದರ ಆಗಮನ ಸದಾ ಸುಖಕಾರಿ. ಬೇರೆ ಸುಖಗಳು ಎಷ್ಟೋಸಾರಿ ಕೇವಲ ಅನಿರೀಕ್ಷಿತ ವಾಗಿ ಆನುಷಂಗಿಕವಾಗಿ ಬರುತ್ತವೆ; ನಾವು ಅವನ್ನು ಅನುಭವಿಸಲು ಸಿದ್ಧರಾಗಿಲ್ಲದಿದ್ದಾಗ, ಅವು ಬರುತ್ತವೆ ಎಂಬ ಭರವಸೆ ಇಲ್ಲದಿರುವಾಗ ಇದ್ದಕ್ಕಿದ್ದಂತೆಯೇ ಬಂದು ನಮಗೆ ದಿಗ್ಭ್ರಮೆಯನ್ನುಂಟುಮಾಡಿ ನಾವು ಹೃನ್ಮನಗಳನ್ನು ಅವುಗಳ ಆಸ್ವಾದನೆಗೆ ಸರಿಹೊಂದಿಸುವಷ್ಟರಲ್ಲಿ ಇಲ್ಲವಾಗಿ ಬಿಡುತ್ತವೆ. ನಿದ್ದೆಯ ವಿಚಾರ ಹೀಗಲ್ಲ. ಅದು ಬರುತ್ತಿರುವುದರ ಅರಿವು ನಮಗುಂಟಾಗುತ್ತದೆ—ಪ್ರಣಯಿಯೊಬ್ಬ ತನ್ನ ಪ್ರೇಯಸಿಯ ಬರವಿಗಾಗಿ ಕಾತರಿಸಿ ಬಾಗಿಲ ಕಡೆಗೆ ಬಯಕೆಗಣ್ಣುಗಳನ್ನು ತಿರುಗಿಸಿ ತಿರುಗಿಸಿ ಶಯ್ಯಾಗೃಹ ದಲ್ಲಿ ಕಾದು ಕುಳಿತಿರುವಾಗ ಆಕೆ ತನ್ನ ಕನಕಕಿಂಕಿಣಿಯ ಝುಣಝುಣತ್ಕೃತಿಯ ಮಂಜುಳರವದೊಡನೆ ಮೆಲ್ಲಮೆಲ್ಲನೆ ಮುಂಬರಿದು ಬಂದು ಕೋಣೆಗೆ ಕಾಲಿಟ್ಟು ಅವನನ್ನು ಸಮೀಪಿಸಿ ತನ್ನ ತೋಳ್ತೆಕ್ಕೆಯಲ್ಲಿ ಬಂಧಿಸಿ ಮೈಮರೆಸುವಂತೆ. "Kiss him into slumber like a bride" ("ವಧುವಿನಂತೆ ಬಂದು ಅವನನ್ನು ಚುಂಬಿಸಿ ನಿದ್ದೆ ಹೋಗಿಸು") ಎಂದು ಫ್ಲೆಚರ್ ಕವಿ ನಿದ್ದೆಗೀಯುವ ಆಹ್ವಾನ ಎಷ್ಟು ಹೃದಯಂಗಮ ವಾಗಿದೆ! ಹಾಸಿಗೆಯಲ್ಲಿ ಮಲಗಿ ಹೊದಿಕೆಯನ್ನು ಮೈಮೇಲೆ ಎಳೆದುಕೊಂಡಾಗ ಅದರ ಜೊತೆಯಲ್ಲೇ ನಿದ್ದೆಯೂ ಬಂದು ನಮ್ಮನ್ನು ತನ್ನ ಆಲಿಂಗನದ ಅವಕುಂಠನದಲ್ಲಿ ಸೇರಿಸಿಕೊಂಡು ಆನಂದದಾಯಕವಾಗುತ್ತದೆ. ಸುಖಾನುಭವ ಇನ್ನೂ ಬರಲಿದೆ, ಕಳೆದು ಹೋಗಿಲ್ಲ ಎಂಬ ನಿರೀಕ್ಷೆಯೊಂದೇ ಸಾಕು ನಿದ್ದೆಯ ಆಗಮನವನ್ನು ಮಧುರಾನುಭವದ ಆಕರವನ್ನಾಗಿ ಮಾಡಲು. ದಿನದ ಕೆಲಸಗಳನ್ನೆಲ್ಲಾ ಮುಗಿಸಿ ತನುಮನಗಳೆರಡನ್ನೂ ವಿಶ್ರಾಂತಿಗೆ ಸಿದ್ಧಪಡಿಸಿ ಒರಗಿರುತ್ತೇವೆ. ನಿರಂತರ ಶ್ರಮಜೀವನದ ಪರಿಣಾಮವಾಗಿ ಅಂಗಾಂಗಗಳೆಲ್ಲಾ ವಿರಾಮಕ್ಕೆಳಸುತ್ತಿರುವುದರಿಂದ ಸೋಮಾರಿತನದ ಆರೋಪಣೆಗೆ ಗುರಿಯಾಗದೆ ಒಂದೇ ಭಂಗಿಯಲ್ಲಿ ಬಿದ್ದಿರುವ ಹಕ್ಕನ್ನು ದೇಹ ಸಂಪಾದಿಸಿಕೊಂಡಿರು ತ್ತದೆ; ಜಗತ್ತಿನ ಕಣ್ಣುಗಳಿಗೆ—ಟೀಕೆಗಳಿಗೆ—ದೂರವಾಗಿ ಸೆಜ್ಜೆಯ ಏಕಾಂತದ ಮೌನವನ್ನೂ ನಿಶ್ಚಿಂತತೆಯನ್ನೂ ಸವಿಯುತ್ತ ಸುಖಿಸುತ್ತಿರುತ್ತದೆ. ಆಗ ನಮ್ಮ ಮೇಲಿನ ಬಾಹ್ಯ ಪ್ರಜ್ಞೆಯ ಒಡಿತ ಸ್ವಲ್ಪಸ್ವಲ್ಪವಾಗಿ ಸಡಿಲಗೊಂಡು ರೆಪ್ಪೆ ಕಣ್ಣನ್ನು ಮುಚ್ಚು ವಂತೆಯೇ ನಿದ್ದೆ ಮನಸ್ಸನ್ನು ಮುಚ್ಚುತ್ತದೆ; ರಕ್ಷಣಾಧಿದೇವತೆಯಂತೆ ನಮ್ಮನ್ನು ತನ್ನ ಪ್ರಭಾವದ ವಲಯಕ್ಕೆ ಸೇರಿಸಿಕೊಳ್ಳುತ್ತದೆ.

"O soft embalmer of the still midnight!
Shutting, with careful fingers and benign,

Our gloom-pleas'd eyes, embower'd from the light,
Enshaded in forgetfulness divine
O soothest sleep! if so it please thee, close,
In the midst of this thine hymn, my willing eyes"

(ನಡುರಾತ್ರಿಯ ಪ್ರಶಾಂತತೆಯನ್ನು ಮೃದುಮಧುರವಾದ ರೀತಿಯಲ್ಲಿ ಸುವಾಸಿತಗೈವ ಶಕ್ತಿ ನೀನು, ಕತ್ತಲನ್ನು ಅಪೇಕ್ಷಿಸುವ ನಮ್ಮ ನಯನದ್ವಯಗಳನ್ನು ಕರುಣಾಮಯಿಗಳಾದ ನಿನ್ನ ಕೈಬೆರಳುಗಳಿಂದ ಜೋಪಾನವಾಗಿ ಮೆಲ್ಲನೆ ಮುಚ್ಚಿ ಬೆಳಕಿನಿಂದ ಮರೆಮಾಡಿ ವಿಸ್ಮೃತಿಯ ದಿವ್ಯ ಆಚ್ಛಾದನವನ್ನು ಹೊದಿಸುವೆ. ಹೇ ದೇವಿ, ಒಲಿದು ಬಾ, ನಾನು ಈ ಸ್ತೋತ್ರವನ್ನು ಹಾಡಿ ಮುಗಿಸುವ ಮುನ್ನವೇ ನನ್ನ ಕಣ್ಣಳನ್ನು ಮುಚ್ಚಿ ನಿದ್ದೆ ಹೋಗಿಸು)

ಎಂಬ ಕೀಟ್ಸ್ ಕವಿಯ ಪಂಕ್ತಿಗಳು ಈ ಸಂದರ್ಭಕ್ಕೆ ಎಷ್ಟು ಚೆನ್ನಾಗಿ ಅನ್ವಯಿಸುತ್ತವೆ!

ಮಿಕ್ಕೆಲ್ಲ ಕಾರ್ಯಗಳಿಗೆ ಬೇಕಾಗಿರುವಂತೆಯೇ ನಿದ್ದೆಗೂ ಒಂದು ಪೋಷಕವೂ ಪ್ರೋತ್ಸಾಹಕರವೂ ಆದ ಸನ್ನಿವೇಶ ಅಗತ್ಯ. ಅಂಥ ಸನ್ನಿವೇಶ-ಸಮಯಾನುಕೂಲತೆ-ನಮಗೆ ದೊರೆಯುವುದು ಅದೇಕೆ ಹಗಲಿಗಿಂತಲೂ ರಾತ್ರಿಯೇ ಹೆಚ್ಚೆಂದು ಹಿಂದೆಯೇ ಹೇಳಿದೆ. ಇದಲ್ಲದೆ, ಹೊರಗೆ ಚಳಿ ಗಾಳಿ ಬೀಸಿ, ಭೋರನೆ ಮಳೆ ಬೀಳುತ್ತಿರುವಾಗ ಒಳಗಡೆ ಬೆಚ್ಚಗೆ ಹೊದ್ದುಕೊಂಡು ಮೊದಲು ಅರ್ಧ ಪ್ರಜ್ಞಾವಸ್ಥೆಯಲ್ಲಿ ಬರಬರುತ್ತಾ ಪೂರ್ಣನಿದ್ರಾವಸ್ಥೆಯಲ್ಲಿ ಮಲಗಿರುವುದಕ್ಕಿಂತಲೂ ಮಿಗಿಲಾದ ಸೌಖ್ಯ ಇಹಲೋಕದಲ್ಲಿ ಇನ್ನೊಂದಿದೆಯೇನು? ವಾತಾವರಣ ಹೀಗಿದ್ದರೂ ಯಾವ ಕಾರಣಕ್ಕಾದರೂ ನಿದ್ದೆ ಬಾರದೆ ಹೊರಳಾಡುತ್ತ ಕಡು ಕಷ್ಟದಿಂದ ಇರುಳನ್ನು ನೂಕಬೇಕಾದವರ ಪರಿಸ್ಥಿತಿ ನಿಜಕ್ಕೂ ಶೋಚನೀಯವೇ ಸರಿ. ಷೇಕ್ಸ್‌ಪಿಯರನ ನಾಲ್ಕನೆ ಹೆನ್ರಿಯ ಈ ಗೋಳಾಟ ಎಷ್ಟು ಕರುಣಾಜನಕವಾಗಿದೆ:

"How many thousand of my poorest subjects
Are at this hour asleep! O sleep! O gentle sleep!
Nature's soft nurse, how have I frighted thee
That thou no more wilt weigh my eyelids down
And steep my senses in forgetfulness?

* * * * *

Canst thou, O partial sleep! give thy repose
To the wet sea-boy in an hour so rude,
And in the calmest and most stillest night,

With all appliances and means to boot,
Deny it to a king? Then happy low, lie down
Uneasy lies the head that wears a crown"

(ನನ್ನ ಬಡಪ್ರಜೆಗಳು ಎನಿತು ಸಹಸ್ರ ಮಂದಿ ನಿದ್ದೆ ಹೋಗುತ್ತಿರುವರೀಗ! ಓ ನಿದ್ರೆಯೆ, ಕೃಪಾಮಯಿ, ಪ್ರಕೃತಿಯ ಮೃದುತಮ ಧಾತ್ರಿ ನೀನು. ನನ್ನ ಕಣ್ಣುಗಳ ರೆಪ್ಪೆಗಳನ್ನು ಮುಚ್ಚಲಾಗದಷ್ಟು ನನ್ನ ಕರಣಗಳನ್ನು ವಿಸ್ಮೃತಿಯಲ್ಲಿ ಮುಳುಗಿಸಲಾಗದಷ್ಟು ನಾನು ನಿನ್ನನ್ನು ಹೆದರಿಸಿರುವೆನೇನು? ನಿದ್ರೆಯೆ, ಎಂಥ ಪಕ್ಷಪಾತಿ ನೀನು! ಚಂಡಮಾರುತದ ಹೊಡೆತಕ್ಕೆ ಸಿಕ್ಕು ತೊಪ್ಪೆತೊಯ್ದಿರುವ ಕಡಲಹುಡುಗನಿಗೆ ಅತ್ಯಂತ ಪ್ರಕ್ಷುಬ್ಧವಾದ ಗಳಿಗೆಯಲ್ಲಿ ಕೂಡ ನಿದ್ರೆಬರಿಸುತ್ತೀಯ; ಶಾಂತವಾದ ನಿಶ್ಶಬ್ದವಾದ ರಾತ್ರಿ ಸಕಲ ಸುಖಸಾಧನಗಳಿಂದ ಆವೃತನಾಗಿರುವ ರಾಜನಿಗೆ ಅದಿಲ್ಲದಂತೆ ಮಾಡುವೆ! ಇದೇ ನಿಯಮವಾದ ಪಕ್ಷಕ್ಕೆ ದೀನದಲಿತರೆ, ನೀವೇ ಸುಖಿಗಳು, ಮಲಗಿ ನಿದ್ರೆ ಹೋಗಿ. ಕಿರೀಟಧಾರಿಯಾದ ಮನಸ್ಸಿಗೆ ನೆಮ್ಮದಿಯೆಂಬುದಿಲ್ಲ).

ರಾಜನೊಬ್ಬನ ಈ ದುಃಖಮಯವಾದ ಆಲಾಪವನ್ನು ಪರಿಶೀಲಿಸಿದರೆ, ಕೂಪರ್ ವರ್ಣಿಸಿರುವ "sound sleep undisturbed by fear" (ಭೀತಿಯಿಂದ ಪ್ರಕ್ಷುಬ್ಧಗೊಳ್ಳದ ಗಾಢ ನಿದ್ರೆ), ಅಲೆಗ್ಝಾಂಡರ್ ಪೋಪ್‌ನ "sound sleep by night" (ರಾತ್ರಿ ಚೆನ್ನಾಗಿ ನಿದ್ರೆಮಾಡುವುದು) ಇವೆಲ್ಲಾ ಬಡವರಿಗೆ ಮಾತ್ರ ಮೀಸಲೆಂಬಂತೆ ತೋರುತ್ತದೆ.

ನಿಜ, ನಿದ್ರೆಗೆ ಹಿರಿಮೆಗರಿಮೆಗಳ, ಐಶ್ವರ್ಯ ಅಧಿಕಾರಸ್ಥಾನಗಳ ಹಂಗಿಲ್ಲ. ಪ್ರಣಯಸುಖದಂತೆಯೇ ನಿದ್ರೆಯ ಸುಖವೂ ಬರುವುದು ಅರ್ಹತೆಯಿರುವವರಿಗೆ ಮಾತ್ರ. ಮಣಿಕಟ್ಟು ಮೇಲ್ಹಾಸುಗಳಿಂದ ಅಲಂಕೃತವಾಗಿ ಸುಸಜ್ಜಿತವಾದ ಶಯ್ಯಾಗೃಹಗಳಲ್ಲಿ ತೂಗುಮಂಚಗಳಲ್ಲಿ ಶೋಭಿಸುವ ಹಂಸತೂಲಿಕಾತಲ್ಪಗಳಲ್ಲಿ ಗಂಧಪುಷ್ಪಸಂಗೀತಾದಿ ಭೋಗಸಾಧನಗಳಿಂದ ಆವೃತರಾಗಿ ಕ್ಷೀರಪಾನ ತಾಂಬೂಲಚರ್ವಣಗಳಿಂದ ಪೋಷಿತರಾಗಿ ಹೊರಗಿ ಒರಗುವವರಿಗೆ ಬಾರದ ನಿದ್ರೆ ಬೀದಿಯ ಕೆಲದಲ್ಲಿ ಮರಗಳ ಬುಡದಲ್ಲಿ ಸಾರ್ವಜನಿಕ ಕಟ್ಟಡಗಳ ಕೈಸಾಲೆಗಳಲ್ಲಿ ಕಲ್ಲುಮಣ್ಣುಗಳ ಮೇಲೆ ಕಸಕಶ್ಮಲಗಳ ನಡುವೆ ಅರಿವೆಗಿರಿವೆಗಳ ಹೊದಿಕೆಗಿದಿಕೆಗಳ ಹೆಸರೇ ಇಲ್ಲದೆ ಬಿದ್ದಿರುವ ನಿರ್ಗತಿಕರಿಗೆ ಬರಬಹುದು. "To him that hath shall be given" (ಇದ್ದವನಿಗೇ ಇನ್ನಷ್ಟು) ಎಂಬ ಬೈಬಲಿನ ವಾಕ್ಯ ನಿದ್ರೆಗೆ ಅನ್ವಯಿಸುವುದಿಲ್ಲ. ನಿದ್ರಾದೇವಿ ಲಕ್ಷ್ಮಿಯಂತಲ್ಲ; ಆಕೆ ನಿಷ್ಪಕ್ಷಪಾತಿ.

ನಿದ್ರೆಯ ಪಕ್ಷಪಾತರಾಹಿತ್ಯಕ್ಕೆ, ಸರ್ವಸಮಾನದೃಷ್ಟಿಗೆ, ಒಂದು ಪ್ರಬಲ ನಿದರ್ಶನ ಬೇಕಾದರೆ ನಿದ್ರೆಹೋಗುತ್ತಿರುವವರನ್ನು ನೋಡಬೇಕು. ಎಚ್ಚತ್ತಿರುವಾಗ ಅವರ ಲೌಕಿಕಸ್ಥಾನಮಾನಗಳೇನೇ ಇರಲಿ, ನಿದ್ರಾಮಗ್ನರಾಗಿರುವವರು ಪ್ರದರ್ಶಿಸುವ ಅಂಗಭಂಗಿಗಳು ಅನೇಕ ವೇಳೆ ಪ್ರೇಕ್ಷಕರಲ್ಲಿ ತಡೆಯಲಾಗದಷ್ಟು ನಗೆಯನ್ನು ಉಕ್ಕಿಸುವಂತಿರು

ತ್ತವೆ. ಕೈಕಾಲುಗಳನ್ನು ದಿಕ್ಕಿಗೊಂದರಂತೆ ಬೀಸಿ ಬಿದ್ದಿರುವವರು, ಅರೆತೆರೆದ ಕಣ್ಣುಗಳು, ಪೂರ್ತಿಯಾಗಿ ತೆರೆದುಕೊಂಡು ಜೊಲ್ಲಿನ ಹೊನಲುಗಳನ್ನು ಹರಿಯಬಿಡುತ್ತಿರುವ ಬಾಯಿ, ಭೇಕನಾದವನ್ನು ಮೀರಿಸುವ ಗೊರಕೆ, ಅಸ್ತವ್ಯಸ್ಥವಾಗಿರುವ ತಲೆಗೂದಲು ಮತ್ತು ಒಡವೆವಸ್ತ್ರಗಳು—ಇವೆಲ್ಲವೂ ಹಗಲಿನಲ್ಲಿ ನಿರಂಕುಶಾಧಿಕಾರ ಪ್ರಯೋಗಗೈದು ಎಲ್ಲರಲ್ಲೂ ಭಯೋತ್ಪಾದನೆಯನ್ನುಂಟುಮಾಡುವ ಶ್ರೀಮಂತರನ್ನೂ ಅಧಿಕಾರಿಗಳನ್ನೂ ನಗೆಗೀಡಾಗಿ ಸುತ್ತವೆ! ಇದೇ ಜನ ಎಚ್ಚತ್ತಿರುವಾಗ ಅದೇನು ಠೀವಿ, ಅದೆಷ್ಟು ಗಾಂಭೀರ್ಯ, ಅದಿನ್ನೆಂತಹ ಪ್ರತಿಷ್ಠೆಗಳನ್ನು ಪ್ರದರ್ಶಿಸುತ್ತಾರೆ! ಅದೆಂತಹ ದರ್ಪದಿಂದ ಬಿಗುವಾನ ದಿಂದ ವರ್ತಿಸುತ್ತಾರೆ! ಅದೆಷ್ಟು ಮದದಿಂದ ಸಿಕ್ಕಿದವರ ಮೇಲೆಲ್ಲಾ ಆಜ್ಞೆಗಳ ಮಳೆಗರೆಯುತ್ತಿರುತ್ತಾರೆ! ನಿದ್ದೆಯ ಅಮಲು ಮಾದಕವಸ್ತುಗಳಿಗಿಂತಲೂ ವಿಸ್ಮೃತಿ ಕಾರಕವಾದುದು, ವಿಚಿತ್ರ ಫಲದಾಯಕವಾದುದು. ಷರ್ಲಿ ಕವಿ ಸಾವನ್ನು "ಸಮಾನಕರ್ತ" (leveller) ಎಂದು ಕರೆದಿದ್ದಾನೆ. ನಿದ್ದೆಯಿನ್ನೇನು? ಸಿಡ್ನಿ ಹೇಳುವಂತೆ ಅದು "the indifferent judge between high and low" (ಬಡವರನ್ನೂ ಬಲ್ಲಿದರನ್ನೂ ಒಂದೇ ಸಮನಾಗಿ ಕಾಣುವ ನ್ಯಾಯಮೂರ್ತಿ).

ನಿದ್ದೆಯನ್ನು ಸಾವಿಗೆ ಹೋಲಿಸಬಹುದಾದುದು ಇದೊಂದೇ ಕಾರಣದಿಂದಲೇ ಅಲ್ಲ. ಅದು ಸಾವಿನ ಅನುಭವವನ್ನೇ ಸ್ವಲ್ಪಮಟ್ಟಿಗೆ ನಮಗುಂಟುಮಾಡಿಕೊಡುತ್ತದೆ. ಡೇನಿಯಲ್ ಅದನ್ನು "ಸಾವಿನ ಸೋದರ" ಎಂದು ಕರೆದಿರುವುದರಲ್ಲಿ ಸತ್ಯಾಂಶವಿದೆ. ಸಾವಿಗೂ ನಿದ್ದೆಗೂ ಇರುವ ವ್ಯತ್ಯಾಸ ನಿದ್ದೆಹೋದಾಗ ಉಸಿರಾಡುತ್ತಿರುತ್ತೇವೆ, ಕೆಲ ತಾಸುಗಳ ಅನಂತರ ಮತ್ತೆ ಏಳುತ್ತೇವೆ ಎಂಬುದಿಷ್ಟೇ ತಾನೇ. ಎಷ್ಟೋ ಸಾರಿ ದೂರದಿಂದ ನೋಡಿದರೆ ನಿದ್ದೆಹೋಗುತ್ತಿರುವವರಿಗೂ ಸತ್ತು ಬಿದ್ದಿರುವವರಿಗೂ ಭೇದವೇ ಗೊತ್ತಾಗುವುದಿಲ್ಲ. "We thought her dying when she slept and sleeping when she died" (ಅವಳು ಸುಮ್ಮನೆ ಮಲಗಿ ನಿದ್ದೆಹೋಗುತ್ತಿದ್ದಾಗ ಸತ್ತುಹೋಗಿದ್ದಳೆಂದುಕೊಂಡೆವು; ಸತ್ತುಹೋಗಿದ್ದಾಗ ನಿದ್ದೆಹೋಗುತ್ತಿದ್ದಾಳೆ ಎಂದು ಭಾವಿಸಿದೆವು) ಎಂಬ ಥಾಮಸ್ ಹುಡ್ ಕವಿಯ ಮಾತು ಇಂಥ ಒಂದು ಚಿತ್ರವನ್ನು ನಮ್ಮ ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. ಮರಣಾನಂತರ ಬೇರೊಂದು ಲೋಕದಲ್ಲಿ ಅಮರ ಜೀವನವನ್ನು ಆರಂಭಿಸುವ ಸೂಚನೆಯನ್ನೂ ಅವನ ಈ ಕೆಳಗಿನ ಪಂಕ್ತಿಗಳು ಒಳಗೊಂಡಿವೆ:

"............When the morning came dim and sad
And chill with early showers,
Her quiet eyelids closed—she had
Another morning than ours"

(ಮಳೆಮೋಡಗಳಿಂದ ಮಬ್ಬುಕವಿದು ಶೋಕಮಯವಾಗಿ ಚಳಿಕೊರೆವ ಮುಂಜಾವು ಮೂಡಲು ಅವಳು ಕಣ್ಣುಮುಚ್ಚಿಕೊಂಡಳು. ನಮ್ಮದಲ್ಲದ ಬೇರೊಂದು ಉದಯ ಅವಳದಾಗಿತ್ತು.)

ಫೆಲೀಷಿಯಾ ಡಾರೊತಿ ಹೆಮೂನ್ಸ್ ಸತ್ತುಹೋಗಿರುವ ಮಗುವೊಂದನ್ನು ಕಂಡು

"Thou sleepest—when wilt thou wake, fair"
(ಮಲಗಿ ನಿದ್ರಿಸುತ್ತಿರುವೆ—ಮುದ್ದುಮರಿ ಯಾವಾಗ ಎಚ್ಚರಗೊಳ್ಳುವೆ?)

ಎಂದು ಪ್ರಶ್ನಿಸುತ್ತಾಳೆ. ವಿಲಿಯಂ ಕಾಲಿನ್ಸ್ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರರನ್ನು ಕುರಿತು ರಚಿಸಿರುವ ಕವನವೊಂದರಲ್ಲಿ

"How sleep the brave, who sink to rest,
By all their country's wishes blest!"

(ತಮ್ಮ ನಾಡಿನವರೆಲ್ಲರ ಸದಾಶಯಗಳನ್ನು ಪಡೆದು ಮೃತಿಯೊಳಗೆ ಮಲಗುವ
ವೀರರು ಹೇಗೆ ನೆಮ್ಮದಿಯ ನಿದ್ದೆಯನ್ನು ಅನುಭವಿಸುತ್ತಾರೆ!)

ಎನ್ನುತ್ತಾನೆ. "ಹ್ಯಾಮ್ಲೆಟ್" ನಾಟಕದಲ್ಲಿ ಕಥಾನಾಯಕ ವಿಖ್ಯಾತವಾದ ತನ್ನ ಆತ್ಮಗತ ಭಾಷಣವೊಂದರಲ್ಲಿ ಸಾವಿನ ವಿಚಾರವಾಗಿ ಜಿಜ್ಞಾಸೆ ನಡೆಸುತ್ತ

"To die, to sleep,
No more and by a sleep to say we end
The heart-ache and the thousand natural shocks
That flesh is heir to, 'tis a consummation
Devoutly to be wish'd. To die, to sleep:
To sleep, perchance to dream, ay there's the rub;
For in that sleep of death what dreams may come
When we have shuffled off this mortal coil,
Must give us pause"

("ಸಾಯುವುದು, ಸತ್ತು
ನಿದ್ರಿಸುವುದು ಅಷ್ಟೆ. ಇಂತು ನಿದ್ರಿಸಿ ನಾವು
ಮನುಜಜನ್ಮಕೆ, ಮನಃಕ್ಲೇಶ, ಸಾವಿರ ಸಹಜ
ಘಾತಗಳು, ಪಿತ್ರಾರ್ಜಿತದ ಆಸ್ತಿಯಂತಿಹವು
ಯಾವುವವು, ಅವನೆಲ್ಲ ಕೊನೆಗಾಣಿಸುವೆನೆನಲು,
ಅತ್ಯಂತ ಸ್ಪೃಹಣೀಯ ಸಿದ್ಧಿ ಇದು, ಸಾಯುವುದು,
ನಿದ್ರಿಸುವುದು, ನಿದ್ರಿಸುವುದು—ಸಂಭವ ಅಲ್ಲಿ
ಕನಸ ಕಾಂಬುದು. ಆಃ ಇದರ ತೊಡಕಲ್ಲಿಹುದು.
ಏಕೆ? ಸಾವಿನ ಕಂತೆ ಇದ ಒಗೆದು ನಡೆದಿರಲು,
ಮರಣ ನಿದ್ರೆಯಲಾವ ಕನಸು ಕಂಡಾವೊ ಇದು
ನಮ್ಮ ತಡೆಯಲೆ ಬೇಕು"—ಮಾಸ್ತಿಯವರ ಅನುವಾದ)

ಎನ್ನುತ್ತಾನೆ. ಸಾವಿಗೂ ನಿದ್ದೆಗೂ ಇರುವ ಸಾದೃಶ್ಯದ ವರ್ಣನೆ ಇಲ್ಲಿ ಅರ್ಥಗರ್ಭಿತವಾಗಿ ವಿಚಾರಪ್ರಚೋದಕವಾಗಿ ಬಂದಿದೆ. ವರ್ಡ್ಸ್‌ವರ್ತ್‌ನ "Affliction of

Margaret"ನಲ್ಲಿ ಕಡಲಿನಾಚೆಹೋಗಿ ಕಾಣವಾಗಿರುವ ಮಗ ಸತ್ತು ಹೋಗಿರಬಹುದೆಂದು ಬಗೆದು ಕೊರಗುವ ತಾಯಿ ಮಾರ್ಗರೆಟ್ ಮಗನನ್ನು ಕುರಿತು "thou keepest an incommunicable sleep" ಎನ್ನುತ್ತಾಳೆ. (ಸಂಪರ್ಕವೇರ್ಪಡಲಾಗದಂತಹ ನಿದ್ದೆಗೆ ಸಂದಿರುವೆ). ನಿದ್ದೆ ಹೋಗಿ ಬೇರೊಂದು ಜಗತ್ತಿನಲ್ಲಿ ಎಚ್ಚರಗೊಳ್ಳುತ್ತೇವೆ ಎಂಬ ಭಾವನೆ ಒಂದು ಕಡೆ ಇದ್ದರೆ, ಇನ್ನೊಂದು ಕಡೆ ಇದಕ್ಕಿಂತಲೂ ಉತ್ತಮವಾದ ಬೇರೊಂದು ಲೋಕದಿಂದ ಇಲ್ಲಿಗೆ ಬಂದು ಆ ಲೋಕವನ್ನು ಮರೆತುಬಿಟ್ಟು ತಪ್ಪು ಮಾಡುತ್ತೇವೆ ಎಂಬ ಅಭಿಪ್ರಾಯವೂ ಇಲ್ಲದಿಲ್ಲ. "Our life is a sleep and a forgetting" (ನಿದ್ದೆ ಹೋಗಿ ಹಿಂದಿನದನ್ನೆಲ್ಲಾ ಮರೆತುಬಿಡುವುದೇ ನಮ್ಮ ಬಾಳು) ಎಂಬ ವರ್ಡ್ಸ್‌ವರ್ತನ ಹೇಳಿಕೆಯೇ ಇದನ್ನು ಸೂಚಿಸುತ್ತದೆ.

ನಿದ್ದೆಯನ್ನು ಕುರಿತು ಇಷ್ಟೆಲ್ಲಾ ಕವಿಗಳು ಬರೆದಿರುವುದನ್ನು ನೋಡಿದರೆ ಮನುಷ್ಯ ಜೀವನದಲ್ಲಿ ಅದು ಎಷ್ಟು ಮುಖ್ಯವಾದುದು, ಅಗತ್ಯವಾದುದು, ಅನಿವಾರ್ಯವಾದುದು ಎಂಬುದರ ಅರಿವಾಗದಿರದು. ನಿದ್ದೆಯ ವ್ಯಾಪ್ತಿಗೆ, ಪ್ರಭಾವಕ್ಕೆ ಸಿಕ್ಕದವರು ಯಾರಿದ್ದಾರೆ? ಹಾಲುಗಂದಗಳಿಂದ ಹಿಡಿದು ಹಣ್ಣುಮುದುಕರವರೆಗೂ ಅದು ಎಲ್ಲರಿಗೂ ಬೇಕಾದುದು, ಎಲ್ಲರೂ ಬೇಡುವಂತಹುದು, ಎಲ್ಲರಿಗೂ ಸಹಜವಾದುದು, ಎಲ್ಲರಿಗೂ ಒಪ್ಪತಕ್ಕದ್ದು. ಮಕ್ಕಳಾಟ, ಹುಡುಗಾಟ, ಮುದುಕರಾಟ ಮೊದಲಾದ ನಿಂದಾತ್ಮಕವಾದ ನುಡಿಗಳು ಮನುಷ್ಯರ ಇತರ ಚರ್ಯೆಗಳನ್ನು ಬಣ್ಣಿಸುವಾಗ ಸರಿಯಿರಬಹುದು; ನಿದ್ದೆಯ ವಿಚಾರದಲ್ಲಲ್ಲ. ನಿದ್ರಾಸಕ್ತಿ ಎಲ್ಲರಲ್ಲೂ ಒಂದಲ್ಲ ಒಂದು ರೀತಿ ಸ್ವಭಾವಸಿದ್ಧವಾಗಿ ಇದ್ದೇ ಇರುವ ಲಕ್ಷಣ; ಅದು ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿ ಶೋಭಿಸುತ್ತದೆ. ಅದು ಅತ್ಯಂತ ಆಕರ್ಷಕವಾಗಿ ತೋರುವುದು ಹಸುಮಕ್ಕಳಲ್ಲಿ; ಅತ್ಯಂತ ಅಕ್ಷೋಭಿತವಾಗಿರುವುದು ಆಯಾಸಗೊಂಡ ದುಡಿತದಾಳುಗಳಲ್ಲಿ, ಶಮನಕಾರಕವೂ ಸ್ವಾಗತಾರ್ಹವೂ ಆಗಿರುವುದು ಚಂಚಲಮನಸ್ಕರಾದ ಉನ್ಮಾದಗ್ರಸ್ತರಲ್ಲಿ; ಅತ್ಯಂತ ಹೃದಯಸ್ಪರ್ಶಿಯಾಗಿರುವುದು ತಮ್ಮ ಮಕ್ಕಳ ನಡತೆಯನ್ನು ಕಂಡು ಕೊರಗಿ ಅತ್ತು ಕಂಬನಿಗರೆದು ಒರಗಿರುವ ತಂದೆತಾಯಿಯರಲ್ಲಿ, ಅತ್ಯಂತ ಹಗುರವಾಗಿರುವುದು ಆಟದ ಮೇಲೆ ಜ್ಞಾನವಿರುವ ತುಂಟ ಹುಡುಗರಲ್ಲಿ, ಅತ್ಯಂತ ಮಧುರ ಮನೋಹರವಾಗಿರುವುದು ನವದಾಂಪತ್ಯದ ನವನವೋತ್ಸಾಹದ ಅವಧಿಯಲ್ಲಿ ತನ್ನಿನಿಯನ ಇಚ್ಛಾಮೂರ್ತಿಯಾಗಿ, ಹೃದಯೇಶ್ವರಿಯಾಗಿ, ಅವನ ಆದರಾಭಿಮಾನಗಳಿಗೆ ಪಾತ್ರಳಾಗಿ, ಆರಾಧನಾ ದೇವತೆಯಾಗಿ, ಪ್ರಣಯಾನುಭವದ ಸ್ವರ್ಗಸುಖವನ್ನು ಸವಿದು ನಲಿದು ಮಲಗಿ ಕಳಕಳಿಸುವ ನವವಧುವಿನ ಮೊಗದ ಸೊಬಗಿನಲ್ಲಿ.

ಭೀಮರಾವ್ ಚಿಟಗುಪ್ಪಿ

# ಇಮ್ಮಡಿ ನಾಗವರ್ಮನ ಛಂದೋವಿಚಿತಿ

ವೇದಾಭ್ಯಾಸಕ್ಕೆ ವೇದಾಂಗ ಅಥವಾ ಷಡಂಗಗಳೆಂದಿರುವ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಗಳ ಜ್ಞಾನವು ಅಗತ್ಯವಿರುವಂತೆ, ಕಾವ್ಯಾಭ್ಯಾಸಕ್ಕೆ ವ್ಯಾಕರಣ, ಛಂದಸ್ಸು, ಅಲಂಕಾರ, ಕೋಶವೆಂಬ ಕಾವ್ಯಾಂಗ ಚತುಷ್ಟಯದ ಜ್ಞಾನವು ಅವಶ್ಯವಿದೆ. ಪ್ರಾಚೀನರು ಅದೆಷ್ಟೇ ಪ್ರತಿಭಾವಂತರಿದ್ದರೂ ಶ್ರದ್ಧಾಪೂರ್ವಕವಾಗಿ ಇವುಗಳ ಅಭ್ಯಾಸ ಮಾಡುತ್ತಿದ್ದರು.

ಲೋಕೋಪಕಾರಾರ್ಥವಾಗಿ ಪಾಣಿನಿ, ಪಿಂಗಲ ಮೊದಲಾದ ಪ್ರಾಚೀನ ಋಷಿಗಳು ವ್ಯಾಕರಣ, ಛಂದಸ್ಸನ್ನು ಕುರಿತಿರುವ ಗ್ರಂಥಗಳನ್ನು ರಚಿಸಿದರು. ಲೌಕಿಕದಲ್ಲಿ ಭಾಮಹ, ದಂಡಿ, ಮೊದಲಾದವರು ಅಲಂಕಾರ ಶಾಸ್ತ್ರವನ್ನು ಕುರಿತುಬರೆದರು. ಹಲಾಯುಧಾದಿಗಳು ಕೋಶಗ್ರಂಥಗಳನ್ನು ನಿರ್ಮಿಸಿದರು. ಆದರೆ ಇವರೆಲ್ಲರು ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಪ್ರತಿನಿಧಿಸುವರು.

ಸಂಸ್ಕೃತದಲ್ಲಾಗಲಿ ಪ್ರಾಕೃತಾದಿ ಇತರ ಭಾರತೀಯ ಭಾಷೆಗಳಲ್ಲಾಗಲಿ ಕಾವ್ಯಶಾಸ್ತ್ರದ ನಾಲ್ಕೂ ಅಂಗಗಳನ್ನೂ ಕುರಿತು ನಿರ್ವಿವಾದವಾಗಿ ಒಂದೊಂದು ಗ್ರಂಥವನ್ನು ರಚಿಸಿದವರು ಇಬ್ಬರೇ ಇಬ್ಬರು. ಒಬ್ಬನು 'ಕಲಿಕಾಲಸರ್ವಜ್ಞ'ನೆಂದು ಕೀರ್ತಿವೆತ್ತ ಗುಜರಾತದ ಹೇಮಚಂದ್ರನು, ಇನ್ನೊಬ್ಬನು ಕರ್ಣಾಟಕದ ಇಮ್ಮಡಿ ನಾಗವರ್ಮನು ; ಇಬ್ಬರೂ ಸಮಕಾಲೀನರು ; ಇಬ್ಬರೂ ಜೈನರು.

ಹೇಮಚಂದ್ರನು ಸಿದ್ಧ-ಹೇಮಚಂದ್ರ-ಶಬ್ದಾನುಶಾಸನ ಅಥವಾ ಸಿದ್ಧಹೇಮ, ಕಾವ್ಯಾನುಶಾಸನ, ಛಂದೋನುಶಾಸನ, ನಾಮಮಾಲಾ, ಹೀಗೆ ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಕುರಿತು ಒಂದೊಂದು ಗ್ರಂಥವನ್ನು ಬರೆದಿರುವನು. ಇದೇರೀತಿ ನಾಗವರ್ಮನು ಭಾಷಾಭೂಷಣ, ಅಭಿಧಾನವಸ್ತುಕೋಶ, ಕಾವ್ಯಾವಲೋಕನ, ಛಂದೋವಿಚಿತಿ ಎಂಬ ಗ್ರಂಥಗಳನ್ನು ಬರೆದಿರುವನು. ಭಾಷಾಭೂಷಣ, ಸಂಸ್ಕೃತಸೂತ್ರ ವೃತ್ತಿಗಳಿಂದ ಕೂಡಿದ ಕನ್ನಡ ವ್ಯಾಕರಣ ಗ್ರಂಥ.

ಕಾವ್ಯಾವಲೋಕನದಲ್ಲಿ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ವಿವೇಚನೆ ಇದೆ. ವಸ್ತುಕೋಶವು ಕನ್ನಡದಲ್ಲಿ ಬಳಸುವ ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳುವ ಪದ್ಯರೂಪಿ ನಿಘಂಟು. ಇದನ್ನು ವರರುಚಿ, ಭಾಗುರಿ, ಹಲಾಯುಧ, ಶಾಶ್ವತ, ಅಮರಸಿಂಹ, ಮೊದಲಾದವರ ಕೋಶಗಳ ಆಧಾರದಿಂದ ಬರೆದಿರುವುದಾಗಿ ಆತನೇ ಹೇಳಿರುವನು. ಇದಲ್ಲದೆ ಹಲಾಯುಧನ ಅಭಿಧಾನ ರತ್ನಮಾಲೆ ಎಂಬ ಕೋಶಕ್ಕೆ ಟೀಕೆಯನ್ನು ಬರೆದಿರುವನು. ಇದರಲ್ಲಿ ಸಂಸ್ಕೃತ ಅಥವಾ ಸಮಸಂಸ್ಕೃತ ಶಬ್ದಗಳಿಗೆ ಸಮಾನಾರ್ಥ ಕನ್ನಡ ಪದಗಳಿವೆ.

ಛಂದಸ್ಸನ್ನು ಕುರಿತು ಛಂದೋವಿಚಿತಿ ಎಂಬ ಗ್ರಂಥವನ್ನು ಬರೆದಿರುವುದಾಗಿ—

ಛಂದೋವಿಚಿತಿಯಲಂಕೃತಿ
ಸಂದಭಿದಾನ........ಕೋಶಮೆಂಬಿವು ವಾಕ್ಶ್ರೀ।
ಸುಂದರಿಗೆ ರತ್ನ ಮಂಡನ
ದಂಪದೊಳಿರ್ದಪ್ಪುವು ನಾಗವರ್ಮನ ಕೃತಿಗಳ್॥

ಎಂಬ ಕಾವ್ಯಾವಲೋಕನದ ಕೊನೆಯ ಪದ್ಯದಿಂದ ಕಂಡುಬರುವದು. ಆದರೆ ಇದು ದೊರೆತಿಲ್ಲ. ಆದಿ ಅಥವಾ ಮೊದಲನೆಯ ನಾಗವರ್ಮನ (ಕ್ರಿ. ಶ. ೯೯೦) ಛಂದೋಬುಧಿಯಲ್ಲಿ ಈ ಛಂದೋವಿಚಿತಿಯ ಕೆಲವು ಭಾಗಗಳು ಸೇರಿರಬಹುದೆಂದು ಈತನ ಅಭಿಧಾನ ವಸ್ತುಕೋಶದ ಸಂಪಾದಕರು ಸೂಚಿಸಿರುವರು.[1] ಇದಕ್ಕೆ ಅವರಿತ್ತ ಕಾರಣಗಳು ಇಂತಿವೆ—

(೧) ಕಾವ್ಯಕಲಾನಿಧಿಯ ಛಂದೋಂಬುಧಿಯಲ್ಲಿ ದೊರೆಯುವ ಮಂಗಲ ಪದ್ಯಗಳು, ಕವಿಯ ವಿಷಯವನ್ನು ತಿಳಿಸುವ ಕೆಲವು ಪದ್ಯಗಳು ಕಿಟೆಲ್ ಸಂಪಾದಿತ ಛಂದೋಬುಧಿಯಲ್ಲಿಲ್ಲ.

(೨) ಅಧುನಿಕ ಸೀಸ, ಸಾಂಗತ್ಯ ಮುಂತಾದ ಎಷ್ಟೋ ಪದ್ಯಗಳು ಛಂದೋಂಬುಧಿಯ ಈ ಕಾವ್ಯಕಲಾನಿಧಿಯ ಆವೃತ್ತಿಯಲ್ಲಿ ಸೇರಿವೆ.

(೩) ಒಂದೇ ಲಕ್ಷಣ ತಿಳಿಸುವ ಎರಡು ಮೂರು ಪದ್ಯಗಳು ಹಲವು ಪ್ರತಿಗಳಲ್ಲಿ ಒಂದೇ ಸ್ಥಾನದಲ್ಲಿ ದೊರೆಯುತ್ತವೆ.

(೪) ಕೆಲವು ಹಸ್ತಪ್ರತಿಗಳ ಪ್ರಕರಣಾಂತ ಗದ್ಯದಲ್ಲಿ 'ಭಗವದರ್ಹತ್ಪರಮೇಶ್ವರ" ಬೇರೆ ಕೆಲವು ಕಡೆ 'ಭಗವದ್ಭವಾನೀವಲ್ಲಭ' ಹೀಗೆ ಬೇರೆ ಬೇರೆ ಒಕ್ಕಣಿಕೆಗಳಿವೆ.

(೫) ಅಭಿಧಾನವಸ್ತುಕೋಶದ ಕೊನೆಯಲ್ಲಿರುವ 'ಅತಿ ಬಾಣಂ....ವಾಗ್ಘನದೊಳ್ ನಾಕಿಗಂ' ಪದ್ಯ ಕಾವ್ಯಕಲಾನಿಧಿಯ ಛಂದೋಂಬುಧಿಯಲ್ಲಿದೆ.

---

1 ಅ. ವ. ಕೋ. ಮುನ್ನುಡಿ, ಪು. ೧೨.

ಇವುಗಳಲ್ಲಿ ಮೊದಲನೆಯ ಕಾರಣ ಕೇವಲ ಆದಿನಾಗವರ್ಮನಿಗೆ ಸಂಬಂಧಿಸಿರುವದರಿಂದ ಆ ಪದ್ಯಗಳ ಚರ್ಚೆ ಅಪ್ರಸ್ತುತ. ಎರಡನೆಯ ಕಾರಣವು, ಸೀಸ ಸಾಂಗತ್ಯಾದಿ ಅರ್ವಾಚೀನ ಛಂದೋಬಂಧಗಳು ಇಲ್ಲಿ ಸೇರಿಸಿಕೊಂಡಿರುವಂತೆ–ಇಮ್ಮಡಿ ನಾಗವರ್ಮನ ಛಂದೋವಿಚಿತಿಯ ಪ್ರಾಚೀನ ಪದ್ಯಗಳೂ ಸೇರಿರಬಹುದೆಂಬುದಕ್ಕೆ ಸಂವಾದಿಯಾಗಿದೆ. ಆದ್ದರಿಂದ ಇದರ ಚರ್ಚೆಯಾದರೂ ಅನಾವಶ್ಯಕ.

ಮೂರನೆಯ ಕಾರಣವು ವಿಚಾರಾರ್ಹವಿದೆ. ಆದರೆ ಒಂದೇ ಸ್ಥಾನದಲ್ಲಿ ದೊರೆಯುವ ಸಮಾನ ಲಕ್ಷಣದ ಇಂಥ ಪದ್ಯಗಳಲ್ಲಿ ಮೂಲದಿಂದ ಭಿನ್ನವಿರುವ ಪದ್ಯ ಪಾಠಾಂತರವೊ, ಅನ್ಯಕೃತವೊ? ಅನ್ಯಕೃತವಿದ್ದರೆ ಇಮ್ಮಡಿ ನಾಗವರ್ಮನಂಥ ಕವಿಯ ಸ್ಥಾನ ಮಾನಗಳಿಗೆ ಶೋಭಿಸುವಂತಹದೊ—ಇವೇ ಮೊದಲಾದ ಅಂಶಗಳನ್ನೂ ಪರಿಶೀಲಿಸಿ ಫಲಿತಾಂಶದೊಡನೆ ಈ ಕಾರಣವನ್ನೂ ಮುಂದೊಡ್ಡಿದ್ದರೆ ಇದಕ್ಕೆ ಬೆಲೆ ಬರುತ್ತಿತ್ತು. ಹೀಗೆ ಮಾಡುವದು ಸಹ ಅಷ್ಟೊಂದು ತೊಡಕಿನದಲ್ಲ. ಪ್ರತಿಯೊಬ್ಬ ಲಾಕ್ಷಣಿಕನು ತನ್ನದೊಂದು ತಂತ್ರವನ್ನೂ ನಿರೂಪಿಸಿಕೊಂಡಿರುತ್ತಾನೆ, ಮತ್ತು ಆ ತಂತ್ರ ಯಾವುದೆಂಬುದನ್ನು ಗ್ರಂಥಾರಂಭದಲ್ಲಿ ವಿವರಿಸಿರುತ್ತಾನೆ. ಆದಿನಾಗವರ್ಮನು ಛಂದಸ್ಸನ್ನೂ ತನ್ನ ಸತಿಗೆ ಬಣ್ಣಿಸಿರುವನು, 'ವಧು–ಬಿಂಬಾನನೆ, ಕೆಳದಿ, ವನಜ ಮುಖಿ, ಮೃಗನಯನೆ, ವಿಲೋಲ–ಷಟ್ಪದ–ಸಂನಿಭ-ಕುಂತಳೆ' ಎಂದು ಮುಂತಾಗಿ ಅಡಿಗಡಿಗೆ ಅವಳನ್ನೂ ಸಂಬೋಧಿಸಿರುವನು. 'ಪಿಂಗಳನಿನವನಿಯೊಳ್ ಪರಪಿದೊಡಾ ಛಂದೋಂಬು ರಾಶಿಯೊಳ್ಮಿಗೆ ತಂದದ ನಿಜ ಸತಿಗೆ ನಾಗವರ್ಮಂ ಪೇಳ್ದಂ' ಎಂದು ಗ್ರಂಥಾರಂಭದಲ್ಲಿ ಹೇಳಿ, ಪಿಂಗಲನಂತೆ ಸೂತ್ರರೂಪದಲ್ಲಿ ವಿವರಿಸದೆ, ಲಕ್ಷಣ ಪದ್ಯವನ್ನೇ ಲಕ್ಷ್ಯವಾಗಿ ಹೇಳಿರುವನು. ತನ್ನ ತಂತ್ರಕ್ಕೆ ಅನುಕೂಲವಾಗುವಂತೆ ಗಣಗಳ ನಿರ್ದೇಶನಕ್ಕೆ ಪಿಂಗಲನು ಕೊಟ್ಟ ಮೂಲಹೆಸರು, ಅಂದರೆ, ಮ–ಯ–ರ–ಸ–ತ, ಇತ್ಯಾದಿ ಅಥವಾ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಇತ್ಯಾದಿ ಅವುಗಳ ಪರ್ಯಾಯ ನಾಮಗಳನ್ನು ಬಳಸಿರುವನು. ಮಾತ್ರಾಬಂಧಗಳಿಗೆ ಪಿಂಗಲನು ಚತುರ್ಮಾತ್ರಾ ಗಣಗಳನ್ನು ಬಳಸಿರುವನು. ಇವುಗಳಲ್ಲಿ ಐದು ಭೇದಗಳಾಗುವುವು. ನಾಗವರ್ಮನು ಇವುಗಳಿಗೆ ಗಿರಿಶಂ, ಧೂರ್ಜಟಿ, ಶರ್ವಂ, ಪುರಾರಿ, ಶಶಿಪುರ ಎಂಬ ಪ್ರತ್ಯೇಕ ಹೆಸರುಗಳನ್ನೂ ಕೊಟ್ಟಿರುವನು. ಕರ್ಣಾಟಕ ವಿಷಯ ಜಾತಿಗಳ ಗಣಗಳನ್ನು ಬ್ರಹ್ಮ, ವಿಷ್ಣು, ರುದ್ರ, ಎಂದು ಹೆಸರಿಸಿರುವನು.

ಉದಾಹರಣೆಗಾಗಿ, ಛಂದೋಂಬುಧಿಯಲ್ಲಿ, ಸುಪರಿಚಿತವಿರುವ ಶಾರ್ದೂಲ ವಿಕ್ರೀಡಿತದ ಲಕ್ಷಣ ಹೀಗಿದೆ–

> ಉರ್ವೀ–ಮಾರುತ–ಭಾಸ್ಕರಾನಿಲ–ವಿಯದ್ವಂಹ್ನಿ ಪದಾಂತಂಗಳೊಳ್
> ಶರ್ವಂ ವಿಶ್ರಮಣಂ ದಿನೇಶಶಿಖೆಯೊಳ್ ನಿಲ್ಕುಂ ಮನಂಗೊಳ್ವಿನಂ।

ಸಪ್ತ್ಯಾಗಣಃ ಘನರ–ಪ್ರಮಂಗಗಣೀಗಳ ವೃತ್ತಂ ಪ್ರಸಿದ್ಧಂ ಶರಂ
ಚಾರ್ವಂಘ್ರಿಯುಂಗಸಪ್ತನೇತ್ರೈ, ರಚಿಸೆ ಶಾರ್ದೂಲ ವಿಕ್ರೀಡಿತಂ ॥[1]

ಪಿಂಗಲನ ಪರಿಭಾಷೆಯಲ್ಲಿ—ಈ ವೃತ್ತದ ಪ್ರತಿಪಾದದಲ್ಲಿ ಮ-ಸ-ಜ-ಸ-ತ-
ಎಂಬ ಆರು ತ್ರಿಕಗಳು ಅಂದರೆ ಮೂರು ಅಕ್ಷರಗಳ ಗಣಗಳು ಮತ್ತು ಕೊನೆಗೆ ಒ
ಗುರು ಇದ್ದು, ೧೨ನೆಯ ಅಕ್ಷರಕ್ಕೆ ಯತಿ ಇರುತ್ತದೆ. ನಾಗವರ್ಮನು ಮಗಣ
ಅವನಿ, ಸಗಣಕ್ಕೆ ಮರುತ, ಜಗಣಕ್ಕೆ ಭಾಸ್ಕರ, ಪುನಃ ಸಗಣಕ್ಕೆ ಅನಿಲ, ಎ
ತಗಣಗಳಿಗೆ ವಿಯದ್ವಂದ್ವ (ಆಕಾಶ) ಮತ್ತು ಕೊನೆಯ ಗುರುವಿಗೆ ರವಿ (ಈಶ್ವ
ಈ ಪರ್ಯಾಯ ನಾಮಗಳನ್ನಿತ್ತು ತನ್ನ ಲಕ್ಷ್ಯ ಲಕ್ಷಣ ಪದ್ಯವನ್ನು ರಚಿಸುವ
'ವಿಶ್ರಾಮಂ ದಿನೇಶದೆಸೆಯೊಳ್ ನಿಲ್ಕುಂ' ಎಂದು ೧೨ನೇ ಅಕ್ಷರಕ್ಕೆ ಯತಿಯ
ಹೇಳುವನು. ಜೊತೆಗೆ 'ಅಂಘ್ರಿಯುಂಗಸಪ್ತನೇತ್ರೈಃ' ಎಂದು ಸಹಿತ
ಸಂಬೋಧಿಸುವನಲ್ಲದೆ, 'ಶಾರ್ದೂಲವಿಕ್ರೀಡಿತಂ' ಎಂದು ವೃತ್ತದ ಹೆಸ
ಸೂಚಿಸುವನು. ಈ ರೀತಿ ಆತನ ಲಕ್ಷ್ಯ—ಲಕ್ಷಣ ಪದ್ಯಗಳಿಗೆ ಒಂದು ವಿಶಿಷ್ಟ ರ
ಬಂದಿರುವುದರಿಂದ ಅನ್ಯಕೃತ ಪದ್ಯವಿದ್ದರೆ ಅದನ್ನು ತಟ್ಟನೆ ಗುರುತಿಸಬಹುದಾಗಿ
ಇದರಂತೆಯೇ ರಚಿತವಾಗಿದ್ದರೆ ಅದು—ಪಾಠಾಂತರವೊ ಅನುಕರಣೆಯೊ ಆಗುವ
ಇಮ್ಮಡಿ ನಾಗವರ್ಮ ಹೀಗೆಂದಿಗೂ ಮಾಡಲಾರ. ಒಬ್ಬ ಲಾಕ್ಷಣಿಕ ಇನ್ನೊಬ್ಬನ
ಅನುಕರಿಸುವುದಿಲ್ಲೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಅನೇಕ ಲಾಕ್ಷಣಿಕ
ಪಿಂಗಲನ ಪರಿಭಾಷೆಯನ್ನೇ ಸ್ವೀಕರಿಸಿದ್ದರೂ ನಿರೂಪಣೆಯಲ್ಲಿ ವ್ಯತ್ಯಾಸ ಕ
ಬರುವುದು. ಉದಾಹರಣೆಗಾಗಿ ಗುಣಚಂದ್ರನೆಂಬ (ಕ್ರಿ. ಶ. ೧೬೫೦) ಕನ್
ಲಾಕ್ಷಣಿಕನು ಇದೇ ಶಾರ್ದೂಲ ವಿಕ್ರೀಡಿತವನ್ನು ಲಕ್ಷಿಸಿದ ಬಗೆಯನ್ನು ನೋಡಿ

ಸೂರ್ಯಾಶ್ವೈಃ ಮಸಜಂ ತತಂ ಗುರುಯುತಂ ಶಾರ್ದೂಲ ವಿಕ್ರೀಡಿತಂ ॥[2]

ಇಲ್ಲಿ ಸಹ ಪಿಂಗಲನ ಪರಿಭಾಷೆಯೇ ಇದೆ. ಲಕ್ಷಣ, ಲಕ್ಷ್ಯ, ಯ
ವೃತ್ತದ ಹೆಸರು ನಾಲ್ಕೂ ಇದ್ದು ಸೂತ್ರದ ಮಾದರಿಯಲ್ಲಿ ನಿರೂಪಿಸಲ್ಪಟ್ಟಿ
ಛಂದೋಂಬುಧಿಯ ನಿರೂಪಣೆಗೂ ಇದಕ್ಕೂ ಇರುವ ವ್ಯತ್ಯಾಸ ಸೂರ್ಯಪ್ರಕಾಶ
ಸ್ಪಷ್ಟವಿದೆ. ಛಂದೋಂಬುಧಿಯಲ್ಲಿ ಒಂದೊಮ್ಮೆ ಇಮ್ಮಡಿ ನಾಗವರ್ಮನ ಪದ್ಯ
ಬೆರೆತುಕೊಂಡಿದ್ದರೆ ಅವಾದರೂ ಹೀಗೆಯೆ ಬರೆದು ಕಾಣುತ್ತಿದ್ದವೆಂಬಲ್ಲಿ ಸಂದೇಹ

ನಾಲ್ಕನೆಯ ಕಾರಣ. ಆದಿನಾಗವರ್ಮನು ಜೈನನಲ್ಲನೆಂದು ಈಗ ಸಾಮ
ಗ್ರಹಿಕೆ ಇದೆ. ಇದಕ್ಕಿರುವ ಆಧಾರಗಳಲ್ಲಿ 'ಭಗವನ್ನಾಭೀನಲ್ಲಭ' ಎಂಬ ಪ್ರಕರಣ
ಗದ್ಯವೂ ಒಂದು. ಇಮ್ಮಡಿ ನಾಗವರ್ಮ ಜೈನ. ಛಂದೋಂಬುಧಿಯ ಕೆಲವು ಪ್ರತಿ

---

1 ಛಂ., ಕಿಟೆಲ್, ಪದ್ಯ—೨೦೦.

2 ಗು. ಛಂ. ಸಾರ, ೩–೧೯–೨.

‘ ಭಗವದರ್ಹತ್ಪರಮೇಶ್ವರ ’ ಎಂದಿರುವುದರಿಂದ, ಇದು ಮತ್ತು ಇದರೊಂದಿಗೆ ಕೆಲವು ಪದ್ಯ ದೊರೆಯದಾದುವು ಆತನ ಛಂದೋಂಬುಧಿಯಿಂದ ಇಲ್ಲಿಗೆ ಬಂದಿರಬೇಕೆಂದು ಈ ಕಾರಣದ ಹಿನ್ನೆಲೆ ಇರುವಂತೆ ತೋರುತ್ತದೆ. ಈ ಸಂದರ್ಭದಲ್ಲಿ ರೈಸ್ ಸಂಪಾದಿಸಿದ ಅಸ್ಮೃತಿ ನಾಗವರ್ಮನ ಭಾಷಾಭೂಷಣದಲ್ಲಿಯ ಅವರ ಮಾತುಗಳನ್ನು ಗಮನಿಸಬೇಕು. ಸಂಪಾದನೆಗಾಗಿ ಕಲೆಹಾಕಿದ ಹಸ್ತಪ್ರತಿಗಳಲ್ಲಿ ಪ್ರಯೋಗವೆಂದುಕೊಟ್ಟಿರುವ ಉದಾಹರಣೆಗಳಲ್ಲಿ ಮತೀಯ ಭಾವನೆಯಿಂದ ಆದಂಥ ಬದಲಾವಣೆಗಳನ್ನು ಅವರು ಎತ್ತಿತೋರಿಸಿರುವರು. ಒಂದರಲ್ಲಿ ‘ ಶ್ರೀ ರುದ್ರೇಶ್ವರಂ, ‘ ಶ್ರೀಗಣೇಶ್ವರಂ ’ ಎಂದಿದ್ದರೆ, ಇನ್ನೊಂದರಲ್ಲಿ ಅದೇ ಸ್ಥಳದಲ್ಲಿ ‘ ಶಾಂತಿನಾಥಂ ’ ಎಂದಿದೆ. ‘ ಪಶುಗಿಷ್ಟಾರ್ಥಮಂ ಮಾಡುಗೆ, ಜನಂ ನಮಗಿಷ್ಟಾರ್ಥ ಮಾಳ್ಕೆ ’ ಎಂದಿರುವಲ್ಲಿ ‘ ದೇವರಿಷ್ಟಾರ್ಥಮಂ ಮಾಡುಗೆ, ಜನಪತಿ ನಿಮಗಿಷ್ಟಾರ್ಥಮಂ ಮಾಳ್ಕೆ ’ ಎಂದಿದೆ.[1] ಕಿಟೆಲ್‌ರಿಗೆ ದೊರೆತ ಛಂದೋಂಬುಧಿಯ ಹಸ್ತಪ್ರತಿಗಳಲ್ಲಿ ಒಂದು ‘ ಶ್ರೀವೀತರಾಗಾಯನಮಃ ’ ಎಂಬ ವಾಕ್ಯದಿಂದ ಪ್ರಾರಂಭವಾಗಿತ್ತಂತೆ. ಇದರಲ್ಲಿ ನವ ಲಕ್ಷಣ ಲಕ್ಷ್ಯಗಳನ್ನು ಒಂದೇ ಪದ್ಯದಲ್ಲಿ ನಿರ್ದೇಶಿಸಿದ್ದರೂ, ವೃಷಭನಿಂದ ಮಹಾವೀರನವರೆಗೆ ೨೪ ತೀರ್ಥಂಕರರ ಸ್ತುತಿ ಇದ್ದಿತಂತೆ.[2] ಈ ದೃಷ್ಟಿಯಿಂದ ‘ ಭಗವದರ್ಹತ್ಪರಮೇಶ್ವರ ’ ಪ್ರಕರಣಾಂತ-ಗದ್ಯ ಅಸ್ಮೃತಿ ನಾಗವರ್ಮನಿಗೆ ಅನ್ವಯಿಸುವುದೊ ಅಥವಾ ಯಾವನೊಬ್ಬ ಸಾಹಿತಿ ಇಲ್ಲವೆ ಹಸ್ತಪ್ರತಿಕಾರ ಮತಾಭಿಮಾನದಿಂದ ಇದನ್ನು ಆದಿನಾಗವರ್ಮನಿಗೆ ಅನ್ವಯಿಸಿರುವನೊ ಎಂಬುದನ್ನು ನಿರ್ಧರಿಸುವುದು ದುಸ್ಸಾಧ್ಯವಿದೆ.

ಹಾಗೆ ನೋಡಿದರೆ ಪದ್ಯದ ಸಂಶೋಧನೆಯ ಘಟ್ಟದಲ್ಲಿ ಆದಿನಾಗವರ್ಮನ ಮತವನ್ನು ಇದಮಿತ್ಥಂ ಎಂದು ನಿರ್ಧರಿಸುವುದು ಅಸಾಧ್ಯವೆಂದೇ ಹೇಳಬೇಕಾಗುವದು. ರೈಸ್, ಈತ ಜೈನನಿದ್ದರೂ ಶೈವಮತ ಪ್ರಭಾವಿತನೆಂದಿರುವರು[3]. ಕಿಟೆಲ್, ಶೈವನೆಂದು ತೋರುತ್ತಿದ್ದರೂ ಜೈನನೆಂಬುದು ಖಚಿತ ಎಂದಿರುವರು.[4] ಕವಿಚರಿತೆಕಾರರು ತಟಸ್ಥರಾಗಿರುವರು.[5] ಗೋವಿಂದಪೈ ವೈದಿಕ ಬ್ರಾಹ್ಮಣನೆಂದು ತೀರ್ಮಾನಿಸಿರುವರು.[6] ಮುಗಳಿಯವರು ಇದನ್ನೇ ಸ್ವೀಕರಿಸಿದ್ದರೂ, ಈ ಕಾಲದ ಕವಿಗಳಲ್ಲಿ ಜೈನ-ಬ್ರಾಹ್ಮಣ, ಬ್ರಾಹ್ಮಣ-ಕ್ಷತ್ರಿಯ ಮತಗಳ ಸಮ್ಮಿಲನ ಕಂಡುಬರುವದೆಂದಿರುವರು.[7] ಆದರೆ ನಾಗವರ್ಮನೆಂಬ ಹೆಸರೇ ಆತನು ಬ್ರಾಹ್ಮಣನಲ್ಲನೆಂದು ಸೂಚಿಸುತ್ತದೆ. ‘ಶರ್ಮ’ ಬ್ರಾಹ್ಮಣ ಸೂಚಕ,

1 ಕ. ಭಾ. ಭೂ. ರೈಸ್, ಪು. ೪ ಮುನ್ನುಡಿ; ಸೂತ್ರ ೯೨, ಸೂತ್ರ ೨೨೧. ಅನುಬಂಧ ೧.
2 ಛಂ. ಕಿಟೆಲ್, ಮುನ್ನುಡಿ, ಪು. ೧
3 ಕ. ಭಾ. ಭೂ. ರೈಸ್, ಪು. ೧, ಮುನ್ನುಡಿ.
4 .ಛಂ. ಕಿಟೆಲ್ ಮುನ್ನುಡಿ, ಪು. ೧೨.
5 ಕ.ಚ.ಸಂ. ೧, ಪು. ೫೪.
6 ಕ.ಸಾ.ಪ.,ಸಂ. ೨೦, ಪು. ೪೬.
7 ಕ.ಸಾ.ಚ, ಪು. ೮೨,೧೨೧.

'ವರ್ಮ' ಕ್ಷತ್ರಿಯ ಸೂಚಕ ಅಭಿಧಾನಗಳು.[1] ಸ್ವತಃ ನಾಗವರ್ಮನೇ ತನ್ನನ್ನು ನಾಕಿ, ನಾಕಿಗ, ಎಂದು ಕರೆದುಕೊಂಡಿರುವನು. ಗೋವಿಂದಪೈ ಇವು 'ನಾಗ'ದ ಸಂಕ್ಷಿಪ್ತ ರೂಪಗಳೆಂದಿರುವರು.[2] ಆದರೆ ನಾಕವೆಂದರೆ ಸ್ವರ್ಗ. ಇದು ಅಪ್ರಸಿದ್ಧವೂ ಅಲ್ಲ, ಅತ ಏವ 'ನಾಕಿಗ' ಎಂದರೆ 'ಸ್ವರ್ಗಾಧಿಪ–ಇಂದ್ರ.' ಛಂದಃಶಾಸ್ತ್ರದಲ್ಲಿ 'ನ' ಗಣಕ್ಕೆ ಸ್ವರ್ಗ, ಸುರಪ, ಇಂದ್ರ ಮೊದಲಾದ ಸಮಾನಾರ್ಥಕ ಪರ್ಯಾಯ ನಾಮಗಳಿವೆ, 'ಪಣವಕ' ವೃತ್ತದ ಲಕ್ಷಣ–ಲಕ್ಷ್ಯಕ್ಕಾಗಿ 'ಭೂ–ನಾಕಾಂತದೊಳಿರೆ ತೋಯೇಶಂ' (ಮ-ನ-ಯ-ಗ) ಎಂದು ನಾಗವರ್ಮನೇ ನ–ಗಣಕ್ಕೆ ಪರ್ಯಾಯದಿಂದ 'ನಾಕ' ಎಂದಿರುವನು.[3] ಈ ದೃಷ್ಟಿಯಿಂದ ಮೂಲದಲ್ಲಿ 'ನಾಕವರ್ಮ' ನೆಂದಿದ್ದು ರೂಢಿಯಲ್ಲಿ 'ನಾಗವರ್ಮ' ಆಗಿರಬಹುದಾಗಿದೆ. ಕ–ಕಾರಕ್ಕೆ ಗ-ಕಾರಾದೇಶ ಸಹಜ ಮತ್ತು ಶಾಸ್ತ್ರಸಮ್ಮತವಿದೆ. ವರ್ಮ, ಇಂದ್ರ, ಚಂದ್ರ, ಜೈನರ ಅಥವಾ ಕ್ಷತ್ರಿಯರ ಹೆಸರುಗಳಿಗೆ ಹೊಂದಿಕೊಂಡು ಬರುವವು. ಉದಾಹರಣೆ-ಗುಣವರ್ಮ, ನಾಗಚಂದ್ರ, ಇಂದ್ರ (ರಾಷ್ಟ್ರಕೂಟ ಅರಸು).

ವಸ್ತುಕೋಶದ ಕೊನೆಯಲ್ಲಿರುವ 'ಅತಿಬಾಣಂ..ವಾಗ್ಗುಂಫನದೊಳ್ ನಾಕಿಗಂ' ಪದ್ಯ ಛಂದೋಂಬುಧಿಯಲ್ಲಿ ದೊರೆಯುವದೆಂಬ ಐದನೆಯ ಕಾರಣದ ಹಾಡಾದರೂ ಇಷ್ಟೇ. ಬಾಣ – ಮಯೂರ – ಮಾಘ – ಗುಣಾಢ್ಯ – ದಂಡಿ – ಧನಂಜಯರೆಂಬ ಆರು ಸಂಸ್ಕೃತ ಕವಿಗಳಿಗಿಂತ ನಾಕಿಗನು, ಅಂದರೆ ನಾಗವರ್ಮನು ಮೇಲು, ಎಂಬುದು ಈ ಪದ್ಯದ ಅರ್ಥ. ಇದರ ಎಲ್ಲ ಸಾಧಕ ಬಾಧಕ ಆಧಾರಗಳನ್ನು ಹಿಂಜಿನೋಡಿ 'ಈ ಪದ್ಯ ಆದಿನಾಗವರ್ಮನದೊ ಅಥವಾ ಇಮ್ಮಡಿ ನಾಗವರ್ಮನದೊ ಎಂದು ನಿರ್ಧರಿಸ ಲಾಗವಲ್ಲ' ಎಂಬ ತೀರ್ಮಾನಕ್ಕೆ ಬಂದಿರುವರು ಗೋವಿಂದಪೈ[4]. ಹಲವು ಕಾವ್ಯಗಳಲ್ಲಿ ಬರುವ ಕವಿ ಪ್ರಶಂಸಾ ಪದ್ಯಗಳನ್ನು ಅವರೇ ಬರೆದಿರುವರೆಂದು ಹೇಳುವಂತಿಲ್ಲ. ಸಾಮಾನ್ಯವಾಗಿ ಔಚಿತ್ಯದ ಎಲ್ಲೆಯಲ್ಲಿರುವ ಇಂಥ ಪದ್ಯಗಳನ್ನು ಆ ಕವಿಯವೆಂದು ಭಾವಿಸಬಹುದು. ಆದರೆ ಅವಾಸ್ತವ ಪ್ರತಿಷ್ಠಾಪರ ಪದ್ಯಗಳನ್ನು ಆಯಾಕವಿಗಳ ಅಭಿಮಾನಿಗಳು ಹಿಂದಿನಿಂದ ಸೇರಿಸಿರಬಹುದಾಗಿದೆ.[5] 'ಅತಿಬಾಣಂ' ಪದ್ಯದಲ್ಲಿ ನಾಗವರ್ಮನನ್ನು 'ನಾಕಿಗ'ನೆಂದು ನಿರ್ದೇಶಿಸಲಾಗಿದೆ. ಈ ಹೆಸರು ಆದಿ ನಾಗ ವರ್ಮನಿಗೆ ಹೆಚ್ಚು ಹೊಂದಿಕೊಂಡಿದೆ. ಬಾಣ, ಮಯೂರಾದಿ ಆರು ಕವಿಗಳನ್ನು ಹಿಮ್ಮೆಟ್ಟಿಸುವ ಆರು ಕೃತಿಗಳನ್ನು ರಚಿಸಿರದಿದ್ದರೂ ಬಾಣನ ಕಾದಂಬರಿಯನ್ನು

1 ಆಪ್ಟೇ, ಸಂಸ್ಕೃತ ನಿಘಂಟು.

2 ಕ.ಸಾ. ಪ.,ಸಂ. ೨೦, ಪು. ೨೬, ಅಡಿ ಟಿಪ್ಪಣಿ

3 ಛಂ. ಕಿಟೆಲ್, ಪದ್ಯ ೧೫೬.

4 ಕ. ಸಾ. ಪ., ಸಂ. ೨೦, ಪು. ೧೫೪–೧೫೬.

5 ಕೆ. ವಿ. ರಾಘವಾಚಾರ್, ಜನ್ನನ ಯಶೋಧರ ಚರಿತೆ, ಮುನ್ನುಡಿ ಪು. ೮–ಅಡಿಟಿಪ್ಪಣಿ.

ಕನ್ನಡದಲ್ಲಿ ಪರಿವರ್ತಿಸಿದ ಕೀರ್ತಿ ಇವನಿಗಿದೆ. ಇಮ್ಮಡಿ ನಾಗವರ್ಮನ ಪದರಿನಲ್ಲಿ ಇಂಥ ಕೃತಿಗಳಾವೂ ಇಲ್ಲ. ಅವನು ಶಾಸ್ತ್ರಕವಿಯೆಂದೇ ಪ್ರಸಿದ್ಧನಿರುವನು. ಆದ್ದರಿಂದ ಆದಿನಾಗವರ್ಮನ ಅಭಿಮಾನಿಯೊಬ್ಬನು ಈ ಪದ್ಯವನ್ನು ಛಂದೋಂಬುಧಿಯಲ್ಲಿ ಸೇರಿಸಿರಬೇಕೆಂಬುದು ಹೆಚ್ಚು ಸಮಂಜಸವೆನಿಸುವದು. ಹೀಗಿದ್ದರೆ ಇದು ಛಂದೋಂಬುಧಿಯಿಂದ ವಸ್ತುಕೋಶದಲ್ಲಿ ಹೋಗಿರಬಹುದಲ್ಲದೆ, ಅಲ್ಲಿಂದ ಇದರಲ್ಲಿಗೆ ಬಂದಿರಲಾರದು.

ಕನ್ನಡ ಛಂದಸ್ಸಿನ ಕರ್ತೃ ಒಬ್ಬನೇ–ಆತ ಆದಿ ನಾಗವರ್ಮ, ಎಂಬ ಭಾವನೆ ಪ್ರಾಚೀನ ಕಾಲದಿಂದ ಬೆಳೆದು ಬಂದಿರಬೇಕು. ಕ್ರಿ.ಶ. ೧೪೦೦ರಲ್ಲಿ ಆಗಿಹೋದ ಈಶ್ವರ ಕವಿಯ 'ಕವಿ ಜಿಹ್ವಾಬಂಧನ'ದ ಆಕರವೆಂದಿಟ್ಟುಕೊಂಡ ಒಂದು ಹಸ್ತಪ್ರತಿಯಲ್ಲಿ 'ಕವಿಜಿಹ್ವಾ ಬಂಧನವು–ಕವಿ ಫಣಿವರ್ಮನಿಂದ ರಚಿಸಲ್ಪಟ್ಟದ್ದು–ಈ ಗ್ರಂಥಕ್ಕೆ ನಾಗವರ್ಮ ಛಂದಸ್ಸು ಎಂದೂ ಹೇಳುತ್ತಾರೆ' ಎಂದು ಬರೆದಿರುವುದನ್ನು ಈ ಗ್ರಂಥವನ್ನು ಸಂಪಾದಿಸಿದ ಪಂಚಮುಖಿ ಉಲ್ಲೇಖಿಸಿರುವರು.[1] ಈ ರೀತಿ ಆದಿ ನಾಗವರ್ಮನ ಛಂದೋಬುಧಿಯಲ್ಲಿ ಸ್ವಕೃತ, ಅನ್ಯಕೃತ, ಪ್ರಾಚೀನ, ಅರ್ವಾಚೀನ, ಮೂಲ, ಪಾಠಾಂತರ, ಜೈನ, ವೈದಿಕ ಪದ್ಯಗಳೂ ವಿವರಗಳೂ ದೊರೆಯುತ್ತವೆ. ಆದ್ದರಿಂದ ನಿರ್ವಿವಾದವಾಗಿ ಆತನವೆಂಬ ಪದ್ಯ ಮತ್ತು ಇತರ ವಿವರಗಳನ್ನು ಬಿಟ್ಟು ಉಳಿದವುಗಳನ್ನು ತಳಸೋಸಿ ನೋಡದೆ ಗ್ರಾಹ್ಯವೆಂದು ಭಾವಿಸುವಂತಿಲ್ಲ.

ವಸ್ತುಕೋಶದ ಸಂಪಾದಕರ ಈ ಊಹೆ ಸಾಧಾರವಿರಲಿ ನಿರಾಧಾರವಿರಲಿ, ಇಮ್ಮಡಿ ನಾಗವರ್ಮನ ಛಂದೋವಿಚಿತಿ ಕನ್ನಡದಲ್ಲಿದ್ದರೆ ಮಾತ್ರ ಇದಕ್ಕೆ ಬೆಲೆ ಇದೆ. ಆದರೆ ಈ ಗ್ರಂಥ ಕನ್ನಡದಲ್ಲಿದ್ದಿತೋ ಸಂಸ್ಕೃತದಲ್ಲಿದ್ದಿತೋ ಎಂಬುದು ಗೊತ್ತಿಲ್ಲ. ಕಾವ್ಯಾವಲೋಕನದ ಆದಿ ಸಂಪಾದಕ ಆರ್. ನರಸಿಂಹಾಚಾರ್ಯರು ಈ ಗ್ರಂಥ ಈ ವರೆಗೆ ದೊರೆತಿಲ್ಲ, ಎಂದಿಷ್ಟೇ ಹೇಳಿರುವರು.[2] ಭಾಷೆಯ ವಿಷಯದಲ್ಲಿ ಯಾವದೆ ಪ್ರಸ್ತಾಪವಿಲ್ಲ. ಬಸವನಾಳ–ಕೇಪು ಸಂಪಾದಿತ ಕಾವ್ಯಾವಲೋಕನದಲ್ಲೂ ಇಷ್ಟೆ ಇದೆ.[3] ತೀ.ನಂ. ಶ್ರೀ. ಇದನ್ನೇ ಪುನರುಚ್ಚರಿಸಿರುವರು.[4] ಮುಗಳಿ ಛಂದೋವಿಚಿತಿ ಎಂದಿಷ್ಟೆ ಉಲ್ಲೇಖಿಸಿ ಮುಂದೆ ಪ್ರಶ್ನಾರ್ಥಕ ಚಿನ್ಹವನ್ನಿರಿಸಿರುವರು.[5] ತಾವೇ ಬರೆದ ಕವಿಚರಿತೆಯಲ್ಲಿ ನರಸಿಂಹಾಚಾರ್ಯರು ಛಂದೋವಿಚಿತಿಯ ಹೆಸರನ್ನು ಕೂಡ ಎತ್ತಿಲ್ಲ. ಹೀಗೇಕೆಂಬುದು ಯೋಚನೆಗಿಟ್ಟುಕೊಳ್ಳುತ್ತದೆ. ಗ್ರಂಥದ ಹೆಸರನ್ನುಳಿದು ಮಿಕ್ಕ ಯಾವದೆ ವಿವರಗಳು ಗೊತ್ತಿಲ್ಲವೆಂದು ಹೀಗೆ ಮಾಡಿರಬಹುದೆನಿಸುತ್ತದೆ.

---

1 ಕ.ಜಿ. ಮುನ್ನುಡಿ, ಪು. ೩.

2 ಕಾ.ಲೋ. ೧, ಮುನ್ನುಡಿ, ಪು. ೧೦.

3 ಕಾ.ಲೋ. ೨, ಮುನ್ನುಡಿ, ಪು. ೩.

4 ಭಾ.ಕಾ.ಮೀ. ಪು. ೪೭೫.

5 ಕ.ಸಾ.ಚ., ಮುಗಳಿ, ಪು. ೧೪೬.

ಇಮ್ಮಡಿ ನಾಗವರ್ಮನು ಸಂಸ್ಕೃತದಲ್ಲಿಯೂ ಬರೆಯಬಲ್ಲವನಾದ್ದರಿಂದ ಒಂದೊಮ್ಮೆ ಆತನ ಛಂದೋವಿಚಿತಿ ಸಂಸ್ಕೃತದಲ್ಲಿರಬಹುದೆ? ಇದೆ ಎಂದಿಟ್ಟುಕೊಂಡು ಮುಂದಡಿಯಿಟ್ಟರೆ, ಸಂಸ್ಕೃತದಲ್ಲಿ 'ಸಭಾಷ್ಯರತ್ನಮಂಜೂಷಾ' ಎಂಬುದೊಂದು ಛಂದೋಗ್ರಂಥ ದೊರೆಯುತ್ತದೆ. ಕಾಶಿ ಜ್ಞಾನಪೀಠದಿಂದ ೧೯೪೯ರಲ್ಲಿ ಪ್ರಕಟಿಸಲ್ಪಟ್ಟಿದೆ. ಸುಪ್ರಸಿದ್ಧ ಛಂದಶ್ಶಾಸ್ತ್ರ ವಿದ್ವಾನ್ ಬಿ.ಹ.ದಾ. ವೇಲಣಕರರಿಂದ ಸಂಪಾದಿಸಲ್ಪಟ್ಟಿದೆ. ಇಮ್ಮಡಿ ನಾಗವರ್ಮನ ಕಣ್ಮರೆಯಾದ ಛಂದೋವಿಚಿತಿ ಇದೇ ಇರಬಹುದೆಂದು ತೋರುತ್ತದೆ. ಆದರೆ ಮೂಲವು ಅಸ್ವಕೃತವಿದ್ದು, ಇವನು ಅದಕ್ಕೆ ವೃತ್ತಿಯನ್ನು ಬರೆದಿರುವಂತೆ ತೋರುತ್ತದೆ. ಸಂಸ್ಕೃತ ಛಂದಶ್ಶಾಸ್ತ್ರದಲ್ಲಿ ಪಿಂಗಲನ ನಂತರ ಹುಟ್ಟಿರುವ ಎರಡು ಅಪೂರ್ವ ಗ್ರಂಥಗಳಲ್ಲಿ ಇದೊಂದು, ಎಂದಿರುವರು ವೇಲಣಕರ.[1]

ವೇಲಣಕರರ ಅಭಿಪ್ರಾಯದಲ್ಲಿ, ವಿಷಯ ನಿರೂಪಣೆಯಲ್ಲಿ ಪಿಂಗಲನ ಪ್ರಭಾವ ಕಂಡುಬರುತ್ತದೆ ಇದರಲ್ಲಿ. ಆದರೆ ಗಣನಿರ್ದೇಶನದಲ್ಲಿ ರತ್ನಮಂಜೂಷಾಕಾರನು ಬೇರೊಂದು ಮಾರ್ಗವನ್ನು ಅನುಸರಿಸಿರುವನು. ಪಿಂಗಲನಂತೆ ವೈದಿಕ ಛಂದಸ್ಸುಗಳನ್ನು ನಿರೂಪಿಸಿಲ್ಲವಾದ್ದರಿಂದ ಇವನು ಜೈನನಿರಬೇಕೆಂದು ಸೂಚಿತವಾಗುವಾಗುತ್ತದೆ. ಭಾಷ್ಯಕಾರನು ಜೈನನೆಂಬುವಲ್ಲಿ ಸಂದೇಹವಿಲ್ಲ. ಮಂಗಲ ಶ್ಲೋಕದಲ್ಲಿ ಜಿನಸ್ತುತಿ ಇದೆ. ಉದಾಹರಿಸಿದ ಲಕ್ಷ್ಯ ಪದ್ಯಗಳಲ್ಲಿ ಜಿನಸ್ತುತಿ ಇಲ್ಲವೆ ಜೈನಧರ್ಮದ ಮೇಲ್ಮೆಯನ್ನು ಕುರಿತು ಅನೇಕ ಪದ್ಯಗಳಿವೆ. ಈ ಗ್ರಂಥದಲ್ಲಿ ಒಟ್ಟು ೬೫ ವರ್ಣ ವೃತ್ತಗಳನ್ನು ನಿರ್ದೇಶಿಸಿದೆ. ಇವುಗಳಲ್ಲಿ ೨೧ (ಲೆಕ್ಕದಿಂದ ೧೬) ವೃತ್ತಗಳನ್ನು ಪ್ರಖ್ಯಾತ ಜೈನ ಪಂಡಿತ–ಹೇಮಚಂದ್ರನನ್ನು ಬಿಟ್ಟು ಮಿಕ್ಕವರಾರೂ ಲಕ್ಷಿಸಿರುವುದಿಲ್ಲ. ಭಾಷ್ಯಕಾರನ ವಿಷಯ ತಿಳಿಯದು. ಲಕ್ಷ್ಯ ಪದ್ಯಗಳಲ್ಲಿ ಕೆಲವು ಅಸ್ವಕೃತವಿವೆ. ಕೆಲವು ಸ್ವಕೃತ ಇರಬಹುದು. ಕೆಲವಲ್ಲಿ ವೃತ್ತದ ಹೆಸರು ಬಂದಿರುವುದರಿಂದ ಉದಾಹರಣೆಗೆಂದೇ ಅವುಗಳನ್ನು ರಚಿಸಿರಲಿಕ್ಕೆ ಸಾಕು. ಭಾಷ್ಯಕಾರನು ಮೂರು ನಾಲ್ಕು ಸ್ಥಳಗಳಲ್ಲಿ ಗ್ರಂಥಕಾರನನ್ನು ನಿರ್ದೇಶಿಸಿದ್ದರೂ ಹೆಸರಿಸಿಲ್ಲ. ಒಂದೆಡೆ ಆಚಾರ್ಯನೆಂದಿರುವನು, ಇಷ್ಟೆ. ಮೂಲಗ್ರಂಥ ಸೂತ್ರ ರೂಪದಲ್ಲಿದೆ. ರಚನೆಯಕಾಲ ಕ್ರಿ.ಶ. ೯ನೆಯ ಶತಮಾನದ ನಂತರ ಎಂದಿಷ್ಟೆ ಹೇಳಬಹುದು.[2]

ರತ್ನಮಂಜೂಷಾಕಾರ ದಾಕ್ಷಿಣಾತ್ಯ. ಅಕ್ಷರಗಣಗಳ ನಿರೂಪಣೆಗಾಗಿ ಈತನು ಬಳಸಿರುವ ತಂತ್ರ ಅಪೂರ್ವ; ಎಂದರೆ ಪಿಂಗಲನ ತಂತ್ರದಿಂದ ಭಿನ್ನವಾಗಿದೆ. ತುಸು ಹೆಚ್ಚು ಕಡಿಮೆ ಈ ತಂತ್ರ ಈತನಿಗಿಂತ ಮೊದಲಿನವನಾದ ಜನಾಶ್ರಯಿ ಛಂದೋವಿಚಿತಿಕಾರನು ಬಳಸಿದ ತಂತ್ರವನ್ನು ಅನುಸರಿಸಿದೆ. ಜನಾಶ್ರಯಿಕಾರನೂ ದಾಕ್ಷಿಣಾತ್ಯ.

---

[1] ರ.ಮಂ., ಮುನ್ನುಡಿ, ಪು. ೧–೪.

[2] ಹೇ. ಛಂ. ಮುನ್ನುಡಿ, ಪು. ೨.

ಕ್ರಿ. ಶ. ಆರನೆಯ ಶತಮಾನದ ಕೊನೆಯವನೆಂದು ಭಾವಿಸಲಾಗಿದೆ.[1] ಪಿಂಗಲನು ತನ್ನ ತಂತ್ರಕ್ಕಾಗಿ ೩ ಗುರು ಮತ್ತು ೩ ಲಘು ಅಕ್ಷರಗಳನ್ನು ಮೂರು–ಮೂರು ಅಕ್ಷರಗಳಲ್ಲಿ ಕ್ರಮಬದ್ಧವಾಗಿ ಸಂಯೋಜಿಸಿ ೮ ಗಣಗಳನ್ನು ಮಾಡಿಕೊಂಡಿರುವನು. ಇವುಗಳಿಗೆ 'ತ್ರಿಕ'ಗಳೆನ್ನುವರು. ೮ ಗಣಗಳನ್ನೂ ೨ ಬಿಡಿ ಅಕ್ಷರಗಳನ್ನು ಅಂದರೆ—೧ ಗುರು ೧ ಲಘು—ತೆಗೆದುಕೊಂಡು ಇವುಗಳಿಗೆ-ಮ-ಯ-ರ-ಸ-ತ-ಜ-ಭ-ನ ಮತ್ತು ಗುರುಗೆ –ಗ, ಲಘುಗೆ–ಲ ಎಂಬ ಸಂಜ್ಞೆಗಳನ್ನೂ ಕೊಟ್ಟು ತನ್ನ ಸೂತ್ರಗಳನ್ನು ರಚಿಸಿರುವನು. ಜನಾಶ್ರಯೀಕಾರನು ಇವುಗಳಿಗೆ ಬೇರೆ ೧೦ ಗಣಗಳನ್ನು ಸೇರಿಸಿರುವನು. ಇವುಗಳಲ್ಲಿ ೪ ದ್ವಿಕಗಳು (ಪಿಂಗಲನ ಪರಿಭಾಷೆಯಲ್ಲಿ ಗಗ, ಲಗ, ಗಲ, ಲಲ), ಮೂರು ಚತುರಕ್ಷರ ಗಣಗಳು (ನಲ, ನಗ, ರಗ), ಎರಡು ಪಂಚಾಕ್ಷರ ಗಣಗಳು (ರ ಲ ಗ, ಭ ಗ ಗ) ಮತ್ತು ಒಂದು ಷಡಕ್ಷರ ಗಣ (ನನ) ಇವೆ. ಪಿಂಗಲನಲ್ಲಿರುವಂತೆ ಗಲ ಬಿಡಿ ಅಕ್ಷರಗಳೂ ಇವೆ. ರತ್ನಮಂಜೂಷಾಕಾರನು ಚತುರಕ್ಷರ, ಪಂಚಾಕ್ಷರ, ಷಡಕ್ಷರ ಗಣಗಳನ್ನು ಬಿಟ್ಟಿರುವನು. ಗಣಗಳಿಗಿತ್ತ ಸಂಜ್ಞೆಗಳು ಬೇರೆ ಬೇರೆ ಇವೆ. ಇವರಿಬ್ಬರಲ್ಲಿ ಇಷ್ಟೇ ವ್ಯತ್ಯಾಸ.

ರತ್ನಮಂಜೂಷೆಯು ಅಸಮಗ್ರ ಗ್ರಂಥವಿದೆ. ಆಕರಗಳೆಂದು ಬಳಸಿಕೊಂಡ ಎರಡು ಹಸ್ತಪ್ರತಿಗಳಲ್ಲಿ ಒಂದರಲ್ಲಿ ಷಟ್ಪ್ರತ್ಯಯ ಅಂದರೆ ಪದ್ಯ ಪ್ರಸ್ತಾರದ ರೀತಿಗಳನ್ನು ತಿಳಿಸುವ ಕೊನೆಯ ಅಧ್ಯಾಯದಲ್ಲಿ ಮೊದಲಿನ ೧೭ ಸೂತ್ರಗಳಿವೆ. ಎರಡನೆಯದರಲ್ಲಿ ಇನ್ನೆರಡು ಸೂತ್ರಗಳಿದ್ದು ಕೆಳಗೆ ಪ್ರಸ್ತಾರ ವಿಧಿಗಳನ್ನು ತಿಳಿಸುವ ಬೇರೆ ೧೧ ಪದ್ಯಗಳಿವೆ. ಈ ಪದ್ಯಗಳನ್ನು ಸಂಪ್ರತಿಕಾರನು ಸೇರಿಸಿರಬಹುದೆಂದು ವೇಲಣಕರರ ಅಭಿಪ್ರಾಯವಿದೆ.

ಇವಿಷ್ಟು ಈ ಗ್ರಂಥದ ಸ್ವರೂಪ ವೈಶಿಷ್ಟ್ಯಗಳು. ಪಿಂಗಲನ ತ್ರಿಕಪದ್ಧತಿ, ವೃತ್ತದ ಪ್ರಸ್ತಾರ ಮತ್ತು ಘಟಕಗಳ ನಿರೂಪಣೆಗೆ ಸುಲಭ, ಅತ ಏವ ಸೋಯಿಸ್ಕರ ಇದ್ದರೂ ಅದರಿಂದ ವೃತ್ತದ ಸ್ವಾಭಾವಿಕ ಲಯ ಸಂಪೂರ್ಣವಾಗಿ ದುರ್ಲಕ್ಷಿಸಲ್ಪಟ್ಟಿದೆಯೆಂದು ವೇಲಣಕರ ಮತ್ತು ಇತರ ವಿದ್ವಾಂಸರ ಅಭಿಪ್ರಾಯವಿದೆ.[2] ಜನಾಶ್ರಯೀಕಾರ ಇದನ್ನು ಈ ಮೊದಲೇ ಕಂಡುಹಿಡಿದು 'ಪೈಂಗಲಾದಿ ಛಂದೋವಿಚಿತಿಷು ಯಥಾಸಂಭವಂ ನ್ಯೂನಾತಿರೇಕಂ ಪರೀಕ್ಷ್ಯ ಪರಿಹೃತ್ಯ ತದ್ದ್ವಿತೀಯ ಪರಿಷ್ಕೃತಾಮಿಮಾಂ' ಎಂದರೆ ಪಿಂಗಲ ಮೊದಲಾದವರಲ್ಲಿ ಕಂಡುಬರುವ ನ್ಯೂನಾತಿರೇಕಾದಿ ದೋಷಗಳನ್ನು ಪರೀಕ್ಷಿಸಿ, ಪರಿಹರಿಸಿ, ಈ ಗ್ರಂಥವನ್ನು ಬರೆದಿರುವುದಾಗಿ ಇದರ ಪ್ರಥಮ ವ್ಯಾಖ್ಯಾನಕಾರ ಗುಣಸ್ವಾಮಿ ಹೇಳಿರುವನು; ಇದನ್ನೇ ತಾನು ಹೇಳುತ್ತಿರುವುದಾಗಿ ಇದರ ದ್ವಿತೀಯ

1 ಜನಾಶ್ರಯೀ, ಪ್ರ. ಮುನ್ನುಡಿ, ಪು. ೯. ಹೇ. ಛಂ. ಮುನ್ನುಡಿ. ಪು. ೨.

2 ಮ. ಛಂ. ರ. ಪು. ೪೪೫; ವಿ. ಸೀತಾರಾಮಯ್ಯ-ಸಂಸ್ಕೃತ ಮತ್ತು ಪ್ರಾಕೃತ ಛಂದಸ್ಸು (ಇಂಗ್ಲಿಷ್). ಜೆ. ಓ. ಆರ್., ಸಂ. ೧೯, ಪು. ೫೯.

ಅನಾಮಧೇಯ ವ್ಯಾಖ್ಯಾನಕಾರನೆಂದಿರುವನು.[1] ಈಗಿರುವ ಮುದ್ರಿತ ಪ್ರತಿಯಲ್ಲಿರುವ ವ್ಯಾಖ್ಯಾನ ಈ ಎರಡನೆಯವನದು. 'ಗಣಸ್ವಾಮಿ ವಿರಚಿತ ವ್ಯಾಖ್ಯಾಂ ವ್ಯಾಖ್ಯಾಸ್ಯಾಮಃ' ಎಂದಿರುವದರಿಂದ ಈತನ ವ್ಯಾಖ್ಯಾನದಲ್ಲಿ ಗಣಸ್ವಾಮಿಯದೆಷ್ಟು, ತನ್ನದೆಷ್ಟು ಎಂಬುದು ತಿಳಿಯುವಂತಿಲ್ಲ. ಸ್ವತಂತ್ರವೂ ಇರಬಹುದು ಅಥವಾ ಗಣಸ್ವಾಮಿಯನ್ನು ಅನುಸರಿಸಿರಬಹುದು. ಸಾಳ್ವನು (ಕ್ರಿ. ಶ. ೧೫೫೦) ತನ್ನ ರಸರತ್ನಾಕರದಲ್ಲಿ ಸಾಹಿತ್ಯ ಸಂಜೀವನಕಾರ ಗಣೇಶ್ವರನೊಬ್ಬನನ್ನು ಸ್ಮರಿಸಿರುವನು. ಕಿಟಿಲ್ ಬಹುಶಃ ಈ ಗ್ರಂಥ ಕನ್ನಡದಲ್ಲಿರಲಿಕ್ಕಿಲ್ಲ ಎಂದಿರುವರು.[2] ಶೀ. ನಂ. ಶ್ರೀ. ಇದು ಕನ್ನಡದಲ್ಲಿದ್ದಿತೆಂದಿರುವರು.[3] ಈ ಗಣೇಶ್ವರ ಮತ್ತು ಜನಾಶ್ರಯಿಯ ಭಾಷ್ಯಕಾರ ಗಣಸ್ವಾಮಿ ಒಬ್ಬನೇ ವ್ಯಕ್ತಿಯಾಗಿರಬಹುದೆ, ಎಂಬ ಅನುಮಾನ ಹುಟ್ಟುತ್ತದೆ. ಸಾಹಿತ್ಯ ಸಂಜೀವನವನ್ನು ಬರೆದ ಈತ ಲಾಕ್ಷಣಿಕನೆಂಬುದು ನಿರ್ವಿವಾದ. ಜನಾಶ್ರಯಿಯೂ ಒಂದು ಲಕ್ಷಣ ಗ್ರಂಥ. ಆದ್ದರಿಂದ ಇವರಿಬ್ಬರೂ ಒಂದೇ ವ್ಯಕ್ತಿಯಾಗಿರಬಹುದಾಗಿದೆ. ಜನಾಶ್ರಯಿಯ ಎರಡನೆಯ ಭಾಷ್ಯಕಾರನು, ಅವನಾರೆಂಬುದು ಗೊತ್ತಿರದಿದ್ದರೂ, ಜೈನಪರನೆಂಬುದು ಆತನ ಜಿನಮದನಮಥನ ಮತ್ತು ತಂ ಜಿನಮಹಂ ಜಿತಕಲಿಂ ಸುಗತಮೀಡೇ' ಲಕ್ಷ್ಯಪದ್ಯಗಳಲ್ಲಿಯ ಜಿನಸ್ತುತಿಯಿಂದ ಗೊತ್ತಾಗುತ್ತದೆ.[4] ರತ್ನ ಮಂಜೂಷೆಯ ಭಾಷ್ಯಕಾರನು ಈತನ 'ವಿದ್ಯುನ್ನದ್ಧಂ' ಮತ್ತು 'ಏನ ಪ್ರಾಂಶುಂ ಕ್ರೌಂಚಸ್ಯಾಗ್ರಂ' ಲಕ್ಷ್ಯ ಪದ್ಯಗಳನ್ನು ತನಗಾಗಿ ಬಳಸಿಕೊಂಡಿರುವನು.[5] ಇಮ್ಮಡಿ ನಾಗವರ್ಮನೂ ಈತನು ಅಂದರೆ ಜನಾಶ್ರಯಿಯ ದ್ವಿತೀಯ ಭಾಷ್ಯಕಾರನು 'ಅಪರವಕ್ತ್ರ'ವೆಂಬ ಅರ್ಧಸಮ ಚತುಷ್ಪದಿಗೆ ಕೊಟ್ಟಿರುವ 'ಮರಕತ ಸದೃಶಂಚಯಾಮುನಂ' ಲಕ್ಷ್ಯವನ್ನು[6] ದ್ರುತವಿಲಂಬಿತ'ದಲ್ಲಿ ಕನ್ನಡಿಸಿ ಕಾವ್ಯಾವಲೋಕನದಲ್ಲಿ ಐಕ್ಯವೆಂಬ ಕವಿಸಮಯಕ್ಕೆ ಉದಾಹರಣೆಯೆಂದು ಕೊಟ್ಟಿರುವನು.[7] ಆದರೆ ಈ ಪದ್ಯ ಕವಿಸಮಯದ ಪ್ರಥಮ ವಕ್ತಾರ ರಾಜಶೇಖರನ ಕಾವ್ಯಮೀಮಾಂಸೆ ಮತ್ತು ಹೇಮಚಂದ್ರನ ಕಾವ್ಯಾನುಶಾಸನದಲ್ಲಿ ಇದೇ ಸಂದರ್ಭದಲ್ಲಿ

---

[1] ಜನಾಶ್ರಯಿ, ಪು. ೧.

[2] ಛಂ. ಕಿಟಿಲ್, ಮುನ್ನುಡಿ, ಪು. ೪೧. ೪೨.

[3] ಭಾ. ಕಾ. ಮೀ. ಪು. ೪೮೮.

[4] ಜನಾಶ್ರಯಿ, ಪು. ೧೯, ಪ್ರವೃತ್ತಸಮಾನಿಯ ಬಳಿಕೀನ. ಪು. ೫೩, ವಿಲಾಸಿನಿವೃತ್ತಕ್ಕೆ ಲಕ್ಷ್ಯ.

[5] ಜನಾಶ್ರಯಿ, ಪು. ೬೨, ಮತ್ತಾಕ್ರೀಡೆಗೆ ಲಕ್ಷ್ಯ. ರ. ಮಂ. ೭. ೨೧, ನುಂವ್ರ ಕ್ರೀಡೆಗೆ ಲಕ್ಷ್ಯ. ಜನಾಶ್ರಯಿ, ಪು. ೬೬, ಮೇಘ ದಂಡಕಕ್ಕೆ ಲಕ್ಷ್ಯ. ರ. ಮಂ. ೭. ೩೧, ಅತಿಚ್ಛಂದಕ್ಕೆ ಲಕ್ಷ್ಯ.

[6] ಜನಾಶ್ರಯಿ, ಪು. ೨೭.

[7] ಕಾ. ಲೋ. ಪದ್ಯ ೯೨೨.

ದೊರೆಯುವದರಿಂದ ಇವುಗಳಲ್ಲಿ ಒಂದರಿಂದ ಇದನ್ನು ಆತನು ಆಯ್ದುಕೊಂಡಿರುವದು ಹೆಚ್ಚು ಸಂಭವನೀಯವಿದೆ.

ಸಾಳ್ವನು ಜೈನ; 'ನಾಗವರ್ಮ ಕವಿಕಾಮಾದಿಗಳ ಮಾರ್ಗದಿಂ' ಎಂದು ಇಮ್ಮಡಿ ನಾಗವರ್ಮನನ್ನು ಸ್ಮರಿಸಿರುವನು. ಜನಾಶ್ರಯಿಕಾರ, ರತ್ನಮಂಜೂಷಾಕಾರ ಇಬ್ಬರೂ ದಾಕ್ಷಿಣಾತ್ಯರು; ಗಣನಿರ್ದೇಶನಕ್ಕಾಗಿ ತುಸು ಹೆಚ್ಚು ಕಡಿಮೆ ಒಂದೇ ಪದ್ಧತಿಯನ್ನನುಸರಿಸಿರುವರು; ಜನಾಶ್ರಯಿಯ ಪ್ರಥಮ ಭಾಷ್ಯಕಾರ ಸಾಳ್ವನ ಗಣೇಶ್ವರ ನಿರಬಹುದಾಗಿದೆ; ದ್ವಿತೀಯ ಭಾಷ್ಯಕಾರ ಜೈನಪರನೆಂಬುದು ಖಂಡಿತ; ರತ್ನ ಮಂಜೂಷಾಕಾರನೂ ಜೈನನಿರಬಹುದೆಂದು ವೇಲಣಕರ ಸೂಚಿಸಿರುವರು. ಭಾಷ್ಯ ಕಾರನಂತೂ ನಿಸ್ಸಂದೇಹವಾಗಿ ಜೈನ; ಜನಾಶ್ರಯಿಯ ದ್ವಿತೀಯ ಭಾಷ್ಯಕಾರನ ಉದಾಹೃತ ಲಕ್ಷ್ಯಗಳನ್ನೂ ತನಗಾಗಿ ಬಳಸಿಕೊಂಡಿರುವನು. ಇಮ್ಮಡಿ ನಾಗವರ್ಮನು ಜನಾಶ್ರಯಿಯ ದ್ವಿತೀಯ ಭಾಷ್ಯಕಾರನು ಉದಾಹರಿಸಿದ ಲಕ್ಷ್ಯವೊಂದನ್ನು ಈತನಿಂದಲೇ ಆಯ್ದುಕೊಂಡಿರುವನೆಂದು ನಿಶ್ಚಿತವಾಗಿ ಹೇಳಲಿಕ್ಕಾಗದಿದ್ದರೂ, ತನ್ನ ಕಾವ್ಯಾವಲೋಕನದಲ್ಲಿ ಕನ್ನಡಿಸಿ ಸೇರಿಸಿರುವನು. ಇವೆಲ್ಲ ಅಂಶಗಳು ದಕ್ಷಿಣದಲ್ಲಿ ಜೈನರದೊಂದು ಪ್ರತ್ಯೇಕ ಸಾಹಿತ್ಯ ಸಂಪ್ರದಾಯವು ಬೆಳೆದುಬಂದಿರುವುದನ್ನು ಸೂಚಿಸುವವಲ್ಲದೆ, ರತ್ನಮಂಜೂಷೆಯ ಭಾಷ್ಯಕಾರ ಇಮ್ಮಡಿ ನಾಗವರ್ಮನಿರಬಹುದೆಂಬ ಊಹೆಗೆ ಪೋಷಕ ಸನ್ನಿವೇಶವನ್ನು ಒದಗಿಸುವವು.

ರತ್ನಮಂಜೂಷೆಯ ಕಾಲ ಕ್ರಿ. ಶ. ೬ನೆಯ ಶತಮಾನದನಂತರ ಎಂದಿಷ್ಟೇ ಹೇಳಿರುವದರಿಂದ ಕಾಲನಿರ್ದೇಶನದ ಮೇಲಿನ ಗಡುವನ್ನು ಎಲ್ಲಿ ಬೇಕಲ್ಲಿಗೆ ಎಳೆಯ ಬಹುದಾಗಿದೆ. ಗ್ರಂಥೋಕ್ತವಿರುವ ೮೫ ವರ್ಣವೃತ್ತಗಳಲ್ಲಿ ೨೧ ವೃತ್ತಗಳನ್ನು ಈ ಗ್ರಂಥಕಾರ ಮತ್ತು ಆಚಾರ್ಯ ಹೇಮಚಂದ್ರ ಇಬ್ಬರೇ ಲಕ್ಷಿಸಿರುವದರಿಂದ ಈತ ಹೇಮಚಂದ್ರನು ಪ್ರತಿನಿಧಿಸುವ ಜೈನ ಸಾಹಿತ್ಯಪರಂಪರೆಯವನಿರಬೇಕೆಂದು ವೇಲಣಕರ ಅಭಿಪ್ರಾಯ ಪಟ್ಟಿರುವರು.[1] ಆದ್ದರಿಂದ ರತ್ನಮಂಜೂಷಾಕಾರನು ಹೇಮಚಂದ್ರನ ಪೂರ್ವಿಕನೂ ಇರಬಹುದು, ಸಮಕಾಲೀನನಿರಬಹುದು, ಅನಂತರದವನಿರಬಹುದು. ಒಂದೊಮ್ಮೆ ಸಮಕಾಲೀನ ಅಥವಾ ಅನಂತರದವನಿದ್ದರೆ, ಭಾಷ್ಯಕಾರ ಆತನ ಸಮಕಾಲೀನ ಅಥವಾ ಅನಂತರದವನಿರುವುದು ಕ್ರಮಪ್ರಾಪ್ತವಿದೆ. ಗ್ರಂಥಕಾರರಿಗಿಂತ ಭಾಷ್ಯಕಾರರು ಈಚೆಯವರಿರುವದೇ ಹೆಚ್ಚು. ಆದ್ದರಿಂದ ಈತನಾದರೂ ಅನಂತರದವನೆಂದೆ ಬಗೆಯ ಬೇಕಾಗುವುದು. ಹೀಗಿದ್ದರೆ ರತ್ನಮಂಜೂಷೆಯ ಭಾಷ್ಯಕಾರ ಇಮ್ಮಡಿ ನಾಗವರ್ಮ ನಿರಬೇಕೆಂಬ ನಮ್ಮ ಊಹೆಯ ಕುದುರೆ ಇಲ್ಲಿಯೆ ಮುಗ್ಗರಿಸಿ ಬೀಳುವದು.

ಆದ್ದರಿಂದ ರತ್ನಮಂಜೂಷಾಕಾರ ಹೇಮಚಂದ್ರನಿಗಿಂತ ಸಾಕಷ್ಟು ಪ್ರಾಚೀನ ನೆಂಬುದು ಮೊದಲು ಖಚಿತವಾಗಬೇಕು. ರತ್ನಮಂಜೂಷೆ ಒಂದು ಚಿಕ್ಕ ಗ್ರಂಥ.

---

1 ರ. ಮಂ. ಮುನ್ನುಡಿ, ಪು. ೩.

ಇದರಲ್ಲಿ ಒಟ್ಟು ೧೪೦ ಸೂತ್ರ ಮತ್ತು ೧೪೩ ಲಕ್ಷ್ಯಪದ್ಯಗಳಿವೆ. ಗ್ರಂಥದ ಕಾಲ ನಿರ್ದೇಶ ಮೊದಲಾದ ವಿಷಯಗಳಿಗೆ ಇವುಗಳಿಂದ ಸಹಾಯವಾಗುವಂತಿಲ್ಲ. ಆದರೆ ಈ ದಿಸೆಯಲ್ಲಿ ಪ್ರಾಗ್ಗಾಯತ್ರಿ ಪಂಚಕ ಅಂದರೆ ಗಾಯತ್ರಿಯ ಪೂರ್ವದ ಉಕ್ತೆ, ಅತ್ಯುಕ್ತೆ, ಮಧ್ಯಮೆ, ಪ್ರತಿಷ್ಠೆ ಮತ್ತು ಸುಪ್ರತಿಷ್ಠೆ, ಈ ಐದು ಛಂದಸ್ಸುಗಳನ್ನು ಲಕ್ಷಣ ಗ್ರಂಥಗಳಲ್ಲಿ ನಿರ್ದೇಶಿಸುವ ಸಂಪ್ರದಾಯ ಸಹಾಯಕವಾಗಬಲ್ಲದು. ವೈದಿಕ ಛಂದಸ್ಸುಗಳ ಪ್ರವಕ್ತಾರರಾದ ಪತಂಜಲಿ, ಶೌನಕ, ಗಾರ್ಗ್ಯ ಇವುಗಳನ್ನು ಹೆಸರಿಸಿರುವದರಿಂದ ಇವುಗಳ ವೈದಿಕತ್ವವು ವ್ಯಕ್ತವಾಗುತ್ತಿದ್ದರೂ ಪ್ರಯೋಗದಲ್ಲಿ ಕಂಡುಬರುವುದಿಲ್ಲ.[1] ಭರತನು ಇವುಗಳ ಪ್ರಯೋಗವನ್ನು ಕುರಿತು 'ಪ್ರಯೋಗಜಾನಿ ಪೂರ್ವಾಣಿ ಪ್ರಾಯಶೋ ನಭವಂತಿಹಿ' ಎಂದರೆ 'ಪ್ರಾಯಶಃ' ವ್ಯವಹಾರದಲ್ಲಿ ಇವುಗಳ ಬಳಕೆ ಇರುವದಿಲ್ಲ ಎಂದಿರುವನು ಮತ್ತು ಇದಕ್ಕನುಸಾರವಾಗಿ ತನ್ನ ಗ್ರಂಥದಲ್ಲಿ ಅಲ್ಲೊಂದು ಇಲ್ಲೊಂದು ಇಂಥ ಒಟ್ಟು ೧೨ ವೃತ್ತಗಳನ್ನೂ ಬಳಸಿರುವನು (ಹೇ. ಛಂ. ಪ್ರ. ೨೮೫, ಸಂಸ್ಕೃತ ವೃತ್ತರೂಪ ಸೂಚಿ). ಭರತನ ಈ ಉಕ್ತಿಗೆ ಆತನ ಭಾಷ್ಯಕಾರ ಅಭಿನವಗುಪ್ತ 'ಲಕ್ಷ್ಯತೋ ಸ್ಥಿತಾನೀತಿ ವೇದವತ್ ದೃಶ್ಯತೇ ಇತಿಭಾವಃ' ಎಂದಿರುವದರಿಂದ ಲೌಕಿಕ ವ್ಯವಹಾರದಲ್ಲಿ ಇವುಗಳ ಬಳಕೆ ಅಯುಕ್ತವೆಂದು ಆತನ ಅಭಿಪ್ರಾಯವಿರುವಂತೆ ತೋರುತ್ತದೆ. ವೇದಗಳಲ್ಲಿ ಇವುಗಳ ಬಳಕೆ ಇದೆ ಎಂಬುವದಕ್ಕೆ ಅಥರ್ವವೇದದ ೨೦ನೆಯ ಕಾಂಡದಲ್ಲಿ ಕೆಲವು ಸೂಕ್ತಗಳಿದ್ದು ಋಗ್ಮ್ಯಯವೆಂದು ಭಾವಿಸಿದರೆ ಅವು ಪ್ರಾಗ್ಗಾಯತ್ರಿ ಛಂದಗಳ ಪ್ರಯೋಗವೆನ್ನಬಹುದೆಂದು ವಿದ್ವಾಂಸರ ಅಭಿಪ್ರಾಯವಿದೆ.[2]

ಅಭಿನವಗುಪ್ತನ ಈ ಅಭಿಪ್ರಾಯಕ್ಕೆ ಆಧಾರವೆಂಬಂತೆ ಪಿಂಗಲನು ಪ್ರಾಗ್ಗಾಯತ್ರಿ ಛಂದಗಳನ್ನು ಉಲ್ಲೇಖಿಸಿರುವದಿಲ್ಲ. ಪಿಂಗಲನನ್ನು ಹೆಚ್ಚಾಗಿ ಅನುಸರಿಸಿದ ಜಯದೇವನು ಸಹ ಇವುಗಳನ್ನು ಬಿಟ್ಟಿರುವನು. ಆತನ ನಂತರದವರು, ನಮ್ಮ ಆದಿನಾಗವರ್ಮ ಗುಣಚಂದ್ರ ಸಹ, ಇವುಗಳನ್ನು ನಿರ್ದೇಶಿಸಿರುವರು. ರತ್ನಮಂಜೂಷಾಕಾರ ವೈದಿಕ ಛಂದಸ್ಸುಗಳನ್ನು ಉಲ್ಲೇಖಿಸಿಲ್ಲವಾದರೂ, ಲೌಕಿಕವೃತ್ತಗಳ ನಿರ್ದೇಶನದಲ್ಲಿ ಪ್ರಾಗ್ಗಾಯತ್ರಿಗಳನ್ನು ಹೇಳಿಲ್ಲ. ಗಾಯತ್ರಿಯಿಂದ ಪ್ರಾರಂಭವಾಗುತ್ತದೆ ಆತನ ನಿರೂಪಣೆ. ಪಿಂಗಲ ಜಯದೇವ ಸಹ ಲೌಕಿಕ ವೃತ್ತಗಳ ನಿರೂಪಣೆಯನ್ನು ಗಾಯತ್ರಿಯಿಂದ ಪ್ರಾರಂಭಿಸಿರುವರು. ಜಯದೇವನಂತೂ ಗಾಯತ್ರಿಯೆ ಆದ್ಯ ಛಂದಸ್ಸೆಂದು ಭಾವಿಸಿ, ಮಂಗಲ ಶ್ಲೋಕದಲ್ಲಿ 'ಗಾಯತ್ರಾಂ ಛಂದಸಾಂ ಪೂರ್ವಂ ವರ್ಧಮಾನಾಕ್ಷರಂ ಪರಂ, ವಾಙ್ಮಂಡನಕರಂ ನೌಮಿ ಚಿತ್ರವೃತ್ತ ಪ್ರಸಿದ್ಧಯೇ' ಎಂದು ಗಾಯತ್ರಿಗೆ ನಮಸ್ಕರಿಸಿರುವನು.[3] ಇತ್ತ ಗಣಮಾತ್ರೆಗಳ ನಿರೂಪಣೆಗೆ ಜನಾಶ್ರಯಿಯನ್ನು ಅನುಸರಿ

---

[1] ವೈ. ಛಂ. ಮೀ. ಪು. ೮೭.

[2] ಅದೇ, ಪು. ೮೮.

[3] ಜಯದಾಮನ್, ಪು. ೧ (ಜಯದೇವ ಛಂದ ಮತ್ತು ಅದಕ್ಕಿರುವ ಹರ್ಷಟನ ವೃತ್ತಿ)

ಸಿರುವನು. ಜನಾಶ್ರಯಿಯ ಕಾಲ ಕ್ರಿ.ಶ. ೬ನೆಯ ಶತಮಾನದ ಕೊನೆ. ಜನಾಶ್ರಯಿಕಾರ ಆಂಧ್ರದವನಿದ್ದು ಛಂದಃಶಾಸ್ತ್ರದಲ್ಲಿ ಒಬ್ಬ ಮತಪ್ರವರ್ತಕನಿದ್ದನು.[1] ಪಿಂಗಲನನಂತರ ಪ್ರಾಕೃತ ಪಿಂಗಲ, ಬೃಹತ್ಪಿಂಗಲ ಗ್ರಂಥಗಳು ಹುಟ್ಟಿಕೊಂಡಂತೆ, ಕರ್ಣಾಟಕದಲ್ಲಿ ಛಂದಃಶಾಸ್ತ್ರಜ್ಞರೆಲ್ಲರೂ ನಾಗವರ್ಮ ಎಂಬ ಭಾವನೆ ಬೆಳೆದುಬಂದಂತೆ, ತೆಲುಗಿನಲ್ಲಿ ಈತನ ಹೆಸರಿರುವ 'ಕವಿಜನಾಶ್ರಯಮು' ಎಂಬ ಪ್ರಾಚೀನ (ಕ್ರಿ.ಶ. ೧೨ನೆಯ ಶತಮಾನ) ಛಂದೋಗ್ರಂಥವಿದೆ. ಜಯದೇವನ ಕಾಲ ಕ್ರಿ.ಶ. ೯೦೦ ಮೊದಲು; ಕ್ರಿ.ಶ. ೬೦೦ ಮೊದಲೆಂದು ಸಹ ಊಹಿಸಬಹುದಾಗಿದೆ.[2]

ರತ್ನಮಂಜೂಷೆ ಪ್ರಾಚೀನಗ್ರಂಥವೆಂಬುದಕ್ಕೆ ಇನ್ನೊಂದು ಸೂಚನೆ ಇದರಲ್ಲಿ ಲಕ್ಷಿಸಿದ 'ಅತಿಚಕ್ಷಂಡಸ್' ಎಂಬ ವೃತ್ತದಲ್ಲಿ ದೊರೆಯುತ್ತದೆ.[3] ಸುಪರಿಚಿತ 'ಭುಜಂಗ ವಿಜೃಂಭಿತ' ವೃತ್ತದ ಘಟಕಗಳ ಮಧ್ಯದಲ್ಲಿ ೮ ಲಘುಗಳನ್ನು ಸೇರಿಸಿದರೆ ಈ ವೃತ್ತ ಸಿದ್ಧವಾಗುತ್ತದೆ. ಭುಜಂಗವಿಜೃಂಭಿತ ೨೬ ಅಕ್ಷರಗಳ ಬಂಧ. ಪ್ರತಿ ಪಾದದಲ್ಲಿ ಮ-ಮ-ತ-ನ-ನ-ನ-ರ-ಸ-ಲ-ಗ ಹೀಗೆ ೮ ಗಣಗಳೂ ೧ ಲಘು, ೧ ಗುರು ಇರುತ್ತವೆ. ಇವುಗಳ ಮಧ್ಯದಲ್ಲಿ ಅಂದರೆ ಮ-ಮ-ತ-ನ-ನ ನಂತರ ೮ ಲಘು ಅಕ್ಷರಗಳನ್ನು ಸೇರಿಸಿದರೆ 'ಅತಿಚಕ್ಷಂಡಸ್' ವೃತ್ತವಾಗುವದು. ಆಗ ಇದರ ಪ್ರಸ್ತಾರ ಮ-ಮ-ತ-ನ-ನ-ನ-ನ-ನ-ಸ-ಜ-ಜ-ಗ ಆಗುವದು. ಇದನ್ನೇ ಜನಾಶ್ರಯಿಯಲ್ಲಿ 'ಮೇಘದಂಡಕ'ವೆಂದು ಹೆಸರಿಸಲಾಗಿದೆ.[4] ಇದಕ್ಕೆ ಇನ್ನೊಂದು ಅಂದರೆ ಒಟ್ಟು ೯ ಲಘು ಅಕ್ಷರಗಳನ್ನು ಸೇರಿಸಿ 'ಪಿಪೀಲಿಕಾಕರಭ' ಎಂಬ ಹೆಸರಿನಿಂದ ಸ್ವಯಂಭು ತನ್ನ ಗ್ರಂಥದಲ್ಲಿ ಸೇರಿಸಿರುವನು.[5] ಈ ಮಾರ್ಪಾಟಿನಿಂದ ವೃತ್ತದ ಪ್ರಸ್ತಾರ ಮ-ಮ-ತ-ನ-ನ-ನ-ನ-ನ-ಲ-ಲ-ಜ-ಭ-ರ ಆಗಿದೆ. ಹೇಮಚಂದ್ರನು ಇದೇ ಹೆಸರಿನಿಂದ ಈ ಛಂದೋಬಂಧವನ್ನು ತನ್ನ ಗ್ರಂಥದಲ್ಲಿ ಲಕ್ಷಿಸಿರುವನು.[6] ರತ್ನಮಂಜೂಷಾಕಾರನು ಈ ವೃತ್ತಕ್ಕಾಗಿ ಜನಾಶ್ರಯಿಯನ್ನು ಅನುಸರಿಸಿರುವದರಿಂದ ಮತ್ತು ಸ್ವಯಂಭು ಒಂದು ಅಕ್ಷರವನ್ನು ಹೆಚ್ಚಿಗೆ ಸೇರಿಸಿ ವೃತ್ತದ ರೂಪವನ್ನು ಬದಲಾಯಿಸಿರುವದರಿಂದ, ಈತನು ಜನಾಶ್ರಯಿಕಾರ ಮತ್ತು ಸ್ವಯಂಭುವಿನ ಮಧ್ಯದವನೆಂದು ಭಾವಿಸಬಹುದಾಗಿದೆ. ಸ್ವಯಂಭು ಕ್ರಿ.ಶ. ೬೭೭–೯೬೦ ಗಡುವಿನಲ್ಲಿ ಜೀವಿಸಿರಬಹುದೆಂದು ತಿಳಿಯಲಾಗಿದೆ.[7] ಅಪಭ್ರಂಶ ಸಾಹಿತ್ಯದಲ್ಲಿ ಸ್ವಯಂಭು ಅಗ್ರಗಣ್ಯ

---

1 ಜನಾಶ್ರಯಿ, ಮುನ್ನುಡಿ, ಪು. ೧,೮

2 ಜಯದಾಮನ್, ಮುನ್ನುಡಿ, ಪು. ೩೩

3 ರ. ಮಂ. ೭.೩೨

4 ಜನಾಶ್ರಯಿ, ೪.೧೧೬

5 ಸ್ವಯಂಭು, ೧-೩೬

6 ಹೇ. ಛಂ. ೨-೩೮೬

7 ಪ. ಚ. ಸಂ. ೧–ಮುನ್ನುಡಿ, ಆಚಾರ್ಯಜಿನವಿಜಯಮುನಿ. ಸ್ವಯಂಭೂ, ಮುನ್ನುಡಿ, ಪು. ೨

ವೃತ್ತಿ. ಈತನ 'ಪಉಮಚರಿಉ' ಎಂಬ ಮಹಾಕಾವ್ಯಾತ್ಮಕ ಜೈನರಾಮಾಯಣವು ಅಪಭ್ರಂಶ ಸಾಹಿತ್ಯದಲ್ಲಿ ಪ್ರಥಮ ದರ್ಜೆಯ ಗ್ರಂಥವಿದೆ. ಈತನ ಸ್ವಯಂಭೂ ಛಂದಸ್ಸು ಅಧಿಕಾರಯುಕ್ತ ಲಕ್ಷಣಗ್ರಂಥವೆನಿಸಿಕೊಂಡಿದೆ. ಮೂಲದಲ್ಲಿ ಈತನು ವರ್ಹಾಡದ ಅಂದರೆ ಸದ್ಯದ ಮಹಾರಾಷ್ಟ್ರದಲ್ಲಿಯ ವಿದರ್ಭದವನಿದ್ದು, ಕರ್ನಾಟಕಕ್ಕೆ ವಲಸೆ ಬಂದು ರಾಷ್ಟ್ರಕೂಟ ಅರಸರ ಆಶ್ರಯದಲ್ಲಿ ತನ್ನ ಗ್ರಂಥಗಳನ್ನು ರಚಿಸಿದನು.

ಮಾತ್ರಾವೃತ್ತ ಪ್ರಕರಣದಲ್ಲಿ 'ಗಲಿತಕ'ವೆಂಬ ಛಂದೋಬಂಧವನ್ನು ಲಕ್ಷಿಸಿ ರತ್ನಮಂಜೂಷಾಕಾರನು ಆಧುನಿಕ ವಿದ್ವಾಂಸರನ್ನು ಗೊಂದಲದಲ್ಲಿ ಕೆಡವಿರುವನು.[1] ಗಲಿತಕ ಶುದ್ಧ ಪ್ರಾಕೃತ ಬಂಧ; ಪುರಾತನ ಬಂಧ. ಪ್ರವರಸೇನನ 'ಸೇತುಬಂಧ' ಮತ್ತು ಕಾಲಿದಾಸನ ವಿಕ್ರಮೋರ್ವಶೀಯದಲ್ಲಿ ಬಳಸಲ್ಪಟ್ಟಿದೆ. ಇದರಲ್ಲಿ ಅನೇಕ ಭೇದಗಳಿವೆ. 'ಸಂಸ್ಕೃತನಾಟ್ಯಾಯಾರ್ಯಾದ್ಯಾಃ ಪ್ರಾಕೃತ ವಿಷಯೇತು ಗಲಿತಕಾದ್ಯಾ ಬಹುಧಾ'- ಅಂದರೆ ಸಂಸ್ಕೃತದಲ್ಲಿ ಆರ್ಯಾದಿಗಳು ಹೇಗೊ ಹಾಗೆ ಪ್ರಾಕೃತದಲ್ಲಿ ಗಲಿತಕಾದಿಗಳೆಂದು ಜಯಕೀರ್ತಿ ವರ್ಣಿಸಿರುವನು.[2] ಹೀಗಿದ್ದರೂ ಯುಕ್ತಸೂತ್ರದೊಡನೆ ಇವನ್ನು ಸಂಸ್ಕೃತ ಮಾತ್ರಾ ವೃತ್ತಗಳಲ್ಲಿ ರತ್ನಮಂಜೂಷಾಕಾರನು ಅದೆಂತು ಸೇರಿಸಿರುವನೆಂಬುದು ತಿಳಿಯದಾಗಿದೆ. ಇದಕ್ಕೆ ಪ್ರಾಕೃತಾದಿ ದೇಶೀ ಬಂಧಗಳನ್ನು ಸಂಸ್ಕೃತದಲ್ಲಿ ಅಳವಡಿಸಿಕೊಳ್ಳುವ, ಎಂದಿನಿಂದಲೂ ನಡೆದು ಬಂದ ಪರಂಪರೆಯೊಂದೇ ಸಮಾಧಾನ. ಈ ಪರಂಪರೆಗೆ ಅತ್ಯಂತ ಪ್ರಾಚೀನವಿರುವ ಸಂಸ್ಕೃತದಲ್ಲಿಯ ಆರ್ಯಾ ವೈತಾಲಿಕಗಳೇ ಸಾಕ್ಷಿ.[3] ಇದಕ್ಕೆಂತಲೇ ಪಿಂಗಲನು ಇವುಗಳನ್ನು 'ಕೇವಲ ಲೌಕಿಕ'ವೆಂದು ವಿಂಗಡಿಸಿರುವನು. ಗಲಿತಕವನ್ನು ಲಕ್ಷಿಸಿ ರತ್ನಮಂಜೂಷಾಕಾರನು ಈ ಉಪಕ್ರಮವನ್ನು ಮುಂದುವರಿಸಿರುವನೆನ್ನಬಹುದು. ಈತನು ಲಕ್ಷಿಸಿದ ಗಲಿತಕದ ತದ್ರೂಪವಿರದಿದ್ದರೂ ಸಂಸ್ಕೃತದಲ್ಲಿ ರಚಿಸಿದ ಇದರದೊಂದು ಭೇದ ಕಾಲಿದಾಸನ ವಿಕ್ರಮೋರ್ವಶೀಯದಲ್ಲಿ (೪-೫೬, ೫೭) ದೊರೆಯುವದರಿಂದ ಈ ಬಂಧ ಒಂದೊಮ್ಮೆ ಕಾಲಿದಾಸಾದಿ ಪ್ರಾಚೀನ ಕವಿಗಳ ಮೆಚ್ಚಿಕೆಗೆ ಪಾತ್ರವಾಗಿತ್ತೆಂದು ತೋರುತ್ತದೆ. ವಿಕ್ರಮೋರ್ವಶೀಯದಲ್ಲಿಯ ಗಲಿತಕವನ್ನು ವೇಲಣಕರ 'ವಿಕಾಲ ಗಲಿತ'ವೆಂದು ಗುರುತಿಸಿರುವರು.[4] ರತ್ನಮಂಜೂಷಾಕಾರನನ್ನು ಬಿಟ್ಟು ಇತರರಾರೂ, ಜನಾಶ್ರಯಿ ಸಹ, ಈ ಬಂಧವನ್ನು ಸಂಸ್ಕೃತ ಬಂಧವೆಂದು ಲಕ್ಷಿಸಿಲ್ಲವೆಂಬುದು ಈ ಗ್ರಂಥದ ಪ್ರಾಚೀನತೆಯನ್ನು ಸೂಚಿಸುವ ಇನ್ನೊಂದು ಆಧಾರವೆಂದು ಬಗೆಯಬಹುದಾಗಿದೆ. ಪಿಂಗಲನ ನಂತರ ಬರುವ ಜಯದೇವ, ಜನಾಶ್ರಯಿಕಾರ, ರತ್ನಮಂಜೂಷಾಕಾರ, ಸ್ವಯಂಭೂ ನಾಲ್ವರೂ ಒಂದೇ ಕಾಲಖಂಡ

1 ರ.ಮಂ. ೨, ೧೬, ಟಿಪ್ಪಣಿ ಪು. ೪೬.

2 ಜಯದಾಮನ್, ಪು. ೪೬. (ಜ.ಕೀ. ಛಂದೋನುಶಾಸನ. ೧. ೨೨).

3 ಜಯದಾಮನ್, ಪು. ೨೦. ಮುನ್ನುಡಿ,

4 ವೇ. ಛಂ. ಮುನ್ನುಡಿ. ಪು. ೧೪-೧೫, ಅಡಿಟಿಪ್ಪಣಿ ೧೩

ದಲ್ಲಿ (ಅಂದರೆ ಕ್ರಿ.ಶ. ಸುಮಾರು ೬೦೦-೧೦೦೦) ಬರುವರು. ಜಯದೇವನ ನಂತರ ರತ್ನಮಂಜೂಷಾಕಾರ, ಅನಂತರ ಜನಾಶ್ರಯಿ, ಆಮೇಲೆ ಸ್ವಯಂಭೂ ಎಂದಿಟ್ಟುಕೊಂಡರೆ ಗಲಿತಕದ ಪ್ರಮೇಯಕ್ಕೆ ತಕ್ಕಮಟ್ಟಿಗೆ ಸಮಂಜಸ ಉತ್ತರ ದೊರೆಯುತ್ತದೆ. ಜನಾಶ್ರಯಿಕಾರನು ' ಪೈಂಗಲಾದಿ 'ಗಳ ಗ್ರಂಥಗಳಲ್ಲಿ ಕಂಡುಬರುವ ದೋಷಗಳನ್ನು ಪರಿಹರಿಸುವ ಪ್ರತಿಜ್ಞೆಮಾಡಿ ತನ್ನ ಗ್ರಂಥವನ್ನು ಬರೆದಿರುವನು. ಈ ಪೈಂಗಲಾದಿಗಳಲ್ಲಿ ರತ್ನಮಂಜೂಷಾಕಾರನೂ ಒಬ್ಬನಿದ್ದು ಜನಾಶ್ರಯಿಕಾರನ ಮೊದಲೇ ಪಿಂಗಲನ ೮ ತ್ರಿಕ ಮತ್ತು ಲಗ ಎರಡು ಬಿಡಿ ಅಕ್ಷರಗಳಿಗೆ ನಾಲ್ಕು ದ್ವಿಕ (ಅಂದರೆ ಗಗ, ಗಲ. ಲಗ, ಲಲ) ಗಳನ್ನು ಸೇರಿಸಿ ಈ ಕಾರ್ಯಕ್ಕೆ ಕೈಹಾಕಿರಬೇಕು. ಮುಂದೆ ಜನಾಶ್ರಯಿಕಾರನು ಇವುಗಳಿಗೆ ಹೆಚ್ಚಿಗೆ ಆರು ಚತುರಕ್ಷರ, ಪಂಚಾಕ್ಷರ, ಷಡಕ್ಷರ ಗಣಗಳನ್ನು ಸೇರಿಸಿ ಮೇಲಿನಂತೆ—ಪ್ರತಿಜ್ಞೆಗೈದು ತನ್ನ ಗ್ರಂಥವನ್ನು ಬರೆದಿರಬೇಕು. ಬದಲಾಗಿ ಈಗ ಭಾವಿಸಿದಂತೆ ಜನಾಶ್ರಯಿಕಾರನೇ ಮೊದಲಿನವನೆಂದು ತಿಳಿದರೆ ರತ್ನಮಂಜೂಷಾಕಾರನು ಆತನ ಚತುರಕ್ಷರಾದಿ ಆರು – ಗಣ – ಗಣಗಳನ್ನೇಕೆ ಬಿಟ್ಟನೆಂಬುದಕ್ಕೆ ಉತ್ತರ ದೊರೆಯುವದಿಲ್ಲ.

ಒಟ್ಟಿನಲ್ಲಿ ರತ್ನಮಂಜೂಷೆಯೊಂದು ಪ್ರಾಚೀನ ಗ್ರಂಥವೆಂಬುದು ಖಚಿತ. ಆದ್ದರಿಂದ ಇದರಲ್ಲಿಯ ೬೫ ವರ್ಣವೃತ್ತಗಳಲ್ಲಿ ೨೧ ವೃತ್ತಗಳನ್ನು ಹೇಮಚಂದ್ರನೊಬ್ಬನೇ ಲಕ್ಷಿಸಿದ್ದರೂ, ಆತನೇ ಇವುಗಳನ್ನು ಈ ಗ್ರಂಥದಿಂದ ಆಯ್ದುಕೊಂಡಿರುವನೆಂದು ನಿಸ್ಸಂದೇಹವಾಗಿ ಹೇಳಬಹುದು. ಹೇಮಚಂದ್ರನೊಬ್ಬ ನಿಷ್ಣಾತ ಸಂಗ್ರಹಕಾರ; ಅವನಲ್ಲಿ ನಾವೀನ್ಯವೆಂಬುದಿಲ್ಲ; ಉಪಲಬ್ಧವಿದ್ದ ಎಲ್ಲ ಗ್ರಂಥಗಳಿಂದ ತನಗೆ ಉಪಯುಕ್ತವಿರುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಸಮನ್ವಯಿಸಿ, ತಪ್ಪು ತಡೆಗಳಿಲ್ಲದೆ ಎಲ್ಲರಿಗೂ ತಿಳಿಯುವಂತೆ ನಿರೂಪಿಸುವದು ಆತನ ವೈಶಿಷ್ಟ್ಯವೆಂಬ ವೇಲಣಕರರ ಮಾತುಗಳು ಈ ಸಂದರ್ಭದಲ್ಲಿ ಪೂರಕವಾಗಿವೆ.[1] ವಿಂಟರನಿಟ್ಜ್, ಹೇಮಚಂದ್ರನಲ್ಲಿ ನಾವೀನ್ಯವಿಲ್ಲದಿದ್ದರೂ, ಅಗಾಧ ಪಾಂಡಿತ್ಯ ಮತ್ತು ವ್ಯವಹಾರಿಕ ದೃಷ್ಟಿಯಿಂದಾಗಿ ಆತನ ಗ್ರಂಥಗಳು ಬಹಳ ಉಪಯುಕ್ತವಿವೆ, ಎಂದಿರುವನು.[2] ಹೆಚ್ಚೇಕೆ, ಹೇಮಚಂದ್ರನ ಸಮಕಾಲೀನರೇ ಆತನಲ್ಲಿ ನಾವೀನ್ಯವಿಲ್ಲೆಂದು ಟೀಕಿಸಿರುವಹಾಗಿ ತೋರುತ್ತದೆ. ಅಂತೆಯೆ ಆತನು 'ಅನಾದಯ ಏವೈತಾ ವಿದ್ಯಾಃ ಸಂಕ್ಷೇಪ ವಿಸ್ತಾರ ವಿವಕ್ಷಯಾ ನವನವೀ ಭವಂತಿ, ತತ್ತತ್ಕರ್ತೃಕಾಶ್ಚೋಚ್ಯಂತೇ'–ವಿದ್ಯೆಗಳೆಲ್ಲ ಅನಾದಿ, ಅವುಗಳನ್ನು ಸಂಕ್ಷೇಪಿಸಿ ಅಥವಾ ವಿಸ್ತರಿಸಿ ನಿರೂಪಿಸುವದರಿಂದ ಹೊಸವೆನಿಸುತ್ತವೆ ಮತ್ತು ಇದು ಈತನಕೃತಿ, ಅದು ಆತನ ಕೃತಿ, ಎನ್ನುತ್ತೇವೆ, ಎಂದು 'ಪ್ರಮಾಣಮೀಮಾಂಸೆ' ಎಂಬ ತನ್ನ ಗ್ರಂಥದಲ್ಲಿ ಸಮರ್ಥಿಸಿಕೊಂಡಿರುವನು.[3]

---

1 ಜಯದಾಮನ್, ಮುನ್ನುಡಿ, ಪು. ೪೪

2 ಹೇ. ಜೀ. ಚ. ಮುನ್ನುಡಿ, ಪು. ೧೫

3 ಹೇ. ಕಾ. ಸಂ. ೨, ಪು. ೩೧೪

ಇನ್ನು ಭಾಷ್ಯಕಾರನ ವಿಚಾರ. ಈತನು ಜೈನ; ಹೇಮಚಂದ್ರನ ಸಮಕಾಲೀನ ಅಥವಾ ನಂತರದವ; ಆತನಲ್ಲಿ ಪೂಜ್ಯಭಾವನೆಯನ್ನು ತಳೆದವ; ಆತನ ಛಂದೋನು–ಶಾಸನದ ಪರಿಚಯವಿದ್ದವನೆಂಬುದರಲ್ಲಿ ಸಂದೇಹವಿಲ್ಲ. ಗಾಥೆ ಅಥವಾ ಗ್ರಂಥೋಕ್ತ ಲಕ್ಷಣಗಳಿಗೆ ಹೊಂದದಿರುವ ಪದ್ಯಗಳ ವಿಚಾರದಲ್ಲಿ ಇವನು ಉದಾಹರಿಸಿದ 'ಯುಧಿಷ್ಠಿರೋ ಧರ್ಮಮಯೋ' ಶ್ಲೋಕ ಹೇಮಚಂದ್ರನ ಛಂದೋನುಶಾಸನದಲ್ಲಿಯೂ ದೊರೆಯುತ್ತದೆ.[1] ಆದರೆ ಅಲ್ಲಿ ಇದು 'ಪರಜಾತಿ' ಅಂದರೆ ಬೇರೆ ಬೇರೆ ವೃತ್ತಗಳ ಪಾದಗಳಿಂದ (ಪಾದಾಕ್ಷರಗಳಲ್ಲಿ ಹೆಚ್ಚುಕಡಿಮೆ ಇದ್ದರೂ) ಸಿದ್ಧವಾದ ವೃತ್ತಗಳ ಲಕ್ಷ್ಯವಾಗಿದೆ. ಈ ಕಾರಣದಿಂದ ಮತ್ತು ಮಹಾಭಾರತದಂಥ ಪ್ರಾಚೀನ ಮತ್ತು ಸರ್ವಶ್ರುತ ಗ್ರಂಥದಲ್ಲಿಯ ಪದ್ಯವಿರುವದರಿಂದ ಇದೊಂದು ಆಕಸ್ಮಿಕ ಘಟನೆಯೆನ್ನಬಹುದು. ಹೀಗಿದ್ದರೆ ಇನ್ನೂ ಒಂದು ಉದಾಹರಣೆ ಇದೆ. ಛಂದಃ ಶಾಸ್ತ್ರದಲ್ಲಿ ಲಘು ಅಕ್ಷರದ ಮುಂದೆ ಒತ್ತಕ್ಷರವಿದ್ದರೆ ಆ ಲಘು, ಗುರುವಾಗುವದೆಂಬ ಸಾಮಾನ್ಯ ನಿಯಮವಿದೆ. ಆದರೆ ಒಮ್ಮೊಮ್ಮೆ ಅದು ಲಘುವಾಗಿಯೇ ಉಳಿಯುತ್ತದೆ. ರತ್ನ ಮಂಜೂಷೆಯಲ್ಲಿ ಇದನ್ನು ಕುರಿತಿರುವ ಸೂತ್ರಕ್ಕೆ ಭಾಷ್ಯಕಾರನು 'ಧನಂ ಪ್ರದಾನೇನ ಶ್ರುತೇನ ಕರ್ಣೌ....' ಎಂಬುದೊಂದು ನೀತಿಯನ್ನು ಉದಾಹರಿಸಿರುವನು.[2] ಇಲ್ಲಿ ಶ್ರುತೇನದ 'ಶ್ರು' ದ್ವಿತ್ವಾಕ್ಷರವಿದ್ದರೂ ಅದರ ಹಿಂದಣ ಪ್ರದಾನೇನದಲ್ಲಿಯ 'ನ' ಲಘುವಾಗಿಯೇ ಉಳಿದಿರುವದನ್ನು ತೋರಿಸಿರುವನು. ಹೇಮಚಂದ್ರನ ವಿವರಣೆ ಹೀಗೆಯೆ ಇದ್ದು ಇದೇ ಉದಾಹರಣೆ ಅಲ್ಲಿಯೂ ಇದೆ.[3]

ಹೇಮಚಂದ್ರನು ಕುಶಲ ಸಂಗ್ರಹಕಾರನಿದ್ದುದರಿಂದ ಅವನೇ ಭಾಷ್ಯಕಾರನ ಈ ಉದಾಹರಣೆಗಳನ್ನು ಎತ್ತಿಕೊಂಡಿರಬಾರದೇಕೆ, ಎಂದು ಕೆಲವು ದೀರ್ಘದರ್ಶಿಗಳು ಪ್ರಶ್ನಿಸಬಹುದು. ಆದರೆ ಹೀಗಿರಲಾರದು. ಭಾಷ್ಯಕಾರನಿಗೆ ಹೇಮಚಂದ್ರನಲ್ಲಿ ಪೂಜ್ಯಬುದ್ಧಿ ಇದ್ದಿತು. ಜೈನ ಧರ್ಮದಲ್ಲಿ ಸರ್ವಜ್ಞಪದವು ಜಿನ ಅಥವಾ ತೀರ್ಥಂಕರರಿಗೆ ಅನ್ವಯಿಸುತ್ತದೆ. ಹೇಮಚಂದ್ರನನ್ನು 'ಕಲಿಕಾಲ ಸರ್ವಜ್ಞ' ಅಂದರೆ ಕಲಿಯುಗದ ಸರ್ವಜ್ಞ, ಜಿನ, ಅಥವಾ ಜಿನಸಮಾನ ಎಂದು ಜನ ಆತನಲ್ಲಿ ಪೂಜ್ಯಭಾವನೆಯನ್ನು ತಳೆದಿದ್ದಿತು. ಇವರಲ್ಲಿ ಭಾಷ್ಯಕಾರನೂ ಒಬ್ಬನೆಂಬುದು 'ಸ್ವಾಗತಾ' ವೃತ್ತಕ್ಕೆ ಆತನು ಉದಾಹರಿಸಿರುವ

> ಧರ್ಮ ತೀರ್ಥಕರ ಮುಖ್ಯ ನಮಸ್ತೇ ನಾಥ ಭವಬೀಜ ನಮಸ್ತೆ |
> ಬುದ್ಧ ಸರ್ವಜನ ವೃತ್ತನಮಸ್ತೇ ಹೇಮನಾಮ ಜಿನಮಾನ ನಮಸ್ತೇ ‖ [4]

---

[1] ಹೇ. ಛಂ. ೨–೧೫೬೩

[2] ರ. ಮಂ. ೧.೧೧

[3] ಹೇ. ಛಂ. ೧–೬.೩

[4] ರ.ಮಂ. ೫.೩೦.

ಈ ಪದ್ಯದಿಂದ ಗೊತ್ತಾಗುತ್ತದೆ. ಒಂದೊವ್ಮೆ ಹೇಮಚಂದ್ರನೇ ಭಾಷ್ಯಕಾರನಿಂದ ಮೇಲಿನ ಉದಾಹರಣೆಗಳನ್ನು ತೆಗೆದುಕೊಂಡಿದ್ದರೆ ಆತನು ಹೇಮಚಂದ್ರನಿಗಿಂತ ಮೊದಲಿನವನಾಗಬೇಕು. ಹೀಗಿದ್ದರೆ ಹೇಮಚಂದ್ರನ ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷ ಸ್ತುತಿಯಿರುವ ಈ ಲಕ್ಷ್ಯ ಪದ್ಯಕ್ಕೆ ಅರ್ಥವಿಲ್ಲದಂತಾಗುವದು, ಆದ್ದರಿಂದ ಅವನು ಹೇಮಚಂದ್ರನ ಸಮಕಾಲೀನ ಅಥವಾ ನಂತರದವ ಮತ್ತು ಆತನ ಛಂದೋನುಶಾಸನವನ್ನು ಬಲ್ಲವನೆಂದು ಭಾವಿಸುವದು ಸೂಕ್ತವಾಗುವದು.

ಸಮಕಾಲೀನನೆಂದು ಗ್ರಹಿಸಿ, ಇಮ್ಮಡಿ ನಾಗವರ್ಮ ಈ ಭಾಷ್ಯಕಾರನಿರಬಹುದೆಂಬ ಪ್ರತಿಪಾದನೆಗೆ ತೊಡಗುವ ಮೊದಲು ಇಮ್ಮಡಿ ನಾಗವರ್ಮ ಹೇಮಚಂದ್ರನ ಸಮಕಾಲೀನ, ಆತನ ಗ್ರಂಥಗಳ ಪರಿಚಯವಿದ್ದವನೆಂಬುದು ಸ್ಪಷ್ಟವಾಗಬೇಕು. ವಾದಗ್ರಸ್ತವಿರುವದರಿಂದ ಮೊದಲು ಈ ವಿಷಯದ ಚರ್ಚೆ ಅಗತ್ಯವಿದೆ.

ಹೇಮಚಂದ್ರನಕಾಲ ಕ್ರಿ.ಶ. ೧೦೮೯–೧೧೭೩.[1] ಗುಜರಾತ ಚಾಲುಕ್ಯವಂಶದ ಸಿದ್ಧರಾಜ–ಜಯಸಿಂಹ (ಕ್ರಿ.ಶ. ೧೦೯೪–೧೧೪೩).[2] ಮತ್ತು ಆತನ ನಂತರ ಪಟ್ಟಕ್ಕೆ ಬಂದ ಕುಮಾರಪಾಲನಿಗೆ (ಕ್ರಿ.ಶ. ೧೧೪೩–೧೧೭೩).[3] ಗುರುಸ್ಥಾನದಲ್ಲಿದ್ದನು. ಈತನ ಸಾಹಿತ್ಯಕ ಚಟುವಟಿಕೆಗಳಲ್ಲಿ ಸಿದ್ಧಹೇಮ, ಶಬ್ದಾನುಶಾಸನ ಮೊದಲಾದ ವ್ಯಾಕರಣ ಕೋಶಗ್ರಂಥಗಳು ಮೊದಲಿನವು. ಇವುಗಳ ರಚನೆ ಜಯಸಿಂಹನ ಆಳಿಕೆಯ ಕೊನೆಗೆ ಅಂದರೆ ಕ್ರಿ.ಶ. ೧೧೪೩ರಹೊತ್ತಿಗೆ ಮುಗಿದ್ದಿತೆಂದು ತಿಳಿಯಲಾಗಿದೆ.[4] ಆ ಮುಂದೆ ಕುಮಾರಪಾಲನು ಕ್ರಿ.ಶ. ೧೧೭೩ವರೆಗೆ ಆಳಿದನು. ಇವರೀರ್ವರ ಆಳಿಕೆ ಗುಜರಾತದ ಇತಿಹಾಸದಲ್ಲಿ ಉತ್ಕರ್ಷದ ಕಾಲವಿದ್ದಿತು. ಕುಮಾರಪಾಲನ ಆಳಿಕೆಯ ಪ್ರಾರಂಭದ ವರ್ಷಗಳಲ್ಲಿ ಕಾವ್ಯಾನುಶಾಸನ ಮತ್ತು ಛಂದೋನುಶಾಸನಗಳು ರಚಿತವಾದವು. ಇವುಗಳಲ್ಲಿ ಕಾವ್ಯಾನುಶಾಸನವು ಮೊದಲನೆಯದು[5] ಅಂತೂ ಕ್ರಿ.ಶ. ೧೧೪೦–೪೮, ಈ ಗಡುವಿನಲ್ಲಿ ಆತನ ಕಾವ್ಯಾಂಗಚತುಷ್ಟಯದ ಎಲ್ಲ ಗ್ರಂಥಗಳ ರಚನೆಯಾಗಿತ್ತೆಂದು ಭಾವಿಸಬಹುದಾಗಿದೆ.

ಇಮ್ಮಡಿ ನಾಗವರ್ಮನ ಕಾಲ ಕ್ರಿ. ಶ. ೧೨ನೆಯಶತಮಾನದ ಉತ್ತರಾರ್ಧ ಅಂದರೆ ಸು. ೧೧೫೦–೧೨೦೦ ಎಂದು ಗ್ರಹಿಸಲಾಗಿದೆ. ಜನ್ನನು ತನ್ನ ಅನಂತನಾಥ ಪುರಾಣದಲ್ಲಿ—

> ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
> ರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ ||

---

1 ಹೇ.ಕಾ.ಸಂ. ೧, ಮುನ್ನುಡಿ, ಪು. ೩೬, ೭೨.

2 ಅದೇ, ಪು. ೩೮ ಟಿಪ್ಪಣಿ, ೬೦.

3 ಅದೇ, ಪು. ೬೦,೫೨.

4 ಅದೇ, ಪು. ೬೦.

5 ಹೇ.ಕಾ.ಸಂ. ೧, ಮುನ್ನುಡಿ, ಪು. ೮೨.

—ಎಂಬೀ ಪದ್ಯದಲ್ಲಿ ನಾಗವರ್ಮನು ಜಗದೇಕಮಲ್ಲನೆಂಬುವನಿಗೆ ಕಟಕೋಪಾಧ್ಯಾಯನಿದ್ದನು, ವ್ಯಾಕರಣದಲ್ಲಿ ಸುಪ್ರಸಿದ್ಧ ಕಾತಂತ್ರ ವ್ಯಾಕರಣಕಾರ ಶರ್ವನಷ್ಟೇ ಪರಿಣತನಾದ್ದರಿಂದ 'ಇದಾನೀಂತನ' ಅಂದರೆ 'ಅಭಿನವ ಶರ್ವವರ್ಮನೆಂಬ ಬಿರುದು ಈತನಿಗಿದ್ದು ತನಗೆ (ಜನ್ನನಿಗೆ) ಉಪಾಧ್ಯಾಯನಾಗಿದ್ದನೆಂದಿರುವನು. ಈ ಜಗದೇಕನು ಕ್ರಿ. ಶ. ೧೧೩೮–೧೧೫೦ವರೆಗೆ ಆಳಿದ ಜಗದೇಕ ಮಲ್ಲನೆಂದು ತಿಳಿದಿದೆ. ನಾಗವರ್ಮನು ಈತನಲ್ಲಿ ಸುಮಾರು ೧೧೪೫ರಲ್ಲಿ ಕಟಕೋಪಾಧ್ಯಾಯನಾಗಿರಬಹುದು ಮತ್ತು ಜಗದೇಕನ ನಂತರ ಬಹುದಿವಸ ಬದುಕಿದ್ದು ವಾರ್ಧಕದಲ್ಲಿ ಜನ್ನನಿಗೆ ಉಪಾಧ್ಯಾಯನಾಗಿರಬಹುದೆಂದು ಕವಿಚರಿತೆಕಾರರ ಅಭಿಪ್ರಾಯವಿದೆ.[1] ಗೋವಿಂದ ಪೈ ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ, ಜಗದೇಕ-ಮಲ್ಲನ ಕಾಲ ಕ್ರಿ.ಶ. ಸು. ೧೧೬೩–೧೧೮೪, ನಾಗವರ್ಮನ ಕಾಲ ೧೧೨೦–೧೨೦೦, ಜನ್ನನ ಕಾಲ ೧೧೬೫–೧೨೪೫ ಎಂದು ತೀರ್ಮಾನಿಸಿರುವರು.[2]

ಕಟಕೋಪಾಧ್ಯಾಯನೆಂಬುದರ ಅರ್ಥ ಸ್ಪಷ್ಟವಿಲ್ಲ. ಕಟಕ ಎಂದರೆ ರಾಜಧಾನಿ, ಛಾವಣಿ, ಕಡಗ, ಎಂದಿದೆ. ಇದೊಂದು ಸನ್ಮಾನ್ಯ ಉಚ್ಚಸ್ಥಾನವೆಂಬುದು ಸ್ಪಷ್ಟವಿದೆ. ಇಂದಿನ 'ಮಹಾಮಹೋಪಾಧ್ಯಾಯ' 'ಪೋಯಟ್‌ಲೋರೆಟ (ಪ್ರಧಾನಕವಿ)' ಪದವಿಗಳಿಗೆ ಸಮಾನವಿರಬೇಕೆಂದು ಆರ್. ನರಸಿಂಹಾಚಾರ್ಯರು ಭಾವಿಸಿರುವರು.[3] ಪದವಿಗಳೊಂದಿಗೆ ಮಾನ-ಚಿನ್ಹಗಳನ್ನು ಕೊಡುವ ಸಂಪ್ರದಾಯ ಇಂದಿಗೂ ಇದೆ. ಪ್ರಾಚೀನ ಕಾಲದಲ್ಲಿ ಪದಕಗಳ ಬದಲು ಬೆಳ್ಳಿ ಬಂಗಾರದ ಕಡಗಗಳನ್ನು ಕೊಡುತ್ತಿದ್ದರು. 'ಕಡಗದ ಕೈ' ಎಂಬ ಹೆಸರಿನ ಮನೆತನವೊಂದು ಉತ್ತರ ಕರ್ಣಾಟಕದಲ್ಲಿ ಇಂದಿಗೂ ಇದೆ. ಹೇಮಚಂದ್ರನ ಸಿದ್ಧಹೇಮ ವ್ಯಾಕರಣದ ಪರೀಕ್ಷೆಯಲ್ಲಿ ಮೇಲೆ ಬಂದವರಿಗೆ ಕಡಗ (ಕಂಕಣೈಃ ಸಮಭೂಷಯತ್), ಛತ್ರ, ಆಸನ, ವಸ್ತ್ರಾದಿಗಳನ್ನುಕೊಟ್ಟು ಬಹುಮಾನಿಸುತ್ತಿದ್ದರು. ಪ್ರಧಾನ ಕವಿಗೆ ಕವೀಶ್ವರ ಅಥವಾ ಕವಿರಾಜ ಎನ್ನುತ್ತಿದ್ದರು. ಕವೀಶ್ವರ ಶ್ರೀಪಾಲನೆಂಬುವನು ಸಿದ್ಧರಾಜ-ಜಯಸಿಂಹನ ಪ್ರಧಾನಕವಿ ಇದ್ದನು.[4]

ಹೇಮಚಂದ್ರನ ಕಾವ್ಯಾಂಗ ಚತುಷ್ಟಯದ ರಚನೆಯಕಾಲ (ಕ್ರಿ.ಶ. ೧೧೪೦–೧೧೪೮) ಮತ್ತು ಗೋವಿಂದಪೈ ನಿರ್ಧರಿಸಿದ ನಾಗವರ್ಮನ ಕಾಲ (ಕ್ರಿ.ಶ. ೧೧೨೦–೧೨೦೦) ವನ್ನು ಸಂಧಿಸಿನೋಡಿದರೆ ನಾಗವರ್ಮನು ಹೇಮಚಂದ್ರನ ಸಮಕಾಲೀನ ಮತ್ತು ಆತನ ಗ್ರಂಥಗಳನ್ನು ಪರಿಶೀಲಿಸಿ ಪ್ರಯೋಜನ ಪಡೆಯುವಷ್ಟು ಪ್ರಬುದ್ಧನಿದ್ದನೆಂಬುದು ಸ್ಪಷ್ಟವಾಗುವದು. ನಾಗವರ್ಮನ ಕಾಲದಬಗ್ಗೆ ಇರುವ ಕವಿಚರಿತೆಕಾರರ

---

1 ಕ.ಕ.ಚ.ಸಂ. ೧, ಪು. ೧೪೫.

2 ಕ.ಸಾ,ಪ.ಸಂ. ೨೦–೨, ಪು. ೧೫೨–೧೬೭.

3 ಕಾ.ಲೋ. ೧, ಮುನ್ನುಡಿ, ಪು. ೯, ಟಿಪ್ಪಣಿ.

4 ಹೇ.ಜೀ.ಚ. ಪು. ೧೨, ೧೬ ; ಹೇ.ಕಾ.ಸಂ. ೨, ಮುನ್ನುಡಿ, ಪು, ೧೫೬, ಟಿಪ್ಪಣಿ.

ಅಭಿಪ್ರಾಯ (ಕ್ರಿ.ಶ. ೧೧೪೫), ಈಚಿನವರಾದ ಮುಗಳಿ, ತೀ.ನಂ. ಶ್ರೀ. ಅವರ ಅಭಿಪ್ರಾಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತಿದ್ದರೂ, ಗೋವಿಂದಪೈ ನಿರ್ಧರಿಸಿದ ಗಡುವುಗಳಲ್ಲಿ ಇವು ಒಳಗೊಳ್ಳುತ್ತವೆ. ಮುಗಳಿ ಕ್ರಿ.ಶ. ೧೧೫೦ ಎಂದಿರುವರು.[1] ತೀ.ನಂ. ಶ್ರೀ ೧೨ನೆಯ ಶತಮಾನದ ಮಧ್ಯ ಮತ್ತು ಉತ್ತರಾರ್ಧ ವೆಂದಿರುವರು.[2]

ಹೀಗಿದ್ದರೂ ಕವಿಚರಿತೆಕಾರರು ತಾವೇ ಸಂಪಾದಿಸಿದ ನಾಗವರ್ಮನ ಕಾವ್ಯಾವ ಲೋಕನದಲ್ಲಿ ಆತನು ಹೇಮಚಂದ್ರನ ಪೂರ್ವಿಕನೆಂದು ಭಾವಿಸಿರುವರು. ಇದಕ್ಕೆ ನಾಗವರ್ಮನು ತನ್ನ ಯಾವದೇ ಕೃತಿಯಲ್ಲಿ ಹೇಮಚಂದ್ರನ ಹೆಸರನ್ನೆತ್ತಿಲ್ಲವೆಂಬ ಕಾರಣವನ್ನು ಕೊಟ್ಟಿರುವರು.[3] ತೀ.ನಂ. ಶ್ರೀ. ನಾಗವರ್ಮನು ದಂಡಿ, ಭಾಮಹ, ರುದ್ರಟ, ಮೊದಲಾದವರ ಜೊತೆಗೆ ಕಾವ್ಯಮೀಮಾಂಸಾಕಾರ ರಾಜಶೇಖರನಿಗೂ ಋಣಿ, ಕಾವ್ಯಾವಲೋಕನವಲ್ಲಿಯ 'ಕವಿಸಮಯ'ದ ನಿರೂಪಣೆ ಅವನ ಪ್ರಭಾವದಿಂದಲೇ ಇರಬೇಕೆಂದು ಹೇಳಿ, ನಾಗವರ್ಮನು ಹೇಮಚಂದ್ರನಿಂದ ಸ್ಫೂರ್ತಿ ಪಡೆದಿಲ್ಲವೆಂದೇ ಹೇಳಬೇಕಾಗುವದು, ಎಂದಿರುವರು.[4] ಏಕೆಂಬುದಕ್ಕೆ ಕಾರಣಕೊಟ್ಟಿಲ್ಲ. ಹೇಮಚಂದ್ರನು ಕುಶಲ ಸಂಗ್ರಹಕಾರ, ಆತನಲ್ಲಿ ನಾವೀನ್ಯವಿಲ್ಲ, ಆತ ಏವ ಆತನ ಕೃತಿಗಳಿಂದ ಇತರರು ಸ್ಫೂರ್ತಿ ಪಡೆಯುವದು ಕಡಮೆ, ಎಂಬುದು ಆತನ ಕಾಲದಲ್ಲಿಯೇ ಸುವಿದಿತವಿದ್ದಿತು. ಆದರೆ ಹೇಮಚಂದ್ರನ ಕಾವ್ಯಾನುಶಾಸನವು ಪಿ.ವಿ. ಕಾಣೆಯವರ ಅಭಿಪ್ರಾಯದಲ್ಲಿ ಕ್ರಿ.ಶ. ೧೧೪೦ರಲ್ಲಿ ರಚಿತವಾಗಿದೆಂದು ಹೇಳಿ, ಸ್ಫೂರ್ತಿಯ ಕುರಿತಿರುವ ಈ ಅಭಿಪ್ರಾಯ ವನ್ನು ಸೂಚಿಸಿರುವದರಿಂದ, ಅವರಾದರೂ ನಾಗವರ್ಮನ ಕಾಲದಬಗ್ಗೆ ಸಾಶಂಕರಿರ ಬಹುದೆ, ಎಂಬ ಅನುಮಾನ ಮೂಡುತ್ತದೆ. ಹೇಮಚಂದ್ರನಕಾಲ (ಕ್ರಿ.ಶ. ೧೦೮೯–೧೧೭೩) ನಿಶ್ಚಿತವಿರುವದರಿಂದ ಅದು ಈ ದಿಸೆಯಲ್ಲಿ ಮಾರ್ಗದರ್ಶಕವಾಗಬಲ್ಲದು. ಒಂದೊಮ್ಮೆ ನಾಗವರ್ಮನು ಹೇಮಚಂದ್ರನಿಗಿಂತ ಮೊದಲಿಗನಿದ್ದರೆ ಅವನು ಕ್ರಿ.ಶ. ೧೧ನೆಯ ಶತಮಾನದವನಾಗುವನು. ಹೀಗಿದ್ದರೆ ಆತನು ಇತ್ತ ಹೇಮಚಂದ್ರನ ಪೂರ್ವಿಕ ಅತ್ತ ೧೨ನೆಯ ಶತಮಾನದ ಕೊನೆ ಮತ್ತು ೧೩ನೆಯ ಶತಮಾನದ ಆದಿ ಯವನಾದ ಜನ್ನನಿಗೆ ಉಪಾಧ್ಯಾಯ ಹೇಗಾಗಬಲ್ಲನು? ಆದ್ದರಿಂದ ಕವಿಚರಿತೆಕಾರರು ಮತ್ತು ತೀ.ನಂ. ಶ್ರೀ ಇಬ್ಬರೂ ಹಳಗದ ಪಂಡಿತರೂ ಅಧಿಕಾರ ಸಂಪನ್ನ ವಾಣಿಯುಳ್ಳ ವರೂ ಇದ್ದರು ಸಹ ಎಲ್ಲಿಯೊ ತಪ್ಪಿರಬೇಕೆಂದು ತೋರುತ್ತದೆ.

ಬಸವನಾಳ,ಕೇಪು ಸಂಪಾದಿಸಿದ ನಾಗವರ್ಮನ ಕಾವ್ಯಾವಲೋಕನದಲ್ಲಿ ಕವಿ

---

1 ಕ.ಸಾ.ಚ. ಪು.೮೩.

2 ಭಾ.ಕಾ.ಮೀ. ಪು. ೪೭೪.

3 ಕಾ.ಲೋ. ೧ ಮುನ್ನುಡಿ, ಪು. ೩೪–ಟಿಪ್ಪಣಿ.

4 ಭಾ.ಕಾ.ಮೀ. ಪು. ೪೭೮–ಟಿಪ್ಪಣಿ.

ಸಮಯಪಕ್ಷಲ್ಲದೆ, ಗದ್ಯ, ಪದ್ಯ, ಮಿಶ್ರ, ಮೊದಲಾದ ಕಾವ್ಯಪ್ರಕಾರಗಳನ್ನು ಹೇಳುವಾಗ ಸಹ ಆತನು ಹೇಮಚಂದ್ರನನ್ನು ಅನುಸರಿಸಿರುವನೆಂದಿರುವರು.[1] ಕವಿ ಸಮಯವನ್ನು ವಿವೇಚಿಸಿದ ಗ್ರಂಥಗಳಲ್ಲಿ ರಾಜಶೇಖರನ (ಕ್ರಿ.ಶ. ೧೦ನೆಯ ಶತಮಾನ) ಕಾವ್ಯ ಮೀಮಾಂಸೆ ಮೊದಲಿನದಿದ್ದರೂ, ಕಾವ್ಯಾವಲೋಕನದ ವಿಷಯವಿವೇಚನಾ ಪದ್ಧತಿಯು ಹೇಮಚಂದ್ರನ ಅನುಸಾರವಾಗಿದೆ. ಆದ್ದರಿಂದ ಆತನು ಹೇಮಚಂದ್ರನ ಕಾವ್ಯಾನು ಶಾಸನವನ್ನೇ ಆಧಾರವಾಗಿಟ್ಟುಕೊಂಡಿದ್ದನೆಂದು ಹೇಳಬೇಕಾಗುವದು, ಎಂದಿರುವರು. ಸಂಸ್ಕೃತದಲ್ಲಿ ಕವಿಸಮಯವನ್ನು ಕುರಿತು ಬರೆದ ಅಮರಚಂದ್ರ, ವಾಗ್ಭಟ, ಮೊದಲಾದವ ರಲ್ಲಿ ನಾಗವರ್ಮನು ಅಮರಚಂದ್ರನ ಕಾವ್ಯಕಲ್ಪಲತೆಯ ಪ್ರಯೋಜನವನ್ನು ಪಡೆದಿರ ಬೇಕೆಂದು ಕವಿಚರಿತೆಕಾರರು ಪ್ರತಿಪಾದಿಸಿರುವರು.[2] ಆದರೆ ಇತ್ತೀಚೆಯ ಶೋಧಗಳಿಂದ ಈ ಅಮರಚಂದ್ರ ನಾಗವರ್ಮನ ಅನಂತರದವನೆಂದು ಕಂಡುಬಂದಿದೆ, ಎಂದಿರುವರು ಬಸವನಾಳ—ಕೇಪು.[3]

ಕಾವ್ಯಾವಲೋಕನದ ಸೂತ್ರ ೨೪೮ರ ಕೆಳಗೆ ಬರುವ ಗದ್ಯಪದ್ಯಾದಿ ಕಾವ್ಯಭೇದ ಗಳನ್ನು ಕುರಿತಿರುವ ಟಿಪ್ಪಣಿಯಲ್ಲಿ ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ, ನಾಟಕಗಳಲ್ಲಿ ಮುಖ, ಪ್ರತಿಮುಖ, ಅವಮರ್ಶ, ಗರ್ಭ, ನಿರ್ವಹಣವೆಂಬ ಐದು ಸಂಧಿಗಳಿರ ಬೇಕೆಂದಿರುವನು. ಮಹಾಕಾವ್ಯಕ್ಕಾದರೂ ಇವು ಬೇಕೆಂದು ಹೇಮಚಂದ್ರನ ಅಭಿಪ್ರಾಯ ವಿದ್ದು ನಾಗವರ್ಮನೂ ಇವುಗಳನ್ನು ಉಲ್ಲೇಖಿಸಿರುವನು, ಎಂದಿರುವರು, ಬಸವನಾಳ-ಕೇಪು.[4] ಮಹಾಕಾವ್ಯದ ವ್ಯಾಖ್ಯೆಯಲ್ಲಿ ಈ ಸಂಧಿಗಳ ಆವಶ್ಯಕತೆಯನ್ನು ಹೇಳಿರುವದು ಹೇಮಚಂದ್ರನ ವೈಶಿಷ್ಟ್ಯವೆಂದು ಆತನ ಕಾವ್ಯಾನುಶಾಸನವನ್ನು ಸಂಪಾದಿಸಿದ ಪಾರೀಖ ಕುಲಕರ್ಣಿ ಅಭಿಪ್ರಾಯಪಟ್ಟಿರುವರು.[5]

ಸಂಸ್ಕೃತ ಕಾವ್ಯಗಳಲ್ಲಿ ಆಗಾಗ ದೇಶ—ಕಾಲ—ಕಲಾ—ಲೋಕ—ನ್ಯಾಯ—ಆಗಮಗಳಿಗೆ ವಿರುದ್ಧವಿರುವ ವರ್ಣನೆಗಳು ಬರುತ್ತವೆ. ರಾಜಶೇಖರನ ಪೂರ್ವಿಕರು ಎಂದರೆ ದಂಡಿ ಮೊದಲಾದವರು ಇವುಗಳನ್ನು ಕಾವ್ಯದೋಷಗಳಲ್ಲಿ ಎಣಿಸಿರುವರು. ಉದಾಹರಣೆಗಾಗಿ ಮುತ್ತುಗಳು ಹಲವೆಡೆಗಳಲ್ಲಿ ದೊರೆಯುತ್ತಿದ್ದರೂ ತಾಮ್ರಪರ್ಣಿ ನದಿಯಲ್ಲಿ ಮಾತ್ರ ದೊರೆಯುತ್ತವೆಂದು ಕವಿಗಳು ವರ್ಣಿಸುವದುಂಟು. ಇದು ನಿಜಸ್ಥಿತಿಗೆ ವಿರುದ್ಧವಾಗಿದ್ದರೂ, ಈ ವರ್ಣನೆ ಪರಂಪರಾಗತವಿರುವುದರಿಂದ ಮತ್ತು ಯಾವುದೋ ಒಂದು ಕಾಲದಲ್ಲಿ ಇದೇ ನಿಜವಿರಬಹುದಾದ್ದರಿಂದ ಈ ವರ್ಣನೆ ಗ್ರಾಹ್ಯವೆಂದೆಣಿಸಬೇಕು ;

---

[1] ಕಾ.ಲೋ. ೨. ಮುನ್ನುಡಿ, ಪು. ೬.

[2] ಕಾ.ಲೊ. ೧, ಮುನ್ನುಡಿ, ಪು. ೩೪:

[3] ಕಾ.ಲೋ. ೨, ಮುನ್ನುಡಿ, ಪು. ೬ ; ಗೋವಿಂದಪೈ, ಕ.ಸಾ.ಪ. ಸಂ. ೨೦೨, ಪು. ೧೬೮.

[4] ಕಾಲೋ. (೨), ಪು. ೩೫೧.

[5] ಹೇ. ಕಾ. ಸಂ. ೨, ಪು. ೨೬೭.

ದೋಷವೆನ್ನಲಾಗದು, ಎಂಬುದು ರಾಜಶೇಖರನ ಭೂಮಿಕೆ. ಈ ಬಗೆಯ ವರ್ಣನೆಗಳಿಗೆ ಕವಿಸಮಯಗಳೆಂದು ಹೆಸರಿಸಿ ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿರುವನು. ವಿಷಯ ಪ್ರತಿಪಾದನೆಗಾಗಿ, ಸ್ವರ್ಗ್ಯ, ಭೌಮ, ಪಾತಾಲೀಯ ಎಂಬ ಮೂರುವರ್ಗಗಳನ್ನು ಕಲ್ಪಿಸಿ, ಇವುಗಳಲ್ಲಿ ಭೌಮ ಅಥವಾ ಪೃಥ್ವಿಗೆ ಸಂಬಂಧಿಸಿದ ವರ್ಣನೆಗಳು ಮುಖ್ಯವೆಂದಿರುವನು. ಅನಂತರ ಪೃಥ್ವಿಗೆ ಸಂಬಂಧಿಸಿ ಜಾತಿ, ಗುಣ, ದ್ರವ್ಯ, ಕ್ರಿಯಾ (ಅರ್ಥವಶಾತ್) ಎಂಬ ನಾಲ್ಕು ಭಾಗಗಳನ್ನು ಮಾಡಿ ಪ್ರತಿಯೊಂದರ ಕೆಳಗೆ ಅಸತ್, ಸತ್, ನಿಯಮ ಎಂಬ ಮೂರು ಉಪಭಾಗಗಳನ್ನು ಮಾಡಿರುವನು ಮತ್ತು ಪ್ರತಿಯೊಂದು ಉಪವಿಭಾಗದ ಕೆಳಗೆ ಅದಕ್ಕೆ ಸಂಬಂಧಿಸಿದ ವಿವಿಧ ಕವಿಸಮಯಗಳನ್ನು ವರ್ಣಿಸಿರುವನು.[1] ಹೇಮಚಂದ್ರನು ಸ್ವರ್ಗಾದಿ ವರ್ಗಗಳನ್ನು ಹೊಡೆದು ಹಾಕಿ, ಅಸತ್, ಸತ್ ಮತ್ತು ನಿಯಮ ಈ ಮೂರು ಉಪಭಾಗಗಳನ್ನು ಮುಖ್ಯವೆಂದೆಣಿಸಿ, ಇವುಗಳಲ್ಲಿಯೆ ಜಾತಿ, ಗುಣಾದಿಗಳು ಅಡಕವಾಗುತ್ತವೆಂದು ಹೇಳಿ, ಇದಕ್ಕನುಸಾರವಾಗಿ ಕವಿ ಸಮಯಗಳನ್ನು ನಿರೂಪಿಸಿರುವನು. ನಾಗವರ್ಮ ಸಹ ಇದೇ ಮಾರ್ಗವನ್ನು ಅನುಸರಿಸಿರುವನು. ಭೇದವಿಷ್ಟೇ–ನಾಗವರ್ಮನು ರಾಜಶೇಖರನಂತೆ ಇವುಗಳಿಗೆ ಒಂದು ಪ್ರತ್ಯೇಕ ಅಧ್ಯಾಯವನ್ನು ಮೀಸಲಾಗಿಸಿರುವನು ; ಹೇಮಚಂದ್ರನು ಆನುಷಂಗಿಕವಾಗಿ ವಿವರಿಸಿರುವನು.

ಕವಿ ಸಮಯ ನಿರೂಪಣೆಗೆ ರಾಜಶೇಖರನು ಅನುಸರಿಸಿದ ರೀತಿ ತೊಡಕಿನದೂ ಅನಾವಶ್ಯಕವೆಂಬುದೂ ಸಾಮಾನ್ಯರಿಗೆ ಕೂಡ ಹೊಳೆಯುವಂತಿರುವುದರಿಂದ, ಹೇಮಚಂದ್ರನು ಅನುಸರಿಸಿದ ರೀತಿಯಲ್ಲಿ ಹೇಳಿಕೊಳ್ಳುವಂಥದೇನೂ ಇಲ್ಲ. ವಿಷಯ ಸಂಗ್ರಹಕ್ಕಾಗಿ ಅನ್ಯರು ಸಹ ಅವನ ನೆರವಿಲ್ಲದೆ ಹೀಗೆ ಮಾಡಬಹುದಾಗಿದೆ. ಆದ್ದರಿಂದ ಕವಿಸಮಯದ ನಿರೂಪಣೆಗಾಗಿ ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವನೆಂಬುದಕ್ಕೆ ಇದು ಸಬಲ ಕಾರಣವಾಗದು. ಈ ಅರ್ಥದಲ್ಲಿ ತೀ. ನಂ. ಶ್ರೀ, ಅವನು ಹೇಮಚಂದ್ರನಿಂದ ಸ್ಫೂರ್ತಿ ಪಡೆದಿಲ್ಲವೆಂದಿದ್ದರೆ ಸರಿಯಾಗಿಯೆ ಹೇಳಿರುವರೆನ್ನಬೇಕು.

ಮಹಾಕಾವ್ಯಗಳಲ್ಲೂ ನಾಟಕಗಳಲ್ಲಿರುವಂತೆ ಮುಖ ಪ್ರತಿಮುಖಾದಿಸಂಧಿಗಳ ಆವಶ್ಯಕತೆಯನ್ನು ಹೇಳಿರುವದು ಹೇಮಚಂದ್ರನ ವೈಶಿಷ್ಟ್ಯ ; ನಾಗವರ್ಮನೂ ಹೀಗೆಯೆ ಮಾಡಿರುವನೆಂಬುವಲ್ಲಿಯೂ ಅಷ್ಟೊಂದು ಬಲವಿಲ್ಲ. ಏಕೆಂದರೆ ಭಾಮಹ ದಂಡಿಗಳೂ ಇದನ್ನೂ ಹೇಳಿರುವರು. 'ವಾಮನನುಂ ರುದ್ರಟನುಂ ಭಾಮಹನುಂ ದಂಡಿಯುಂ ಮನಂಗೊಳೆ ಪೇಳ್ದಂತೀ ಮಹಿಗೆ' ಪದ್ಯದಲ್ಲಿ ಭಾಮಹಾದಿಗಳ ನೆರವು ಪಡೆದಿರುವದಾಗಿ ನಾಗವರ್ಮನೇ ಹೇಳಿರುವನು.[2]

ಮುಖಪ್ರತಿಮುಖಾದಿಸಂಧಿಗಳ ವಿಷಯದಲ್ಲಿ ಭಾಮಹ, ಮಹಾಕಾವ್ಯವು

---

1 ಕಾ. ಮೀ. ಅಧ್ಯಾಯ ೧೪.

2 ಕಾ. ಲೋ. ಪದ್ಯ ೯೬೧

'ಪಂಚಭಿಃ ಸಂಧಿಭಿರ್ಯುಕ್ತಂ' ಐದು ಸಂಧಿಗಳಿಂದ ಕೂಡಿರಬೇಕೆಂದಿರುವನು.[1] ದಂಡಿ 'ಸರ್ಗೈರನತಿ ವಿಸ್ತೀರ್ಣೈಃ ಶ್ರವ್ಯವೃತ್ತೈಃ ಸುಸಂಧಿಭಿಃ" ಎಂದಿರುವನು.[2]

ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವನೆಂಬುದಕ್ಕೆ ಬಸವನಾಳ-ಕೇಪು ಇನ್ನೊಂದು ಕಾರಣವನ್ನು ಸೂಚಿಸಿರುವರು. ಕಾವ್ಯ ಪ್ರಕಾರಗಳಲ್ಲಿ ಮಹಾಕಾವ್ಯ, ಚಂಪು ಮೊದಲಾದವುಗಳೊಡನೆ ಪಾಡು, ಪಾಡುಗಬ್ಬ, ಬಾಜನೆಗಬ್ಬ ಮೊದಲಾದ ಕನ್ನಡ ಗೇಯಬಂಧಗಳನ್ನು ನಾಗವರ್ಮನು ಉಲ್ಲೇಖಿಸಿರುವನೆಂಬುದು ಆ ಸೂಚನೆಯ ತಳಹದಿ. ಆದರೆ ವಸ್ತುಸ್ಥಿತಿ ಹೀಗಿಲ್ಲ. ಹೇಮಚಂದ್ರನು ಕಾವ್ಯವನ್ನು ದೃಶ್ಯ, ಶ್ರವ್ಯ ಎಂದು ವಿಭಜಿಸಿ, ದೃಶ್ಯದಲ್ಲಿ ಪಾಠ್ಯ, ಗೇಯ ಮತ್ತು ಶ್ರವ್ಯದಲ್ಲಿ ಮಹಾಕಾವ್ಯ ಕಥಾ, ಆಖ್ಯಾಯಿಕಾ, ಚಂಪು, ಮುಕ್ತಕ, ಕುಲಕ ಮೊದಲಾದವನ್ನು ಹೇಳಿರುವನು. ದೃಶ್ಯದಲ್ಲಿ ಕಲ್ಪಿಸಲಾದ ಪಾಠ್ಯವರ್ಗದಲ್ಲಿ ನಾಟಕಾದಿ ಸುಪರಿಚಿತ ದಶರೂಪಕಗಳನ್ನು ಹೆಸರಿಸಿರುವನು. ಗೇಯದಲ್ಲಿ ಡೋಂಬಿಕಾ ಮೊದಲಾದ ದೇಶೀ ರೂಪಕಗಳನ್ನು ಹೇಳಿರುವನು.[3] ನಾಗವರ್ಮನು ದೃಶ್ಯಕಾವ್ಯಗಳನ್ನು ಉಲ್ಲೇಖಿಸಿಲ್ಲ. ಆದರೂ ಡೋಂಬಿಕಾದಿಗಳು ರೂಪಕಗಳಿದ್ದರೂ ಗಾನಭೂಯಿಷ್ಠ; ಪಾಡು ಮೊದಲಾದವು ರೂಪಕಗಳಲ್ಲವಾದರೂ ಗೇಯಬಂಧ ಅಥವಾ ಗಾನಗಳು; ಆದ್ದರಿಂದ ಇವೆರಡೂ ಒಂದಕ್ಕೊಂದು ಸಂಬಂಧಿಸಿವೆ, ಎಂದು ಪ್ರತಿಪಾದಿಸಿ, ನಾಗವರ್ಮನು ಇಲ್ಲಿ ಹೇಮಚಂದ್ರನ ದಾರಿಯಲ್ಲಿ ಸಾಗಿರುವನು, ಎಂದು ಸೂಚಿಸಿರುವರು ಬಸವನಾಳ-ಕೇಪು.[4] ಆದರೆ ಇದು ಸಮಂಜಸವಾಗದು. ಒಂದು ರೂಪಕ ಆತ ಏವ ದೃಶ್ಯ; ಇನ್ನೊಂದು ಕೇವಲ ಶ್ರವ್ಯ. ಎರಡರಲ್ಲೂ ದೇಶೀಗೇಯ ಬಂಧಗಳಿಗೆ ಪ್ರಾಧಾನ್ಯವಿದೆಯೆಂಬ ಒಂದೇ ಒಂದು ಕಾರಣದಿಂದ ಒಂದನ್ನು ಇನ್ನೊಂದರಲ್ಲಿ ಸೇರಿಸುವಂತಿಲ್ಲ. ಕನಿಷ್ಠ ಶಾಸ್ತ್ರದಮಟ್ಟಿಗಾದರೂ ಇದು ಅಗ್ರಾಹ್ಯ. ಕೇಶಿರಾಜನಿಗಿದ್ದ 'ಕರ್ಣಾಟಕ ಲಕ್ಷಣ ಶಿಕ್ಷಾಚಾರ್ಯ'ನೆಂಬ ಬಿರುದನ್ನು ನಾಗವರ್ಮನಿಗೆ ಅನ್ವಯಿಸಿರುವರು, ತೀ.ನಂ.ಶ್ರೀ. ಇಂಥವನು ಹೀಗೆಂದಿಗೂ ಮಾಡಲಾರ.

ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವನು; ಆತ ಏವ ಅವನು ಹೇಮಚಂದ್ರನ ಸಮಕಾಲೀನ; ಆತನ ಗ್ರಂಥಗಳ ನೆರವು ಪಡೆದವ ಎಂಬುದಕ್ಕೆ ಇವರಿರ್ವರ ಕವಿಸಮಯ ಮತ್ತು ಕಾವ್ಯಪ್ರಕಾರಗಳ ನಿರೂಪಣೆಯಲ್ಲಿರುವ ಹೋಲಿಕೆ ಏಕಮೇವಕಾರಣ. ಇದರ ಅವಸ್ಥೆಯೇ ಇಂತಿದ್ದ ಬಳಿಕ, ರತ್ನಮಂಜೂಷೆಯ ಭಾಷ್ಯಕಾರ ನಾಗವರ್ಮನಿರಬಹುದೆಂಬ ಈ ಪ್ರತಿಪಾದನೆಯ ಅಂಗವಾಗಿ ಇದನ್ನೇ ಸಾಧಿಸ ಹೊರಟ ಯತ್ನ ಇಲ್ಲಿಯೇ ಕುಸಿದುಬಿದ್ದಂತಾಯಿತು. ಆದ್ದರಿಂದ ಇನ್ನೂ ಒಳಹೊಕ್ಕು ನೋಡಬೇಕು.

---

[1] ಕಾವ್ಯಾಲಂಕಾರ, ೧.೨೦.

[2] ಕಾವ್ಯಾದರ್ಶ, ೧.೧೮.

[3] ಹೇ. ಕಾ. ಅಧ್ಯಾಯ ೮

[4] ಕಾ. ಲೋ. (೨) ಪು. ೩೫೦

ನಾಗವರ್ಮನು ಹೇಮಚಂದ್ರನ ಸಮಕಾಲೀನನೆಂಬುದನ್ನು ಅನ್ಯಕಾರಣಗಳಿಂದ ಈ ಮೊದಲೆ ವಿಶದಪಡಿಸಲಾಗಿದೆ. ಅವನು ಹೇಮಚಂದ್ರನಿಂದ ಸ್ಫೂರ್ತಿಯನ್ನು ಪಡೆದಿದ್ದನು; ಅವನ ಕಾವ್ಯಾವಲೋಕನಾದಿಗ್ರಂಥಗಳನ್ನು ಬಲ್ಲವನಿದ್ದನೆಂಬುವಲ್ಲಿ ಸಂದೇಹವಿಲ್ಲ. ನಾಗವರ್ಮನು ಹೇಮಚಂದ್ರನಿಂದ ಪಡೆದ ಸ್ಫೂರ್ತಿಸ್ಥಾನ ಆತನ ಗ್ರಂಥಗಳಲ್ಲಿಲ್ಲ. ಅದು ಆತನ ಖ್ಯಾತಿ ಮತ್ತು ಕಾವ್ಯಾಂಗ ಚತುಷ್ಟಯಕ್ಕೆ ಸಂಬಂಧಿಸಿ ಒಂದೊಂದು ಗ್ರಂಥವನ್ನು ರಚಿಸಬೇಕೆಂಬ ಆತನ ಸಂಕಲ್ಪದಲ್ಲಿ ಮತ್ತು ಆರೀತಿ ಕೃತಕೃತ್ಯನಾಗಿರುವದರಲ್ಲಿದೆ. 'ಕಲಿಕಾಲ ಸರ್ವಜ್ಞ'ನೆನಿಸಿಕೊಂಡ ಹೇಮಚಂದ್ರನ ಮಟ್ಟಕ್ಕೇರದಿದ್ದರೂ, ನಾಗವರ್ಮನು ತನ್ನ ಸುವಿಖ್ಯಾತ ಶಿಷ್ಯ ಜನ್ನನಿಂದ 'ಬಹುಜ್ಞ'ನೆನಿಸಿಕೊಂಡಿರುವನು.[1] ಅರ್ಥವ್ಯಾಪ್ತಿಯಲ್ಲಿ 'ಸರ್ವಜ್ಞ' 'ಬಹುಜ್ಞ'ಗಳಲ್ಲಿ ಬಹಳ ಅಂತರವಿಲ್ಲೆಂಬುದನ್ನು ಬೇರೆ ಹೇಳಬೇಕಿಲ್ಲ. ಹೇಮಚಂದ್ರನಂತೆ ನಾಗವರ್ಮನೂ ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಕುರಿತು ಒಂದೊಂದು ಗ್ರಂಥವನ್ನು ರಚಿಸಿ ಕೃತಕಾರ್ಯನಾಗಿರುವನು. ಸಂಸ್ಕೃತ ಮತ್ತು ಇತರ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಈ ರೀತಿ ಗ್ರಂಥಗಳನ್ನು ರಚಿಸಿದವರು ಇವರಿಬ್ಬರೇ. ಈ ಸಂದರ್ಭದಲ್ಲಿ ಮುಗಳಿಯವರ 'ಕವಿರಾಜಮಾರ್ಗಕಾರನು ಬರೀ ಅಲಂಕಾರಶಾಸ್ತ್ರಕ್ಕೆ, ೧ನೆಯ ನಾಗವರ್ಮನು ಬರೀ ಛಂದಸ್ಸಿಗೆ ಆದ್ಯರಾಗಿಹೋದರು. ಆದರೆ ಕಾವ್ಯಾಂಗ ಪರವಾದ ಸಮಗ್ರ ಗ್ರಂಥ ರಚನೆಗೆ ವಿಶೇಷವಾಗಿ ವ್ಯಾಕರಣಶಾಸ್ತ್ರಕ್ಕೆ ೨ನೆಯ ನಾಗವರ್ಮ ಮೊದಲಿಗ'ನೆಂಬ ಉಕ್ತಿಯಥಾರ್ಥವಿದೆ.[2]

ನಾಗವರ್ಮನ ಕಾವ್ಯಾವಲೋಕನದ ಕವಿಸಮಯಾಧಿಕರಣದಲ್ಲಿ ಉದ್ಧೃತವಾದ ಪದ್ಯಗಳಲ್ಲಿ ಆರುಪದ್ಯಗಳಿಗೆ ಮಾತೃಕೆ ಅಥವಾ ಸಂವಾದಿಯಾಗಿರುವ ಪದ್ಯಗಳು ಹೇಮಚಂದ್ರನ ಕಾವ್ಯಾನುಶಾಸನದಲ್ಲೂ ದೊರೆಯುತ್ತವೆ. ಇವುಗಳಲ್ಲಿ ೪ ರಾಜಶೇಖರನ ಕಾವ್ಯಮೀಮಾಂಸೆಯ ಇದೇ ಅಧಿಕರಣದಲ್ಲಿವೆ. ಹೇಮಚಂದ್ರ ನಾಗವರ್ಮ ಇಬ್ಬರೂ ರಾಜಶೇಖರನ ನೆರವು ಪಡೆದಿರಬಹುದೆಂಬದೊಂದು ಅಭಿಪ್ರಾಯವಿದೆ.[3] ಆದ್ದರಿಂದ ಈ ನಾಲ್ಕು ಪದ್ಯಗಳು ಪ್ರಕೃತ ಪ್ರತಿಪಾದನೆಗೆ ಪೋಷಕವಾಗಲಾರವು. ಉಳಿದೆರಡು ಪದ್ಯಗಳು ಹೇಮಚಂದ್ರ ನಾಗವರ್ಮ ಇವರಿರ್ವರ ಕೃತಿಗಳಲ್ಲಿ ಮಾತ್ರ ದೊರೆಯುತ್ತವೆ. ಇವುಗಳಲ್ಲಿ ಒಂದನ್ನು ಅಂದರೆ 'ಯದಿಂದೋರನ್ವೇತಿ' ಪದ್ಯವನ್ನು ಹೇಮಚಂದ್ರನು ಐಕ್ಯವೆಂಬ ಕವಿ ಸಮಯಕ್ಕೆ ಉದಾಹರಿಸಿರುವನು.[4] ಇದನ್ನೇ ನಾಗವರ್ಮನು 'ಪಾರಾವಾರಂ ತುಹಿನಕಿರಣಂ' ಎಂದು ಮಂದಾಕ್ರಾಂತದಲ್ಲಿ ಕನ್ನಡಿಸಿ ಇದೇ ಸಂದರ್ಭ

---

1 ಕ. ಕ. ಚ. ಸಂ. ೧, ಪು. ೧೪೪-ಜನ್ನನ ಅನಂತನಾಥ ಪುರಾಣದ ಅವತರಣಿಕೆ

2 ಕ. ಸಾ. ಚ. ಪು. ೧೪೬

3 ಕ. ಸಾ. ಪ. ಸಂ. ೨೦–೨, ಪು. ೧೭೧–ಗೋವಿಂದಪೈ

4 ಹೇ. ಕಾ. ಪದ್ಯ ೧೦೬–ವಿವೇಕ

ದಲ್ಲಿ ಉದಾಹರಿಸಿರುವನು.[1] ಎರಡನೇ ಪದ್ಯ 'ಏಕೇ ನಾಕ್ಷ್ಣ ಪ್ರವಿತತ ತರುಷಾ' ಎಂಬ ಸುಭಾಷಿತ. ಇದನ್ನು ಹೇಮಚಂದ್ರನು ದೋಷಪ್ರಕರಣದಲ್ಲಿ ರಸಪ್ರಾತಿಕೂಲ್ಯ ವೆಂಬ ದೋಷಕ್ಕೆ ಉದಾಹರಣೆಯಾಗಿಕೊಟ್ಟಿರುವನು.[2] ನಾಗವರ್ಮನು ಇದನ್ನು 'ನೆರೆವನ್ನಂ ರವಿನಿಲ್ಲದಸ್ತಗಿರಿಯುಂ' ಎಂದು ಮತ್ತೇಭವಿಕ್ರೀತದಲ್ಲಿ ಕನ್ನಡಿಸಿ ಅಸದಖ್ಯಾತಿ ಎಂಬ ಕವಿ ಸಮಯಕ್ಕೆ ಉದಾಹರಿಸಿರುವನು.[3] ಕವಿ ಸಮಯವಾದರೂ ಒಂದು ದೋಷ, ಅದರೆ ಗ್ರಾಮ್ಯದೋಷ ಮತ್ತು ಹೇಮಚಂದ್ರ ನಾಗವರ್ಮ ಉದಾಹರಣೆಯೆಂದು ಕೊಟ್ಟಿರುವ ಎರಡೂ ಸಂದರ್ಭಗಳಿಗೆ ಈ ಪದ್ಯ ಹೊಂದುತ್ತದೆಂಬು ದನ್ನು ಇಲ್ಲಿ ಲಕ್ಷಿಸಬೇಕು.

ಮಹಾಕಾವ್ಯದಲ್ಲೂ ದೃಶ್ಯಕಾವ್ಯದಲ್ಲಿರುವಂತೆ–ಮುಖ, ಪ್ರತಿಮುಖಾದಿ ೫ ಸಂಧಿಗಳಿರಬೇಕೆಂದು ಹೇಳಿರುವದು ಹೇಮಚಂದ್ರನ ವೈಶಿಷ್ಟ್ಯ. ನಾಗವರ್ಮನಾದರೂ ಹೀಗೆಯೆ ನಿರೂಪಿಸಿರುವನು, ಎನ್ನುವದಕ್ಕೂ, ಒಂದು ಓನ್ನೆಲೆ ಇದೆ. ನಾಗವರ್ಮನು ಈ ಸಂಧಿಗಳೊಂದಿಗೆ ಬೀಜ, ಬಿಂದು, ಪತಾಕಾ, ಪ್ರಕರೀ, ಕಾರ್ಯವೆಂಬ ೫ ಸಂಧ್ಯಂಗ ಗಳನ್ನು ಹೇಳಿರುವನು. ಲಕ್ಷಣ ಗ್ರಂಥಗಳಲ್ಲಿ ಆತನ ಈ ಸಂಧ್ಯಂಗಗಳು ಅರ್ಥ ಪ್ರಕೃತಿಗಳೆಂದು ಉಕ್ತವಾಗಿವೆ. ಹೇಮಚಂದ್ರನು ಇವುಗಳನ್ನು ಪ್ರತ್ಯೇಕವಾಗಿ ಹೇಳಿಲ್ಲ.

ಸಾಮಾನ್ಯವಾಗಿ ಕಥೆ ಅಥವಾ ನಾಟಕದ ವಸ್ತುವಿನ ವಿಕಾಸದಲ್ಲಿ ೫ ಹಂತಗಳಿರು ತ್ತವೆ. ಯಾವುದೊಂದು ಮೂಲಭೂತ ಘಟನೆ ಅಥವಾ ಅದರ ಸೂಚನೆಯೊಂದಿಗೆ ಕಥೆ ಅಥವಾ ನಾಟಕ ಪ್ರಾರಂಭವಾಗುತ್ತದೆ. ಲಾಕ್ಷಣಿಕರು ಇದಕ್ಕೆ 'ಬೀಜ' ಎಂದಿರುವರು. ಮುಂದೆ ನೀರಿನ ಮೇಲೆ ಬಿದ್ದ ಎಣ್ಣೆಯಹನಿಯಂತೆ ಬೀಜರೂಪೀ ಕಥೆ ಹಬ್ಬುತ್ತದೆ. ಇದು 'ಬಿಂದು.' ಕಥೆ ಹಬ್ಬುತ್ತಿರುವಾಗ ಅದಕ್ಕೆ ಸಹಾಯಕವಾಗಿ ಬರುವ ಉಪಕಥೆ ಪ್ರಾಸಂಗಿಕ ವೃತ್ತಾಂತಗಳಿಗೆ 'ಪತಾಕಾ' 'ಪ್ರಕರೀ' ಎನ್ನುವರು. ಕಥೆಯ ಪರಿಣಾಮ ಅಥವಾ ಫಲಕ್ಕೆ 'ಕಾರ್ಯ' ಎನ್ನುವರು.

ಈ ೫ ಅರ್ಥ ಪ್ರಕೃತಿಗಳಿಗೆ ಹೊಂದಿಕೊಂಡು ಕಥಾನಾಯಕನು ಕಾರ್ಯ ಪ್ರವೃತ್ತನಾಗುತ್ತಾನೆ. ಇಲ್ಲಿಯೂ ೫ ಹಂತಗಳಿವೆ. ಇವುಗಳಿಗೆ ಅವಸ್ಥೆಗಳೆನ್ನುವರು. 'ಆರಂಭ'ವೆಂಬ ಮೊದಲನೆಯ ಅವಸ್ಥೆಯಲ್ಲಿ ನಾಯಕನು ಮುಖ್ಯಕಾರ್ಯ ಸಾಧನೆಯಲ್ಲಿ ತನಗಿರುವ ಆಸಕ್ತಿಯನ್ನು ತೋರಿಸುತ್ತಾನೆ. ಆ ಕಾರ್ಯ ಸಾಧನೆಗೆ ಉದ್ಯುಕ್ತ ನಾಗುವದು 'ಯತ್ನ'ವೆಂಬ ಎರಡನೆಯ ಅವಸ್ಥೆ. ಮೂರು ನಾಲ್ಕನೆಯ ಅವಸ್ಥೆಗಳಿಗೆ 'ಪ್ರಾಪ್ತ್ಯಾಶೆ' 'ನಿಯತಾಪ್ತಿ' ಎನ್ನುವರು. ಇಲ್ಲಿ ಫಲಪ್ರಾಪ್ತಿಯ ಸಂಭವಕಂಡುಬರುವದು

---

1 ಕಾ. ಲೋ. ಪದ್ಯ ೬೧೦

2 ಹೇ. ಕಾ. ಪದ್ಯ ೧೯೧-ವಿವೇಕ

3 ಕಾ. ಲೋ. ಪದ್ಯ ೪೫೭

ಮತ್ತು ಅದು ಹೆಚ್ಚು ದೃಢವಾಗುವದು. 'ಫಲಾಗಮ' ವೆಂಬ ಕೊನೆಯ ಅವಸ್ಥೆಯಲ್ಲಿ ಕಾರ್ಯಸಿದ್ಧಿಸುವದು.

ಅರ್ಥ ಪ್ರಕೃತಿ ಮತ್ತು ಅವಸ್ಥೆಗಳುಸೇರಿ ಮುಖಾದಿ ೫ ಸಂಧಿಗಳಾಗುತ್ತವೆ. ಮುಖ ಸಂಧಿಯಲ್ಲಿ ಕಥೆ ಇನ್ನೂ ಬೀಜರೂಪದಲ್ಲಿರುತ್ತದೆ. ನಾಯಕನು ಕಾರ್ಯ ಪ್ರವೃತ್ತನಾಗುತ್ತಾನೆ. ಪ್ರತಿಮುಖ ಸಂಧಿಯಲ್ಲಿ ಕಥೆ ಸ್ವಲ್ಪ ಬೆಳೆದು ನಾಯಕನು ಕಾರ್ಯಸಾಧನೆಗಾಗಿ ಯತ್ನಿಸುತ್ತಿರುತ್ತಾನೆ. ಗರ್ಭಸಂಧಿಯಲ್ಲಿ ಫಲಪ್ರಾಪ್ತಿಯ ಸೂಚನೆ ತೋರುತ್ತದೆ. ಅವಮರ್ಶ ಸಂಧಿಯಲ್ಲಿ ಫಲಪ್ರಾಪ್ತಿಯ ಬಗ್ಗೆ ನಿರಾಶೆಯೇ ಹೆಚ್ಚು ತೋರುವದು. ಕೊನೆಯದಾದ ನಿರ್ವಹಣ ಸಂಧಿಯಲ್ಲಿ ಫಲಪ್ರಾಪ್ತಿಗೆ ಅನುಕೂಲ ಪರಿಸ್ಥಿತಿ ಉಂಟಾಗಿ ನಾಯಕನು ಕೃತಕಾರ್ಯನಾಗುತ್ತಾನೆ.[1]

ಅರ್ಥಪ್ರಕೃತಿ ಮತ್ತು ಅವಸ್ಥೆಗಳಿಂದ ಯುಕ್ತವಾದ ಈ ೫ ಸಂಧಿಗಳಿಗೆ ಉಪಕ್ಷೇಪಾದಿ ೬೪ ಸಂಧ್ಯಂಗಗಳಿರುತ್ತವೆ. ಮೊದಲನೆಯ ಸಂಧಿಯಲ್ಲಿ ಬೀಜಾರೋಪಣದ ಮೊದಲನೆಯ ಕಾರ್ಯಕ್ಕೆ ಉಪಕ್ಷೇಪವೆನ್ನುವರು. ಪ್ರವೇಶಕ, ವಿಷ್ಕಂಭಕ, ಮೊದಲಾದ ಅರ್ಥೋಪಕ್ಷೇಪಕಗಳೆಂಬ ಅಂಗಗಳಾದರೂ ಇದೇ ವರ್ಗದಲ್ಲಿ ಬರುತ್ತವೆ. ವಸ್ತು ನಿರ್ದೇಶ, ಅನಿಷ್ಟ ವಿಷಯಗಳನ್ನು ಮರೆಮಾಡಲಿಕ್ಕೆ, ದೀರ್ಘ ಮತ್ತು ನೀರಸ ವಿಷಯ ಗಳನ್ನು ಸ್ವಲ್ಪದರಲ್ಲಿ ವಿವರಿಸಲಿಕ್ಕೆ ಇವುಗಳ ಯಥೋಚಿತ ಬಳಕೆಯಿಂದ ಕಥೆ ಕಳೆಕಟ್ಟುತ್ತದೆ.

ಭಾಮಹನು 'ಪಂಚಭಿಃ ಸಂಧಿಭಿಃ' ಎಂದಿರುವದರಿಂದ, ದೃಶ್ಯ ಕಾವ್ಯಗಳಿಗನ್ವ ಯಿಸುವ ಮುಖ, ಪ್ರತಿಮುಖಾದಿ ೫ ಸಂಧಿಗಳು ಮಹಾಕಾವ್ಯಕ್ಕೂ ಬೇಕೆಂಬ ಅವನ ಅಭಿಪ್ರಾಯಸ್ಪಷ್ಟವಿದೆ. ದಂಡಿ 'ಸುಸಂಧಿಭಿಃ' ಎಂದಿಷ್ಟೇ ಹೇಳಿರುವದರಿಂದ ಈ ಸುಸಂಧಿಗಳು ದೃಶ್ಯಕಾವ್ಯಗಳಿಗೆ ಅನ್ವಯಿಸುವ ಸಂಧಿಗಳೊ ಅಥವಾ ಶ್ರವ್ಯಕಾವ್ಯ ಗಳಲ್ಲಿರುವ ಸಂಧಿ ಅಥವಾ ಸರ್ಗಗಳು ಸುಸಂಬದ್ಧವಾಗಿರಬೇಕೆಂಬುದು ಅವನ ಆಶಯವೊ, ಎಂಬುದು ಸ್ಪಷ್ಟವಿಲ್ಲ. ಸರಸ್ವತೀಕಂಠಾಭರಣ, ಶೃಂಗಾರ ಪ್ರಕಾಶ, ಮೊದಲಾದ ಗ್ರಂಥಗಳ ಕರ್ತೃ ಭೋಜನು (ಕ್ರಿ. ಶ. ೧೧ನೆಯ ಶತಮಾನದ ಪೂರ್ವಾರ್ಧ) ದಂಡಿಯ ಈ ಉಕ್ತಿಯಿಂದುಂಟಾದ ಸಂದಿಗ್ಧ ಪರಿಸ್ಥಿತಿಯನ್ನು ನಿವಾರಿಸಿರುವನು. ಭೋಜನು–

ಏತೇತು ಸಂಧಯಃ ಕಾರ್ಯಾಃ ನಾಟಕೇಷು ಪ್ರಯೋಕ್ತೃಭಿಃ
ತಥಾ ಪ್ರಕರಣೇಷ್ವೇವಂ ಕಥಾಸ್ವಾಖ್ಯಾಯಿಕಾಸು ಚ ।
ಮಹಾಕಾವ್ಯೇಷು ಚಂಪೂಷು ತಥೈವಾಖ್ಯಾನಕೇಷು ಚ ॥

–ನಾಟಕ, ಪ್ರಕರಣಗಳಲ್ಲಿ ಮತ್ತು ಅದೇರೀತಿ ಕಥಾ, ಆಖ್ಯಾಯಿಕಾ, ಮಹಾಕಾವ್ಯ, ಚಂಪೂ, ಆಖ್ಯಾನಗಳಲ್ಲಿ ಈ ಸಂಧಿಗಳಿರಬೇಕೆಂದು ಹೇಳಿರುವನಲ್ಲದೆ–

---

1 ಸಂಸ್ಕೃತ-ನಾಟಕ, ಎ.ಆರ್. ಕೃಷ್ಣಶಾಸ್ತ್ರೀ, ಪುಟ. ೧೬-೧೭.

ನೈಷಾ ಸಂಧ್ಯಂಗ ಚತುಃಷಷ್ಟಿಃ ನಾಟಕಾದಿಷು
ಮಹಾಕಾವ್ಯಾದಿಷು ೫ ಪೂರ್ಣ ಸಂಧ್ಯಾದಿಷು
ನಿಬಂಧನೀಯಾನಿ ; ಪ್ರತಿ ಸಂಧಿಚಯಾನ್ಯಂಗಾನಿ...

—ಸಂಧಿಗಳೊಂದಿಗೆ ೬೪ ಸಂಧ್ಯಂಗಗಳೂ ಮಹಾಕಾವ್ಯಕ್ಕೆ ಅವಶ್ಯವೆಂದಿರುವನು.

ದಂಡಿಯ ಉಕ್ತಿಯಿಂದುಂಟಾದ ಸಂದಿಗ್ಧತೆಯನ್ನು ನಿವಾರಿಸಿದ ಭೋಜನ ಉ ಉಕ್ತಿ ಅನಂತರದ ಲಾಕ್ಷಣಿಕರಿಗೆ ಮತ್ತು ಸಾಹಿತಿಗಳಿಗೆ ಮತ್ತೊಂದು ತೊಡಕನ್ನುಂ ಮಾಡಿರಬೇಕು. ಚತುಃಷಷ್ಟಿ ಸಂಧ್ಯಂಗಗಳ ಉಪಯೋಗ ನಾಟಕಾದಿ ದೃಶ್ಯಕಾವ್ಯಗ ವಿಷಯದಲ್ಲಿಯೇ ಖಚಿತವಿರುವಾಗ ಶ್ರವ್ಯಕಾವ್ಯಗಳಿಗೆ ಅವುಗಳ ಪ್ರಯೋಜನವೇನು ಮೇಲಾಗಿ ಪ್ರವೇಶಕ, ವಿಷ್ಕಂಭಕ ಮೊದಲಾದುವು ಕೇವಲ ದೃಶ್ಯಕಾವ್ಯಗಳಿಗೆ ಅವ ವೆಂಬುದು ಸ್ಪಷ್ಟವಿದೆ. ಭೋಜನ ಮನಸ್ಸಿನಲ್ಲಿ ಏನಿದ್ದಿತೋ ಏನೋ, ಕುಶಲ ಸಂಗ್ರ ಕಾರನಾದ ಹೇಮಚಂದ್ರನು ಮಾತ್ರ ಅನಾವಶ್ಯಕವೆನಿಸುವ ಭೋಜನ ವಿವರಗಳ ತೊರೆದುಹಾಕಿ, ಮಹಾಕಾವ್ಯಕ್ಕೆ ಎಷ್ಟು ಬೇಕೊ ಅಷ್ಟು ಅಂದರೆ ೫ ಸಂಧಿಗಳನ ಮತ್ತು ಆನುಷಂಗಿಕವಾಗಿ ಬೀಜಾದಿ ೫ ಅರ್ಥಪ್ರಕೃತಿಗಳನ್ನು ಹೇಳಿರುವನು.[1] ಇದ ನಾಗವರ್ಮನು ತನ್ನ ಕಾವ್ಯಾವಲೋಕನದ 'ಸಸಂಧಿ ಮುಖಂ' ಮತ್ತು 'ಉ ಯೋಗದೆ ಬೀಜಂ' ಸೂತ್ರಗಳಲ್ಲಿ ಸಂಗ್ರಹಿಸಿರುವನು.[2] ಮಹಾಕಾವ್ಯಗಳಲ್ಲಿ ಸಂ ಸಂಧಿಗಳನ್ನು ಹೇಳಿರುವುದು ಹೇಮಚಂದ್ರನ ವೈಶಿಷ್ಟ್ಯವೆಂಬುದರ ಮತ್ತು ನಾಗವರ್ ಇದನ್ನೇ ಸಂಗ್ರಹಿಸಿ ಹೇಳಿರುವುದರ ಹಿನ್ನೆಲೆ ಇದು.

ಹೇಮಚಂದ್ರನ ದೊಂಬಿಕಾದಿ ಗೇಯರೂಪಕಗಳಿಗೆ ಆನುಷಂಗಿಕವಾಗಿ ನಾ ಪಾಡುಗಬ್ಬಗಳನ್ನು ನಾಗವರ್ಮನು ಉಲ್ಲೇಖಿಸಿರುವನೆಂಬ ಊಹೆ ಅಸಮರ್ಥನೀ ಈ ಮೊದಲೆ ವಿವರಿಸಿದೆ. ಹಾಗಿದ್ದರೆ ನಾಗವರ್ಮನು ಇವುಗಳನ್ನು ಉಲ್ಲೇಖಿಸಿ ಬಿಟ್ಟನೇನು? ಹೇಮಚಂದ್ರನನ್ನು ಅನುಸರಿಸಿ ಅವನು ಹೀಗೆ ಮಾಡಿರುವನೆಂ ಸಮರ್ಥನೆಯಿದ್ದರೂ ಅದು ಈ ಕಾರಣದಿಂದಲ್ಲ. ಸಂಸ್ಕೃತದ ಮುಕ್ತಕ, ಕುಳ ಮೊದಲಾದ ಕಾವ್ಯಪ್ರಕಾರಗಳು ಸುಪರಿಚಿತವಿವೆ. ಮುಕ್ತಕವೆಂದರೆ ಸ್ವಯಂಪ್ರ ಅನಿಬದ್ಧ ಅಥವಾ ಬಿಡಿಪದ್ಯ. ಅರ್ಥಗ್ರಹಣಕ್ಕಾಗಿ ಇದಕ್ಕೆ ಪೂರ್ವಾಪರ ಪದ್ ನೆರವು ಬೇಕಿಲ್ಲ. ಶತಕಗಳಲ್ಲಿ ಇಂಥ ಪದ್ಯಗಳನ್ನು ಕಾಣಬಹುದು. ಸರ್ವ ವಚನಗಳಾದರೂ ಮುಕ್ತಕಗಳೇ. ಎರಡು ಮುಕ್ತಕಗಳಿರುವ ಜೋಡಿಗೆ ಸಂದಾ ಎನ್ನುವರು, ಮೂರು ಇದ್ದರೆ ವಿಶೇಷಕ; ನಾಲ್ಕು ಇದ್ದರೆ ಕಲಾಪಕ, ಐದ ಗಳ ಮೇಲಿದ್ದರೆ ಕುಲಕ ಎನ್ನುವರು. ಮಹಾಕಾವ್ಯಗಳಲ್ಲಿಯೂ ಸೂರ್ಯೋದಯ ವರ್ಣನಪರವಿರುವ ಇಂಥ ಪದ್ಯಗಳ ಮಾಲಿಕೆಗೆ ಪರ್ಯಾಯ ಎನ್ನುವರು. ಒಟ್ಟು ಕನ

[1] ವಿ. ರಾಘವನ್, ಭೋಜನ ಶೃಂಗಾರ ಪ್ರಕಾಶ, ಪು. ೪೦೫. ೫೯೯.
[2] ಕಾ. ಲೋ. ಸೂತ್ರ ೨೪೪, ೨೪೯.

...ನು ಪಲವು ಕವಿಗಳ ಇಂತಹ ಪದ್ಯಸಂಗ್ರಹಕ್ಕೆ ಕೊಡುತ್ತಿದ್ದರು. ದಂಡಿ ...ದರ್ಶದಲ್ಲಿ ಭಾಮಹ ಮೊದಲಿಗ. ಈತ ಮುಕ್ತಕವೊಂದನ್ನೇ ಹೇಳಿರುವನು. ...ಡಿ ಮುಕ್ತಕಾದಿಗಳನ್ನು ಕಾವ್ಯಪ್ರಕಾರಗಳೆಂದು ಮನ್ನಿಸಿಲ್ಲ. ಮಹಾಕಾವ್ಯದ ...ಗಪೂರಕ ಪದ್ಯಗಳೆಂದಿರುವನು. ಬಳಿಯುತ್ತ ಪೂರ್ವಾಪರ ಸಂಬಂಧವಿರುವ ಪದ್ಯಗಳ ...ಪ್ರಭೃತಿ ಕವನಗಳೂ ಈ ವರ್ಗದಲ್ಲಿ ಸೇರುವವು. ಚಿಕ್ಕಪುಟ್ಟ ಕವನಗಳನ್ನು ...ಮುಕ್ತಕಾದಿ ವರ್ಗದಲ್ಲಿ ಸೇರಿಸಿದವರಲ್ಲಿ ಆನಂದವರ್ಧನನು ಮೊದಲಿಗನು. ಭೋಜನು ...[illegible]' ಎಂಬ ಹೊಸವರ್ಗವನ್ನು ನಿರ್ಮಿಸಿ ಇವುಗಳಿಗೆ ಪ್ರತ್ಯೇಕ ...ನವನ್ನು ಕಲ್ಪಿಸಿರುವನು.[1] ಹೇಮಚಂದ್ರನು ಮುಕ್ತಕಾದಿಗಳನ್ನು ಬಿಡಿ ...ದ್ಯಗಳೆಂದು ಗ್ರಹಿಸಿದ್ದರೂ, 'ಅವಾಂತರ ವಾಕ್ಯ ಸಮಾಪ್ತಾವಪಿ' ಎಂದು ಹೇಳಿ ...ಪೂರ್ವಾಪರದ ಸಂಬಂಧವಿರುವ ಆರ ಏಳ ಬಳ್ಳಿಕವನಗಳನ್ನು ಈ ವರ್ಗದಲ್ಲಿ ಅಳವಡಿಸಿ ...ಕೊಂಡಿರುವನು.[2] ಈ ವರ್ಗೀಕರಣ ಸಂಸ್ಕೃತ-ಪದ್ಯಗಳಿಗಷ್ಟೇ ಪರಿಮಿತವಿದ್ದಿತೆಂಬುದು ...ಮಹನ ಮುಕ್ತಕದ ವ್ಯಾಖ್ಯೆಯಿಂದ ಗೊತ್ತಾಗುವದು. ಅದು ಹೀಗಿದೆ—

> ಅನಿಬದ್ಧಂ ಪುನರ್ಗಾಥಾ ಶ್ಲೋಕಮಾತ್ರಾದಿ ತತ್ಪುನಃ ।
> ಯುಕ್ತಂ ವಕ್ರಸ್ವಭಾವೋಕ್ತ್ಯಾ, ಸರ್ವಮೇವೈತದಿಷ್ಯತೇ ॥[3]

ಮುಕ್ತಕವು ವಕ್ರೋಕ್ತಿ, ಸ್ವಭಾವೋಕ್ತಿಗಳಿಂದ ಕೂಡಿದ ಅನಿಬದ್ಧ ಗಾಥಾ ಇಲ್ಲವೆ ಶ್ಲೋಕ. ಗಾಥಾ ಪ್ರಾಕೃತ ಪದ್ಯವಿದ್ದರೆ ಶ್ಲೋಕ ಸಂಸ್ಕೃತಕ್ಕೆ ಸಂಬಂಧಿಸಿದೆ. ಹೇಮಚಂದ್ರನು ಗಾಥೆಯ ವ್ಯಾಖ್ಯೆಯನ್ನು ವಿಸ್ತರಿಸಿ 'ಏತಾನಿಚ' ಎಂದರೆ ಮುಕ್ತಕಾದಿಗಳು 'ಏಕೈಕಾರ್ಥಾಭಿಧಾನಾತ್ ಸರ್ವ ಭಾಷಾಭಿರ್ಭವಂತಿ....ವನಸಂತಿಕೋ ಯಥಾಗಾಥಾ' ಎಂದಿರುವನು.[4]

ನಾಗವರ್ಮನು 'ಇರುಕಂಗಬ್ಬ'ವೆಂದರೆ ಮುಕ್ತಕವೆಂದು ಹೇಳಿ ಸೂತ್ರ ೨೪೨ರಲ್ಲಿ ಕುಲಕ ಕೆಲವುಗಳನ್ನು ಹೇಳುವನು. ಸೂತ್ರ ೨೪೩, ೨೪೪, ೨೪೫ರಲ್ಲಿ ಕಂದ-ವೃತ್ತ-ಜಾತಿಗಳನ್ನು ಘಟಕಗಳನ್ನಾಗಿಟ್ಟುಕೊಂಡು ಪದ, ಮುಕ್ತಪದ, ಪಾಡು ಗಬ್ಬಗಳನ್ನು, ಚಂದ್ರಿಕೆ, ಪಾಡುಗಬ್ಬ ಮೇಲೆ ಎಂದಿರುವನು. ಸೂತ್ರ ೨೪೬ರಲ್ಲಿ 'ಪಲತೆರದ ಪದ್ಯದಿಂದಂ' ಎಂದಿರುವ ಪದ್ಯವನ್ನು ಘಟಕವಾಗಿಟ್ಟುಕೊಂಡಿರುವನು. ಇಂದ ಇವರಲ್ಲಿ ಅವನು ಮುಕ್ತಕಪ್ಪಟ್ಟುಕೊಂಡ ಇರುಕಂಗಬ್ಬ; ಕಂದ, ವೃತ್ತ, ಜಾತಿಗಳು ಸಹ ಸೇರುತ್ತವೆಂದು ಧ್ವನಿತವಾಗುತ್ತದೆ. ಇಂತಹ ಪದ್ಯಗಳು ಮತ್ತು 'ಲಲಿತ-ಮಧುರ-ರಚನೆ-ಯಿಂದರು ಪದ್ಯತತಿ'ಗಳು ಇರುವ ಕಾವ್ಯಕ್ಕೆ 'ಬಾಜನೆಗಬ್ಬ'

1 ವಿ. ರಾಘವನ್, ಭೋಜ, ಶೃಂ. ಪ್ರ. ಪು. ೬೦೯, ೬೧೦, ೬೪೧.

2 ಹೇ. ಕಾ. ಅಧ್ಯಾಯ ೮, ಸೂ. ೧೧, ಮುಂದೆ.

3 ಭಾಮಹ, ಕಾವ್ಯಾಲಂಕಾರ, ೧-೩೦

4 ಹೇ. ಕಾ. ಅಧ್ಯಾಯ ೮, ಸೂ. ೧೧, ಮುಂದೆ.

ಎಂದಿರುವನು. ಬಾಜನೆಗಬ್ಬವೆಂದರೆ ತಾಲಾನುಗ ಅಥವಾ ತಾಲಪ್ರಧಾನಗೀತ.
ಪದ್ಧತಿಕೆಯು ಇಂಥದೊಂದು ಬಂಧ.

ಈ ರೀತಿ ಭಾಮಹನ ಮುಕ್ತಕದಲ್ಲಿ ಅಡಕವಾದ ಪ್ರಾಕೃತ ಗಾಥೆ ಕಾಲಾನುಸಾರ
ಇತರ ದೇಶೀ ಗೇಯಬಂಧಗಳಿಗೆ ಶ್ರವ್ಯಕಾವ್ಯಗಳ ವರ್ಗದಲ್ಲಿ ಎಡೆಮಾಡಿಕೊಟ್ಟಿತು.
ನಾಗವರ್ಮನಾದರೂ ಭಾಮಹ, ಹೇಮಚಂದ್ರಾದಿ ಸಂಸ್ಕೃತ ಲಾಕ್ಷಣಿಕರ ದಾರಿಯಲ್ಲಿ
ಸಾಗಿ ಪಾಡು ಮೊದಲಾದ ಕನ್ನಡಗೇಯ ಬಂಧಗಳಿಗೆ ಎಡೆಮಾಡಿಕೊಟ್ಟಿರುವದರ
ಔಚಿತ್ಯವಾದರೂ ಇದೇ. ಈ ವರ್ಗೀಕರಣದಲ್ಲಿ ದೃಶ್ಯಕಾವ್ಯಗಳ ಅತಿಪುರ ದೊಂಬಿ
ಕಾದಿ ದೇಶೀ ಗೇಯರೂಪಕಗಳ ಸಂಪರ್ಕವಿಲ್ಲೆಂಬುದನ್ನು ಬೇರೆ ಹೇಳಬೇಕಿಲ್ಲ.

ಹೇಮಚಂದ್ರನಿಗೂ ನಾಗವರ್ಮನಿಗೂ ವಯಸ್ಸಿನಲ್ಲಿ ಬಹಳ ಅಂತರವಿರದ್ದರಿಂದ
ಆಕಾಲದಲ್ಲಿ ಗ್ರಂಥಗಳ ಪ್ರತಿಗಳನ್ನು ತಯಾರಿಸುವ ಮತ್ತು ಸಾರಿಗೆ ಸಂಪರ್ಕಗಳ
ಸೌಲಭ್ಯಗಳನ್ನು ಅನುಲಕ್ಷಿಸಿ, ಹೇಮಚಂದ್ರನ ಗ್ರಂಥಗಳು ನಾಗವರ್ಮನ ಕೈಸೇರಿ
ಅವನು ಅವುಗಳನ್ನು ಓದಿಕೊಂಡು ತನ್ನ ಗ್ರಂಥಗಳನ್ನು ರಚಿಸಿರಬಹುದೆಂಬುದು
ಅಸಂಭವನೀಯವಿದ್ದರೂ ದೂರದ ಮಾತೆನ್ನಬಹುದು. ವಾಸ್ತವತೆಗೆ ಹೊಂದಿಕೊಂಡಿರು
ವದರಿಂದ ಇದು ವಿಚಾರಾರ್ಹ ಆಕ್ಷೇಪಣೆ. ಈಗಿನಂತೆ ಆಗ ಮುದ್ರಣ, ಅಂಚೆ-
ಸೌಕರ್ಯಗಳಿರದ್ದರಿಂದ ಸಾಕಷ್ಟು ಪ್ರತಿಗಳನ್ನು ತಯಾರಿಸಿ ಪ್ರಸರಿಸುವದು ಸುಲಭ
ವಿದ್ದಿಲ್ಲೆಂಬುದು ನಿಜ. ಆದರೆ ಹೇಮಚಂದ್ರನ ವಿಷಯದಲ್ಲಿ ಇದು ಅನ್ವಯಿ
ಕಠಿಣವಿದ್ದಿಲ್ಲ. ಆತನಿಗೆ ಸಿದ್ಧರಾಜ-ಜಯಸಿಂಹ ಮತ್ತು ಕುಮಾರಪಾಲರ ಪ್ರಬಲ
ರಾಜಾಶ್ರಯವಿದ್ದಿತು. ಸಂಪ್ರತಿಕಾರರ ಒಂದು ಪಡೆಯು ಅವನ ಕೆಳಗೆ ಕೆಲಸ ಮಾಡುತ್ತಿ
ದ್ದಿತು. ಆತನ ಗದ್ಯಕೃತಿಗಳಲ್ಲಿ ಮೊದಲನೆಯದಾದ ಸಿದ್ಧ-ಹೇಮ ವ್ಯಾಕರಣವು
ರಚಿತವಾದೊಡನೆ, ೩೦೦ ಸಂಪ್ರತಿಕಾರರನ್ನು ನಿಯೋಜಿಸಿ ತಯಾರಿಸಲಾದ ಅದ
ಪ್ರತಿಗಳನ್ನು ಭಾರತದ ಎಲ್ಲ ಭಾಗಗಳಿಗಷ್ಟೇ ಅಲ್ಲ, ಸಿಂಹಳ, ನೇಪಾಳ, ಇರಾ
ದೇಶಗಳಿಗೂ ಕಳಿಸಲಾಯಿತೆಂದು ಅವನ ಜೀವನ ಚರಿತ್ರದ ವಿವರಗಳಿರುವ 'ಪ್ರಭಾವ
ಚರಿತ್ರ'ದಿಂದ ಕಂಡುಬರುತ್ತದೆ. 'ಅಂಗವಂಗ-ಕಲಿಂಗೇಷು ಲಾಟ-ಕರ್ನಾಟ
ಕುಂತಲೇ, ಮಹಾರಾಷ್ಟ್ರ-ಸುರಾಷ್ಟ್ರಾಸು-ವತ್ಸೇ-ಕಚ್ಛೇ ಚ ಮಾಲವೇ' ಎಂ
ಅದರಲ್ಲಿಯ ಒಂದು ಪದ್ಯದಿಂದ ಕರ್ಣಾಟಕಕ್ಕೂ ಕೆಲವು ಪ್ರತಿಗಳನ್ನು ಕಳಿಸಲಾಯಿ
ತೆಂಬುದು ಕಂಡುಬರುತ್ತದೆ. ಹೇಮಚಂದ್ರನ ಗ್ರಂಥಗಳನ್ನು ಶ್ರೀತಾಲವೆಂ
ವಿಶಿಷ್ಟ ಜಾತಿಯ ತಾಳೆಓಲೆಗಳ ಮೇಲೆ ಬರೆಯುತ್ತಿದ್ದರಂತೆ. ಒಮ್ಮೆ ಇವುಗ
ಅತೀವ ಕೊರತೆಯಾಯಿತು. ಹೊಸ ಸಂಗ್ರಹ ಸಕಾಲದಲ್ಲಿ ಬರುವಂತಿರಲಿಲ್ಲ. ಇದನ
ಕಂಡು ನೊಂದುಕೊಂಡ ಅವನ ಶಿಷ್ಯ ಕುಮಾರಪಾಲನು ತನ್ನ ಉದ್ಯಾನದಲ್ಲಿಯ ತಾ
ಮರಗಳನ್ನು ಪೂಜಿಸಲು, ಆತನ ಗುರುಭಕ್ತಿಯ ಪ್ರಭಾವದಿಂದ ಬೆಳಗಾಗುವಷ್ಟರ
ಅವೆಲ್ಲ ಶ್ರೀತಾಲ ವೃಕ್ಷಗಳಾಗಿದ್ದವಂತೆ. ಈ ಕಥೆಯೂ ಪ್ರಭಾವಕ ಚರಿ
ಯಲ್ಲಿದೆ. ಕಥೆಯ ಸತ್ಯಾಂಶ ನಮಗೆ ಅಮುಖ್ಯ. ಆದರೆ ಹೇಮಚಂದ್ರನ ಗ್ರಂಥ

ಪ್ರತಿಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಿ ಸ್ಪರ್ಧಿಸುತ್ತಿದ್ದರೆಂಬುದಕ್ಕೆ ಇದೊಂದು ಉದಾಹರಣೆಯನ್ನು ಕಾಣಬಹುದಾಗಿದೆ.[1] ಗುಜರಾತದ ಚಾಲುಕ್ಯರಿಗೂ ಕರ್ನಾಟಕದ ಪಶ್ಚಿಮ ಚಾಲುಕ್ಯರಿಗೂ ಮೊದಲಿನಿಂದ ಆಪ್ತತ್ವವಿದ್ದಿತು. ಸಿದ್ಧರಾಜ ಜಯಸಿಂಹನ ತಾಯಿ ಮೈನಲದೇವಿ ಮತ್ತು ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಅರಸಿ ಅಕ್ಕ ತಂಗಿಯರಾಗಿದ್ದರು. ಇಬ್ಬರೂ ಗೋವೆಯ ಕದಂಬಕುಲದ ರಾಜಕನ್ಯೆಯರು.[2] ನಾಗವರ್ಮ ದೇ ಪಶ್ಚಿಮ ಚಾಲುಕ್ಯವಂಶದ ಅಂದರೆ ೬ನೆಯ ವಿಕ್ರಮಾದಿತ್ಯನ ಮಮ್ಮಗ ಜಗದೇಕಮಲ್ಲನ ಕಟಕೋಪಾಧ್ಯಾಯ, ಶೈವ. ಆದ್ದರಿಂದ ಹೇಮಚಂದ್ರನಂಥ ಜೈನ ಮೇಧಾವಿಯ ಕೃತಿಗಳು ರಾಜಾಸ್ಥಾನಕ್ಕೆ ಬಂದರೆ ಅವು ನೇರವಾಗಿ ಆತನ ಸೇರುವುದು ಹೆಚ್ಚು ಸಂಭವನೀಯವಿದ್ದಿತು. ಮೇಲಾಗಿ ಹೇಮಚಂದ್ರನ ಖ್ಯಾತಿ ಭಾರತದಾದ್ಯಂತ ಪ್ರಸರಿಸಿತ್ತು. ಆತನಿರುವ ಅನಹಿಲ್ಲಪಟ್ಟಣ ಅಂದರೆ ಸಿದ್ಧರಾಜ-ಜಯಸಿಂಹ ಮತ್ತು ಕುಮಾರಪಾಲರ ರಾಜಧಾನಿ ಎಲ್ಲಬಗೆಯ ಎಲ್ಲ ಮತಗಳ ವಿದ್ವಾಂಸರಿಗೆ ಯಾತ್ರಾಸ್ಥಾನವಾಗಿದ್ದಿತು. ಆದ್ದರಿಂದ ಸ್ವತಃ ನಾಗವರ್ಮನೇ ಅಲ್ಲಿಗೆ ಹೋಗಿ ಹೇಮಚಂದ್ರನ ಸಹವಾಸದಲ್ಲಿ ಕೆಲಸಮಯ ಇದ್ದು ಆತನ ಗ್ರಂಥಗಳ ಪರಿಚಯಮಾಡಿಕೊಳ್ಳುವದೂ ಅಸಂಭವವಿಲ್ಲ. ಪ್ರಭಾವಕ ಚರಿತ್ರೆಯಲ್ಲಿ ಒಂದೆಡೆ ಹೇಮಚಂದ್ರನ ಆಸ್ಥಾನ— 'ಬ್ರಹ್ಮೋಲ್ಲಾಸ ನಿವಾಸೇsತ್ರ ಭಾರತೀ ಚಿತ್ರಮಂದಿರೇ, ಃ ಹೇಮಚಂದ್ರ ಸೂರೀಣಾಮಾಸ್ಥಾನೇsಸ್ಥಿ ಕೋವಿದೇ'. ಬ್ರಹ್ಮೋಲ್ಲಾಸ ಅಂದರೆ ಭಾರತಿ (ವಾಗ್ದೇವಿ)ಯ ಚಿತ್ರಸ್ಥಾನದಂತಿದ್ದು, ಅಲ್ಲಿ ವಿದ್ವಾಂಸರ ಯೋಗ ಕ್ಷೇಮವನ್ನು ಚನ್ನಾಗಿ ನೋಡಿಕೊಳ್ಳಲಾಗುತ್ತಿತ್ತು, ಎಂದಿದೆ.[3] ಈ ವರ್ಣನೆ ಮೋದನೆಂಬ ಭಾಗವತ ಪಂಡಿತನು ಹೇಮಚಂದ್ರನ ಆಸ್ಥಾನವನ್ನು ಸಂದರ್ಶಿಸಿದ ಸಂದರ್ಭದಲ್ಲಿರುವುದರಿಂದ, ಅಲ್ಲಿ ಮತೀಯ ಸಂಕುಚಿತಭಾವ ಇದ್ದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈವರೆಗೆ—(೧) ರತ್ನಮಂಜೂಷಾ ಗ್ರಂಥದ ಸ್ವರೂಪ, ಕಾಲ; (೨) ಅದರ ಭಾಷ್ಯಕಾರನ ಕಾಲ, ಅವನಿಗೂ ಹೇಮಚಂದ್ರನಿಗೂ ಇದ್ದಿರಬಹುದಾದ ಸಂಬಂಧ; (೩) ಇಮ್ಮಡಿ ನಾಗವರ್ಮನ ಕಾಲ, ಅವನಿಗೂ ಹೇಮಚಂದ್ರನಿಗೂ ಇದ್ದಿರಬಹುದಾದ ಸಂಬಂಧ, ಇವುಗಳನ್ನು ಕುರಿತು ಲಭ್ಯವಿರುವ ಸಾಧಕ-ಬಾಧಕ ವಿವರಗಳ ವಿವೇಚನೆ ಮಾಡಲಾಯಿತು. ಇದರೊಂದಿಗೆ ಇಮ್ಮಡಿ ನಾಗವರ್ಮನ ಛಂದೋವಿಚಿತಿಯ ಕೆಲಭಾಗಗಳು ನಾಗವರ್ಮನ ಛಂದೋಂಬುಧಿಯಲ್ಲಿ ಸೇರಿರಬಹುದೆಂಬ ಸೂಚನೆಯ ಸಮಂಜಸತೆಯನ್ನು ಸಹ ಪರೀಕ್ಷಿಸಲಾಯಿತು. ಇವುಗಳಿಂದ ರತ್ನಮಂಜೂಷೆಯ ಭಾಷ್ಯಕಾರ

[1] ಹೇ. ಜೀ. ಚಂಪ್ರ. ೧೬, ೫೫, ೭೨.

[2] ಹೇ. ಕಾ. ಸಂ. ೨, ಮುನ್ನುಡಿ ಪು. ೧೫೫

[3] ಹೇ. ಕಾ. ಸಂ. ೨, ಮುನ್ನುಡಿ, ಪು. ೪೦೦

ಹೇಮಚಂದ್ರನ ಸಮಕಾಲೀನ ಅಥವಾ ನಂತರದವ, ಆತನ ಛಂದೋನುಶಾಸನದ ಪ್ರಯೋಜನ ಪಡೆದವ, ಆತನಲ್ಲಿ ಪೂಜ್ಯಭಾವವುಳ್ಳವ ಎಂಬುದೂ, ಇಮ್ಮಡಿ ನಾಗವರ್ಮ ಸಹ ಹೇಮಚಂದ್ರನ ಸಮಕಾಲೀನ, ಆತನಿಂದ ಸ್ಫೂರ್ತಿ ಪಡೆದವ, ತನ್ನ ಕಾವ್ಯಾವಲೋಕನಕ್ಕಾಗಿ ಭಾಮಹಾದಿಗಳ ಗ್ರಂಥಗಳೊಂದಿಗೆ ಆತನ ಕಾವ್ಯಾನುಶಾಸನವನ್ನು ಉಪಯೋಗಿಸಿಕೊಂಡವ, ಎಂಬುದು[2] ವ್ಯಕ್ತವಾಗದಿರದು. ಪೂರ್ವಕವಿಸ್ಮರಣೆಯಲ್ಲಿ ಇಮ್ಮಡಿ ನಾಗವರ್ಮನು ಹೇಮಚಂದ್ರನನ್ನು ಸ್ಮರಿಸಿಲ್ಲವೆಂಬುದು ನಿಜ. ಆದರೆ ಪ್ರತಿಯೊಬ್ಬನು ತನಗೆ ಮೆಚ್ಚಿಗೆಯಾದ, ಶ್ರೇಷ್ಠರಾದ ಅಥವಾ ಅವರಿಂದ ನೆರವುಪಡೆದ ಎಲ್ಲ ಪೂರ್ವಿಕರನ್ನೂ ಸ್ಮರಿಸುವನೆಂದಿಲ್ಲ. ಎಷ್ಟೋಸಲ ಈ ಪಿಸುಣು ಕವಿ ಆಯ್ದುಕೊಂಡ ಪ್ರಾಸ, ಛಂದಸ್ಸು ಮೊದಲಾದವನ್ನು ಅವಲಂಬಿಸಿರುತ್ತದೆ.[1] ಒಂದೊಮ್ಮೆ ಇಮ್ಮಡಿ ನಾಗವರ್ಮ ರತ್ನಮಂಜೂಷೆಯ ಭಾಷ್ಯಕಾರನಿದ್ದ ಪಕ್ಷದಲ್ಲಿ, ಈ ಮೊದಲು ಉದಾಹರಿಸಲಾದ, ಜಿನ ಅಥವಾ ಜಿನಸಮಾನನೆಂದು ಭಾಷ್ಯಕಾರನು ಹೇಮಚಂದ್ರನನ್ನು ವಂದಿಸಿರುವ ಶ್ಲೋಕ ಇಮ್ಮಡಿ ನಾಗವರ್ಮನದಾಗುವದೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ.

ಇಮ್ಮಡಿ ನಾಗವರ್ಮ ರತ್ನಮಂಜೂಷೆಯ ಭಾಷ್ಯಕಾರನೆಂಬುದಕ್ಕೆ ಪೋಷಕವಿರುವ ಅಂಶಗಳಲ್ಲಿ ಈ ಗ್ರಂಥದ ಹಸ್ತಪ್ರತಿಗಳ ಲಿಪಿ ಒಂದು. ಎರಡು ಹಸ್ತಪ್ರತಿಗಳ ಆಧಾರದಿಂದ ವೇಲಣಕರ ಈ ಗ್ರಂಥವನ್ನು ಸಂಪಾದಿಸಿರುವರು. ಎರಡೂ ಕನ್ನಡ ಲಿಪಿಯಲ್ಲಿದ್ದವು. ಎರಡೂ ಮೈಸೂರು ಸರಕಾರದ ಪ್ರಾಚ್ಯಗ್ರಂಥ ಭಂಡಾರದಲ್ಲಿದ್ದವು. ಆ ಭಂಡಾರದ ಗ್ರಂಥಸೂಚಿಯಲ್ಲಿ ಇವುಗಳ ಕ್ರಮಾಂಕ ೮೭೧ ಮತ್ತು ೧೦೩೫ ಇದೆ ಮತ್ತು ಇವುಗಳ ಬಗ್ಗೆ 'ರತ್ನಮಂಜೂಷಾ ಛಂದೋವಿಚಿತಿ-ಭಾಷ್ಯಂ-ಜೈನಾನಾಂ ಛಂದೋಗ್ರಂಥಃ' ಎಂದಿಷ್ಟೇ ಹೇಳಲಾಗಿದೆ.[3] ಹೆಚ್ಚಿನ ವಿವರಗಳಿಲ್ಲ, ಮುದ್ರಿತ ಗ್ರಂಥದ ಪ್ರಕರಣಾಂತ ಗದ್ಯದಲ್ಲಿ 'ಇತಿ ರತ್ನ ಮಂಜೂಷಾಯಾಂ ಛಂದೋವಿಚಿತ್ಯಾಂ ಭಾಷ್ಯತಃ....ಅಧ್ಯಾಯಃ' ಎಂದಿದೆ. ಇಮ್ಮಡಿ ನಾಗವರ್ಮನ ಕೃತಿನಿರ್ದೇಶಕ ಪದ್ಯದಲ್ಲಿಯ 'ಛಂದೋವಿಚಿತಿ', ಈ ಪ್ರಕರಣಾಂತ ಗದ್ಯದ 'ಛಂದೋವಿಚಿತಿ' ಮತ್ತು ಗ್ರಂಥ ಸಂಪಾದನೆಗೆ ಆಕರಗಳಾಗಿದ್ದ ಹಸ್ತಪ್ರತಿಗಳ ಲಿಪಿ ಇವು ಈ ಲೇಖಕ್ಕಿದ್ದ ಮೂಲ ಪ್ರಚೋದಕಗಳೆನ್ನಬಹುದು. ಉಳಿದ ವಿವರಗಳು ಇವುಗಳ ಜಾಡಿನಲ್ಲಿ ಬಂದಿವೆ. ಗ್ರಂಥಭಂಡಾರದ ಸೂಚಿಯಲ್ಲಿ ಕಾಣಿಸಿದ 'ರತ್ನಮಂಜೂಷಾ–ಛಂದೋವಿಚಿತಿ ಭಾಷ್ಯಂ' ಎಂಬುದು ಹಸ್ತಪ್ರತಿಗಳಲ್ಲಿ ಇದಕ್ಕಿರುವ ಹೆಸರಿದ್ದು, 'ಜೈನಾನಾಂ

---

[1] ಕೆ. ವಿ. ರಾಘವಾಚಾರ, ಜನ್ನನ ಯಶೋಧರ ಚರಿತೆ, ಮುನ್ನುಡಿ, ಪು. ೧೧, ಅಡಿಟಿಪ್ಪಣಿ.

[2] ರ. ಮಂ. ಮುನ್ನುಡಿ, ಪು. ೩

[3] ಮೈ. ಗ. ಓ. ಲೈ. ಕೆ., ಸಂಸ್ಕೃತ ಗ್ರಂಥಗಳ ಹಸ್ತಪ್ರತಿಗಳು. ಪು. ೨೯೪

ಛಂದೋಗ್ರಂಥಃ' ಎಂಬುದು ಈ ಸೂಚಿಯನ್ನು ತಯಾರಿಸಿದವರಿಂದ ಅಥವಾ ಹಸ್ತ ಪ್ರತಿಗಳ ಸಂಪ್ರತಿಕಾರರಿಂದ ಸೇರಿಸಲ್ಪಟ್ಟಿರಬೇಕೆಂದು ತೋರುತ್ತದೆ. ಮುದ್ರಿತ ಪ್ರತಿಯಲ್ಲಿ 'ಸಭಾಷ್ಯಾ ರತ್ನಮಂಜೂಷಾ–ಛಂದೋಗ್ರಂಥಃ' ಎಂದಿದೆ. ಗ್ರಂಥ ಭಂಡಾರದ ಸೂಚಿಯಲ್ಲಿ ಕಾಣಿಸಿದ ಹೆಸರಿನಿಂದ ಮೂಲದಕಿಂತ ಭಾಷ್ಯಕ್ಕೆ ಪ್ರಾಧಾನ್ಯ ವಿರುವಂತೆ ತೋರುತ್ತದೆ. ಗ್ರಂಥಕಾರನು ಪ್ರಾಚೀನನಿದ್ದು, ಗ್ರಂಥದಿಂದಾಗಲಿ ಪರಂಪರಾಗತವಾಗಲಿ ಆತನ ಹೆಸರು ತಿಳಿಯದೆ ಅದು ಕೇವಲ ಛಂದೋವಿಚಿತಿಯೆಂಬ ಸಾಮಾನ್ಯ ಹೆಸರಿನಿಂದ ಪರಿಚಿತವಿದ್ದರೂ ಇರಬಹುದು. ರತ್ನಮಂಜೂಷೆಯೆಂದು ನಾಗವರ್ಮನೇ ಅದನ್ನು ಹೆಸರಿಸಿರಬೇಕು. ತನ್ನ ಗ್ರಂಥಗಳ ಹೆಸರಿಗೆ ಆಭರಣ ಅಥವಾ ಅಲಂಕಾರಸೂಚಕ ಹೆಸರನ್ನು ಜೋಡಿಸುವತ್ತ ಆತನ ಒಲವಿದ್ದಿತೆಂಬುದು ಅವುಗಳ ಹೆಸರಿನಿಂದ ವ್ಯಕ್ತವಾಗುವದು. ಕಾವ್ಯಾವಲೋಕನ 'ವಾಕ್–ಶ್ರೀ–ಸುಂದರಿ'ಗೆ ಆತನು ತೊಡಿಸಿದ ಒಂದು 'ಅಲಂಕೃತಿ', ವಸ್ತುಕೋಶ ವಸ್ತು–ಒಡವೆಗಳಲ್ಲಿಯ 'ವಸ್ತು' ಅಥವಾ ಬಳಿಕೆ ಮಾತಿನಲ್ಲಿಯ 'ವಸ್ತ', ಅಭಿಧಾನ ರತ್ನಮಾಲೆಯು 'ರತ್ನಮಾಲೆ', ಭಾಷಾಭೂಷಣವು 'ಭೂಷಣ'.

ರತ್ನಮಂಜೂಷೆ ಛಂದೋಗ್ರಂಥವಿರುವದರಿಂದ ಅದರಲ್ಲಿಯ ಒಂದೊಂದು ಛಂದೋಬಂಧ ಒಂದೊಂದು ರತ್ನ ಮತ್ತು ಇವು ಬಿಡಿಬಿಡಿಯಾಗಿ ಇರುವದರಿಂದ ಇವುಗಳನ್ನು ಯಾವುದೊಂದು ರತ್ನ ಜಡಿತ ಅಥವಾ ಗ್ರಥಿತ ಆಭರಣಕ್ಕೆ ಹೋಲಿಸು ವಂತಿಲ್ಲ. ಆದ್ದರಿಂದ ಈ ಗ್ರಂಥಕ್ಕೆ 'ರತ್ನಮಂಜೂಷಾ' ಎಂದರೆ 'ರತ್ನಗಳ ಪೆಟ್ಟಿಗೆ' ಎಂಬ ಹೆಸರು ಒಪ್ಪುವಂಥದಿದೆ. ರೂಢಿಯಲ್ಲಿ 'ರತ್ನ ಮಂಜೂಷಾ' 'ಭಾಷ್ಯ' ಪದಗಳು ಕಳಚಿಹೋಗಿ ಮತ್ತು ಮೊದಲಿನಿಂದಲೂ ಪ್ರಸಿದ್ಧವಿರಬಹುದಾದ ವಿಷಯಸೂಚಕ ಹೆಸರಿರುವ 'ಛಂದೋವಿಚಿತಿ' ಇಷ್ಟೇ ಉಳಿದಿರಬೇಕು ಮತ್ತು ಇದೇ ಆತನ ಕೃತಿನಿರ್ದೇಶಕ ಪದ್ಯದಲ್ಲಿ ಬಳಸಲ್ಪಟ್ಟಿರಬೇಕು. ಮೇಲಾಗಿ 'ಛಂದೋವಿಚಿತಿ' ಎಂಬುದು ಬಹಳ ಪ್ರಾಚೀನ ಹೆಸರು. ತಮ್ಮ ಗ್ರಂಥಗಳಿಗೆ ಈ ಹೆಸರನ್ನು ಕೊಟ್ಟವರಲ್ಲಿ ದಂಡಿ (ಕ್ರಿ. ಶ. ೭ ಶತಮಾನದ ಉತ್ತರಾರ್ಧ) ಕೊನೆಯವನೆಂದು ತೋರುತ್ತದೆ. ಛಂದೋವಿಚಿತಿ ಪದವು ಪಾಣಿನೀಯ ಗಣಪಾಠ, ಚಂದ್ರಗಣಪಾಠ, ಜೈನೇಂದ್ರ ಗಣಪಾಠ, ಗಣರತ್ನ ಮಹೋದಧಿ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಮತ್ತು ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಛಂದಃಶಾಸ್ತ್ರವೆಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಪಿಂಗಲನ ಛಂದಃಶಾಸ್ತ್ರಕ್ಕೂ ಪಿಂಗಲಪ್ರೋಕ್ತ ಛಂದೋವಿಚಿತಿ ಎನ್ನುತ್ತಿದ್ದರು. ಪತಂಜಲಿ ಛಂದೋವಿಚಿತಿ, ಜನಾಶ್ರಯಿ ಛಂದೋ ವಿಚಿತಿ, ದಂಡಿಪ್ರೋಕ್ತ ಛಂದೋವಿಚಿತಿಗಳೂ ಪ್ರಸಿದ್ಧವಿವೆ.[1] ಇದರಿಂದ ರತ್ನ ಮಂಜೂಷಾಕಾರ ಪಿಂಗಲ ಪತಂಜಲಿಗಳಷ್ಟು ಪ್ರಾಚೀನನಿರದಿದ್ದರೂ ಜನಾಶ್ರಯಿ

[1] ಜೈ. ಛಂ. ಮೀ. ಪು. ೩೫–೩೬

ದಂಡಿ ಮೊದಲಾದವರ ಕಾಲ-ಖಂಡದವನೆಂಬುದು (ಕ್ರಿ. ಶ. ೬೦೦-೯೦೦) ಮತ್ತು ' ಛಂದೋವಿಚಿತಿ ' ಮೂಲದಲ್ಲಿ ಆತನ ಗ್ರಂಥಕ್ಕಿದ್ದ ಹೆಸರೆಂಬುದು ವ್ಯಕ್ತವಾಗುತ್ತದೆ. ಆದರೆ ಪಿಂಗಲಾದಿಗಳ ಗ್ರಂಥಗಳು ಅವರವರ ಹೆಸರಿನಿಂದ ಪ್ರಸಿದ್ಧವಿರುವಂತೆ ಇದಾದರೂ ಗ್ರಂಥಕರ್ತನ ನಿಜವಾದ ಹೆಸರಿನಿಂದ ಪ್ರಸಿದ್ಧವಿರಬೇಕಿತ್ತು. ರತ್ನಮಂಜೂಷೆಯೆಂಬುದು ಅವಾಂತರ ಅತಏವ ಅನ್ಯನೊಬ್ಬನು ಕೊಟ್ಟ ಹೆಸರಿನಂತೆ ತೋರುತ್ತಿದ್ದು, ಅದನ್ನು ಇಮ್ಮಡಿ ನಾಗವರ್ಮನೇ ಕೊಟ್ಟು ಭಾಷ್ಯ ಬರೆದಿರಬೇಕೆಂದಿನಿಸುತ್ತದೆ.

ಒಂದೊಮ್ಮೆ ಆದಿನಾಗವರ್ಮನಂತೆ ಈ ನಾಗವರ್ಮನಾದರೂ ಒಂದು ಸ್ವತಂತ್ರ ಛಂದೋಗ್ರಂಥವನ್ನು ಬರೆದಿದ್ದರೆ, ತನ್ನ ಒಲವಿಗನುಸರಿಸಿ ಅದಕ್ಕೆ ' ವೃತ್ತರತ್ನ-ಸಮುಚ್ಚಯ ', ' ಛಂದೋರತ್ನಾಕರ' ಇಂಥ ಯಾವುದೊಂದು ಹೆಸರು ಕೊಡುತ್ತಿದ್ದನು. ಗ್ರಂಥಗಳ ನಾಮಕರಣದಲ್ಲಿ ಹೇಮಚಂದ್ರನಲ್ಲೂ ಈ ಬಗೆಯ ಒಲವನ್ನು ಕಾಣಬಹುದು. ಕಾವ್ಯಾಂಗ ಚತುಷ್ಟಯದ ಆತನ ಗ್ರಂಥಗಳೆಲ್ಲ ಶಬ್ದಾನುಶಾಸನ, ಕಾವ್ಯಾನುಶಾಸನ, ಛಂದೋನುಶಾಸನ, ಹೀಗೆ ಅನುಶಾಸನಪರಗಳಾಗಿವೆ.

ಇನ್ನು ಗ್ರಂಥಾಂತರ್ಗತವಿರುವ ಪೋಷಕ ಅಂಶಗಳನಿಷ್ಟು ನೋಡುವಾ. ಇವು ಸಮಾನಾರ್ಥಕ ಅಥವಾ ಸಂವಾದಿಯಾಗಿರುವ ಪದಪ್ರಯೋಗ, ಪದ್ಯ, ಮೊದಲಾದವುಗಳಿಗೆ ಸಂಬಂಧಿಸಿವೆ. ಇಂಥದೊಂದು ಉದಾಹರಣೆ ಕಾವ್ಯಾವಲೋಕನದ ಮತ್ತು ರತ್ನಮಂಜೂಷೆಯ ಮಂಗಲ ಪದ್ಯಗಳಲ್ಲಿಯೆ ದೊರೆಯುತ್ತದೆ. ಇದು ಕಾವ್ಯಾವಲೋಕನದ ಮಂಗಲ ಪದ್ಯ

ಶ್ರೀವರ್ಧಮಾನನಾನತ
ದೇವಾಧಿಪ ಮುಕುಟಕೋಟಿ ಘಟ್ಟಿತಚರಣಂ ।
ಕೇವಲ ವಿಬೋಧಲೋಚನ
ನಾವಗಮೊಲ್ದೀಗೆ ಕಾವ್ಯದೊಳ್ ಸಮಗರಿವಂ ॥

ರತ್ನ ಮಂಜೂಷೆಯ ಮಂಗಲ ಪದ್ಯ ಹೀಗಿದೆ

ಯೋಭೂತ ಭವ್ಯ ಭವದರ್ಥ ದೇವಾಸುರೇಂದ್ರ ಮುಕುಟಾರ್ಚಿತಪಾದಪದ್ಮಃ ।
ವಿದ್ಯಾನದೀ ಪ್ರಭವ ಪರ್ವತವಿಕ ಏವಕ ತಂಕ್ಷೀಣ ಕಲ್ಮಷಗಣಂಪ್ರಣಮಾಮಿ
ವೀರಂ ॥

ಇಲ್ಲಿ ಕಾವ್ಯಾವಲೋಕನದ ' ದೇವಾಧಿಪ ಮುಕುಟಕೋಟಿ ಘಟ್ಟಿತ ಚರಣಂ ' ಮತ್ತು ರತ್ನ ಮಂಜೂಷೆಯ ' ದೇವಾಸುರೇಂದ್ರ ಮುಕುಟಾರ್ಚಿತ, ಪಾದ ಪದ್ಮಃ ' ಪದಗಳನ್ನು ಹೋಲಿಸಿನೋಡಬೇಕು. ಒಂದು ಇನ್ನೊಂದರ ಪ್ರತಿಕೃತಿ ಇದ್ದಂತಿದೆ. ಕಾವ್ಯಾವಲೋಕನದಲ್ಲಿ ವರ್ಧಮಾನ ಜಿನೇಂದ್ರನಸ್ತುತಿ ಇದೆ. ರತ್ನ ಮಂಜೂಷೆಯಲ್ಲಿ ' ವೀರಂ ' ಎಂದರೆ ಮಹಾವೀರನಸ್ತುತಿ, ಇದೆ. ವರ್ಧಮಾನ ಎಂಬುದು ಮಹಾವೀರನ ಹೆಸರು. ವಸ್ತುಕೋಶದಲ್ಲೂ ನಾಗವರ್ಮನು ಮಹಾವೀರನನ್ನು ವರ್ಧಮಾನನೆಂದೇ

ಸ್ತುತಿಸಿರುವನು. ಕರ್ತೃತ್ವದ ವಿಷಯದಲ್ಲಿ ವಾದಾತೀತವಿರುವ ಇವೆರಡು ಗ್ರಂಥಗಳಲ್ಲಿ ಮಹಾವೀರನನ್ನು ವರ್ಧಮಾನ ಹೆಸರಿನಿಂದ ಸ್ತುತಿಸಿದಂತೆ ರತ್ನ ಮಂಜೂಷೆಯಲ್ಲೇಕೆ ಸ್ತುತಿಸಿಲ್ಲ? ಎಂದು ಪ್ರಶ್ನಿಸಬಹುದು, ಆದರೆ ಈ ಪ್ರಶ್ನೆಗೆ ಅಷ್ಟೊಂದು ಬಲವಿಲ್ಲ. ಏಕೆಂದರೆ ಕರ್ತೃತ್ವದ ವಿಷಯದಲ್ಲಿ ಇವುಗಳಷ್ಟೇ ವಾದಾತೀತವಿರುವ ಭಾಷಾ ಭೂಷಣ ದಲ್ಲಿ ಯಾವುದೊಂದು ವಿಶಿಷ್ಟ ಹೆಸರಿರುವ ಜಿನಸ್ತುತಿಯಿಲ್ಲ. ಆದರೂ ರತ್ನಮಂಜೂಷೆಯ ಮಟ್ಟಿಗೆ ಒಂದು ಕಾರಣವನ್ನು ಸೂಚಿಸಬಹುದು. ಈ ಗ್ರಂಥದ ೪ನೆಯ ಅಧ್ಯಾಯದಲ್ಲಿ 'ವರ್ಧಮಾನ'ವೆಂಬ ವೃತ್ತವನ್ನು ಲಕ್ಷಿಸಲಾಗಿದೆ.[1] ಪರ್ಯಾಯದಿಂದ ಇದು ವರ್ಧಮಾನಜಿನನ ಉಲ್ಲೇಖ ಅಥವಾ ಅತನ ಸ್ತುತಿಯೆಂದು ಭಾವಿಸಬಹುದಾಗಿದೆ. ಜಯದೇವ ಛಂದಸ್ಸಿನ ಕರ್ತ ಜಯದೇವ ಕ್ರಿ. ಶ. ೬೦೦-೯೦೦ ಅಥವಾ ಅದಕ್ಕೂ ಮೊದಲು ಜೈನನಿರಬಹುದೆಂಬುದಕ್ಕೆ ಈ ಗ್ರಂಥವನ್ನು ಸಂಪಾದಿಸಿದ ವೇಲಣಕರರು 'ಗಾಯತ್ರಂ ಛಂದಸಾಂ ಪೂರ್ವಂ ವರ್ಧಮಾನಾಕ್ಷರಂ ಪರಂ' ಎಂಬ ಅತನ ಮಂಗಲ ಶ್ಲೋಕವನ್ನು ಆಧಾರವಾಗಿ ಕೊಟ್ಟಿರುವರು. 'ಗಾಯತ್ರಿಯಿಂದ ಪ್ರಾರಂಭವಾಗಿ ಮುಂದೆ ಒಂದೊಂದು ಅಕ್ಷರದಿಂದ ವರ್ಧಿಸುವ' ಎಂಬುದು ಈ ಶ್ಲೋಕದ ಸರಳಾರ್ಥವಿದೆ ಆದರೆ ಇಲ್ಲಿರುವ 'ವರ್ಧಮಾನ' ಪದವು ವರ್ಧಮಾನ ಜಿನನ ಆಚ್ಛಾದಿತ ಸ್ತುತಿಯೆಂದಿರು ವರು, ವೇಲಣಕರ.[2] ವರ್ಧಮಾನ ವೃತ್ತವನ್ನು ಲಕ್ಷಿಸಿರ್ದ ಪ್ರಸಿದ್ಧ ಲಾಕ್ಷಣಿಕರಲ್ಲಿ ಪಿಂಗಲ ಕೇದಾರಭಟ್ಟ ಇಬ್ಬರನ್ನು ಬಿಟ್ಟು ಉಳಿದವರು ಜೈನರಿರುವರು.[3] ಇದರಿಂದಲೂ ಈ ವೃತ್ತದ ಹೆಸರಿನಲ್ಲಿ ಜೈನ ಲಾಕ್ಷಣಿಕರಿಗಿದ್ದ ಪೂಜ್ಯಬುದ್ಧಿ ಅಭಿಮಾನಗಳು ವ್ಯಕ್ತವಾಗು ತ್ತವೆ.

ನಾಗವರ್ಮನ ಭಾಷಾಭೂಷಣದ ಮಂಗಲ ಪದ್ಯ ಮತ್ತು ರತ್ನ ಮಂಜೂಷೆಯಲ್ಲಿ ಮಾತ್ರಾ ಸಮಕ ಅಥವಾ ಷೋಡಶ ಮಾತ್ರಾವರ್ಗದ 'ಚಿತ್ರಾ' ಬಂಧದ ಲಕ್ಷಪದ್ಯದಲ್ಲಿ ಸಹ ಪದಗಳ ಪರಸ್ಪರ ಪುನರಾವರ್ತಿಯನ್ನು ಕಾಣಬಹುದಾಗಿದೆ. ಇದು ಭಾಷಾ ಭೂಷಣದ ಮಂಗಲ ಶ್ಲೋಕ—

> ವರ್ಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಂ ।
> ಪ್ರವೃತ್ತಾ ಯಸ್ಮಾಖಾದ್ದೇವೀ ಸರ್ವಭಾಷಾ ಸರಸ್ವತೀ ॥

ರತ್ನಮಂಜೂಷೆಯಲ್ಲಿಯ 'ಚಿತ್ರಾ' ಬಂಧದ ಲಕ್ಷ ಪದ್ಯ ಇದು—

> ಸಕಲಜ್ಞಾನ ದೃಷ್ಟಿ ತಮೋ ನಿಹಂತ್ರೀ
> ನಾನಾ ಪ್ರಮಾಣನಯವರ ಚಿತ್ರಾ ।

---

[1] ರ. ಮಾ. ೪. ೫.

[2] ಜಯದಾಮನ್, ಮುನ್ನುಡಿ ಪು. ೩೩.

[3] ಹೇ. ಛಂ. ಪ್ರ. ೩೧೪, ವರ್ಣ ವೃತ್ತ ವಿಷಯ ಚತುಷ್ಪದಿಗಳ ಸೂಚಿ.

ವಾಣೀಜಿನವರ ಕಥಿತಾ ಶುದ್ಧಾ
ಭಾತ್ಯಂಬರೇರ್ಕ ರುಚಿರಿವ ಚಿತ್ರಾ ‖ [1]

ಕೊನೆಯ ಪಾದದ ಕೊನೆಯಗಣ 'ಚಿತ್ರಾ' ಎಂಬುದು ಬಂಧದ ಹೆಸರು. ಎರಡನೆಯ ಪಾದದ ಕೊನೆಯ ಗಣದಲ್ಲೂ ಇದು ಬಂದಿದೆ. ಲಕ್ಷ್ಯಕ್ಕಾಗಿಯೆಂದೇ ರಚಿಸಲ್ಪಟ್ಟಿರುವದರಿಂದ ಪದ್ಯದ ಕೃತ್ರಿಮತೆ ಒಡೆದು ಕಾಣುತ್ತದೆ. ಇದರಲ್ಲಿಯ 'ವಾಣೀಜಿನವರ ಕಥಿತಾ' ಪದವನ್ನೂ ಭಾಷಾ ಭೂಷಣದ 'ಪ್ರವೃತ್ತಾಯನ್ಮುಖಾದ್ದೇವೀ' ಪದವನ್ನೂ ಹೋಲಿಸಿ ನೋಡಬೇಕು. ಚಿತ್ರಾಬಂಧದ ಲಕ್ಷ್ಯವಾದರೂ ಮೂಲದಲ್ಲಿ ಸರಸ್ವತಿಯ ಸ್ತುತಿ ಇರುವಂತೆ ತೋರುತ್ತದೆ. ಭಾಷಾಭೂಷಣದ 'ತಮೋಪಹಂ' ಮತ್ತು ರತ್ನಮಂಜೂಷೆಯ 'ಕುಜ್ಞಾನ ದೃಷ್ಟಿ ತಮೋನಿಹಂತ್ರೀ' ಪದಗಳು ಸಮನಾರ್ಥಕವಿದ್ದರೂ ಒಂದು ಸರ್ವಜ್ಞನಿಗೆ ಅಂದರೆ ಜಿನನಿಗೆ ಮತ್ತು ಇನ್ನೊಂದು ಚಿತ್ರಾಬಂಧದ ಲಕ್ಷ್ಯದಲ್ಲಿ ವರ್ಣಿತವಾದ ಸ್ತ್ರೀ ವ್ಯಕ್ತಿಗೆ ಅನ್ವಯಿಸುವದರಿಂದ ಇವುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಕಾವ್ಯಾವಲೋಕನವು 'ಶ್ರೀವೀತರಾಗಾಯನಮಃ' ಎಂಬ ವಂದನಾತ್ಮಕ ಒಕ್ಕಣಿಕೆಯಿಂದ ಪ್ರಾರಂಭವಾಗುತ್ತದೆ. ಅಭಿಧಾನವಸ್ತುಕೋಶ 'ನಮಃ ಸಿದ್ಧೇಭ್ಯಃ' ದಿಂದ ಪ್ರಾರಂಭವಾಗುತ್ತದೆ; ಮುಂದೆ ಪ್ರತಿಯೊಂದು ಕಾಂಡದ ಪ್ರಾರಂಭದಲ್ಲಿ 'ಶ್ರೀವೀತರಾಗಾಯನಮಃ' ಅಥವಾ 'ನಮಃ ಸಿದ್ಧೇಭ್ಯಃ' ಎಂದಿದೆ. ಅಭಿಧಾನ ರತ್ನಮಾಲೆ 'ಶ್ರೀವೀತರಾಗಾಯನಮಃ'ದಿಂದ ಪ್ರಾರಂಭವಾಗುತ್ತದೆ. ಇದರಿಂದ ನಾಗವರ್ಮ 'ವೀತರಾಗ' ಅಥವಾ 'ಸಿದ್ಧ'ನೆಂಬ ಜಿನನನ್ನು ವಂದಿಸಿ ಗ್ರಂಥವನ್ನು ಪ್ರಾರಂಭಿಸುತ್ತಿದ್ದನೆಂಬುದು ವ್ಯಕ್ತವಾಗುವದು. ರತ್ನಮಂಜೂಷೆ ಸಹ 'ನಮಃ ಸಿದ್ಧೇಭ್ಯಃ' ದಿಂದ ಪ್ರಾರಂಭವಾಗುತ್ತದೆ. ಭಾಷಾಭೂಷಣದಲ್ಲೂ ಈ ಬಗೆಯ ಒಕ್ಕಣಿಕೆಗಳಿರಲಿಕ್ಕೆ ಸಾಕು. ಆದರೆ ಮುದ್ರಿತಪ್ರತಿಗಳಲ್ಲಿ ಸಂಪಾದಕರು ಇವುಗಳನ್ನು ಬಿಟ್ಟಿರುವಂತೆ ತೋರುತ್ತದೆ.

ಶಬ್ದಶಃ ಇಲ್ಲದಿದ್ದರೂ ಮಥಿತಾರ್ಥದಲ್ಲಿ ಈ ಕೆಳಗಿನ ಪದ್ಯಗಳು ಒಂದಕ್ಕೊಂದು ಸಂವಾದಿಯಾಗಿವೆ–

ಕಾವ್ಯಾವಲೋಕನ–

ಸಿರಿಯೊಡೆಯಂ ಸಿರಿಯುಳ್ಳಂ
ಸುರೂಪಿ ಗುಣವಂತನಧಿಕದಾನಿ ಮಹೇಚ್ಛಂ।
ನರರೊಳಿವನೆನಿಸಿ ಬಾಳ್ವುದು
ಪುರಾತನೋದಾತ್ತ ಪುಣ್ಯಪರಿಪಾಕಫಲಂ ‖ ೩೩೭

1 ರ. ಮಂ. ೩. ೧೫.

ರತ್ನಮಂಜೂಷೆ–

ಶ್ರೀಮಂಡಪೇಷು ಮಣಿರತ್ನ ವಿಭೂಷಿತೇಷು
ಸಿಂಹಾಸನೇಷು ವರಚಾಮರ ವೃಂದಮಧ್ಯೇ |
ಸಾಮಂತ ದೂತ ನಯನಾನಿಭೃಶಂ ದಧಾನಾ
ಭ್ರಾಂತೀಂದ್ರ ಭಾನು ಶಶಿವನ್ನರಪಾಃ ಸ್ವಪುಣ್ಯೈಃ || ೬-೧೮

ಐಹಿಕ ಭೋಗಭಾಗ್ಯಗಳು ಪೂರ್ವಾರ್ಜಿತ ಪುಣ್ಯದ ಫಲಗಳೆಂಬುದು ಈ ಪದ್ಯಗಳ ಮಥಿತಾರ್ಥ.

ವಸ್ತುಕೋಶದ ಪೀಠಿಕಾಪ್ರಕರಣದಲ್ಲಿ ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ, ಮೊದಲಾದ ವ್ಯಾಕರಣ, ಕೋಶಕಾರರನ್ನು ಸ್ಮರಿಸಿ ನಾಗವರ್ಮನು ಅವರಿಗೆ ಸಲ್ಲಬೇಕಿದ್ದ ಗ್ರಂಥಋಣವನ್ನು ಸಲ್ಲಿಸಿರುವನು.[1] ವರರುಚಿ ಅಸಾಮಾನ್ಯ ಪಂಡಿತ. ಇವನಿಗೆ 'ಏಕಶ್ರುತಧರ' ಎನ್ನುತ್ತಿದ್ದರು. ಒಮ್ಮೆ ಕೇಳಿದರೆ ಸಾಕು ಅದನ್ನು ಅಕ್ಷರಶಃ ತಿರುಗಿ ಒಪ್ಪಿಸುವವ ಅಥವಾ 'ಏಕಪಾಠಿ'ಎಂಬುದು ಈ ಹೆಸರಿನ ಅರ್ಥ. ಪಾಟಲಿಪುತ್ರದಲ್ಲಿ ಯೋಗನಂದನೆಂಬುವನಿಗೆ ಮಂತ್ರಿಯಾಗಿದ್ದನು. ಈತನ 'ಪ್ರಾಕೃತ ಪ್ರಕಾಶ'ಎಂಬ ಗ್ರಂಥವು ಪ್ರಸಿದ್ಧವಿದೆ.[2] ರತ್ನಮಂಜೂಷೆಯಲ್ಲಿ 'ಲಲನಾ'ವೃತ್ತಕ್ಕಿರುವ ಲಕ್ಷ್ಯಪದ್ಯದ ಕೊನೆಯಪಾದದಲ್ಲಿ 'ದ್ವಾರಿ ತಿಷ್ಠತಿ ತವ ವರರುಚಿರಿತಿ ಲಲನೇ' ಎಂದು ವರರುಚಿಯ ಹೆಸರು ಬಂದಿದೆ.[3] ಇದು ಯಾವುದೊಂದು ನಾಟಕದಲ್ಲಿಯ ಪದ್ಯವಿದ್ದು ವೃತ್ತದ ಹೆಸರಿರುವದರಿಂದ (ಅಥವಾ ಅದನ್ನು ಸೇರಿಸಿ) ಲಕ್ಷ್ಯಕ್ಕಾಗಿ ಬಳಸಿಕೊಂಡಿರಬೇಕೆಂದು ಸಂಪಾದಕ ವೇಲಣಕರರ ಅಭಿಪ್ರಾಯವಿದೆ.[4] ಈ ವೃತ್ತವನ್ನು ಜನಾಶ್ರಯಿ, ರತ್ನಮಂಜೂಷಾಕಾರ ಮತ್ತು ಹೇಮಚಂದ್ರ ಈ ಮೂವರೇ ಲಕ್ಷಿಸಿರುವರು. ವರರುಚಿಯ ಹೆಸರಿರುವ ಈ ಲಕ್ಷ್ಯವನ್ನು ರತ್ನಮಂಜೂಷೆಯ ಭಾಷ್ಯಕಾರನೊಬ್ಬನೇ ಕೊಟ್ಟಿರುವದರಿಂದ ಇದರಲ್ಲಿ ನಾಗವರ್ಮನ ಛಾಯೆ ಕಂಡುಬರದಿರಲಾರದು.

ಅಲಂಕಾರಶಾಸ್ತ್ರವಿರಲಿ, ಛಂದಃಶಾಸ್ತ್ರವಿರಲಿ, ಇವುಗಳಲ್ಲಿರುವ ಉದಾಹರಣೆಗಳು ಸಾಮಾನ್ಯವಾಗಿ ಸ್ವಕೃತ, ಅನ್ಯಕೃತ, ಉಭಯ ಎಂದರೆ ಛಂದೋಬಂಧದ ಹೆಸರನ್ನು ಸೇರಿಸುವಮಟ್ಟಿಗೆ ಪರಿವರ್ತಿಸಿದ ಪದ್ಯಗಳಿರುತ್ತವೆ. ನಾಗವರ್ಮನಾದರೂ ಇದಕ್ಕೆ ಅಪವಾದವಾಗಿಲ್ಲ. ಕಾವ್ಯಾವಲೋಕನದಲ್ಲಿ ಉದಾಹೃತವಾದ ಪದ್ಯಗಳಿಗೆ ಅನೇಕ ಸಂಸ್ಕೃತ ಪ್ರಾಕೃತ ಪದ್ಯಗಳು ಮಾತೃಕೆ ಅಥವಾ ಸಂವಾದಿಯಾಗಿವೆ. ಇವುಗಳೊಂದಿಗೆ ಪಂಪ, ರನ್ನ, ಪೊನ್ನ ಮೊದಲಾದ ಕನ್ನಡಕವಿಗಳ ಪದ್ಯಗಳೂ ಇವೆ. 'ಕವಿತಾ

---

1 ವ. ಕೋ. ೧.೩

2 ಕಥಾಮೃತ, ಎ. ಆರ್. ಕೃಷ್ಣಶಾಸ್ತ್ರೀ, ಮುನ್ನುಡಿ, ಪು. ૩-೮

3 ರ. ಮಂ. ೬-೨೯

4 ಅದೇ, ಮುನ್ನುಡಿ. ಪು. ೧

ಗುಣೋದಯ 'ನೆಂಬ ಬಿರುದುಳ್ಳವನಾದ್ದರಿಂದ ಸ್ವಕೃತ ಪದ್ಯಗಳೂ ಇರಬಹುದಾಗಿದೆ. ಈ ಉದಾಹರಣೆಗಳ ಸಂಕಲನ ಅಥವಾ ರಚನೆಯಲ್ಲಿ ಅವನದೊಂದು ವಿಶಿಷ್ಟ ಪ್ರವೃತ್ತಿಯನ್ನು ಕಾಣಬಹುದು. ಅದೆಂದರೆ ಕಾವ್ಯ, ಚಂಪೂ ಮೊದಲಾದ ಲಲಿತಸಾಹಿತ್ಯಕ್ಕೆ ಸಂಬಂಧಿಸಿದ ಸ್ವಕೃತ ಅಥವಾ ಅನ್ಯಕೃತ ಪದ್ಯಗಳೊಡನೆ, ಜಿನಸ್ತುತಿ, ಜೈನಧರ್ಮದ ಮೇಲ್ಮೆ, ವೈದ್ಯಶಾಸ್ತ್ರ, ಜ್ಯೋತಿಷ, ಸಾಮುದ್ರಿಕ ಮೊದಲಾದವುಗಳಿಗೆ ಸಂಬಂಧಿಸಿದ ಪದ್ಯಗಳನ್ನು ಸೇರಿಸಿರುವದು. ಇದರಿಂದ ಅವನು ಕಾವ್ಯ, ಕಾವ್ಯಶಾಸ್ತ್ರ, ಶಾಸ್ತ್ರ ಶಾಸ್ತ್ರಕಾವ್ಯ ಮತ್ತು ಇತರ ವಿಷಯುಗಳನ್ನು ಬಲ್ಲವ ಅಂದರೆ ' ಬಹುಜ್ಞ 'ನಿದ್ದನೆಂಬುದು ವ್ಯಕ್ತವಾಗುತ್ತದೆ. ಕಾವ್ಯಾವಲೋಕನ ಕ್ರಮಾಂಕ ೩೮, ೮೩, ೮೯, ೧೧೧, ೨೬೦, ೩೭೯, ೪೫೮, ೫೭೩, ೮೮೭ನೆಯ ಪದ್ಯಗಳು ಜಿನಸ್ತುತಿ ಅಥವಾ ಜೈನಧರ್ಮಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಎರಡು ಆದಿಪಂಪನ ಮತ್ತು ಒಂದು ಪೊನ್ನನ ಪದ್ಯಗಳಿವೆ. ಮಿಕ್ಕವು ಸ್ವಕೃತವಿರಬಹುದು ಅನ್ಯಕೃತವಿರಬಹುದು. ಪದ್ಯ ೨೬೮, ೨೭೧, ೪೭೦ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಒಂದರಲ್ಲಿ ಸರ್ಪದಂಶಕ್ಕೆ ಇನ್ನೊಂದರಲ್ಲಿ ಕುರುವಿಗೆ ಚಿಕಿತ್ಸೆ ಹೇಳಿದ್ದು, ಮೂರನೆಯದು ತ್ರಿದೋಷ ಅಂದರೆ ವಾತ, ಪಿತ್ತ, ಕಫ ವಿಕಾರಗಳಿಗೆ ಸಂಬಂಧಿಸಿದೆ. ಪದ್ಯ ೨೧೫ ಜ್ಯೋತಿಷಕ್ಕೆ, ೨೫೬ ಸಾಮುದ್ರಿಕಶಾಸ್ತ್ರಕ್ಕೆ, ೨೪೧ ಸೂಪಶಾಸ್ತ್ರಕ್ಕೆ ಸಂಬಂಧಿಸಿವೆ. ಮಿಕ್ಕವು ಸುಭಾಷಿತ ಮತ್ತು ಲಲಿತಸಾಹಿತ್ಯದಲ್ಲಿಯ ಪದ್ಯಗಳಿವೆ. ರತ್ನಮಂಜೂಷೆಯಲ್ಲಿ ಸಹ ಈ ಬಗೆಯ ಸಂಕಲನವನ್ನು ಕಾಣಬಹುದು. ಇಲ್ಲಿ ೧೬ ಉದಾಹೃತಪದ್ಯಗಳು ಜಿನಸ್ತುತಿ ಅಥವಾ ಜೈನಧರ್ಮಕ್ಕೆ ಸಂಬಂಧಿಸಿವೆ. ಬೇರೆ ಕೆಲವು ನೀತಿ, ವೈರಾಗ್ಯಪರವಿವೆ. ೨೫ ಸಾಮುದ್ರಿಕಶಾಸ್ತ್ರಕ್ಕೆ ಸಂಬಂಧಿಸಿವೆ. ಇವುಗಳೊಂದಿಗೆ ಕಾಳಿದಾಸನ ಶಾಕುಂತಲ ಮತ್ತು ಇತರ ಲಲಿತಸಾಹಿತ್ಯದಲ್ಲಿಯ ಪದ್ಯಗಳಿವೆ.

ರತ್ನಮಂಜೂಷೆಯಲ್ಲಿ ಕನ್ನಡ ವಿಶಿಷ್ಟ ಛಂದೋಬಂಧಗಳಿಲ್ಲ. ನಾಗವರ್ಮನ ವಸ್ತುಕೋಶ, ಭಾಷಾಭೂಷಣ, ಕಾವ್ಯಾವಲೋಕನ, ಅಭಿಧಾನರತ್ನಮಾಲಿ ಗ್ರಂಥಗಳು ಕನ್ನಡಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿವೆ. ಭಾಷಾಭೂಷಣ ಸಂಸ್ಕೃತದಲ್ಲಿದ್ದರೂ ಅದರ ವಿಷಯ ಕನ್ನಡ ವ್ಯಾಕರಣ. ಆತಏವ ಆತನ ಛಂದೋವಿಚಿತಿ ಒಂದೊಮ್ಮೆ ಸಂಸ್ಕೃತದಲ್ಲಿದ್ದರೂ ಕನ್ನಡಕ್ಕೆ ಸಂಬಂಧಿಸಿರಬೇಕು. ಆದ್ದರಿಂದ ಕನ್ನಡ ವಿಶಿಷ್ಟ ಛಂದೋಬಂಧಗಳು ಅಂದರೆ ಪಿರಿಯಕ್ಕರ ಮೊದಲಾದ ಕರ್ಣಾಟಕ ವಿಷಯ ಜಾತಿಗಳ ಉಲ್ಲೇಖ ಈ ಗ್ರಂಥದಲ್ಲಿರುವದು ಕ್ರಮಪ್ರಾಪ್ತವಿದೆ. ಇದು ವಿಚಾರಾರ್ಹ ಆಕ್ಷೇಪಣೆ. ಆದರೆ ಈ ಸಂದರ್ಭದಲ್ಲಿ, ರತ್ನಮಂಜೂಷೆಯ ಗ್ರಂಥಕಾರ ಬೇರೆ ಭಾಷ್ಯಕಾರ ಬೇರೆ ಎಂಬುದನ್ನು ನೆನೆಯಬೇಕು. ಗ್ರಂಥಕಾರ ದಾಕ್ಷಿಣಾತ್ಯನೆಂದು ಊಹಿಸಲಾಗಿದ್ದರೂ ಕನ್ನಡಿಗನೆಂದು ಭಾವಿಸಲು ಯಾವುದೆ ಬಗೆಯ ಆಧಾರವಿಲ್ಲ. ಭಾಷ್ಯಕಾರ, ಅವನು, ಇಮ್ಮಡಿ ನಾಗವರ್ಮನಿರಲಿ ಅನ್ಯನಿರಲಿ, ಮೂಲದಲ್ಲಿರುವುದನ್ನು ವಿವರಿಸಿ ಹೇಳಬಲ್ಲನು, ಇಷ್ಟೇ.

ಅಲ್ಲದೆ ಕನ್ನಡ ವಿಶಿಷ್ಟ ಛಂದೋಬಂಧಗಳನ್ನು ಇಬ್ಬರೇ ಹೇಳಿರುವರು. ಒಬ್ಬನು ಆದಿನಾಗವರ್ಮ, ಇನ್ನೊಬ್ಬನು ಜಯಕೀರ್ತಿ. ತುಸು ಹೆಚ್ಚುಕಡಮೆ ಇಬ್ಬರೂ ಸಮಕಾಲೀನರು (ಕ್ರಿ. ವ. ೯೫೦–೧೦೦೦). ಕರ್ಣಾಟಕ ವಿಷಯಜಾತಿಗಳ ಆಳಿಕೆ ಇವರ ಕಾಲದಲ್ಲಿಯೇ ಏಕೆ ಇವರಿಗಿಂತ ಎಷ್ಟೋ ಮೊದಲಿನವನಾದ ಕವಿರಾಜಮಾರ್ಗಕಾರನ ಕಾಲದಲ್ಲಿಯೇ ಇಳಿಮುಖವಾಗಿದ್ದಿತು. ನಾಲ್ಕಾರು ಗೀತಿಕೆಗಳನ್ನು ಬಿಟ್ಟರೆ ಕವಿರಾಜಮಾರ್ಗದಲ್ಲಿಯ ಉಳಿದ ಪದ್ಯಗಳು ಕಂದವೃತ್ತಗಳು. ಸ್ವತಃ ಆದಿನಾಗವರ್ಮನದೆನ್ನುವ ಕರ್ಣಾಟಕ ಕಾದಂಬರಿಯಲ್ಲಿ ಸಹ ಒಂದೆರಡು ಪಿರಿಯಕ್ಕರಗಳನ್ನು ಬಿಟ್ಟರೆ ಮಿಕ್ಕವೆಲ್ಲ ಕಂದವೃತ್ತಗಳು. ಇಮ್ಮಡಿ ನಾಗವರ್ಮನ ಕಾವ್ಯಾವಲೋಕನ ವಸ್ತುಕೋಶಗಳಲ್ಲಿ ಸಹ ಅಲ್ಲೊಂದು ಇಲ್ಲೊಂದು ಗೀತಿಕೆ, ಪಿರಿಯಕ್ಕರ ತ್ರಿಪದಿ ಕಂಡುಬರುತ್ತವೆ. ಕರ್ಣಾಟಕ ವಿಷಯ ಜಾತಿಗಳ ಸ್ಥಿತಿ ಹೀಗೇಕಾಯಿತು; ಇತರರಿರಲಿ, ಕನಿಷ್ಠಪಕ್ಷದಲ್ಲಿ ಕನ್ನಡ ಕವಿಗಳಾದರೂ ಇವುಗಳನ್ನೇಕೆ ಪುರಸ್ಕರಿಸಲಿಲ್ಲ; ಇವುಗಳ ವ್ಯಾಪ್ತಿ ಈಗ ತಿಳಿದುಕೊಂಡಂತೆ ಕನ್ನಡ, ತೆಲುಗು ತಮಿಳು ಭಾಷೆಗಳಿಗಿಷ್ಟೇ ಪರಿಮಿತವಿದ್ದಿತೇ ಅಥವಾ ಭಾರತದ ಇತರೆಡೆಗಳಲ್ಲೂ ಪ್ರಸರಿಸಿದ್ದು ಬರಬರುತ್ತ ಸಂಕುಚಿತವಾಗಿ, ಕೆಲಕಾಲ ಕರ್ಣಾಟಕದ ಮಟ್ಟಿಗೆ ಉಳಿದು, ಕರ್ಣಾಟಕ ವಿಷಯ ಜಾತಿಗಳೆಂಬ ಹೆಸರುಗಳಿಸಿ, ಕೊನೆಗೆ ಇಲ್ಲಿಯೇ ನಾಮಶೇಷವಾದವೊ, ಇವೇ ಮೊದಲಾದ ವಿಷಯಗಳ ಚರ್ಚೆಗೆ ಬೇರೊಂದು ಪ್ರಬಂಧವೇ ಬೇಕು.

ಆದರೆ ಒಂದು ಮಾತನ್ನು ಹೇಳಬಹುದು. ಅದೆಂದರೆ ಇಮ್ಮಡಿ ನಾಗವರ್ಮನು ತನ್ನ ಛಂದೋವಿಚಿತಿಯನ್ನು ಕನ್ನಡಕ್ಕಾಗಿ ಕನ್ನಡದಲ್ಲಿಯೇ ಬರೆದಿದ್ದರೂ ಕೂಡ ಬಹುಶಃ ಅವನು ಅದರಲ್ಲಿ ಇವುಗಳಿಗೆ ಸ್ಥಾನ ಕೊಡುತ್ತಿದ್ದಿಲ್ಲವೆಂಬುದು. ಇದಕ್ಕೆ ಸ್ಥೂಲವಾಗಿ ಇಲ್ಲಿ ಒಂದು ಕಾರಣವನ್ನು ಕೊಡಬಹುದು. ಕರ್ಣಾಟಕ ವಿಷಯ ಜಾತಿಗಳು ಕಾವ್ಯೋಪಯೋಗಿ ಛಂದೋಬಂಧಗಳಲ್ಲವೆಂದು ಲಾಕ್ಷಣಿಕರು ಬಗೆದುದರಿಂದ ಅವುಗಳ ಬಳಕೆ ಕಡಿಮೆಯಾಗುತ್ತ ಕೊನೆಗೆ ಇಲ್ಲದಂತಾಯಿತೆಂದು ಹೇಳಬಹುದು. ಜಯಕೀರ್ತಿ ಈ ಬಂಧಗಳಲ್ಲಿ ರಚಿತವಾದ ಕರ್ಣಾಟೇಶ್ವರ ಕಥಾ, ಕರ್ಣಾಟಕ ಕುಮಾರ ಸಂಭವ ಕಾವ್ಯ, ಚೂಡಾಮಣಿ, ಮೊದಲಾದವನ್ನು ಉಲ್ಲೇಖಿಸಿರುವನು. ಇವುಗಳಲ್ಲಿ ಕರ್ಣಾಟಕ ಕುಮಾರ ಸಂಭವಕಾವ್ಯ ಅಸಗನದೆಂದಿರುವನು.[1] ಅಸಗನ ಕಾಲ ಕ್ರಿ. ವ. ೯೦೦ ಮತ್ತು ಚೂಡಾಮಣಿ ೧೦ನೆಯ ಶತಮಾನದೆಂದು ಭಾವಿಸಲಾಗಿದೆ.[2] ಈ ಕಾಲವು ಆದಿನಾಗವರ್ಮ ಮತ್ತು ಜಯಕೀರ್ತಿಯ ಕಾಲದ ಸಮೀಪವರ್ತಿಯಾಗಿರುವದರಿಂದ, ಕವಿಗಳಲ್ಲಿ ಅಸಗಾದಿಗಳದೊಂದು ಪಕ್ಷ ಮತ್ತು ಇವು ಕಾವ್ಯೋಪಯೋಗಿ ಬಂಧಗಳಲ್ಲವೆಂದು ಬರೆದವರ ಇನ್ನೊಂದು ಪಕ್ಷ, ಹೀಗೆ ಎರಡು ಪಕ್ಷಗಳಿದ್ದು ಸಾಕಷ್ಟು ಪ್ರೋತ್ಸಾಹ

---

1 ಜಯದಾಮನ್ ಪ್ರ. ೬೬, (ಜ. ಕೀ. ಛಂ. ಅಧಿಕರಣ ೭)

2 ಕ. ಸಾ. ಚ. ಪು. ೩೦.

ವಿಲ್ಲದೆ ಅಸಗ ಪಕ್ಷ ಹಿಂದೆ ಬಿದ್ದು, ಇವುಗಳ ಬಳಕೆ ಕ್ರಮೇಣ ಇಲ್ಲದಂತಾಯಿತೆಂದು ಭಾವಿಸಬಹುದಾಗಿದೆ.

ಮೇಲಾಗಿ ಅಚ್ಚಗನ್ನಡ ಛಂದೋಬಂಧಗಳೆಂದು ಇವುಗಳಲ್ಲಿ ಅಭಿಮಾನ ತಳೆದವರು ಈಗಿನವರಾದ ನಾವು ಕವಿರಾಜಮಾರ್ಗಕಾರನಾಗಲಿ, ಆದಿನಾಗವರ್ಮ ಮತ್ತು ಆತನ ನಂತರದವರಾಗಲಿ, ಹೆಚ್ಚೇಕೆ ಇಮ್ಮಡಿ ನಾಗವರ್ಮ ಸಹ ಈರೀತಿ ಅಭಿಮಾನ ತಳೆದಿದ್ದಿಲ್ಲವೆಂಬುದು ಅವರ ಗ್ರಂಥಗಳಿಂದಲೇ ಗೊತ್ತಾಗುವುದು. ಇತ್ತ ವರ್ಣಛಂದಸ್ಸುಗಳು ವೈದಿಕ ಛಂದಸ್ಸುಗಳಂತೆ ಅಕ್ಷರನಿಯತವಿದ್ದು ದರಿಂದ ಅವುಗಳಿಂದಲೇ ಹುಟ್ಟಿಬಂದಂಥವು, ವ್ಯಾಸ ವಾಲ್ಮೀಕಿಗಳಂಥವರು ಬಳಸಿರುವುದರಿಂದ ವೈದಿಕ ಛಂದಸ್ಸುಗಳಷ್ಟೇ ಪವಿತ್ರ, ದೇವತಾದಿಸ್ತೋತ್ರ, ಶಾಸ್ತ್ರಾದಿಗಳ ನಿರೂಪಣೆಗೆ ಯೋಗ್ಯವಾದಂಥವು, ಎಂಬ ಭಾವನೆ ನಾಟ್ಯಶಾಸ್ತ್ರಕಾರ ಭರತನಿಂದಲೂ ಬೆಳೆದುಬಂದಿತ್ತು. 'ಗಾಯತ್ರ್ಯಾದಿ ತ್ರಿಷ್ಟುಪ್ಪರ್ಯಂತಂ ಯದಾರ್ಷಂ ಛಂದೋ ಜಾತಂ ವೈದಿಕೇ ವ್ಯಾಖ್ಯಾತಂ, ಲೌಕಿಕೇಚ ತತ್ತಥೈವ ದ್ರಷ್ಟವ್ಯಮ್; ಕಿಂಚತದಾರ್ಷಂ? ಚತುರ್ವಿಂಶತ್ಯಕ್ಷರಾ ಗಾಯತ್ರೀ, ಅಷ್ಟಾವಿಂಶತ್ಯಕ್ಷರೋಷ್ಣಿಕ್....ಏಷಾಂ ಛಂದಸಾಂ ವೈದಿಕತ್ವ ಮೇವ....ಆರ್ಯಾದೀನಾಂ ಚೂಲಿಕಾಪರ್ಯಂತನಾಂ ಲೌಕಿಕತ್ವಮೇವ, ಸಮಾನ್ಯಾದೀನಾಮುತ್ಕೃತಿ ಪರ್ಯಂತಾನಾಂ ವೈದಿಕತ್ವಂ ಲೌಕಿಕತ್ವಂಚ' ಎಂದು ವಿವರಿಸಿರುವನು. ಪಿಂಗಲನ ಭಾಷ್ಯಕಾರ ಹಲಾಯುಧ, 'ದಿವ್ಯೋ ದಿವ್ಯೇತರಶ್ಚೈವ ದಿವ್ಯಮಾನುಷ ಏವಚ' ಎಂಬ ಭರತೋಕ್ತಿಗೆ, ಆತನ ವ್ಯಾಖ್ಯಾನಕಾರ ಅಭಿನವಗುಪ್ತ ದಿವ್ಯ ಎಂದರೆ ಸ್ತೋತ್ರ ಶಾಸ್ತ್ರಾದಿಗಳಿಗೆ ಗಾಯತ್ರಿಯಿಂದ ಜಗತೀವರೆಗಿನ ಪ್ರಥಮ ಸಪ್ತಕದಲ್ಲಿಯ ಛಂದೋಬಂಧಗಳನ್ನು, ದಿವ್ಯೇತರ ಅಂದರೆ ಮಾನವರ ಸಂಬಂಧದಲ್ಲಿ ಅತಿಜಗತಿಯಿಂದ ಅತಿಧೃತಿವರೆಗಿನ ದ್ವಿತೀಯ ಸಪ್ತಕದ ಛಂದೋಬಂಧಗಳನ್ನು ಮತ್ತು ದಿವ್ಯಮಾನುಷ ಅಂದರೆ ರಾಮಾದಿ ನರಪತಿಗಳಿಗೆ ಸಂಬಂಧಿಸಿದ ಕೃತಿಯಿಂದ ಉತ್ಕೃತಿವರೆಗಿನ ತೃತೀಯ ಸಪ್ತಕಗಳ ಛಂದೋಬಂಧಗಳನ್ನು ಬಳಸಬೇಕೆಂದು ವಿವರಿಸಿದನು.[1]

ಈರೀತಿ 'ಶಿಷ್ಟ' ಕಾವ್ಯಗಳಿಗೆ ಬಳಸಲು ಇವು 'ಶಿಷ್ಟ' ಛಂದೋಬಂಧಗಳೆಂದು ಪರಿಗಣಿಸಲ್ಪಟ್ಟವು. ಇದು ಸಂಸ್ಕೃತ–ಕಾವ್ಯಪರಂಪರೆಗೆ ಸಂಬಂಧಿಸಿದ್ದರೂ ಸಂಸ್ಕೃತವನ್ನೇ ಆದರ್ಶವಾಗಿಟ್ಟುಕೊಂಡ ಪ್ರಾಕೃತಾದಿ ದೇಶೀ ಭಾಷೆಗಳಲ್ಲಿಯ ಕವಿಗಳಾದರೂ ಇದೇ ದಾರಿಯಲ್ಲಿ ಸಾಗಿದರು. ಈ ಪ್ರವೃತ್ತಿ, ಇಮ್ಮಡಿ ನಾಗವರ್ಮನಷ್ಟೊತ್ತಿಗೆ ಪರಮಾವಧಿಗೇರಿತ್ತೆಂಬುದು ಆತನಿಂದ ಮುಂದೆ ೫೦ ವರ್ಷಗಳನಂತರ ಆಗಿಹೋದ ಆಂಡಯ್ಯನು (ಕ್ರಿ. ಶ. ೧೨೩೫) ಸಂಸ್ಕೃತದ ಅತೀವ ಪ್ರಾಬಲ್ಯದಿಂದ ಬೇಸತ್ತು ಸಂಸ್ಕೃತ ಬೆರಸದೆ ಕನ್ನಡ ಬರೆಯುವ ಪಣತೊಟ್ಟು ಬರೆದ 'ಕಬ್ಬಿಗರ ಕಾವ'ವೇ ಸಾಕ್ಷಿ. ಅವನು ಸಹ ಪದಪ್ರಯೋಗದಲ್ಲಿ ತನ್ನ ಪ್ರತಿಜ್ಞೆಯನ್ನು ಪಾಲಿಸಿರುವನಲ್ಲದೆ

[1] ವೈ. ಛಂ. ವಿ. ಪು. ೯೩–೯೪.

ಛಂದಸ್ಸಿನ ವಿಷಯದಲ್ಲಿ ಪೂರ್ವಿಕರ ದಾರಿಯನ್ನೇ ತುಳಿದಿರುವನು. ಆದಿನಾಗವರ್ಮ ಸಹ ಛಂದೋಂಬುಧಿಯ ಅಲ್ಪಭಾಗವನ್ನು ಮಾತ್ರ ಅಚ್ಚಗನ್ನಡ ಛಂದಸ್ಸಿಗೆ ವಿನಿಯೋಗಿಸಿರುವದರಿಂದ ಸಂಸ್ಕೃತ ಛಂದಸ್ಸು ಕನ್ನಡದಲ್ಲಿ ಪ್ರಧಾನವೆಂದೂ, 'ಕನ್ನಡ ಛಂದಸ್ಸು ಅತಿ ವಿರಳವೆಂದೂ ಕಡೆಗೆ ಅದು ಉಂಟೊ ಇಲ್ಲವೊ, ಇದ್ದರೂ ಮಹತ್ತಿನದಲ್ಲವೆಂದೊ ಬುದ್ಧಿಗೆ ಭಾಸವಾಗುತ್ತದೆ' ಎಂಬ ಕನ್ನಡಕೈಪಿಡಿಕಾರರ ಮಾತುಗಳು ಇಲ್ಲಿ ಸಂದರ್ಭೋಚಿತವಾಗಿವೆ.[1]

ಈ ಆಭಾಸ ಆದಿನಾಗವರ್ಮನ ಮಟ್ಟಿಗೆ ಪರಿಮಿತವಿಲ್ಲ. ಇದು ಹೀಗೆಯೆ ಮುಂದರಿದು ಇಮ್ಮಡಿ ನಾಗವರ್ಮನನಂತರ ಹರಿಹರ ರಾಘವಾಂಕಾದಿಗಳ ಪರಿಶ್ರಮದಿಂದ ಷಟ್ಪದಿ ಮೊದಲಾದ ದೇಶೀ ಬಂಧಗಳು ಸಾಕಷ್ಟು ಲೋಕಪ್ರಿಯವಾದರೂ, ಕನ್ನಡದಲ್ಲಿ ಕನ್ನಡದ್ದು ಎಂಬುದೇನೂ ಇಲ್ಲವೆಂಬ ಭಾವನೆ ೧೯ನೆಯ ಶತಮಾನದ ಕೊನೆವರೆಗೆ (ಕನ್ನಡ ಸಾಹಿತ್ಯದ ವರ್ತಮಾನಯುಗದವರೆಗೆ ಎಂದರೂ ಸಲ್ಲುವದು) ಸಾಗಿ ಬಂದಿರುವದನ್ನು ಈ ಕೆಳಗಿನ ಕಂದದಲ್ಲಿ ಕಾಣಬಹುದು–

ಕನ್ನಡದಿ ಪೇಳ್ದದೆಲ್ಲವು
ಮುನ್ನದಿ ಸಕ್ಕದದಲಿರ್ದುದರಿಂ ಪೆರತೇಂ।
ಇನ್ನೊರೆವರಾರು ಮದನೇ
ಚನ್ನಾಗಿಯೆ ನೋಡೆ ಕನ್ನಡವು ಕನ್ನಡಿಯೆ ॥

ಈ ಪದ್ಯ ಚನ್ನಪಟ್ಟಣದ ಚಾವಲಿರಾಮಸ್ವಾಮಿ ಎಂಬಾತನ 'ಕರ್ಣಾಟ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹ'ಗ್ರಂಥದಲ್ಲಿ (ಕ್ರಿ.ವ. ೧೮೮೫)ದೆಯೆಂದು ತಿಳಿಸಿ, ತೀ.ನಂ.ಶ್ರೀ. ಒಂದುಹೆಜ್ಜೆ ಮುಂದೆಹೋಗಿ, ಚಾವಲಿಶಾಸ್ತ್ರಿ ಇದನ್ನು ಹೇಳಿರುವದು ಛಂದಸ್ಸಿನ ವಿಷಯದಲ್ಲಿ, ಆದರೆ ಅಲ್ಲಿಗಿಂತ ಅಲಂಕಾರಶಾಸ್ತ್ರಕ್ಕೆ ಹೆಚ್ಚು ಒಪ್ಪುತ್ತದೆ, ಎಂದಿರುವರು.[2] ಚಾವಲಿಶಾಸ್ತ್ರಿಯ ಈ ಪದ್ಯಕ್ಕೆ ಸಂವಾದಿಯಾಗಿರುವ ಇನ್ನೊಂದು ಪದ್ಯ ಇದು–

ಕನ್ನಡದ ನುಡಿಯೆಂದುಪೇಕ್ಷಿಸ
ಲಿನ್ನು ಹಿರಿಯರಿಗುಚಿತವಲ್ಲದು
ಕನ್ನಡಿಯೆ ದರ್ಪಣವದಲ್ಲವೆ ಭೇದವೇನಿದಕೆ।

ಈ ಷಟ್ಪದಿಯರ್ಥವನ್ನು ಭಾಮಿನೀಷಟ್ಪದಿಗೆ ಲಕ್ಷ್ಯವೆಂದು ಕ್ಯಾಪ್ಟನ್ ಜೆ. ಎಸ್. ಎಫ್. ಮೆಕೆಂಝಿ ಎಂಬಾತನು ಚಾವಲಿಶಾಸ್ತ್ರಿಗಿಂತ ಮೊದಲು ೧೨ ವರ್ಷ ಅಂದರೆ ೧೮೭೩ರಲ್ಲಿ ಕನ್ನಡ ಛಂದಸ್ಸನ್ನು ಕುರಿತಿರುವ ಲೇಖದಲ್ಲಿ ಕೊಟ್ಟಿರುವನು.[3]

---

1 ಕನ್ನಡ ಕೈಪಿಡಿ, ಸಂ. ೧, ಪು. ೧೧೭

2 ಭಾ. ಶಾ. ಮೀ. ಪು. ೫೦೮

3 ಇ. ಎಂ. ಸಂ. ೨, ಪು. ೧೧೨

೧೯ನೆಯ ಶತಮಾನದ ಕೊನೆಯಲ್ಲಿ ಸಹ ಕನ್ನಡದ ವಿಷಯದಲ್ಲಿ ಕಂಡುಬರುತ್ತಿದ್ದ ಈ ಬಗೆಯ ಭಾವನೆ ಇಮ್ಮಡಿ ನಾಗವರ್ಮನ ಕಾಲದಲ್ಲಿ ಇನ್ನೂ ಹೆಚ್ಚು ದೃಢವಾಗಿದ್ದಿತೆಂಬುದು ಅತಿಶಯೋಕ್ತಿ ಅಥವಾ ಅಚ್ಚರಿಯ ವಿಷಯವಾಗದು. ಇದು ಮತ್ತು ಇನ್ನಿತರ ಕಾರಣಗಳಿಂದ ಬಹುಶಃ ಆತನಿಗೆ ಕನ್ನಡ ಛಂದಸ್ಸಿಗೊಂದು ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ಪ್ರತ್ಯೇಕ ಗ್ರಂಥದ ಅಗತ್ಯವೆನಿಸಿರಲಿಕ್ಕಿಲ್ಲ. ಆತ ಏವ ಉಪಲಬ್ಧವಿದ್ದ ಈ ಪ್ರಾಚೀನ ಛಂದೋಗ್ರಂಥಕ್ಕೆ–'ಛಂದೋವಿಚಿತಿ'ಗೆ 'ರತ್ನಮಂಜೂಷಾ' ಎಂದು ಹೆಸರಿಸಿ, ಹಲಾಯುಧನ ಅಭಿಧಾನ ರತ್ನಮಾಲೆಗೆ ಟೀಕೆ ಬರೆದಂತೆ, ಭಾಷ್ಯ ಬರೆದಿರಬೇಕೆನಿಸುತ್ತದೆ; ಮತ್ತು ಈ ರೀತಿ ಹೇಮಚಂದ್ರನಂತೆ ಕಾವ್ಯಾಂಗಚತುಷ್ಟಯಕ್ಕೆ ಸಂಬಂಧಿಸಿ ತಾನೂ ಒಂದೊಂದು ಗ್ರಂಥವನ್ನು ಬರೆಯಬೇಕೆಂಬ ಸಂಕಲ್ಪವನ್ನು ಪೂರ್ತಿಗೊಳಿಸಿರಬೇಕೆನಿಸುತ್ತದೆ. ಒಂದೊಮ್ಮೆ ಇತರ ಕೃತಿಗಳಂತೆ ಛಂದೋವಿಚಿತಿಯಾದರೂ ಕನ್ನಡಕ್ಕಾಗಿಯೆ ರಚಿತವಾಗಿದ್ದರೆ, ಆತನ ಕೃತಿ ನಿರ್ದೇಶಕ 'ಛಂದೋವಿಚಿತಿಯುಲಂಕೃತಿ' ಪದ್ಯದಲ್ಲಿ 'ವಾಕ್-ಶ್ರೀ-ಸುಂದರಿ'ಯ ಬದಲು 'ಕನ್ನಡ-ವಾಕ್-ಶ್ರೀ-ಸುಂದರಿ'ಗೆ ಅವು 'ರತ್ನಮಂಡನ'ದಂತಿವೆ, ಎಂದಿರುತ್ತಿತ್ತು. 'ಕವಿತಾಗುಣೋದಯ'ನೆಂಬ ಬಿರುದುಳ್ಳ ಆತನಿಗೆ ಇದೇ ಪದ್ಯದಲ್ಲಿ ಈರೀತಿ ನಿರ್ದೇಶಿಸುವದು ಕಠಿಣವಿದ್ದಿಲ್ಲ. ಇದೊಂದು ವಿಷಯಸಮರ್ಥನೆಗಾಗಿ ಮಾಡಿದ ಕೂದಲು ಸೀಳುವ ಯತ್ನವೆನ್ನಬಹುದು. ನಿಜ. ಆದರೆ ಅಸಮಂಜಸವೆನ್ನುವಂತಿಲ್ಲ.

ಯತಿ ವಿಷಯದಲ್ಲಿ ಕಂಡುಬರುವ ರತ್ನಮಂಜೂಷೆಯ ಭಾಷ್ಯಕಾರನ 'ಕನ್ನಡತನ' ಅವನು ಇಮ್ಮಡಿ ನಾಗವರ್ಮನಿರಬಹುದೆಂಬುದಕ್ಕೆ ಇನ್ನೊಂದು ಪೋಷಕ ಅಂಶವೆನ್ನಬಹುದು. ಕನ್ನಡದಲ್ಲಿ, ಗ್ರಂಥೋಕ್ತವಿರುವಂತೆ ಯತಿಯನ್ನು ಪಾಲಿಸಿ ಪದ್ಯವನ್ನು ಓದಿದರೆ, ಸಾಮಾನ್ಯರಿರಲಿ ಮಹಾಕವಿಗಳ ಪದ್ಯಗಳಲ್ಲಿ ಸಹ ಅರ್ಥಸ್ಫೂರ್ತಿ ಕೆಡುವದೆಂಬುದು ಗೊತ್ತಿದ್ದ ವಿಷಯ. ಅದ್ದರಿಂದ ವಿದ್ವಾಂಸರು ಕನ್ನಡದಲ್ಲಿ ಯತಿಯು ಐಚ್ಛಿಕವಾಗಿರುವದೆ ಹೊರತು ನಿಯತವಾಗಿಲ್ಲೆಂಬ ನಿಲುಗಡೆಗೆ ಬಂದಿರುವರು.[1] ರತ್ನಮಂಜೂಷಾಕಾರನು ಯತಿಯನ್ನು 'ಛೇದಃ' ಎಂದು ಒಂದೇ ಒಂದು ಶಬ್ದವಿರುವ ಸೂತ್ರದಿಂದ ನಿರೂಪಿಸಿರುವನು. ಭಾಷ್ಯಕಾರ ಸಹ 'ಶ್ರುತಿ–ಸುಭಗ-ಸ್ಥಿತಿಃ' ಎಂದು ಒಂದೇ ಒಂದು ಶಬ್ದದಿಂದ ಅದನ್ನು ವಿವರಿಸಿರುವನು.[2] ಯತಿಪಾಲನೆಯಲ್ಲಿ, ಶ್ರುವ್ಯತೆ ಮತ್ತು ಅರ್ಥಸ್ಫೂರ್ತಿ ಎರಡೂ ಸರಾಗವಾಗಿ ಹೊಂದಿಕೊಂಡಿದ್ದರೆ ಮಾತ್ರ ಭಾಷ್ಯಕಾರನು ಹೇಳಿದ 'ಶ್ರುತಿ–ಸುಭಗ–ಸ್ಥಿತಿ' ಉಂಟಾಗುವದೆಂಬುದನ್ನು ಬೇರೆ ಹೇಳಬೇಕಿಲ್ಲ. ಭಾಷ್ಯಕಾರನು ಈ ವಿವರಣೆಯಿಂದ ಕನ್ನಡದಲ್ಲಿ ಯತಿ ವಿಷಯದಲ್ಲಿ ಶಾಸ್ತ್ರ ಮತ್ತು ಪ್ರಯೋಗದಲ್ಲಿ ಕಂಡುಬರುವ ವ್ಯತ್ಯಾಸವನ್ನು ಗ್ರಂಥೋಕ್ತಯತಿ

---

1 ಕನ್ನಡ ಕೈಪಿಡಿ ಸಂ. ೧, ಪು. ೭೭

2 ರ. ಮಂ. ೧, ೧೮

ಎಲ್ಲಿಯೆ ಇದ್ದರೂ 'ಶ್ರುತಿ-ಸುಭಗ-ಸ್ಥಿತಿ' ಉಂಟಾಗುವಂತೆ ಯತಿಯನ್ನು ಪಾಲಿಸ ಬೇಕೆಂದು ಹೇಳಿ ಸಮರ್ಥಿಸಿ ಕೊಂಡಿರುವನು. ಆತನ ಈ ವಿವರಣೆ ಸಂಸ್ಕೃತ ಛಂದೋಬಂಧಗಳನ್ನು ಕುರಿತಿದ್ದರೂ, ಕನ್ನಡದಲ್ಲಿ ಯತಿ ವಿಲಂಘನೆಯ ಸಂದರ್ಭಗಳು ಹೆಚ್ಚಾಗಿರುವದರಿಂದ ಸಂಸ್ಕೃತಕ್ಕಿಂತ ಕನ್ನಡಕ್ಕೆ ಹೆಚ್ಚು ಅನ್ವಯಿಸುವಂತಿದೆ. ಯತಿ ವಿಷಯದಲ್ಲಿ, ಜಯಕೀರ್ತಿ–'ವಾಂಛಂತಿ ಯತಿಂ ಪಿಂಗಲ ವಶಿಷ್ಠ ಕೌಂಡಿನ್ಯ ಕಪಿಲ ಕಂಬಲ ಮುನಯಃ, ನೇಚ್ಛಂತಿ ಭರತಕೋಹಲ ಮಾಂಡವ್ಯಾಶ್ವತರ ಸೈತವಾದ್ಯಾಃ ಕೇಚಿತ್' ಎಂದಿರುವನು.[1] ಇತರ ಕೆಲವರೂ ಹೀಗೆಯೆ ಹೇಳಿರುವರು. ಪಿಂಗಲಾದಿ ಗಳಿಗೆ ಯತಿ ಇಷ್ಟ, ಭರತಾದಿಗಳಿಗೆ ಅನಿಷ್ಟವೆಂಬುದರ ಅರ್ಥವೇನು? ಯತಿಯೆಂಬುದು ಪ್ರಕೃತಿ ನಿಯಮ, ಪದ್ಯವನ್ನು ಒಂದೇ ಉಸುರಿನಿಂದ ಅನ್ನುವದು ಅಸಾಧ್ಯವಿರುವದ ರಿಂದ ನಡುವೆ ಸ್ವರವನ್ನೂ ನಿಲ್ಲಿಸಬೇಕಾಗುವದು. ಇದು ಅನಿವಾರ್ಯ. ಇತ್ತ ಅರ್ಥ ಸ್ಫೂರ್ತಿ ಪದ್ಯದ ಜೀವಾಳ. ಇವೆರಡಕ್ಕೂ ಬಾಧೆ ತಟ್ಟದಂತೆ ಜಾಗ್ರತೆ ವಹಿಸ ಬೇಕೆಂಬುದು ಪಿಂಗಲಾದಿಗಳ ಮತ ಯತಿ ಅರ್ಥಸ್ಫೂರ್ತಿಗಳಲ್ಲಿ ತಾಕಲಾಟ ಬಂದಾಗ ಅರ್ಥಸ್ಫೂರ್ತಿಗೆ ಪ್ರಾಧಾನ್ಯ ಕೊಡಬೇಕೆಂಬುದು ಭರತಾದಿಗಳಮತ. ಯತಿಯನ್ನು 'ಶ್ರುತಿ–ಸುಭಗ–ಸ್ಥಿತಿಃ' ಎಂದು ವಿವರಿಸುವಲ್ಲಿ ರತ್ನಮಂಜೂಷೆಯ ಭಾಷ್ಯಕಾರ ಭರತಾದಿಗಳನ್ನು ಅನುಸರಿಸಿರುವನು ಮತ್ತು ಆನುಷಂಗಿಕವಾಗಿ ಕನ್ನಡ ಕವಿಗಳ ಯತಿ ವಿಲಂಘನೆಯ ದೋಷವನ್ನು ಸಮರ್ಥಿಸಿಕೊಂಡಿರುವನು, ಎಂದು ಭಾವಿಸಬಹುದಾಗಿದೆ. ಸಂಸ್ಕೃತದಲ್ಲಿ ಯತಿ ವಿಲಂಘನೆಯ ದೋಷಗಳು ವಿರಳವೆಂಬುದನ್ನು ಇಲ್ಲಿ ಗಮನಿಸ ಬಹುದು.

ರತ್ನಮಂಜೂಷೆಯ ಕೊನೆಯ ಅಂದರೆ ಷಟ್ಪ್ರತ್ಯಯಗಳ ಅಧ್ಯಾಯ ಅಪೂರ್ಣ ವಿದ್ದು ಇದಕ್ಕೆ ಪೂರಕವಾಗಿ ಬೇರೆ ೧೧ ಪದ್ಯಗಳಿರುವದನ್ನು ಈ ಮೊದಲು ಈ ಗ್ರಂಥದ ಸ್ವರೂಪ ವಿವರಣೆಯಲ್ಲಿ ಹೇಳಲಾಗಿದೆ. ಈ ಪದ್ಯಗಳು ಸಂಪ್ರತಿಕಾರನಿಂದ ಸೇರಿಸಲ್ಪಟ್ಟಿರಬೇಕೆಂದು ವೇಲಣಕರ ಬಗೆದಿರುವರು. ಆದರೆ ಇವು ಇಮ್ಮಡಿ ನಾಗವರ್ಮನ ಶಿಷ್ಯ ಜನ್ನನವೆಂದು ಊಹಿಸಲು ಅವಕಾಶವಿದೆ. ಜನ್ನನು ಅನಂತನಾಥ ಪುರಾಣದ ಕರ್ತೃವೆಂಬುದು ಸರ್ವವಿದಿತವಿದೆ, 'ಶ್ರೀಮದನಂತನಾಥಾಯನಮಃ' ಎಂಬ ಒಕ್ಕಣಿಕೆ ಯಿಂದ ಪ್ರಾರಂಭವಾಗುವದರಿಂದ ಇವು ಜನ್ನಕೃತ ಅಥವಾ ಆತನಿಂದ ಸೇರಿಸಲ್ಪಟ್ಟಿರ ಬೇಕೆಂದು ಊಹಿಸಲು ಅವಕಾಶವಿದೆ. ೧೧ನೆಯ ಪದ್ಯದಲ್ಲಿ ಖಂಡಮೇರು ವೆಂಬ ಪ್ರಸ್ತಾರದರೀತಿ 'ಪುನ್ನಾಗ ಚಂದ್ರೋದಿತಃ' ಎಂದರೆ ಪುನ್ನಾಗಚಂದ್ರನೆಂಬುವನಿಂದ ನಿರ್ಮಿಸಲ್ಪಟ್ಟಿತೆಂದಿದೆ. ಈ ಪುನ್ನಗಚಂದ್ರನಾರೊ ತಿಳಿಯದು. ತನ್ನ ಅನಂತನಾಥ ಪುರಾಣದಲ್ಲಿ ಜನ್ನನು 'ನಾಗವರ್ಮನ ಬಹುಜ್ಞತೆ' ಎಂದು ತನ್ನ ಗುರು ಇಮ್ಮಡಿ ನಾಗವರ್ಮನನ್ನೂ, 'ನಾಗಚಂದ್ರನ ರಸಭಾವಂ' ಎಂದು ಪಂಪರಾಮಾಯಣದ

1 **ಜಯದಾಮನ್, ಪೃ. ೮೨. (ಜ. ಕೀ. ಛಂ. ೧,೧೩)**

ನಾಗಚಂದ್ರನನ್ನೂ ಸ್ತುತಿಸಿರುವನು.[1] ಈ ನಾಗಚಂದ್ರನ ಕಾಲ ಕ್ರಿ. ಶ. ೧೧೦೦. ಇಮ್ಮಡಿ ನಾಗವರ್ಮ ತನ್ನ ಭಾಷಾಭೂಷಣದಲ್ಲಿ ಈತನ ಪಂಪರಾಮಾಯಣದಲ್ಲಿಯ 'ಬಹುತಾಪಕ್ಕೆ ಬಿಗುರ್ತುರ್ವಿಷ್ಣು ಪಡೆದಂ ಮತ್ಸ್ಯಾವತಾರಂಕ್ಕೆದಿವಂ' ಎಂಬ ಪದ್ಯವನ್ನು ಉದಾಹರಿಸಿರುವನು. ದೇವಚಂದ್ರ (ಕ್ರಿ. ಶ. ೧೮, ಉತ್ತರಾರ್ಧ, ರಾಜಾವಳಿ ಕಥೆಯ ಕರ್ತ) ಈತನನ್ನು ಉಭಯಕವಿ (ಸಂಸ್ಕೃತ, ಕನ್ನಡ) ಯೆಂದು ಹೊಗಳಿರುವನು.[2] ಒಂದೊಮ್ಮೆ ಈ ೧೧ ಪದ್ಯಗಳ ಕರ್ತ ಅಥವಾ ಇವುಗಳನ್ನು ಸೇರಿಸಿದವ ಜನ್ನ ಮತ್ತು ಈ ನಾಗಚಂದ್ರ ಖಂಡಮೇರು ಪ್ರಸ್ತಾರದ ನಿರ್ಮಾತ ಪುನ್ನಾಗ ಚಂದ್ರನಿದ್ದರೆ, ರತ್ನಮಂಜೂಷೆಯ ಭಾಷ್ಯಕಾರ ಇಮ್ಮಡಿ ನಾಗವರ್ಮನೆಂಬ ಊಹೆಗೆ ಮತ್ತಿಷ್ಟು ಬಲಬರುತ್ತದೆ.

ಇದೇನೊ ಸರಿ. ಆದರೆ ಈ ಜಾಡಿನಿಂದ ಮುಂಬರಿವುದು ಸದ್ಯದಮಟ್ಟಿಗೆ ಕಡಜೇರಿಗೆ ಹುಳಗಳ ಹುಟ್ಟನ್ನು ಕೋಲಿನಿಂದ ಚುಚ್ಚಿದಂತಾಗುವದು. ಅಪೂರ್ಣವಿರುವ ರತ್ನ ಮಂಜೂಷೆಯ ಷಟ್ಪ್ರತ್ಯಯಗಳ ಅಧ್ಯಾಯಕ್ಕೆ ಪೂರಕವೆಂದಿದ್ದರೂ ಈ ೧೧ ಪದ್ಯ ಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಅದು ಅಪೂರ್ಣವಾಗಿಯೆ ಉಳಿಯುತ್ತದೆ. ಷಟ್- ಅಂದರೆ ಪ್ರಸ್ತಾರ, ನಷ್ಟ, ಉದ್ದಿಷ್ಟ, ಲಗಕ್ರಿಯೆ, ಸಂಖ್ಯಾ, ಅಧ್ವನ್ ಎಂಬ ೬ ಪ್ರತ್ಯಯ ಗಳಲ್ಲಿ ಕೊನೆಯವೆರಡರ ವಿವರಣೆ ಇಲ್ಲಿರುವದಿಲ್ಲ. ಆದಿ ನಾಗವರ್ಮನು ಈ ಆರೂ ಪ್ರತ್ಯಯಗಳನ್ನು ವಿವರಿಸಿರುವನು. ಒಂದೊಮ್ಮೆ ಜನ್ನನೇ ಈ ಪದ್ಯಗಳನ್ನು ಸೇರಿಸಿದ್ದರೆ, ಇಮ್ಮಡಿ ನಾಗವರ್ಮನು ತನ್ನ ಭಾಷ್ಯವನ್ನು ಪೂರ್ಣಗೊಳಿಸುವ ಮೊದಲೆ ಕಾಲವಾಗಿರ ಬೇಕು. ಮತ್ತು ಜನ್ನನು ಅದನ್ನು ಪೂರ್ಣಮಾಡಲು ಉದ್ಯುಕ್ತನಾಗಿರಬೇಕೆನಿಸುತ್ತದೆ. ಹೀಗಿದ್ದರೆ ಅವನಾದರೂ ಅವನ್ನು ಮುಗಿಸಲಿಲ್ಲವೇಕೆ; ಅಪೂರ್ಣವಿರುವದರಿಂದ ಮತ್ತು ಜನ್ನ ಅಥವಾ ಬೇರೊಬ್ಬನ ಪದ್ಯಗಳು ಸೇರಿರುವದರಿಂದ ಇದು ಇಮ್ಮಡಿ ನಾಗವರ್ಮನ ಕೊನೆಯ ಕೃತಿಯಾಗುವದು; ಹೀಗಿದ್ದರೆ ಇದಕ್ಕೆ ಮೊದಲು ರಚಿತವಾಗಿದ್ದ ಕಾವ್ಯಾವ ಲೋಕನದಲ್ಲಿ, ಆತನ ಕೃತಿನಿರ್ದೇಶಕ 'ಛಂದೋವಿಚಿತಿಯಲಂಕೃತಿ' ಪದ್ಯ ಹೇಗೆ ಬಂದಿತು, ಇವೇ ಮೊದಲಾದ ಹತ್ತಾರು ಯೋಜನೆಗಳು ಹುಟ್ಟಿಕೊಳ್ಳುತ್ತವೆ. ಇಮ್ಮಡಿ ನಾಗವರ್ಮನೆ ಇರಲಿ ಬೇರೊಬ್ಬನಿರಲಿ ಈ ಗ್ರಂಥಕ್ಕೆ ಭಾಷ್ಯ ಬರೆಯಲು ತೊಡಗಿದಾಗ, ಆತನು ಪ್ರಪಂಚದಲ್ಲಿ ಜಿಗುಪ್ಸೆಹುಟ್ಟಿ, ವೈರಾಗ್ಯ ತಾಳಿದವ ಅತಏವ ಸಾಕಷ್ಟು ವೃದ್ಧನಿರಬಹುದೆಂಬುದು ಲಕ್ಷ್ಯಪದ್ಯಗಳಿಂದ ಕಂಡುಬರುವಂತಿದೆ. ಒಟ್ಟು ೧೪೩ ಲಕ್ಷ್ಯಪದ್ಯಗಳಲ್ಲಿ ೭೫ ಅಂದರೆ ಅರ್ಧಕ್ಕಿಂತ ಹೆಚ್ಚು ಜಿನಸ್ತುತಿ, ಜೈನಧರ್ಮ, ಐಹಿಕ ಸುಖೋಪಭೋಗಗಳ ನಿಷೇಧ, ರೋಗರುಜಿನಗಳಿಂದಾಗುವ ಯಾತನೆ, ಯಮನ ನಿರ್ದಯತೆ, ನೀತಿ ಮತ್ತು ವೈರಾಗ್ಯಪರ ಪದ್ಯಗಳಿವೆ. ಭಾಷ್ಯಕಾರನು ಇಮ್ಮಡಿ

---

[1] ಕ. ತ. ಚ. ಸಂ. ೧. ಪು. ೩೩೦

[2] ಭಾ. ಭೂ. ಕೈಸ, ಸೂತ್ರ ೯೩, ಮುನ್ನುಡಿ, ಪು. ೨೧

ನಾಗವರ್ಮನಿದ್ದು, ಮುಪ್ಪಿನ ಕಾಲದಲ್ಲಿ ಈ ಕಾರ್ಯದಲ್ಲಿ ತೊಡಗಿ, ಮುಗಿಸುವ ಮೊದಲೆ ಕಾಲವಶನಾಗಿರಬಹುದೆಂಬ ಊಹೆಗೆ ಇದು ಪೋಷಕವಿದ್ದರೂ, ಇದರಿಂದ ಹುಟ್ಟುವ ಇತರ ಪ್ರಶ್ನೆಗಳಿಗೆ ಸಂಶೋಧನೆಯ ಸದ್ಯದ ಮಟ್ಟದಲ್ಲಿ ಉತ್ತರ ದೊರೆಯು ವಂತಿಲ್ಲ.

ಸಮಗ್ರ ಭಾರತದಲ್ಲಿ ಕಾವ್ಯಾಂಗ ಚತುಷ್ಟಯಕ್ಕೆ ಸಂಬಂಧಿಸಿ ಒಂದೊಂದು ಗ್ರಂಥವನ್ನು ರಚಿಸಿದ ಇಬ್ಬರೇ ಇಬ್ಬರಲ್ಲಿ ಈತನೊಬ್ಬನಿದ್ದರೂ, ಶಿಷ್ಯನಾದ ಪ್ರಖ್ಯಾತ ಕವಿ ಜನ್ನನಿಂದ 'ಬಹುಜ್ಞ'ನೆಂದು ಹೊಗಳಿಸಿಕೊಂಡಿದ್ದರೂ, ಈ ಗ್ರಂಥಗಳ ಕರ್ತೃತ್ವದ ಶ್ರೇಯಸ್ಸನ್ನು ಸಂಶೋಧಕರು ಆದಿನಾಗವರ್ಮನ ಉಡಿಯಲ್ಲಿ ಕಟ್ಟಿದ ಕಾಲವೊಂದಿತ್ತು. ಈ ಪ್ರಮಾದವನ್ನು ದೂರೀಕರಿಸಿದವರಲ್ಲಿ ಕವಿಚರಿತೆಕಾರರು ಮೊದಲಿಗರು. ಛಂದೋಂಬುಧಿ ಕಾದಂಬರಿಗಳ ಕರ್ತ ನಾಗವರ್ಮ ಬೇರೆ, ಛಂದೋವಿಚಿತಿ ಕಾವ್ಯಾವಲೋಕನಾದಿ ಗ್ರಂಥಗಳ ಕರ್ತ ನಾಗವರ್ಮ ಬೇರೆ ಎಂದು ಅವರು ತೋರಿಸಿಕೊಟ್ಟರು.[1] ಆನಂತರ ಪ್ರಕಟವಾದ ತಮ್ಮ ಕವಿಚರಿತೆಯಲ್ಲೂ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕವಿಚರಿತೆಯು ಬೆಳಕುಕಂಡ ನಂತರ 'ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ', ಎಂಬ ತಮ್ಮ ಗ್ರಂಥದಲ್ಲಿ ಎ. ವೆಂಕಟಸುಬ್ಬಯ್ಯನವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿ, ನಾಗವರ್ಮನೆಂಬುವನು ಒಬ್ಬನೇ, ಅವನೇ ಛಂದೋಂಬುಧಿ, ಕಾದಂಬರಿ, ಕಾವ್ಯಾವಲೋಕನಾದಿ ಗ್ರಂಥಗಳ ಕರ್ತ ; ಛಂದೋಂಬುಧಿ, ಛಂದೋವಿಚಿತಿ, ಇವು ಭಿನ್ನಗ್ರಂಥಗಳಿರದೆ ಒಂದೇ ಗ್ರಂಥದ ಎರಡು ಹೆಸರುಗಳೆಂದು ಪ್ರತಿಪಾದಿಸಿದರು.[2] ಅವರ ಈ ಪ್ರತಿಪಾದನೆಯು ಕನ್ನಡ ಸಾಹಿತ್ಯದಲ್ಲಿ ಬರುವ ನಾಗವರ್ಮರೆಷ್ಟು, ಅವರು ಆವಾವ ಕಾಲದಲ್ಲಿದ್ದರು, ಆವಾವ ಗ್ರಂಥಗಳನ್ನು ರಚಿಸಿದರು, ಎಂಬುದರ ಬಗ್ಗೆ ವಿದ್ವಜ್ಜನರ ಕುತೂಹಲವನ್ನು ಕೆರಳಿಸಿತು. ಈ ವಿಷಯ ವನ್ನೆತ್ತಿಕೊಂಡು ಗೋವಿಂದಪೈ : (೧) ಛಂದೋಂಬುಧಿ, ಕಾದಂಬರಿಗಳನ್ನು ರಚಿಸಿದ ನಾಗವರ್ಮ ಒಬ್ಬ, ಆತನ ಕಾಲ ಕ್ರಿ.ಶ. ೯೫೦ ರಿಂದ ೧೦೧೦–೧೫ (೨) ಛಂದೋವಿಚಿತಿ ಕಾವ್ಯಾವಲೋಕನಾದಿಗಳಕರ್ತ ನಾಗವರ್ಮ ಇನ್ನೊಬ್ಬ, ಈತನ ಕಾಲ ಕ್ರಿ.ಶ. ೧೧೨೦–೧೨೦೦, (೩) ಚಂದ್ರಚೂಡಾಮಣಿ ಶತಕವನ್ನು ಬರೆದ ನಾಗವರ್ಮ ಮಗದೊಬ್ಬ, ಆತನ ಕಾಲ ಕ್ರಿ.ಶ. ೧೧೨೦, ಎಂಬ ನಿರ್ಧಾರಕ್ಕೆ ಬಂದರು.[3]

ಸ್ವತಃ ಕವಿಚರಿತಕಾರರೆ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿತ್ತ ಉಪನ್ಯಾಸಗಳಲ್ಲಿ ವೆಂಕಟಸುಬ್ಬಯ್ಯನವರ ವಾದವನ್ನು ಖಂಡಿಸಿ, ಮೊದಲಿನಿಂದಲೂ ತಳೆದ ತಮ್ಮ ಅಭಿಪ್ರಾಯವನ್ನು ಪುನಃ ದೃಢೀಕರಿಸಿದರು. ಈ ಸಂದರ್ಭದಲ್ಲಿ,

1 ಕಾ. ಲೋ. (೧), ಮುನ್ನುಡಿ, ಪು. ೧ ಮುಂದೆ

2 ಕೆ. ಕ. ಜೀ. ಪು. ೧೫೨, ಮುಂದೆ

3 ಕ. ಸಾ. ಪ. ಸಂ. ೨೯–೬೨ ; ೧೪೯-೬೧

ಕವಿಚರಿತೆಯಲ್ಲಿ ಕಾವ್ಯಾವಲೋಕನಕಾರ ನಾಗವರ್ಮನ ಕೃತಿಗಳಲ್ಲಿ ಉಲ್ಲೇಖಿಸದೆ ಉಳಿದ ಛಂದೋವಿಚಿತಿಯನ್ನು ಅವರು ಉಲ್ಲೇಖಿಸಿರುವರು.[1] ಮದ್ರಾಸ ವಿಶ್ವವಿದ್ಯಾಲಯದ ಎಚ್. ಶೇಷಯ್ಯಂಗಾರರು 'ನಾಗವರ್ಮಕವಿಗಳು ಎಷ್ಟುಮಂದಿ' ಎಂಬ ತಮ್ಮ ಲೇಖದಲ್ಲಿ ಕವಿಚರಿತೆಕಾರರ ಅಭಿಪ್ರಾಯವನ್ನು ಪುರಸ್ಕರಿಸಿ, ಈ ಮೇಲಿನ ಮೂವರು ನಾಗವರ್ಮರಲ್ಲದೆ ನಾಲ್ಕನೆಯ ಇನ್ನೊಬ್ಬ ನಾಗವರ್ಮನ ಅಸ್ತಿತ್ವದತ್ತ ಸಂಶೋಧಕರ ಗಮನವನ್ನು ಸೆಳೆದಿರುವರು.[2] ಈ ನಾಗವರ್ಮನು ವರ್ಧಮಾನ ಪುರಾಣವನ್ನು ಬರೆದಿದ್ದು, ಛಂದೋಂಬುಧಿಕಾರ ನಾಗವರ್ಮನಿಗಿಂತಲೂ ಪೂರ್ವಿಕನೆಂದು ಊಹಿಸಲು ಅವಕಾಶವಿದೆ, ಎಂದಿರುವರು.

ಈ ರೀತಿ ಛಂದೋಂಬುಧಿಕಾರ ನಾಗವರ್ಮಬೇರೆ, ಛಂದೋವಿಚಿತಿ ಕಾವ್ಯಾವಲೋಕನಾದಿಗಳ ನಾಗವರ್ಮ ಬೇರೆ, ಎಂಬ ಕವಿಚರಿತೆಕಾರರ ಅಭಿಪ್ರಾಯಕ್ಕೆ ವಿದ್ವಾಂಸರ ಮನ್ನಣೆ ದೊರೆತು, ಇಂದು ಇದೆ ಸಾರ್ವತ್ರಿಕವಾಗಿ ಛಂದೋಂಬುಧಿಕಾರ ನಾಗವರ್ಮನನ್ನು ಆದಿನಾಗವರ್ಮ, ಛಂದೋವಿಚಿತಿ ಕಾವ್ಯವಲೋಕನಾದಿಗಳ ನಾಗವರ್ಮನನ್ನು ಇಮ್ಮಡಿ ನಾಗವರ್ಮ, ಎಂದು ಬೇರ್ಪಡಿಸಿ ಹೆಸರಿಸಲಾಗುತ್ತಿದೆ.

ಛಂದೋವಿಚಿತಿಯು ಇಮ್ಮಡಿ ನಾಗವರ್ಮನದೆ ಎಂದಿದ್ದರೂ ಅದಾವುದೆಂಬುದನ್ನು ಗುರುತಿಸಲು ಊಹಾಸಂಭವರು (ಸಂಶೋಧಕರಿಗೆ ಬೇಂದ್ರೆ ಇತ್ತ ಪದವಿ).[3] ತಮ್ಮ ಕುದುರೆಗಳನ್ನು ಓಡಿಸಿರಲಿಲ್ಲ. ಈ ಗ್ರಂಥದ ಕೆಲವು ಭಾಗಗಳು ಆದಿನಾಗವರ್ಮನ ಛಂದೋಂಬುಧಿಯಲ್ಲಿ ಸೇರಿರಬೇಕೆಂದು ಸೂಚಿಸಿ, ವಸ್ತುಕೋಶದ ಸಂಪಾದಕರು ಈ ದಿಸೆಯಲ್ಲಿ ಒಂದು ಕುದುರೆಯನ್ನು ಬಿಟ್ಟರು. ರತ್ನ ಮಂಜೂಷೆಯೆ ಇಮ್ಮಡಿ ನಾಗವರ್ಮನ ಛಂದೋವಿಚಿತಿ. ಆದರೆ ಆತ ಗ್ರಂಥಕಾರನಲ್ಲ, ಅದಕ್ಕೆ ಭಾಷ್ಯ ಬರೆದವನೆಂದು ಪ್ರತಿಪಾದಿಸ ಹೊರಟಿರುವ ಈ ಕುದುರೆ ಎರಡನೆಯದು. ಇದರಲ್ಲಿಯ ಗುಣದೋಷಗಳೊಡನೆ ತಮಗೆ ಗೋಚರವಾಗಬಹುದಾದ ಇತರ ಅಂಶ ಆಧಾರಗಳನ್ನು ಸೇರಿಸಿ ಈ ವಿಷಯವನ್ನು ಒಂದು ನಿಲುಗಡೆಗೆ ತರುವುದು ವಿದ್ವಾಂಸರನ್ನು ಕೂಡಿದೆ.

---

[1] ಕ. ಸಾ. ಇ. ಪು. ೪೫–೪೭.

[2] ಎ. ಓ. ಆರ್. ಸಂ. ೭, ಭಾಗ, ೧, (ಕನ್ನಡ ವಿಭಾಗ), ೧೯೪೪.

[3] ಸಾಹಿತ್ಯ ಸಂಶೋಧನ, ಪು. ೩.

# ಗ್ರಂಥಋಣ

೧ ಸಭಾಷ್ಯರತ್ನ ಮಂಜೂಷಾ (ಸಂಸಕೃತ) ಸಂ: ಹ.ದಾ. ವೇಲಣಕರ, ಭಾರತೀಯ ಜ್ಞಾನಪೀಠ, ಕಾಶಿ, ೧೯೪೯-ರ. ಮಂ.

೨ ಛಂದೋನುಶಾಸನ, ಹೇಮಚಂದ್ರವಿರಚಿತ (ಸಂಸ್ಕೃತ), ಸಂ: ಹ. ದಾ. ವೇಲಣಕರ, ಸಿಂಘಿ ಜೈನ ಗ್ರಂಥಮಾಲಾ, ೧೯೬೧ ಹೇ. ಛಂ.

೩ ಜಯದಾಮನ್ (ಜಯದೇವಛಂದ, ಜಯಕೀರ್ತಿ ಕೃತ ಛಂದೋನುಶಾಸನ, ಕೇದಾರ ವಿರಚಿತ ವೃತ್ತ ರತ್ನಾಕರ, ಹೇಮಚಂದ್ರಾಚಾರ್ಯಕೃತ ಛಂದೋನುಶಾಸನ), ಸಂ: ಹ. ದಾ. ವೇಲಣಕರ, ಹರಿತೋಷಮಾಲಾ (ಸಂಸ್ಕೃತ) ಜಯದಾಮನ್.

೪ ಜನಾಶ್ರಯಿ ಛಂದೋವಿಚಿತಿ (ಸಂಸ್ಕೃತ), ತ್ರಾವಣಕೋರ ವಿಶ್ವವಿದ್ಯಾಲಯ ೧೯೫೧, ಜನಾಶ್ರಯಿ.

೫ ಸ್ವಯಂಭೂ ಛಂದ (ಅಪಭ್ರಂಶ), ಸಂ: ಹ. ದಾ. ವೇಲಣಕರ, ರಾಜಸ್ಥಾನ ಪ್ರಾಂತ್ಯ ವಿದ್ಯಾ ಪ್ರತಿಷ್ಠಾನ, ೧೯೬೨, ಸ್ವಯಂಭೂ.

೬ ವೈದಿಕ ಛಂದೋಮೀಮಾಂಸಾ (ಹಿಂದಿ), ಯುಧಿಷ್ಠಿರ ಮೀಮಾಂಸಕ, ರಾಮಲಾಲ ಕಪೂರಟ್ರಸ್ಟ ಗ್ರಂಥಮಾಲಾ, ೧೯೫೯, ವೈ. ಛಂ. ಮೀ.

೭ ಕಾವ್ಯಾಲಂಕಾರ, ಭಾಮಹ (ಸಂಸ್ಕೃತ)

೮ ಕಾವ್ಯಾದರ್ಶ, ದಂಡಿ (ಸಂಸ್ಕೃತ)

೯ ಕಾವ್ಯಮೀಮಾಂಸಾ, ರಾಜಶೇಖರ (ಸಂಸ್ಕೃತ)

೧೦ ಕಾವ್ಯಾನುಶಾಸನ, ಹೇಮಚಂದ್ರ ವಿರಚಿತ (ಸಂಸ್ಕೃತ), ಸಂ: ರಸಿಕಲಾಲ ಪಾರೀಖ ಮತ್ತು ಎ. ಎಮ್. ಕುಲಕರ್ಣಿ, ಸಂ. ೧ (೧೯೬೪), ಸಂ. ೨ (೧೯೩೮), ಶ್ರೀ ಮಹಾವೀರ ಜೈನ ವಿದ್ಯಾಲಯ, ಮುಂಬಯಿ.

೧೧ ಪಉಮ ಚರಿಉ, ಸ್ವಯಂಭು (ಅಪಭ್ರಂಶ), ಸಂ: ಹ. ಚೂ. ಭಾಯಾಣಿ, ಸಂ. ೧, ಸಿಂಘಿಜೈನ ವಿದ್ಯಾಪೀಠ, ೧೯೫೩.–ಪ. ಚ.

೧೨ ಕರ್ಣಾಟಕ ಭಾಷಾಭೂಷಣ, ನಾಗವರ್ಮಕೃತ (ಸಂಸ್ಕೃತ) ಎಲ್. ರೈಸ. ೧೮೮೪ ಭಾ.ಭೂ. ರೈಸ.

೧೩ ಕಾವ್ಯಾವಲೋಕನ ಮತ್ತು ಕರ್ಣಾಟಕ ಭಾಷಾಭೂಷಣ, ನಾಗವರ್ಮಕೃತ (ಕನ್ನಡ, ಸಂಸ್ಕೃತ) ಸಂ: ಆರ್. ನರಸಿಂಹಚಾರ, ೧೯೦೩, ಕಾ. ಲೋ. ೨.

೧೪ ಕಾವ್ಯಾವಲೋಕನ, ನಾಗವರ್ಮಕೃತ (ಕನ್ನಡ), ಸಂ: ಶಿ. ಶಿ. ಬಸವನಾಳ ಮತ್ತು ಕೇಪು ಶಂಕರನಾರಾಯಣ, ಕಾ. ಲೋ. ೨ ೧೯೩೯.

೧೫ ಅಭಿಧಾನ ವಸ್ತುಕೋಶ, ನಾಗವರ್ಮ (ಕನ್ನಡ), ಸಂ: ಎ. ವೆಂಕಟರಾವ ಮತ್ತು ಎಚ್. ಶೇಷಯ್ಯಂಗಾರ, ಮದ್ರಾಸ ವಿಶ್ವವಿದ್ಯಾಲಯ, ೧೯೩೩. ಅ ವ. ಕೋ.

೧೬ ಅಭಿಧಾನರತ್ನಮಾಲಾ ಕರ್ಣಾಟಕ ಟೀಕೆ, ನಾಗವರ್ಮ, (ಸಂಸ್ಕೃತ, ಕನ್ನಡ), ಸಂ: ಎ. ವೆಂಕಟರಾವ ಮತ್ತು ಎಚ್. ಶೇಷಯ್ಯಂಗಾರ, ಮದ್ರಾಸ ವಿಶ್ವವಿದ್ಯಾಲಯ, ೧೯೪೦.

೧೭ ಛಂದೋಂಬುಧಿ (ನಾಗವರ್ಮನ ಕನ್ನಡ ಛಂದಸ್ಸು), ರೆ. ಎಫ್. ಕಿಟೆಲ್, ೧೮೭೫ ಕಿಟೆಲ್.

೧೮ ಛಂದಸ್ಸಾರ, ಗುಣಚಂದ್ರಕೃತ (ಕನ್ನಡ), ಸಂ. ಎಮ್. ಮರಿಯಪ್ಪಭಟ್ಟ, ಎನಲ್ಸ ಆಫ್ ಓರಿಯಂಟಲ್ ರಿಸರ್ಚ್, ಮದ್ರಾಸ, ಸಂ. ೬ (೧೯೪೧), ೮೩ ಗು. ಛಂ.

೧೯ ಮುರಾರಿ ಛಂದೋರಚನಾ, ಡಾ. ನಾ. ಗೋ. ಜೋಶಿ (ಮುರಾರಿ), ಮು. ಛಂ. ರ.

೨೦ ಯಶೋಧರ ಚರಿತೆ, ಜನ್ನ, ಸಂ. ಕೆ. ವಿ. ರಾಘವಾಚಾರ, (ಕನ್ನಡ), ಮೈಸೂರು ವಿಶ್ವವಿದ್ಯಾಲಯ, ೧೯೪೩.

೨೧ ಕರ್ನಾಟಕ ಕವಿಚರಿತ್ರೆ, ಆರ್. ನರಸಿಂಹಾಚಾರ, ಸಂ. ೧-೨. ತ.ತ.ಚ.

೨೨ ಕನ್ನಡ ಕೈಪಿಡಿ, ಸಂ, ೧, ಮೈಸೂರು ವಿಶ್ವವಿದ್ಯಾನಿಲಯ ೧೯೫೫

೨೩ ಕನ್ನಡ ಸಾಹಿತ್ಯಚರಿತ್ರೆ, ರಂ. ಶ್ರೀ. ಮುಗಳಿ, ೧೯೬೪ ಕ.ಸಾ.ಚ

೨೪ ಭಾರತೀಯ ಕಾವ್ಯ ಮೀಮಾಂಸೆ, ತೀ. ನಂ. ಶ್ರೀಕಂಠಯ್ಯ, ೧೯೬೧,ಭಾ.ಕಾ,ಮೀ.

೨೫ ಸಂಸ್ಕೃತನಾಟಕ, ಎ. ಆರ್. ಕೃಷ್ಣಶಾಸ್ತ್ರೀ, ಮೈಸೂರು ವಿಶ್ವವಿದ್ಯಾಲಯ, ೧೯೫೫ (ಕನ್ನಡ)

೨೬ ಕಥಾಮೃತ, ಎ. ಆರ್. ಕೃಷ್ಣಶಾಸ್ತ್ರೀ, ೧೯೫೨ (ಕನ್ನಡ)

೨೭ ಕಪಿಜಿಹ್ವಾಬಂಧನ, ಈಶ್ವರ ಕವಿ ಕನ್ನಡ, ಸಂ: ರಾ. ಸ್ವಾ. ಪಂಚಮುಖಿ, ಕನ್ನಡ ಸಂಶೋಧನ ಸಂಸ್ಥೆ ಧಾರವಾಡ, ೯೫೫-ಕ. ಜಿ.

೨೮ ಸಾಹಿತ್ಯ ಸಂಶೋಧನ, ದ.ರಾ, ಬೇಂದ್ರೆ, ಮನೋಹರ ಗ್ರಂಥ ಪ್ರಕಾಶನ, ಧಾರವಾಡ ೧೯೪೦.

೨೯ ಭೋಜನ ಶೃಂಗಾರ ಪ್ರಕಾಶ (ಇಂಗ್ಲಿಷ) ಡಾ. ವಿ. ರಾಘವನ್, ೧೯೬೩ ಭೋ.ಶೃಂ.ಪ್ರ.

೩೦ ಹೇಮಚಂದ್ರನ ಜೀವನ ಚರಿತ್ರೆ ಇಂಗ್ಲಿಷ್, ಡಾ. ಜಿ. ಬೂಹ್ಲರ ಜರ್ಮನ್, ಮಣಿಲಾಲ ಪಟೇಲ ಭಾಷಾಂತರಿತ, ಸಿಂಘಿ ಗ್ರಂಥಮಾಲಾ, ೧೯೩೬ ಹೇ.ಜೀ.ಚ.

೩೧. ಕೆಲವು ಕನ್ನಡಕವಿಗಳ ಜೀವನ ಕಾಲ ವಿಚಾರ, ಎ. ವೆಂಕಟಸುಬ್ಬಯ್ಯ, ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಬೆಂಗಳೂರು, ೧೯೨೭. ಕೆ. ಕ. ಜೀ.

೩೨. ಕನ್ನಡ ಸಾಹಿತ್ಯದ ಇತಿಹಾಸ (ಇಂಗ್ಲಿಷ್). ಆರ್. ನರಸಿಂಹಾಚಾರ, ಮೈಸೂರು ವಿಶ್ವವಿದ್ಯಾಲಯ, ೧೯೪೦ (ರೀಡರ್‌ಷಿಪ್ ಉಪನ್ಯಾಸಗಳು) ಕ. ಸಾ. ಇ.

೩೩ ಮೈಸೂರು ಗವರ್ನಮೆಂಟ ಓರಿಯಂಟಲ್ ಲೈಬ್ರರಿ ಕೆಟಲಾಗ್ (ಸಂಸ್ಕೃತ ಹಸ್ತ ಪ್ರತಿಗಳು) ಮೈ.ಗ.ಓ.ಲೈ.ಕೆ.

೩೪ ಸಂಸ್ಕೃತ ಇಂಗ್ಲಿಷ್ ನಿಘಂಟು, ಆಪ್ಟೆ

೩೫ ಇಂಡಿಯನ್ ಎಂಟಿಕ್ವರಿ, ಸಂ. ೨, ೧೮೭೩

೩೬ ಜರ್ನಲ ಆಫ್ ಓರಿಯಂಟಲ್ ರಿಸರ್ಚ, ಮದ್ರಾಸ್, ಸಂ. ೧೯ (೧೯೪೯-೫೦) ಜೆ.ಓ.ಆರ್.

೩೭. ಎನಲ್ಸ ಆಫ್ ಓರಿಯಂಟಲ್ ರಿಸರ್ಚ್, ಮದ್ರಾಸವಿಶ್ವವಿದ್ಯಾಲಯ, ಎ. ಓ. ಆರ್. ೧೯೪೪.

೩೮ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೨೦, ೧೯೩೫ ಕ.ಸಾ.ಪ.

ಪ್ಲೇಟೋ

# ಇಯೋನ್

## ಪಾತ್ರಗಳು

**ಸೋಕ್ರೆಟಿಸ್** : ಅಥೆನ್ಸಿನ ತತ್ತ್ವಜ್ಞಾನಿ

**ಇಯೋನ್** : ಗ್ರೀಸಿನ ಪ್ರಖ್ಯಾತ ಗಮಕಿ

[ಪ್ಲೇಟೋನ ಸಂಭಾಷಣೆಗಳು ಶಾಸ್ತ್ರವೂ ಹೌದು, ಸಾಹಿತ್ಯವೂ ಹೌದು; ಅವನು ಚಿತ್ರಿಸಿರುವ ವ್ಯಕ್ತಿಗಳು ದಾರ್ಶನಿಕ ದೃಷ್ಟಿಗಳೂ ಹೌದು, ಸಾಹಿತ್ಯಕ ಪಾತ್ರಗಳೂ ಹೌದು. ಸಂಭಾಷಣೆಯ ನಾಟಕೀಯತಂತ್ರದ ಮೂಲಕ ಅಭಿವ್ಯಕ್ತವಾಗುವ ಅವುಗಳ ಪಾತ್ರಗಳ ಸಾಂಕೇತತೆ, ಜೀವಂತತೆ ಮತ್ತು ವಿಕಾಸಗಳು ಅವಕ್ಕೊಂದು ಅನ್ಯಾದೃಶ ಸ್ಥಾನವನ್ನು ಕಲ್ಪಿಸಿವೆ. ಅವುಗಳಲ್ಲಿ ಪ್ರಧಾನವಾಗಿ ನಿರೂಪಿಸಿರುವ ಸೋಕ್ರೆಟಿಸನ ವ್ಯಕ್ತಿತ್ವ ಇದಕ್ಕೆ ಉತ್ತಮ ನಿದರ್ಶನ. ಪ್ಲೇಟೋನ ಅನೇಕ ಮೊದಲಿನ ಸಂಭಾಷಣೆಗಳಲ್ಲಿ ಸೋಕ್ರೆಟಿಸ್ ಯಾವೊಂದು ನಿರ್ಣಯವನ್ನೂ ತಲುಪದ, ಅಥವಾ ಅಂಥ ಶಕ್ತಿ ತನಗಿಲ್ಲವೆಂದು ವ್ಯಂಗ್ಯವಾಗಿ ಹೇಳಿಕೊಳ್ಳುವ, ಒಬ್ಬ ವಿಚಾರಕನಾಗಿ ಕಾಣಿಸಿಕೊಳ್ಳುತ್ತಾನೆ. ಆದರೆ ಪ್ರಶ್ನೋತ್ತರ ರೂಪದ ಸೋಕ್ರೆಟಿಕ್ ವಿಧಾನದ ಮೂಲಕ ಚರ್ಚೆಯ ವಿಷಯದ ಬಗ್ಗೆ ಇರುವ ತಪ್ಪುಕಲ್ಪನೆಗಳನ್ನು ಹೊರದೂಡಿ ಅವರಣವನ್ನು ಶುದ್ಧಿಗೊಳಿಸುತ್ತಾನೆ. **ಯೂಥಿಫ್ರೋ**ನಲ್ಲಿ ಧರ್ಮ, ಮಿತಿ, ಸ್ನೇಹಗಳ, ಮತ್ತು **ಲಖೇಸ್**ನಲ್ಲಿ ಧೈರ್ಯದ ಸ್ವರೂಪದಲ್ಲಿ ಹೀಗೆ ಮಾಡುತ್ತಾನೆ. ಆದರೆ ಈ ಎಲ್ಲ ಸಂದರ್ಭಗಳಲ್ಲಿಯೂ ಪರಿಣಾಮ ಕೇವಲ ನಿಷೇಧಾತ್ಮಕವಲ್ಲ. ಅಸ್ಪಷ್ಟವಾಗಿದ್ದ, ಕಂದಾಚಾರದ, ಅಸಂಗತ ಭಾವನೆಗಳನ್ನು ಬೆಳಕಿಗೆ ತರುವುದಷ್ಟೇ ಅಲ್ಲದೆ, ಮಾನವ ಸ್ವಭಾವದ ನಿಜವಾದ ಕೆಲವು ವೈಲಕ್ಷಣ್ಯಗಳನ್ನು ಅವನು ಪ್ರತಿಷ್ಠಾಪಿಸಿದ್ದಾನೆ. ಅವುಗಳಲ್ಲಿ ಒಂದು ಮುಖ್ಯವಾದುದು ಪ್ರತಿಯೊಂದು ಬಗೆಯ ಗುಣ ಅಥವಾ ಶಕ್ತಿಯಲ್ಲೂ ಜ್ಞಾನದ ಅಂಶ ಒಂದಿದೆ ಎನ್ನುವುದು.

ಪ್ಲೇಟೋನ ಅತ್ಯಂತ ಸುಂದರವಾದ, ಸೂಕ್ಷ್ಮವ್ಯಂಗ್ಯಭರಿತವಾದ ಸಂಭಾಷಣೆಗಳಲ್ಲಿ **ಇಯೋನ್** ಒಂದು. ಸ್ಫೂರ್ತಿ ಅಥವಾ ಆವೇಶವನ್ನು ಪ್ಲೇಟೋ ಮೊದಲಬಾರಿಗೆ ವಿವೇಚಿಸಿರುವುದು ಇದರಲ್ಲೇ. ದಿನಜೀವನದಲ್ಲಿ ನಾವು ಬಳಸುವ ಬೌದ್ಧಿಕ ವಿಧಾನಗಳ ಫಲವಲ್ಲ ಕಾವ್ಯ ಎನ್ನುವುದು ಸುಸ್ಪಷ್ಟವೇ. ಈ ಸಂದರ್ಭದಲ್ಲಿ ಕವಿಯ ಜವಾಬ್ದಾರಿ ಇತರರದ್ದಕ್ಕಿಂತ ಕಡಿಮೆಯದು. ಕೆಲವುವೇಳೆ ಅವನು ಅಂತರ ಹಾಗೂ ಬಾಹ್ಯಸೂಚನೆಗಳ ಕೇವಲ ನಿಶ್ಚೇಷ್ಟಿತ ಪರಿಗ್ರಹಿ ಮಾತ್ರ ಆಗಿರುವಂತೆ ಕಾಣಿಸುತ್ತಾನೆ. ಅವುಗಳ ಮೂಲವನ್ನು ವಿವೇಚಿಸುವ ಶಕ್ತಿ ಅವನಿಗೆ ಇರುವುದಿಲ್ಲ. ಗ್ರೀಕರ ಸಾಂಪ್ರದಾಯಿಕ ಭಾವನೆಯಲ್ಲಾದರೋ ಕವಿ "ಉನ್ಮಾದ ಅಥವಾ ಆವೇಶ"ಕ್ಕೆ

ಒಳಗಾದ ಒಬ್ಬ ಅದೃಷ್ಟಶಾಲಿ ವ್ಯಕ್ತಿ, ಎಂದರೆ, ಅಕ್ಷರಶಃ ದೇವರೊಬ್ಬ ಅವನ ಒಳಗೆ ಇರುತ್ತಿದ್ದ. ಈ ಕಲ್ಪನೆಯನ್ನು ಪ್ಲೇಟೋ ಈ ಸಂಭಾಷಣೆಯಲ್ಲಿ ಹಾಸ್ಯಮಾಡಿದ್ದಾನೆ. ತಾನು ಹೋಮರನ ಒಬ್ಬ ಪ್ರಖ್ಯಾತ ವಾಚಕ ಮತ್ತು ವ್ಯಾಖ್ಯಾನಕಾರನಾಗಿದ್ದುದರಿಂದ ಗಮಕಿ ಇಯೋನ್ ತನ್ನನ್ನು ಗ್ರೀಕ್ ಜನಾಂಗದ ಒಬ್ಬ ಅಧಿಕೃತ ಶಿಕ್ಷಕ ಅಥವಾ ಉಪದೇಶಕರಲ್ಲಿ ಒಬ್ಬನೆಂದು ಹೇಳಿಕೊಳ್ಳುತ್ತಾನೆ. ಆದರೆ ಸೋಕ್ರೆಟಿಸನ ಮಾರ್ಮಿಕ ಪ್ರಶ್ನೆಗಳೆದುರಿನಲ್ಲಿ ಅದನ್ನು ಸಮರ್ಥಿಸಲಾರದೆ ಒಪ್ಪುಟ್ಟುತ್ತಾನೆ. ಅವನು "ಪ್ರೋಟಿಯಸನಷ್ಟು ರೂಪಾಂತರಗಳಿರುವ" ವ್ಯಕ್ತಿ; ಆದರೆ ಸೋಕ್ರೆಟಿಸ್ "ಒಬ್ಬ ದಿಟನುಡಿಯುವ ಕೇವಲ ಸಾಮಾನ್ಯ ವ್ಯಕ್ತಿ ಮಾತ್ರ." ಕಲೆ ಅಥವಾ ಜ್ಞಾನ ಎಂದರೆ ಏನು ಎನ್ನುವುದರ ಅರ್ಥ ಕೂಡ ಇಯೋನನಿಗೆ ತಿಳಿಯದೆನ್ನುವುದನ್ನು ಸೋಕ್ರೆಟಿಸ್ ಸುಲಭವಾಗಿ ಸ್ಥಾಪಿಸುತ್ತಾನೆ. ಆದರೆ ವ್ಯಂಗ್ಯವಾಗಿ, ಕೊನೆಯಲ್ಲಿ ಅವನು ಆವೇಶದ ಆಶ್ರಯವನ್ನು ಕೋರುವಂತೆ ಮಾಡುತ್ತಾನೆ. ಇಲ್ಲಿ ಪ್ಲೇಟೋ ಕಾವ್ಯಸ್ಫೂರ್ತಿಯನ್ನು ಕುರಿತ ಗ್ರೀಕರ ಸಾಂಪ್ರದಾಯಿಕ ದೃಷ್ಟಿಯನ್ನು ಗಂಭೀರವಾಗಿ ಸಮರ್ಥಿಸುವುದೂ ಇಲ್ಲ, ಸಂಪೂರ್ಣವಾಗಿ ನಿರಾಕರಿಸುವುದೂ ಇಲ್ಲ. ಆದರೆ ಬುದ್ಧಿಪೂರ್ವಕವಾದ ಕಲೆ ಅಥವಾ ಜ್ಞಾನಕ್ಕೂ ಕವಿಗಳ ಅನಿರ್ವಚನೀಯವಾದ, ಆದರೆ ಅನೇಕ ವೇಳೆ ಅಮೂಲ್ಯವಾದ, ಕೃತಿಗಳಿಗೂ ನಡುವೆ ಇರುವ ವ್ಯತ್ಯಾಸವನ್ನು ಅವನು ಸ್ಪಷ್ಟವಾಗಿ ಒತ್ತಿ ಹೇಳುತ್ತಾನೆ. ಸಹಾನುಭೂತಿಯಿಂದ ಪ್ರಶ್ನಿಸುತ್ತಿರುವ ಸೋಕ್ರೆಟಿಸನ ಕೈಯಲ್ಲಿ ಸಿಕ್ಕಿಬಿದ್ದ ಪೆದ್ದಗಮಕಿಯೊಬ್ಬನ ಪಾಡು ಈ ಸಂಭಾಷಣೆಯನ್ನು ಒಂದು ಉತ್ತಮ ಪ್ರಮೋದಿಕವನ್ನಾಗಿ ಮಾಡಿದೆ.]

**ಸೋಕ್ರೆಟಿಸ್:** ಬಾ, ಇಯೋನ್. ನಿಮ್ಮ ಊರು ಎಫೆಸಸದಿಂದ ಬರುತ್ತಿದ್ದೀಯೋ?

**ಇಯೋನ್:** ಇಲ್ಲ, ಸೋಕ್ರೆಟಿಸ್, ಎಪಿಡೌರಸದಿಂದ ಬರುತ್ತಿದ್ದೇನೆ. ಅಸ್ಕ್ಲೀಪಿಯಸನ ಜಾತ್ರೆಗೆ ಅಲ್ಲಿಗೆ ಹೋಗಿದ್ದೆ.

**ಸೋ.** ಜಾತ್ರೆಯಲ್ಲಿ ಎಪಿಡೌರಸರು ಗಮಕಿಗಳ ಸ್ಪರ್ಧೆ ಇಟ್ಟಿರುತ್ತಾರೆಯೋ?

**ಇ.** ಇಟ್ಟಿದ್ದಾರೆ. ಅದರ ಜೊತೆಗೆ ಎಲ್ಲಾ ವಿಧದ ಸಂಗೀತಗಾರರದೂ ಕೂಡ.

**ಸೋ.** ನೀನೂ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆಯೋ? ಜಯಗಳಿಸಿದೆಯೋ?

**ಇ.** ಮೊದಲನೆಯ ಬಹುಮಾನವನ್ನೇ ಹೊಡೆದೆ, ಸೋಕ್ರೆಟಿಸ್.

**ಸೋ.** ಭೇಷ್. ಪಾನಥೆನಿಯ ವ್ರತದಲ್ಲೂ ನೀನು ನಮ್ಮ ಪರವಾಗಿ ಹೀಗೆಯೇ ಮಾಡುತ್ತೀಯೆಂದು ನಾನು ಭಾವಿಸುತ್ತೇನೆ.

**ಇ.** ದೇವರ ಅನುಗ್ರಹ ಇದ್ದರೆ, ಮಾಡುತ್ತೇನೆ.

**ಸೋ.** ಗಮಕಿಯ ವೃತ್ತಿಯನ್ನು ಕಂಡರೆ, ಇಯೋನ್, ನನಗೆ ಅನೇಕಸಲ ಅಸೂಯೆಯಾಗುತ್ತದೆ; ಏಕೆಂದರೆ ನೀವು ಯಾವಾಗಲೂ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡಿರಬೇಕು, ಮತ್ತು ನಿಮಗೆ ಸಾಧ್ಯವಾದಷ್ಟು ಮಟ್ಟಿಗೆ ಚೆನ್ನಾಗಿ ಕಾಣಿಸುವುದು ನಿಮ್ಮ ಕಲೆಯ ಒಂದು ಅಂಶವಾಗಿದೆ. ಜೊತೆಗೆ ನೀವು ಯಾವಾಗಲೂ ಅನೇಕ ಒಳ್ಳೆಯ ಕವಿಗಳ ಸಂಗಡ ಇರಬೇಕಾಗಿದೆ. ಅದರಲ್ಲೂ ಅವರಲ್ಲೆಲ್ಲಾ ಅತ್ಯಂತ ಶ್ರೇಷ್ಠ ಹಾಗೂ ಅತ್ಯಂತ ದಿವ್ಯನಾದ ಹೋಮರನ ಜೊತೆಯಲ್ಲಿ. ಅವನ ಶಬ್ದಗಳನ್ನು ಬರಿ ಬಾಯಿಪಾಠ ಮಾಡುವುದಲ್ಲದೆ ಅವನನ್ನು ಅರ್ಥಮಾಡಿಕೊಳ್ಳು

ವುದು ಇದೆಯಲ್ಲ, ಅದು ಬಹಳ ಅಸೂಯೆ ಪಡುವಂಥ ವಿಷಯ. ಕವಿಯ ಅರ್ಥ ವನ್ನು ಅರಿಯದವನು ಯಾವನೂ ಗಮಕಿಯಾಗಲಾರ. ಏಕೆಂದರೆ ಗಮಕಿಯು ಶ್ರೋತೃಗಳಿಗೆ ಕವಿಯ ಆಶಯವನ್ನು ತಿಳಿಸಬೇಕು. ಕವಿಯ ಅರ್ಥವನ್ನು ತಾನೇ ಅರಿಯದಿದ್ದರೆ ಅವನು ಕವಿಯನ್ನು ಚೆನ್ನಾಗಿ ವಿವರಿಸುವುದು ಹೇಗೆ ಸಾಧ್ಯ? ಇದೆಲ್ಲಾ ಬಹಳ ಅಸೂಯೆಪಡುವಂಥ ವಿಷಯ.

ಇ. ಬಹಳ ನಿಜ, ಸೋಕ್ರೆಟಿಸ್. ಅರ್ಥವಿವರಣೆ ನಿಜವಾಗಿಯೂ ನನ್ನ ಕಲೆಯ ಅತ್ಯಂತ ಶ್ರಮದ ಅಂಶವಾಗಿದೆ. ಹೋಮರನ ಬಗ್ಗೆ ಎಲ್ಲರಿಗಿಂತಲೂ ಚೆನ್ನಾಗಿ ನಾನು ಮಾತಾಡಬಲ್ಲೆ ಎಂದು ನನ್ನ ನಂಬಿಕೆ. ಹೋಮರನ ವಿಷಯದಲ್ಲಿ ನನಗಿರುವಂಥ ಅಥವಾ ನನಗಿರುವಷ್ಟು ಉತ್ತಮಕಲ್ಪನೆಗಳು ಲಾಂಪ್ಸಕಸನ ಮೆತ್ರೊದೋರಸ್, ಅಥವಾ ಥಾಸೋಸನ ಸ್ತೆಸಿಂಬ್ರೋತೊಸ್ ಅಥವಾ ಗ್ಲೌಕೊನ್, ಅಥವಾ ಹಿಂದಿನವರು ಯಾರಿಗೇ ಆಗಲಿ ಇದ್ದಿರಲಿಲ್ಲ.

ಸೋ. ನೀನು ಹಾಗೆ ಹೇಳುವುದನ್ನು ಕೇಳುವುದು ನನಗೆ ಬಹಳ ಸಂತೋಷ, ಇಯೋನ್. ನನಗೆ ಅವನ್ನು ತಿಳಿಸಲು ನೀನು ಇಲ್ಲ ಎನ್ನುವುದಿಲ್ಲ ಎಂದು ನನ್ನಭಾವನೆ.

ಇ. ಖಂಡಿತವಾಗಿ, ಸೋಕ್ರೆಟಿಸ್. ನಾನು ಹೋಮರನನ್ನು ಎಷ್ಟು ಸೂಕ್ಷ್ಮವಾಗಿ ವಿವರಿಸುತ್ತೇನೆ ಎಂಬುದನ್ನು ನೀನು ನಿಜವಾಗಿ ಕೇಳಬೇಕು. ಹೋಮರಿಗರು ನನಗೆ ಒಂದು ಚಿನ್ನದ ಕಿರೀಟ ನೀಡಬೇಕೆಂದು ನನಗನಿಸುತ್ತದೆ.

ಸೋ. ಅವನ ಬಗ್ಗೆ ನಿನ್ನ ವಿವರಣೆಗಳನ್ನು ಕೇಳುವ ಅವಕಾಶವನ್ನು ಇನ್ನು ಯಾವಾಗಲಾದರೂ ಉಪಯೋಗಿಸಿಕೊಳ್ಳುತ್ತೇನೆ. ಆದರೆ ಈಗ ಸದ್ಯದಲ್ಲಿ ನಿನ್ನನ್ನು ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಿನ್ನ ಕಲೆ ಹಿಸಿಯಡ್ ಮತ್ತು ಅರ್ಕಿಲೊಕಸರಿಗೂ ವ್ಯಾಪಿಸುತ್ತದೆಯೋ ಅಥವಾ ಹೋಮರನಿಗೆ ಮಾತ್ರವೋ?

ಇ. ಹೋಮರನಿಗೆ ಮಾತ್ರವೇ. ಅವನೊಬ್ಬನೇ ಪೂರ್ತಿ ಸಾಕಾಗಿದ್ದಾನೆ.

ಸೋ. ಹೋಮರ್ ಮತ್ತು ಹಿಸಿಯಡ್‌ರಲ್ಲಿ ಒಮ್ಮತವಿರುವ ವಿಷಯಗಳು ಯಾವುವಾದರೂ ಇವೆಯೇ?

ಇ. ಇವೆ. ಬಹಳ ಇವೆ ಎಂದು ನನ್ನ ಅಭಿಪ್ರಾಯ.

ಸೋ. ಅವರಿಗೆ ಒಮ್ಮತವಿರುವ ಈ ವಿಷಯಗಳ ವಿಚಾರದಲ್ಲಿ ನೀನು ಹೋಮರ್ ಹೇಳುವುದನ್ನು ಚೆನ್ನಾಗಿ ವರ್ಣಿಸುತ್ತೀಯೋ ಅಥವಾ ಹಿಸಿಯಡ್ ಹೇಳುವುದನ್ನೋ?

ಇ. ಅವರು ಒಮ್ಮತದಿಂದಿರುವ ಕಡೆ ನಾನು ಇಬ್ಬರನ್ನೂ ಸಮಾನವಾಗಿ ಚೆನ್ನಾಗಿ ವಿವರಿಸಬಲ್ಲೆ, ಸೋಕ್ರೆಟಿಸ್.

ಸೋ. ಹಾಗಾದರೆ ಅವರಲ್ಲಿ ಒಮ್ಮತವಿರದ ವಿಷಯಗಳ ಬಗ್ಗೆ ಹೇಗೆ? ಉದಾಹರಣೆಗೆ,

ಭವಿಷ್ಯವಾದದ ವಿಷಯದಲ್ಲಿ, ಅದರ ಬಗ್ಗೆ ಹೋಮರ್ ಮತ್ತು ಹಿಸಿಯಡ್ ಇಬ್ಬರೂ ಸ್ವಲ್ಪ ಹೇಳಿದ್ದಾರೆ.

ಇ. ನಿಜ.

ಸೋ. ಈ ಇಬ್ಬರು ಕವಿಗಳು ಭವಿಷ್ಯವಾದದ ಬಗ್ಗೆ, ಅವರು ಒಮ್ಮತದಿಂದಿರುವಾಗ ಮಾತ್ರ ಅಲ್ಲದೆ ಅವರು ಭಿನ್ನಾಭಿಪ್ರಾಯ ಹೊಂದಿರುವಾಗಲೂ, ಹೇಳುವುದನ್ನು ಉತ್ತಮವಾಗಿ ವಿವರಿಸುವವನು ನೀನೋ ಅಥವಾ ಒಬ್ಬ ಒಳ್ಳೆಯ ಭವಿಷ್ಯ ವಾದಿಯೋ ?

ಇ. ಒಬ್ಬ ಭವಿಷ್ಯವಾದಿ.

ಸೋ. ನೀನು ಭವಿಷ್ಯವಾದಿಯಾಗಿದ್ದರೆ, ಅವರು ಒಮ್ಮತದಿಂದಿರುವಾಗಷ್ಟೇ ಭಿನ್ನಾಭಿಪ್ರಾಯದಿಂದಿರುವಾಗಲೂ ಅವರ ಅರ್ಥ ವಿವರಿಸಲು ನೀನು ಸಮರ್ಥ ನಾಗಿರುತ್ತಿರಲ್ಲವೋ ?

ಇ. ಖಂಡಿತವಾಗಿ ಇರುತ್ತಿದ್ದೆ.

ಸೋ. ಅದರೆ ನೀನು ಹೋಮರನ ವಿಷಯದಲ್ಲಿಮಾತ್ರ ಈ ಕೌಶಲ ಹೊಂದಿದ್ದು, ಹಿಸಿಯಡ್ ಅಥವಾ ಇತರ ಕವಿಗಳ ವಿಷಯದಲ್ಲಿ ಇಲ್ಲದಂತಾಗಿರುವುದು ಹೇಗೆ? ಇತರ ಎಲ್ಲ ಕವಿಗಳೂ ಬಳಸಿರುವ ಅದೇ ವಿಷಯಗಳನ್ನೇ ಹೋಮರನೂ ಹೇಳಿಲ್ಲವೇ? ಅವನ ಮುಖ್ಯವಸ್ತು ಯುದ್ಧವಲ್ಲವೇ? ಮಾನವಸಮಾಜ ಮತ್ತು ಸಾಧು ಅಸಾಧು, ಕುಶಲ ಅಕುಶಲ ಮಾನವವ್ಯವಹಾರಗಳು, ಮತ್ತು ದೇವತೆಗಳ ಪರಸ್ಪರ ಹಾಗೂ ಮನುಷ್ಯರೊಡನೆ ಸಂಭಾಷಣೆಗಳು, ಮೇಲೆ ಸ್ವರ್ಗದಲ್ಲಿ ಮತ್ತು ಕೆಳಗೆ ಭೂಮಿಯಲ್ಲಿ ನಡೆಯುವ ವಿದ್ಯಮಾನಗಳು, ಮತ್ತು ದೇವತೆಗಳ ಹಾಗೂ ವೀರರ ವಂಶಾವಳಿಗಳು—ಇವನ್ನೆಲ್ಲಾ ಅವನು ಹೇಳುವುದಿಲ್ಲವೇ? ಹೋಮರನು ಹಾಡುವ ಸಂಗತಿಗಳು ಇವಲ್ಲವೇ?

ಇ. ನಿಜವಾಗಿ ಹೌದು, ಸೋಕ್ರೆಟಿಸ್.

ಸೋ. ಇತರ ಕವಿಗಳು ಹಾಡುವುದು ಅವನ್ನೇ ಅಲ್ಲವೇ?

ಇ. ಹೌದು, ಸೋಕ್ರೆಟಿಸ್, ಆದರೆ ಹೋಮರನ ರೀತಿಯಲ್ಲಿ ಅಲ್ಲ.

ಸೋ. ಅಂದರೆ, ನಿಕೃಷ್ಟವಾಗಿಯೋ?

ಇ. ಹೌದು, ಬಹಳ ನಿಕೃಷ್ಟರೀತಿಯಲ್ಲಿ.

ಸೋ. ಹೋಮರನು ಉತ್ತಮರೀತಿಯಲ್ಲೋ ?

ಇ. ಅವನು ಅಸದೃಶವಾಗಿ ಉತ್ತಮ.

ಸೋ. ಆದರೂ, ಪ್ರಿಯಮಿತ್ರ ಇಯೋನ್, ಅಂಕಗಣಿತವನ್ನು ಕುರಿತ ಚರ್ಚೆಯೊಂದ

ರಲ್ಲಿ ಅನೇಕರು ಮಾತನಾಡುತ್ತಿದ್ದು, ಅವರಲ್ಲೊಬ್ಬನು ಉಳಿದವರಿಗಿಂತ ಚೆನ್ನಾಗಿ ಮಾತನಾಡುತ್ತಿರುವಾಗ ಅವರಲ್ಲಿ ಚೆನ್ನಾಗಿ ಮಾತನಾಡುವವನು ಯಾವನು ಎಂದು ನಿರ್ಣಯಿಸಬಲ್ಲ ವ್ಯಕ್ತಿ ಒಬ್ಬನು ಇರುವುದು ನಿಜವಷ್ಟೆ?

ಇ. ನಿಜ.

ಸೋ. ಚೆನ್ನಾಗಿ ಮಾತನಾಡುವವರನ್ನು ನಿರ್ಣಯಿಸುವವನೂ ತಪ್ಪಾಗಿ ಮಾತನಾಡುವವರನ್ನು ನಿರ್ಣಯಿಸುವವನೂ ಒಬ್ಬನೇನೋ?

ಇ. ಒಬ್ಬನೇ.

ಸೋ. ಅವನು ಗಣಿತಜ್ಞನೋ?

ಇ. ಹೌದು.

ಸೋ. ಸರಿ. ಆಹಾರವೊಂದು ಆರೋಗ್ಯಕರವೇ ಎಂಬ ಚರ್ಚೆಗಳಲ್ಲಿ ಅನೇಕರು ಮಾತನಾಡುತ್ತಿದ್ದು, ಅವರಲ್ಲೊಬ್ಬನು ಇತರರಿಗಿಂತ ಚೆನ್ನಾಗಿ ಮಾತನಾಡುತ್ತಿರುವಾಗ, ಚೆನ್ನಾಗಿ ಮಾತನಾಡುವವನನ್ನು ಗುರುತಿಸುವವನು ತಪ್ಪು ಮಾಡುವವನನ್ನು ಗುರುತಿಸುವ ವ್ಯಕ್ತಿಗಿಂತ ಬೇರೆಯಾಗಿರುತ್ತಾನೆಯೋ ಅಥವಾ ಒಬ್ಬನೇಯೋ?

ಇ. ಸ್ಪಷ್ಟವಾಗಿ ಒಬ್ಬನೇ.

ಸೋ. ಅವನು ಯಾರು? ಅವನ ಹೆಸರೇನು?

ಇ. ವೈದ್ಯ.

ಸೋ. ಈಗ ಒಟ್ಟಿನಲ್ಲಿ ಹೇಳುವುದಾದರೆ, ವಿಷಯ ಒಂದೇ ಆಗಿದ್ದು ಅನೇಕರು ಭಾಗ ವಹಿಸಿರುವ ಎಲ್ಲ ಚರ್ಚೆಗಳಲ್ಲೂ ಚೆನ್ನಾಗಿ ಮಾತನಾಡುವವನನ್ನು ಅರಿಯುವವನು ತಪ್ಪಾಗಿ ಮಾತಾಡುವವನನ್ನೂ ಅರಿಯುವುದಿಲ್ಲವೇ? ಏಕೆಂದರೆ ಚರ್ಚೆಯ ವಿಷಯ ಒಂದೇ ಆಗಿರುವಾಗ ತಪ್ಪುಗೊತ್ತಾಗದವನಿಗೆ ಸರಿಯೂ ಗೊತ್ತಾಗುವುದಿಲ್ಲವಷ್ಟೆ.

ಇ. ನಿಜ.

ಸೋ. ಆ ಒಬ್ಬನೇವ್ಯಕ್ತಿ ಎರಡರಲ್ಲೂ ಕುಶಲನಾಗಿರುವುದಿಲ್ಲವೇ?

ಇ. ಇರುತ್ತಾನೆ.

ಸೋ. ಹೋಮರ್ ಮತ್ತು ಇತರ ಕವಿಗಳು, ಹಿಸಿಯಡ್ ಮತ್ತು ಅರ್ಕಿಲೋಕಸ್ ನಂಥವರು, ಒಂದೇ ವಿಷಯಗಳನ್ನು ಹೇಳುತ್ತಾರೆ, ಆದರೆ ಒಂದೇ ರೀತಿಯಲ್ಲಲ್ಲ; ಆದರೆ ಅವರಲ್ಲಿ ಒಬ್ಬನು ಚೆನ್ನಾಗಿ ಹೇಳುತ್ತಾನೆ, ಇನ್ನೊಬ್ಬನು ಅಷ್ಟು ಚೆನ್ನಾಗಿ ಅಲ್ಲ ಎಂದು ನೀನು ಹೇಳುತ್ತೀಯಲ್ಲವೇ?

ಇ. ಹೌದು. ನಾನು ಹಾಗೆ ಹೇಳುವುದು ಸರಿಯಾಗಿದೆ.

ಸೋ. ಚೆನ್ನಾಗಿ ಹೇಳುವವನು ನಿನಗೆ ಗೊತ್ತಾದರೆ, ನಿಕೃಷ್ಟವಾಗಿ ಹೇಳುವವನು ನಿಕೃಷ್ಟ ಎನ್ನುವುದೂ ನಿನಗೆ ತಿಳಿಯುತ್ತದೆಯಲ್ಲವೇ?

ಇ. ಅದು ನಿಜ.

ಸೋ. ಹಾಗಾದರೆ, ಪ್ರಿಯಮಿತ್ರ, ಹೋಮರ್ ಮತ್ತು ಇತರ ಕವಿಗಳ ವಿಷಯದಲ್ಲಿ ಇಯೋನ್ ಸಮಾನವಾಗಿ ಸಮರ್ಥ, ಏಕೆಂದರೆ ಒಂದೇ ವಿಷಯಗಳನ್ನು ಹೇಳುತ್ತಿರುವ ಎಲ್ಲರನ್ನೂ ದಕ್ಷವಾಗಿ ತೂಗುವ ವ್ಯಕ್ತಿ ಒಬ್ಬನೇ ಆಗಿರುತ್ತಾನೆ, ಮತ್ತು ಅನೇಕವಾಗಿ ಎಲ್ಲ ಕವಿಗಳೂ ಒಂದೇ ವಿಷಯಗಳನ್ನು ನಿರೂಪಿಸುತ್ತಾರೆ ಎಂದು ಅವನೇ ಒಪ್ಪಿಕೊಂಡಿದ್ದಾನೆ—ಎಂದು ನಾನು ಹೇಳಿದರೆ ತಪ್ಪಾಗುತ್ತದೆಯೇ?

ಇ. ಹಾಗಾದರೆ, ಸೋಕ್ರೆಟಿಸ್, ಬೇರೆ ಯಾವನಾದರೂ ಕವಿಯ ಬಗ್ಗೆ ಯಾರಾದರೂ ಒಬ್ಬರು ಮಾತನಾಡುವಾಗ ನನಗೆ ಆಸಕ್ತಿ ಮಾಯವಾಗುತ್ತದೆ; ನಿದ್ದೆ ಬಂದುಬಿಡುತ್ತದೆ; ಮತ್ತು ತೀರ ಸಾಮಾನ್ಯವಾದ ಯಾವ ಭಾವನೆ ಕೂಡ ಸ್ವಲ್ಪವೂ ಹೊಳೆಯುವುದಿಲ್ಲ. ಆದರೆ ಹೋಮರನ ಹೆಸರುಸುರಿದರೆ ಸಾಕು, ನಾನು ಕೂಡಲೇ ಎದ್ದು ಕುಳಿತುಕೊಳ್ಳುತ್ತೇನೆ; ಮೈಯೆಲ್ಲಾ ಕಿವಿಯಾಗುತ್ತೇನೆ; ಮತ್ತು ಹೇಳುವುದು ನನಗೆ ಬಹಳ ಒದಗುತ್ತದೆ. ಕಾರಣ ಏನು?

ಸೋ. ಕಾರಣ, ಮಿತ್ರ, ಸ್ಪಷ್ಟವಾಗಿದೆ. ಹೋಮರನನ್ನು ಕುರಿತು ನೀನು ಮಾತನಾಡುವುದು ಯಾವುದೇ ಕಲೆಯಿಂದಾಗಲೀ ಜ್ಞಾನದಿಂದಾಗಲೀ ಅಲ್ಲ ಎನ್ನುವುದು ಯಾರಿಗಾದರೂ ಹೊಳೆಯದಿರಲಾರದು. ಕಲಾಸೂತ್ರಗಳ ಸಹಾಯದಿಂದ ಅವನ ಬಗ್ಗೆ ನೀನು ಮಾತನಾಡಬಲ್ಲೆಯಾಗಿದ್ದರೆ, ಇತರ ಎಲ್ಲ ಕವಿಗಳನ್ನೂ ಕುರಿತು ಮಾತನಾಡಲು ನೀನು ಸಮರ್ಥನಾಗಿರುತ್ತಿದ್ದೆ; ಏಕೆಂದರೆ ಕಾವ್ಯ ಒಂದು ಸಮಗ್ರವಸ್ತು.

ಇ. ಹೌದು.

ಸೋ. ಯಾವನಾದರೂ ಒಬ್ಬನು ಬೇರೆ ಯಾವುದಾದರೂ ಒಂದು ಕಲೆಯನ್ನು ಸಮಗ್ರವಾಗಿ ಗ್ರಹಿಸಿದರೆ ಆಗ ಅವನ ವಿಷಯದಲ್ಲಿಯೂ ಇದನ್ನೇ ಹೇಳಬಹುದು. ನನ್ನ ಅರ್ಥ ಏನು ಎನ್ನುವುದನ್ನು ನಿನಗೆ ವಿವರಿಸಬೇಕೆನ್ನುತ್ತೀಯೋ, ಇಯೋನ್?

ಇ. ಖಂಡಿತವಾಗಿ, ಸೋಕ್ರೆಟಿಸ್, ನೀನು ಹಾಗೆ ಮಾಡಲಿ ಎಂದು ನನಗೆ ಬಹಳ ಆಸೆಯಾಗುತ್ತದೆ, ಏಕೆಂದರೆ ನಿನ್ನಂಥ ಜ್ಞಾನಿಗಳು ಮಾತನಾಡುವುದನ್ನು ಕೇಳುವುದಕ್ಕೆ ನನಗೆ ಬಹಳ ಇಷ್ಟ.

ಸೋ. ಅಯ್ಯೋ, ನಾವು ಜ್ಞಾನಿಗಳಾಗಿದ್ದರೆ, ಇಯೋನ್! ಮತ್ತು ನೀವು ನಮ್ಮನ್ನು

ನಿಜವಾಗಿ ಹಾಗೆ ಕರೆಯುವಂತಾಗಿದ್ದರೆ! ಆದರೆ ಜ್ಞಾನಿಗಳಾಗಿರುವವರು ನೀವು ಗಮಕಿಗಳು ಮತ್ತು ನಟರು, ಮತ್ತು ನೀವು ಹಾಡುವ ಕವಿಗಳು. ನಾನು ಒಬ್ಬ ದಿಟ ನುಡಿಯುವ ಕೇವಲ ಸಾಮಾನ್ಯವ್ಯಕ್ತಿ ಮಾತ್ರ. ಏಕೆಂದರೆ ನಾನು ಈಗ ಹೇಳಿದ್ದು ಎಷ್ಟು ಸಾಮಾನ್ಯವಾದ ಅಲ್ಪವಿಷಯ ಎನ್ನುವುದನ್ನು ಗಮನಿಸು; ಅದನ್ನು—ಸಮಗ್ರಕಲೆಯೊಂದರ ಜ್ಞಾನವನ್ನು ಒಬ್ಬ ವ್ಯಕ್ತಿ ಸಂಪಾದಿಸಿದರೆ ಗುಣದಜಿಜ್ಞಾಸೆ ಮತ್ತು ದೋಷದಜಿಜ್ಞಾಸೆ ಒಂದೇ ಆಗಿರುತ್ತದೆ—ಎನ್ನುವುದನ್ನು ಯಾರು ಬೇಕಾದರೂ ಹೇಳಬಹುದು. ಈ ವಿಷಯವನ್ನು ಸ್ವಲ್ಪ ಆಲೋಚಿಸೋಣ. ವರ್ಣಕಲೆ ಒಂದು ಸಮಗ್ರವಲ್ಲವೇ?

ಇ. ಹೌದು.

ಸೋ. ಒಳ್ಳೆಯ ಮತ್ತು ಕೆಟ್ಟ ಚಿತ್ರಕಾರರು ಇದ್ದರು ಮತ್ತು ಇದ್ದಾರಷ್ಟೆ?

ಇ. ಹೌದು.

ಸೋ. ಅಗ್ಲವೋಫಾನನ ಮಗ ಪೊಲಿಗ್ನೋಟಸನ ಗುಣದೋಷಗಳನ್ನು ನಿರ್ದೇಶಿಸುವುದರಲ್ಲಿ ಕುಶಲನಾಗಿದ್ದು ಇತರ ಚಿತ್ರಕಾರರನ್ನು ವಿಮರ್ಶಿಸಲು ಅಸಮರ್ಥನಾಗಿದ್ದವನು ಯಾವನಾದರೂ ನಿನಗೆ ಗೊತ್ತೇ? ಬೇರೆ ಯಾವನಾದರೂ ಚಿತ್ರಕಾರನ ಕೃತಿಯನ್ನು ಮುಂದಿಟ್ಟಾಗ ನಿದ್ದೆಹೋಗಿ, ಏನೂ ತೋಚದೆ, ಭಾವನೆಗಳೇ ಹೊಳೆಯದವನು? ಆದರೆ ಪೊಲಿಗ್ನೋಟಸ್ ಅಥವಾ ಆ ಚಿತ್ರಕಾರ ಯಾವನೇ ಆಗಿರಲಿ, ಅವನ ವಿಷಯದಲ್ಲಿ ಮತ್ತು ಅವನ ವಿಷಯದಲ್ಲಿ ಮಾತ್ರವೇ, ತನ್ನ ಅಭಿಪ್ರಾಯವನ್ನು ನೀಡಬೇಕಾದಾಗ ಎದ್ದುಕುಳಿತು, ಏಕಚಿತ್ತನಾಗಿ, ಹೇಳುವುದು ಬಹಳ ಇರುವವನು?

ಇ. ವಾಸ್ತವವಾಗಿ ಇಲ್ಲ. ಅಂಥವನು ನನಗೆ ಯಾವಾಗಲೂ ಗೊತ್ತಿಲ್ಲ.

ಸೋ. ಹೋಗಲಿ. ಮೆಟಿಯನನ ಮಗ ಡಾಯ್ಡಲಸ್ ಅಥವಾ ಪನೋಪ್ಯೂಸನ ಮಗ ಎಪ್ಪೈಯಸ್ ಅಥವಾ ಸಾಮಿಯದ ಥಿಯೊಡೊರಸ್ ಅಥವಾ ಬೇರೆ ಯಾವನಾದರೂ ಶಿಲ್ಪಿಯ ಗುಣಗಳನ್ನು ನಿರೂಪಿಸುವುದರಲ್ಲಿ ಕುಶಲನಾಗಿದ್ದು, ಒಟ್ಟಿನಲ್ಲಿ ಶಿಲ್ಪಿಗಳ ಕೃತಿಗಳನ್ನು ಮುಂದಿಟ್ಟಾಗ ಏನೂ ತೋಚದೆ, ನಿದ್ದೆ ಹೋಗಿಬಿಟ್ಟು, ಹೇಳುವುದು ಏನೂ ಇಲ್ಲದಿದ್ದವನು ಯಾವನಾದರೂ ನಿನಗೆ ಗೊತ್ತೇ?

ಇ. ನಿಜವಾಗಿ ಇಲ್ಲ. ಆ ಇನ್ನೊಬ್ಬನಷ್ಟೇ ಇವನೂ ಗೊತ್ತಿಲ್ಲ.

ಸೋ. ನಾನು ತಪ್ಪು ಮಾಡುತ್ತಿಲ್ಲದಿದ್ದರೆ, ಒಲುಂಪಸ್ ಅಥವಾ ಥಮುರಸ್ ಅಥವಾ ಆರ್ಫ್ಯೂಸ್ ಅಥವಾ ಇಥಾಕದ ಗಮಕಿ ಫೆಮಿಯಸ್ ಇವರ ವಿಷಯ ಮಾತನಾಡಬಲ್ಲ, ಆದರೆ ಎಫೆಸಸನ ಇಯೋನನ ವಿಷಯದಲ್ಲಿ ಮಾತನಾಡಬೇಕಾಗಿ ಬಂದಾಗ ಬಾಯಿಕಟ್ಟಿಹೋದ ಮತ್ತು ಅವನ ಗುಣಗಳ ಅಥವಾ ದೋಷಗಳ

ವಿಚಾರದಲ್ಲಿ ಯಾವ ಅಭಿಪ್ರಾಯವೂ ಇರದ ವೇಣುವಾದಕ ಅಥವಾ ವೀಣಾವಾದಕ ಅಥವಾ ಗಾಯಕ ಅಥವಾ ಗಮಕಿಗಳಲ್ಲಿ ಯಾವನನ್ನಾಗಲಿ ನೀನು ಎಂದೂ ಸಂಧಿಸಿಲ್ಲವಷ್ಟೆ?

ಇ. ನೀನು ಹೇಳುವುದನ್ನು ಇಲ್ಲ ಎನ್ನಲಾರೆ, ಸೋಕ್ರೆಟಿಸ್. ಆದರೂ ಹೋಮರನನ್ನು ಕುರಿತು ನಾನು ಎಲ್ಲರಿಗಿಂತಲೂ ಚೆನ್ನಾಗಿ ಮಾತನಾಡಬಲ್ಲೆ ಮತ್ತು ಹೆಚ್ಚು ವಿಷಯಗಳನ್ನು ಹೇಳಬಲ್ಲೆ ಎಂಬುದನ್ನು ನಾನು ಅಂತಸ್ಸಾಕ್ಷಿಯಾಗಿ ಬಲ್ಲೆ, ಮತ್ತು ಪ್ರಪಂಚವೂ ನನ್ನ ಭಾವನೆಗೆ ಒಪ್ಪಿಗೆಯಿತ್ತಿದೆ. ಆದರೆ ಇತರರನ್ನು ಕುರಿತು ನಾನು ಅಷ್ಟೇ ಚೆನ್ನಾಗಿ ಮಾತನಾಡಲಾರೆ. ಇದಕ್ಕೆ ಕಾರಣ ಸ್ವಲ್ಪ ತಿಳಿಸು, ಸೋಕ್ರೆಟಿಸ್.

ಸೋ. ನನಗೆ ಹೀಗೆ ಕಾಣುತ್ತದೆ, ಇಯೋನ್. ಇದಕ್ಕೆ ಕಾರಣ ಏನು ಎಂದು ನನಗೆ ಹೊಳೆಯುವುದನ್ನು ಈಗ ನಿನಗೆ ವಿವರಿಸುತ್ತೇನೆ. ಹೋಮರನ ವಿಷಯದಲ್ಲಿ ಅತ್ಯುತ್ತಮವಾಗಿ ವ್ಯಾಖ್ಯಾನಮಾಡುವ ಶಕ್ತಿ ನಿನಗೆ ಇದೆಯಲ್ಲ ಅದು ಒಂದು ಕಲೆಯಲ್ಲ; ಆದರೆ, ನಾನು ಈಗತಾನೆ ಹೇಳುತ್ತಿದ್ದಂತೆ, ಒಂದು ಸ್ಫೂರ್ತಿ, ಆವೇಶ ಅದು. ನಿನ್ನನ್ನು ಒಂದು ದೇವತೆ ಪ್ರಚೋದಿಸುತ್ತಿರುತ್ತದೆ. ಹೆರಾಕ್ಲೆಸನ ಶಿಲೆ ಎಂದು ರೂಢಿಯಲ್ಲಿ ಪ್ರಸಿದ್ಧವಾಗಿದೆಯಲ್ಲ, ಆದರೆ ಯೂರಿಪಿಡೀಸ್ ಅಯಸ್ಕಾಂತ ಎಂದಿದ್ದಾನಲ್ಲ, ಆ ಕಲ್ಲಿನಲ್ಲಿದೆಯಲ್ಲ, ಅಂಥದ್ದು ಅದು. ಈ ಕಲ್ಲು ತಾನು ಮಾತ್ರ ಕಬ್ಬಿಣದ ಬಳೆಗಳನ್ನು ಸೆಳೆಯುವುದಷ್ಟೇ ಅಲ್ಲ, ಆ ಬಳೆಗಳಿಗೆ ಇತರ ಬಳೆಗಳನ್ನು ಸೆಳೆಯುವ ಅಂತಹ ಒಂದು ಶಕ್ತಿಯನ್ನೂ ಕೊಡುತ್ತದೆ. ಸುಮಾರಾಗಿ ಸ್ವಲ್ಪ ಉದ್ದವೇ ಆದ ಒಂದು ಸರಪಣಿಯಾಗುವಂತೆ ಅನೇಕ ಕಬ್ಬಿಣದ ಚೂರುಗಳು ಮತ್ತು ಬಳೆಗಳು ಒಂದರಿಂದೊಂದು ತೂಗಿರುವುದನ್ನು ನೀನು ಕೆಲವುಸಲ ನೋಡಿರಬಹುದು. ಅವೆಲ್ಲವೂ ತಮ್ಮ ತೂಗುಶಕ್ತಿಯನ್ನು ಆ ಮೂಲ ಶಿಲೆಯಿಂದ ಪಡೆದಿರುತ್ತವೆ. ಅದೇ ರೀತಿ ಕಾವ್ಯದೇವಿ ಮೊದಲಲ್ಲಿ ತಾನೇ ಮನುಷ್ಯರಿಗೆ ಸ್ಫೂರ್ತಿ ತುಂಬುತ್ತಾಳೆ. ಈ ಸ್ಫೂರ್ತವ್ಯಕ್ತಿಗಳಿಂದ ಇತರ ವ್ಯಕ್ತಿಗಳ, ಅವರಿಂದ ಸ್ಫೂರ್ತಿ ಪಡೆದವರ, ಸರಪಣಿಯೊಂದು ತೂಗಿರುತ್ತದೆ. ಏಕೆಂದರೆ ಸತ್ಕವಿಗಳೆಲ್ಲರೂ, ಮಹಾಕಾವ್ಯ ಕವಿಗಳು ಹಾಗೂ ಭಾವಗೀತಕಾರರು, ತಮ್ಮ ಸುಂದರ ಕವನಗಳನ್ನು ರಚಿಸುವುದು ಕಲೆಯಿಂದಲ್ಲ, ಆದರೆ ಅವರು ಸ್ಫೂರ್ತರೂ ಮತ್ತು ಆವಿಷ್ಟರೂ ಆಗಿರುವುದರಿಂದ. ಕೊರಿಬಾಂತಿಯದ ಮೇಳದವರು ನರ್ತನಮಾಡುತ್ತಿರುವಾಗ ಸರಿಯಾದ ಮನಃಸ್ಥಿತಿಯಲ್ಲಿ ಇಲ್ಲದಿರುವಂತೆಯೇ ಭಾವಗೀತ ಕವಿಗಳೂ ಕೂಡ ತಮ್ಮ ಸುಂದರಗೀತಗಳನ್ನು ರಚಿಸುತ್ತಿರುವಾಗ ಸರಿಯಾದ ಮನಃಸ್ಥಿತಿಯಲ್ಲಿ ಇರುವುದಿಲ್ಲ. ಆದರೆ ಸಂಗೀತದ ಮತ್ತು ಛಂದಸ್ಸಿನ ಪ್ರಭಾವಕ್ಕೆ ವಶರಾಗಿ ಸ್ಫೂರ್ತರೂ ಆವಿಷ್ಟರೂ ಆಗಿರುತ್ತಾರೆ.

ಡಯೊನಿಸಸನ ಪ್ರಭಾವಕ್ಕೊಳಗಾದಾಗ ಹೊಳೆಯಿಂದ ಹಾಲು ಮತ್ತು ಜೇನನ್ನು ತರುವ, ಆದರೆ ಬುದ್ಧಿ ಸರಿಯಾಗಿರುವಾಗ ಹಾಗೆ ಮಾಡದ, ಬ್ಯಾಕಿಕ್ ಕನ್ಯೆಯರಂತೆ ಇರುತ್ತಾರೆ ಅವರು. ಭಾವಗೀತಕವಿಯ ಆತ್ಮವು, ಅವರೇ ಹೇಳಿಕೊಳ್ಳುವಂತೆ, ಅಂತೆಯೇ ಮಾಡುತ್ತದೆ. ಏಕೆಂದರೆ ತಾವು, ಜೇನಿನಂತೆ ಹೂವಿಂದ ಹೂವಿಗೆ ಹಾರಿಹೋಗಿ, ಕಾವ್ಯದೇವಿಯರ ತೋಟ ಮತ್ತು ಕಣಿವೆಗಳ ಜೇನುಚಿಲುಮೆಗಳಿಂದ ಗೀತಗಳನ್ನು ಆಯ್ದು ತರುತ್ತಾರೆಂದು ಅವರು ಹೇಳುತ್ತಾರೆ. ಅದು ನಿಜ. ಏಕೆಂದರೆ ಕವಿ ರೆಕ್ಕೆಯಿರುವ ಒಂದು ಹಗುರಾದ ಪವಿತ್ರವಸ್ತು; ಅವನು ಆವೇಶಗೊಂಡು, ಪ್ರಜ್ಞಾತೀತನಾಗಿ, ಬುದ್ಧಿ ಸ್ವಲ್ಪವೂ ಇಲ್ಲದಾಗುವವರೆಗೆ ಅವನಿಗೆ ಕಲ್ಪನಾಶಕ್ತಿ ಇರುವುದಿಲ್ಲ; ಈ ಸ್ಥಿತಿಯನ್ನು ತಲುಪದಿದ್ದಾಗ ಅವನು ಶಕ್ತಿರಹಿತ ಮತ್ತು ಭವಿಷ್ಯೋಕ್ತಿಗಳನ್ನು ನುಡಿಯಲು ಅಸಮರ್ಥನಾಗಿರುತ್ತಾನೆ. ಮಾನವರ ವ್ಯವಹಾರಗಳನ್ನು ಕುರಿತು ಕವಿಗಳು ನುಡಿದಿರುವ ಉದಾತ್ತ ನುಡಿಗಳು ಅನೇಕವಿವೆ. ಆದರೆ, ಹೋಮರನನ್ನು ಕುರಿತು ನೀನು ಮಾತನಾಡುವಾಗ ಇರುವಂತೆಯೇ. ಅವುಗಳ ವಿಷಯವಾಗಿ ಅವರು ಕಲೆಯ ಯಾವುದೇ ನಿಯಮಗಳನ್ನು ಅನುಸರಿಸಿ, ಮಾತನಾಡುವುದಿಲ್ಲ. ಯಾವುದನ್ನು ನುಡಿಯಲು ಕಾವ್ಯದೇವಿ ಅವನನ್ನು ಪ್ರಚೋದಿಸುತ್ತಾಳೆಯೋ ಅವನು ಅದನ್ನು, ಮತ್ತು ಅದನ್ನು ಮಾತ್ರವೇ, ನುಡಿಯಲು ಸ್ಫೂರ್ತಿವಂತರಾಗಿರುತ್ತಾರೆ. ಸ್ಫೂರ್ತಿಗೊಂಡಾಗ ಅವರಲ್ಲಿ ಒಬ್ಬನು ಮೇಳಸ್ತೋತ್ರವನ್ನು ರಚಿಸುತ್ತಾನೆ; ಇನ್ನೊಬ್ಬನು ಪ್ರಶಂಸಾಸ್ತುತಿಗಳನ್ನು ರಚಿಸುತ್ತಾನೆ; ಮತ್ತೊಬ್ಬನು ಮೇಳಗೀತಗಳನ್ನು ರಚಿಸುತ್ತಾನೆ; ಮಗದೊಬ್ಬನು ಮಹಾಕಾವ್ಯ ಅಥವಾ ಸರಳ ರಗಳೆಗಳನ್ನು ರಚಿಸುತ್ತಾನೆ. ಮತ್ತು, ಒಂದು ಕಾವ್ಯ ಪ್ರಕಾರದಲ್ಲಿ ಸಮರ್ಥನಾಗಿರುವವನು ಬೇರೆ ಯಾವುದೇ ಕಾವ್ಯಪ್ರಕಾರದಲ್ಲಿ ಸಮರ್ಥನಾಗಿರುವುದಿಲ್ಲ. ಏಕೆಂದರೆ ಕವಿ ಹಾಡುವುದು ಕಲೆಯಿಂದಲ್ಲ, ದೈವೀಶಕ್ತಿಯಿಂದ. ಅವನು ಕಲಾನಿಯಮಗಳ ಮೂಲಕ ಅದನ್ನು ಕಲಿತಿದ್ದರೆ, ಯಾವುದೋ ಒಂದು ವಿಷಯವನ್ನು ಮಾತ್ರ ನಿರೂಪಿಸುವ ವಿಧಾನವನ್ನು ಅವನು ಅರಿತಿರುತ್ತಿರಲಿಲ್ಲ; ಎಲ್ಲವನ್ನೂ ನಿರೂಪಿಸುವುದನ್ನು ಅರಿತಿರುತ್ತಿದ್ದನು. ಆದ್ದರಿಂದ, ಭಗವಂತನು ಕವಿಗಳ ಬುದ್ಧಿಗಳನ್ನು ಸೆಳೆದುಕೊಂಡುಬಿಡುತ್ತಾನೆ; ಶಕುನಿಗರನ್ನು ಮತ್ತು ಪವಿತ್ರ ಭವಿಷ್ಯವಾದಿಗಳನ್ನು ಅವನು ಉಪಯೋಗಿಸುವಂತೆ, ಅವರನ್ನು ತನ್ನ ಸಂದೇಶಕರನ್ನಾಗಿ ಬಳಸುತ್ತಾನೆ; ಏಕೆಂದರೆ ಪ್ರಜ್ಞಾಹೀನಸ್ಥಿತಿಯಲ್ಲಿ ಈ ಅಮೂಲ್ಯ ವಾಕ್ಯಗಳನ್ನು ನುಡಿಯುತ್ತಿರುವುದು ಅವರು ಸ್ವಂತವಾಗಿ ಅಲ್ಲ, ಆದರೆ ನುಡಿಯುತ್ತಿರುವವನು ಸ್ವತಃ ಭಗವಂತನೇ, ಮತ್ತು ಅವರ ಮೂಲಕ ಅವನು ನಮ್ಮ ಜೊತೆಯಲ್ಲಿ ಮಾತನಾಡುತ್ತಿದ್ದಾನೆ ಎಂದು ಅದನ್ನು ಕೇಳುತ್ತಿರುವ ನಾವು ತಿಳಿದುಕೊಳ್ಳಲೆಂದು ಅವನು ಹಾಗೆ ಮಾಡುತ್ತಾನೆ. ನಾನು ಹೇಳುತ್ತಿರು

ವುದಕ್ಕೆ ಅತ್ಯುತ್ತಮ ನಿದರ್ಶನವನ್ನು ಕಾಲ್ಸಿಡಿಯದ ಟಿನ್ನಿಕಸ್ ಒದಗಿಸುತ್ತಾನೆ. ಕಾವ್ಯದ ಇತಿಹಾಸದಲ್ಲೇ ಅತ್ಯಂತ ಶ್ರೇಷ್ಠಕವನಗಳಲ್ಲಿ ಒಂದಾದ, ಎಲ್ಲರ ಬಾಯಲ್ಲೂ ಇರುವ ಅವನ ಪ್ರಸಿದ್ಧ ಸ್ತೋತ್ರವನ್ನು ವಿನಾ ಯಾರಾದರೂ ನೆನಪಿನಲ್ಲಿಟ್ಟುಕೊಳ್ಳಬೇಕೆನ್ನುವಂತಹ ಬೇರೆ ಯಾವುದನ್ನೂ ಅವನು ಬರೆಯಲಿಲ್ಲ. ಅದು, ಅವನೇ ಹೇಳುವಂತೆ, ಕೇವಲ ಕಾವ್ಯದೇವಿಯರ ಕೃತಿ. ಏಕೆಂದರೆ ಈ ರೀತಿಯಲ್ಲಿ ಭಗವಂತನು ಈ ಸುಂದರ ಕವನಗಳು ಮಾನವವಲ್ಲ ಅಥವಾ ಮನುಷ್ಯ ಕೃತವಲ್ಲ, ಆದರೆ ದೈವಿಕ ಹಾಗೂ ದೇವಕೃತ, ಮತ್ತು ಕವಿಗಳು ತಾವು ಆವಿಷ್ಟರಾಗಿರುವ ದೇವತೆಗಳ ಅನುವಾದಕರು ಮಾತ್ರ ಎಂಬುದನ್ನು ನಮಗೆ ಸೂಚಿಸುತ್ತಿರುವಂತೆ ಮತ್ತು ಆ ವಿಷಯದಲ್ಲಿ ನಾವು ಸಂಶಯಪಡಲು ಅವಕಾಶಕೊಡದಂತೆ ಕಾಣುತ್ತದೆ. ಅತ್ಯಧಮ ಕವಿಗಳ ನಾಲಗೆಯ ಮೂಲಕ ದೇವರು ಅತ್ಯುತ್ತಮ ಕೃತಿಗಳನ್ನು ಹಾಡಿವಾಗ ಅವನು ನಮಗೆ ಬೋಧಿಸಲು ಉದ್ದೇಶಿಸಿದ್ದು ಈ ಉಪದೇಶವನ್ನೇ ಅಲ್ಲವೇ? ನಾನು ಹೇಳುತ್ತಿರುವುದು ಸರಿಯಾಗಿಲ್ಲವೇ, ಇಯೋನ್ ?

ಇ. ಹೌದು, ನಿಜ, ಸೋಕ್ರೆಟೀಸ್, ನೀನು ಸರಿ ಎನಿಸುತ್ತದೆ. ಏಕೆಂದರೆ ನಿನ್ನ ಮಾತುಗಳು ನನ್ನ ಹೃದಯವನ್ನು ಮುಟ್ಟುತ್ತಿವೆ. ದೈವೀಸ್ಫೂರ್ತಿಯೊಂದರ ಮೂಲಕ ಸತ್ಕವಿಗಳು ನಮಗೆ ದೇವತೆಗಳ ವಿಷಯವನ್ನು ವಿವರಿಸುತ್ತಾರೆ ಎನ್ನುವುದು ನನಗೆ ಮನದಟ್ಟಾಗಿದೆ.

ಸೋ. ನೀವು ಗಮಕಿಗಳು ಕವಿಗಳ ವ್ಯಾಖ್ಯಾನಕಾರರೋ ?

ಇ. ಅಲ್ಲಿ ಕೂಡ ನೀನು ಸರಿ.

ಸೋ. ಹಾಗಾದರೆ ನೀವು ವ್ಯಾಖ್ಯಾನಕಾರರ ವ್ಯಾಖ್ಯಾನಕಾರರೋ ?

ಇ. ನಿಶ್ಚಯವಾಗಿ.

ಸೋ. ಈಗ ನಿನ್ನನ್ನು ನಾನು ಕೇಳಬೇಕೆಂದಿರುವುದನ್ನು, ಇಯೋನ್, ನೀನು ಮುಚ್ಚುಮರೆ ಇಲ್ಲದೆ ತಿಳಿಸುತ್ತೀಯೆಂದು ಆಶಿಸುತ್ತೇನೆ. ಒಡಿಸ್ಯೂಸನು ಅಂಗಳಕ್ಕೆ ಧುಮುಕಿ, ವರರಿಂದ ಗುರುತಿಸಲ್ಪಟ್ಟು, ತನ್ನ ಕಾಲಬಳಿ ಅಂಬುಗಳನ್ನು ಶೇಖರಿಸಿಕೊಳ್ಳುವ ದೃಶ್ಯ, ಅಥವಾ ಹೆಕ್ಟರನತ್ತ ನುಗ್ಗುತ್ತಿರುವ ಅಖಿಲ್ಲೆಸನ ವರ್ಣನೆ, ಅಥವಾ ಅಂಡ್ರೊಮಖೆಯ ಅಥವಾ ಹೆಕ್ಯೂಬಳ ಅಥವಾ ಪ್ರಿಯಮನ ಸಂತಾಪ–ಇಂತಹ ಯಾವುವಾದರೂ ಉತ್ತಮ ಭಾಗಗಳನ್ನು ವಾಚಿಸುವಲ್ಲಿ ಶ್ರೋತೃಗಳ ಮೇಲೆ ನೀನು ಅತ್ಯಂತ ಪ್ರಭಾವವನ್ನು ಉಂಟುಮಾಡುವಾಗ ನಿನ್ನ ಬುದ್ಧಿ ಸ್ತಿಮಿತವಾಗಿರುತ್ತದೆಯೋ? ನೀನು ನಿನ್ನಿಂದ ಹೊರಕ್ಕೆ ಒಯ್ಯಲ್ಪಟ್ಟಿರುವುದಿಲ್ಲವೇ? ಉನ್ಮಾದಸ್ಥಿತಿಯೊಂದರಲ್ಲಿರುವ ನಿನ್ನ ಆತ್ಮವು ನೀನು ವರ್ಣಿಸುತ್ತಿರುವ ವ್ಯಕ್ತಿಗಳ

ಅಥವಾ ಸ್ಥಳಗಳ–ಅವು ಇಥಾಕ, ಟ್ರಾಯ್, ಅಥವಾ ಕಾವ್ಯ ಕಥೆಯ ಯಾವುದೇ ಪ್ರದೇಶದಲ್ಲಿರಲಿ–ನಡುವೆ ಇರುವಂತೆ ತೋರುವುದಿಲ್ಲವೇ ?

ಇ. ಈ ತರ್ಕ ನನಗೆ ನಾಟುತ್ತದೆ, ಸೋಕ್ರೆಟಿಸ್. ಏಕೆಂದರೆ ಕರುಣೆಯ ಕಥೆಯಲ್ಲಿ ನನ್ನ ಕಣ್ಣು ಹನಿತುಂಬುತ್ತದೆ; ಮತ್ತು ನಾನು ಭಯಂಕರ ದೃಶ್ಯಗಳನ್ನು ವರ್ಣಿಸುವಾಗಿ ನನ್ನ ಕೂದಲು ನಿಮಿರಿ ನಿಲ್ಲುತ್ತದೆ ಮತ್ತು ನನ್ನ ಎದೆ ಹೊಡೆದು ಕೊಳ್ಳುತ್ತದೆ. ಇದನ್ನು ನಾನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗಿದೆ.

ಸೋ. ಒಳ್ಳೆಯದು, ಇಯೋನ್. ಯಾಗ ಅಥವಾ ವ್ರತವೊಂದರಲ್ಲಿ ಒಬ್ಬ ವ್ಯಕ್ತಿ ಹಬ್ಬದ ಉಡಿಗೆತೊಟ್ಟು, ತಲೆಯ ಮೇಲೆ ಹೊನ್ನಮಾಲೆಗಳನ್ನು ಧರಿಸಿ, ಅವನ್ನು ಯಾರೂ ಕಸಿದುಕೊಳ್ಳದಿದ್ದರೂ, ಯಾರೂ ಅವನಿಗೆ ನಷ್ಟ ತೊಂದರೆ ಉಂಟು ಮಾಡದಿದ್ದರೂ, ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ಮಿತ್ರಮುಖ ಗಳೆದುರು ರೋದಿಸುತ್ತಾ, ಅಥವಾ ಭಯವಿಹ್ವಲನಾಗಿ ಕಾಣಿಸಿಕೊಂಡರೆ ಅವನು ಸರಿಯಾದ ಬುದ್ಧಿಸ್ಥಿತಿಯಲ್ಲಿ ಇರುತ್ತಾನೆಯೇ ಅಥವಾ ಇಲ್ಲವೇ ?

ಇ. ಖಂಡಿತವಾಗಿ ಇಲ್ಲ, ಸೋಕ್ರೆಟಿಸ್. ನಿಷ್ಕೃಷ್ಟವಾಗಿ ಹೇಳುವುದಾದರೆ, ಅವನು ಸರಿಯಾದ ಬುದ್ಧಿಸ್ಥಿತಿಯಲ್ಲಿಲ್ಲ ಎಂದು ನಾನು ಹೇಳಬೇಕಾಗುತ್ತದೆ.

ಸೋ. ಪ್ರೇಕ್ಷಕವರ್ಗದ ಬಹುಭಾಗದ ಮೇಲೆ ನೀನು ಅಂತಹ ಪ್ರಭಾವಗಳನ್ನು ಉಂಟು ಮಾಡುತ್ತೀಯೆಂಬುದು ನಿನ್ನ ಗಮನಕ್ಕೆ ಬಂದಿದೆಯೇ ?

ಇ. ಬಹಳ ಚೆನ್ನಾಗಿ. ಏಕೆಂದರೆ ರಂಗದ ಮೇಲಿಂದ ನಾನು ಅವರನ್ನು ನೋಡುತ್ತಿರ ತ್ತೇನೆ. ನಾನು ನುಡಿಯುತ್ತಿರುವಾಗ ಅವರ ಮುಖಗಳ ಮೇಲೆ ಮುದ್ರಿತವಾದ ಕರುಣೆ, ಆಶ್ಚರ್ಯ, ಕ್ರೌರ್ಯ ಮುಂತಾದ ವಿವಿಧ ಭಾವಗಳನ್ನು ಕಾಣುತ್ತೇನೆ. ನನ್ನ ಅತ್ಯಂತ ಮುಖ್ಯ ಗಮನವನ್ನು ನಾನು ಅವರಿಗೆ ಅವಶ್ಯವಾಗಿ ಕೊಡ ಬೇಕಾಗಿದೆ. ಏಕೆಂದರೆ ಅವರನ್ನು ಅಳುವಂತೆ ಮಾಡಿದರೆ ನಾನು ನಗಬಹುದು; ನಗುವಂತೆ ಮಾಡಿದರೆ ಸಂಭಾವನೆ ನೀಡುವ ಸಮಯದಲ್ಲಿ ನಾನು ಅಳಬೇಕಾಗು ತ್ತದೆ.

ಸೋ. ನಾನು ಈಗ ಹೇಳುತ್ತಿರುವ ಪ್ರಕಾರ ಮೂಲಸ್ಪರ್ಶಶಿಲೆಯ ಶಕ್ತಿಯನ್ನು ಒಂದ ರಿಂದ ಇನ್ನೊಂದು ಪಡೆಯುವ ಬಳೆಗಳಲ್ಲಿ ಕಡೆಯ ಬಳೆ ಪ್ರೇಕ್ಷಕ ಎನ್ನುವುದು ನಿನಗೆ ಗೊತ್ತಿದೆಯೇ? ನಿನ್ನಂಥ ಗಮಕಿ ಮತ್ತು ನಟ ಮಧ್ಯದ ಬಳೆಗಳು, ಮತ್ತು ಸ್ವತಃ ಕವಿಯೇ ಅವುಗಳಲ್ಲಿ ಮೊದಲನೆಯದು. ಇವರೆಲ್ಲರ ಮೂಲಕ ದೇವರು ಜನಗಳ ಆತ್ಮಗಳನ್ನು ತನಗೆ ಇಷ್ಟವಾದ ದಿಕ್ಕಿನಲ್ಲಿ ತೂಗಾಡಿಸುತ್ತಾನೆ, ಮತ್ತು ಒಬ್ಬ ವ್ಯಕ್ತಿ ಇನ್ನೊಬ್ಬನಿಂದ ಇಳಿಬೀಳುವಂತೆ ಮಾಡುತ್ತಾನೆ. ಈ ಪ್ರಕಾರ ನರ್ತಕರ, ಮೇಳಗುರುಗಳ ಮತ್ತು ಉಪಗುರುಗಳ ಒಂದು ದೊಡ್ಡ

ಸರಪಣಿ ಇದೆ. ಸ್ಪರ್ಶ ಶಿಲೆಯಿಂದ ಆದಂತೆ ಅವರು ಕಾವ್ಯದೇವಿಯಿಂದ ತೂಗಿರುವ ಬಳೆಗಳ ಪಕ್ಕಗಳಲ್ಲಿ ಜೋತುಬಿದ್ದಿರುತ್ತಾರೆ. ಪ್ರತಿಯೊಬ್ಬ ಕವಿಗೂ ಅವನು ಇಳಿಬಿದ್ದಿರುವ ಒಬ್ಬ ಕಾವ್ಯದೇವಿ ಇದ್ದಾಳೆ. ಅವನು ಅವಳಿಂದ ಆವಿಷ್ಟನಾಗಿದ್ದಾನೆ ಎನ್ನುತ್ತಾರೆ. ಸ್ವಲ್ಪ ಹೆಚ್ಚು ಕಡಮೆ ಎರಡೂ ಒಂದೇ. ಏಕೆಂದರೆ ಅವನು ಹಿಡಿಯಲ್ಪಟ್ಟಿದ್ದಾನೆ. ಕವಿಗಳಾಗಿರುವ ಈ ಮೊದಲ ಬಳೆಗಳಿಂದ ಇತರರು ತೂಗಿಬಿದ್ದಿರುತ್ತಾರೆ. ಅವರಲ್ಲಿ ಕೆಲವರು ಆರ್ಫ್ಯೂಸನಿಂದಲೂ, ಇತರರು ಮೂಸೇಯಸನಿಂದಲೂ ತಮ್ಮ ಸ್ಫೂರ್ತಿಯನ್ನು ಪಡೆದಿರುತ್ತಾರೆ. ಆದರೆ ಅಧಿಕಸಂಖ್ಯಾತರು ಹೋಮರನಿಂದ ಆವಿಷ್ಟರೂ ಗೃಹೀತರೂ ಆಗಿರುತ್ತಾರೆ. ಅವರಲ್ಲಿ, ಇಯೋನ್, ನೀನು ಒಬ್ಬ. ನೀನು ಹೋಮರನಿಂದ ಆವಿಷ್ಟನಾಗಿದ್ದೀಯೆ. ಬೇರೊಬ್ಬ ಕವಿಯ ಶಬ್ದಗಳನ್ನು ಯಾರಾದರೂ ಪಠಿಸಿದಾಗ ನೀನು ನಿದ್ದೆ ಹೋಗಿಬಿಡುತ್ತೀಯೆ, ಮತ್ತು ಅದರ ಬಗ್ಗೆ ಹೇಳುವುದಕ್ಕೆ ನಿನಗೆ ಏನೂ ತೋಚುವುದಿಲ್ಲ. ಆದರೆ ಅದೇ ಯಾರಾದರೂ ಹೋಮರನ ಪಂಕ್ತಿಯೊಂದನ್ನು ನುಡಿದರೆ ಸಾಕು, ನೀನು ಒಂದು ನಿಮಿಷದಲ್ಲಿ ಎಚ್ಚರವಾಗುತ್ತೀಯೆ, ನಿನ್ನ ಆತ್ಮ ನಿನ್ನಲ್ಲಿ ಜಿಗಿದು ನಿಲ್ಲುತ್ತದೆ, ಮತ್ತು ಅದರ ಬಗ್ಗೆ ಹೇಳುವುದು ನಿನಗೆ ಯಥೇಚ್ಛವಾಗಿರುತ್ತದೆ. ಏಕೆಂದರೆ ಆ ಹೇಳುವುದನ್ನು ನೀನು ಹೇಳುವುದು ಹೋಮರನನ್ನು ಕುರಿತ ಕಲೆಯಿಂದಾಗಲಿ ಅಥವಾ ಜ್ಞಾನದಿಂದಾಗಲಿ ಅಲ್ಲ; ಅದರ ಬದಲು ದೈವೀಸ್ಫೂರ್ತಿಯಿಂದ ಮತ್ತು ದೈವಾವೇಶದಿಂದ. ಕೊರಿಬಾಂತಿಯದ ಮೇಳದವರು ಸಹ ತಾವು ಆವಿಷ್ಟರಾದ ದೇವತೆಗೆ ಸಲ್ಲುವ ರಾಗವನ್ನು ಮಾತ್ರ ಬೇಗ ಗ್ರಹಿಸಿ, ಅದಕ್ಕೆ ಆವಶ್ಯಕವಾದ ಶಬ್ದಗಳನ್ನು ಮತ್ತು ನೃತ್ಯಗಳನ್ನು ಯಥೇಚ್ಛವಾಗಿ ಪಡೆದು, ಉಳಿದೊಂದನ್ನೂ ಗಮನಿಸದೆ ಇರುವಂತೆಯೇ ನಿನ್ನದೂ ಕೂಡ. ಹೋಮರನ ಹೆಸರನ್ನು ಉಸುರಿದಾಗ, ಇಯೋನ್, ಹೇಳುವುದು ನಿನಗೆ ಬೇಕಾದಷ್ಟಿರುತ್ತದೆ, ಇತರರ ವಿಷಯದಲ್ಲಿ ಏನೂ ಇರುವುದಿಲ್ಲ. "ಇದು ಏಕೆ?" ಎಂದು ನೀನು ಕೇಳುತ್ತೀಯೆ. ಹೋಮರನನ್ನು ನೀನು ಹೊಗಳುವುದು ಕಲೆಯಿಂದಲ್ಲ, ಆದರೆ ದೈವೀಸ್ಫೂರ್ತಿಯಿಂದ ಎನ್ನುವುದು ಅದಕ್ಕೆ ಉತ್ತರ.

ಇ. ಅದು ಸರಿ, ಸೋಕ್ರಟೀಸ್. ಆದರೂ, ಉನ್ಮಾದದಲ್ಲಿದ್ದಾಗ ಮತ್ತು ಆವಿಷ್ಟನಾದಾಗ ಮಾತ್ರ ನಾನು ಹೋಮರನನ್ನು ಹೊಗಳುತ್ತೇನೆ ಎಂದು ನಾನು ನಂಬುವಂತೆ ಮಾಡಲು ಬೇಕಾದ ವಾಕ್ಚಾತುರ್ಯ ನಿನಗೆ ಎಂದಾದರೂ ಬರಬಲ್ಲುದೇ ಎನ್ನುವುದು ನನಗೆ ಸಂದೇಹವಾಗಿದೆ. ಅವನ ವಿಷಯವಾಗಿ ನಾನು ಮಾತಾಡುವುದನ್ನು ನೀನು ಕೇಳುವಂತಾದಲ್ಲಿ ಅದು ಈ ರೀತಿಯದೆಂದು ನೀನು ಎಂದಿಗೂ ಭಾವಿಸಲಾರೆ ಎನ್ನುವುದು ನನಗೆ ಖಚಿತ.

ಸೋ. ನಿನ್ನನ್ನು ಕೇಳುವುದಕ್ಕೆ ನನಗೆ ಬಹಳ ಆಸೆ ಇದೆ. ಆದರೆ ನಾನು ಕೇಳ

ಬೇಕೆಂದಿರುವ ಪ್ರಶ್ನೆಯೊಂದಕ್ಕೆ ನೀನು ಉತ್ತರ ನೀಡುವ ತನಕ ಅದನ್ನು ಮಾಡುವುದಿಲ್ಲ. ಹೋಮರನ ಯಾವ ಅಂಶದ ಮೇಲೆ ನೀನು ಚೆನ್ನಾಗಿ ಮಾತನಾಡುತ್ತೀಯೆ? ಖಂಡಿತವಾಗಿ ಎಲ್ಲದರ ಮೇಲೂ ಅಲ್ಲವಷ್ಟೆ?

ಇ. ನಾನು ಚೆನ್ನಾಗಿ ಮಾತನಾಡದಿರುವ ಅಂಶ ಎನ್ನುವುದು ಯಾವುದೂ ಇಲ್ಲ, ಸೋಕ್ರೆಟಿಸ್. ಈ ವಿಷಯದಲ್ಲಿ ನಿನಗೆ ನಾನು ಭರವಸೆ ನೀಡಬಲ್ಲೆ.

ಸೋ. ನಿನಗೆ ಗೊತ್ತಿರದ ವಿಷಯಗಳು ಹೋಮರನಲ್ಲಿ ಇವೆಯಲ್ಲ, ಅವುಗಳ ವಿಷಯವಾಗಾದರೂ ಖಂಡಿತವಾಗಿ ಅಲ್ಲವಷ್ಟೆ?

ಇ. ನನಗೆ ಗೊತ್ತಿಲ್ಲದ ವಿಷಯ ಹೋಮರನಲ್ಲಿ ಯಾವುದಿದೆ?

ಸೋ. ಏಕೆ, ಹೋಮರ್ ಅನೇಕ ಕಡೆಗಳಲ್ಲಿ ಕಲೆಗಳ ವಿಷಯ ಹೇಳುವುದಿಲ್ಲವೇ? ಉದಾಹರಣೆಗೆ, ವಾಹನ ನಡೆಸುವುದು. ನನಗೆ ಪಂಕ್ತಿಗಳು ಜ್ಞಾಪಕಕ್ಕೆ ಬರುವಂತಿದ್ದಿದ್ದರೆ ನಾನು ಹೇಳುತ್ತಿದ್ದೆ.

ಇ. ನನಗೆ ಜ್ಞಾಪಕದಲ್ಲಿವೆ. ನಾನು ಹೇಳುತ್ತೇನೆ.

ಸೋ. ಹಾಗಾದರೆ ಪೆಟ್ರೊಕ್ಲೆಸನ ಗೌರವಾರ್ಥವಾಗಿ ಜರುಗಿದ ರಥದ ಪಂದ್ಯದಲ್ಲಿ ನೆಸ್ಟರನು ತನ್ನ ಮಗ ಅಂತಿಲೋಕಸನಿಗೆ ತಿರುವಿನಲ್ಲಿ ಜೋಪಾನವಾಗಿರಲು ಹೇಳಿದ್ದನ್ನು ಸ್ವಲ್ಪ ಹೇಳು.

ಇ. "ಅವನು ಹೇಳುತ್ತಾನೆ: ಚೆನ್ನಾಗಿರುವ ರಥದಲ್ಲಿ ಸ್ವಲ್ಪ ಎಡಕ್ಕೆ ಬಾಗು; ಬಲಗೈನ ಕುದುರೆಯನ್ನು ಮಾತು ಮತ್ತು ಚಾವಟಿಯಿಂದ ಹುರಿದುಂಬಿಸು: ಲಗಾಮನ್ನು ಸಡಿಲ ಬಿಡು. ಗುರಿಯನ್ನು ಸಮೀಪಿಸಿದಾಗ ಎಡಗಡೆ ಕುದುರೆ ಹತ್ತಿರ ಹೋಗಲಿ, ಆದರೆ ಚೆನ್ನಾಗಿ ಮಾಡಿರುವ ಚಕ್ರದ ಗುಂಬ ಅಂಚನ್ನು ಮುಟ್ಟಿ ಮುಟ್ಟದಂತೆ ಇರಲಿ. ಕಲ್ಲಿಗೆ ಸಿಕ್ಕಿಕೊಳ್ಳದಂತೆ ನೋಡಿಕೋ." (ಇಲಿಯಡ್. xiii. 335).

ಸೋ. ಸಾಕು. ಈಗ ಇಯೋನ್, ಈ ಪಂಕ್ತಿಗಳ ಯುಕ್ತತೆಯ ಸಮರ್ಥ ತೀರ್ಪುಗಾರ ಒಬ್ಬ ಸಾರಥಿಯೋ ಅಥವಾ ವೈದ್ಯನೋ?

ಇ. ಸ್ಪಷ್ಟವಾಗಿ ಸಾರಥಿ.

ಸೋ. ಅದಕ್ಕೆ ಕಾರಣ ಅದು ಅವನ ಕಲೆ ಎಂತಲೋ, ಅಥವಾ ಬೇರೆ ಯಾವುದಾದರೂ ಕಾರಣ ಇರುತ್ತದೆಯೋ?

ಇ. ಇಲ್ಲ. ಕಾರಣ ಅದೇ.

ಸೋ. ಪ್ರತಿಯೊಂದು ಕಲೆಗೂ ಒಂದು ನಿರ್ದಿಷ್ಟ ಕೆಲಸದ ಜ್ಞಾನ ದೇವರಿಂದ ನಿಯಮಿಸಿದೆಯಷ್ಟೆ? ಏಕೆಂದರೆ ಚಾಲಕ ಕಲೆಯ ಮೂಲಕ ನಾವು ಅರಿಯುವುದನ್ನು ವೈದ್ಯಕಲೆಯ ಮೂಲಕ ಅರಿಯುವುದಿಲ್ಲವಷ್ಟೆ?

ಇ. ಖಂಡಿತ ಇಲ್ಲ.

ಸೋ. ವೈದ್ಯಕಲೆಯ ಮೂಲಕ ಅರಿಯುವುದನ್ನು ನಾವು ಬಡಗಿಕಲೆಯ ಮೂಲಕ ಅರಿಯುವುದಿಲ್ಲ ತಾನೆ?

ಇ. ಖಂಡಿತವಾಗಿ ಇಲ್ಲ.

ಸೋ. ಹಾಗಾದರೆ ಇದು—ಒಂದು ಕಲೆಯ ಮೂಲಕ ಅರಿಯುವುದನ್ನು ನಾವು ಇನ್ನೊಂದರ ಮೂಲಕ ಅರಿಯುವುದಿಲ್ಲ ಎನ್ನುವುದು—ಎಲ್ಲ ಕಲೆಗಳ ವಿಷಯ ದಲ್ಲೂ ನಿಜವಷ್ಟೆ? ಆದರೆ, ಅದಕ್ಕಿಂತ ಮುಂಚೆ, ನಿನ್ನನ್ನು ಒಂದು ಪ್ರಶ್ನೆ ಕೇಳುತ್ತೇನೆ: ಕಲೆಗಳಲ್ಲಿ ಪರಸ್ಪರ ವ್ಯತ್ಯಾಸಗಳಿವೆ ಎಂಬುದನ್ನು ನೀನು ಒಪ್ಪು ತ್ತೀಯೋ?

ಇ. ಹೂಂ.

ಸೋ. ಒಂದು ಕಲೆ ಒಂದು ಬಗೆಯ ಜ್ಞಾನವಾಗಿದ್ದು, ಇನ್ನೊಂದು ಇನ್ನೊಂದರ ದ್ದಾಗಿದ್ದರೆ ಅವೆರಡೂ ಪರಸ್ಪರ ಭಿನ್ನ ಎಂದು ನೀನು ನನ್ನಂತೆಯೇ ವಾದಿಸುತ್ತೀಯೆ ತಾನೆ?

ಸೋ. ನಿಜವಾಗಿಯೇ. ಏಕೆಂದರೆ ಜ್ಞಾನದ ವಿಷಯ ಒಂದೇ ಆಗಿದ್ದು, ಎರಡು ಕಲೆಗಳು ಒಂದೇ ಜ್ಞಾನವನ್ನು ನೀಡಿದ್ದರೆ, ಆ ಕಲೆಗಳನ್ನು ಪರಸ್ಪರ ಭಿನ್ನ ಎನ್ನುವುದು ಅರ್ಥವಿಲ್ಲದ್ದಾಗುತ್ತದೆ. ಉದಾಹರಣೆಗೆ, ಇಲ್ಲಿ ಐದು ಬೆರಳು ಗಳಿವೆಯೆಂದು ನನಗೆ ಗೊತ್ತಿದೆ ಮತ್ತು ನಿನಗೂ ಅದು ಗೊತ್ತಿದೆ. ಈ ವಿಷಯ ನಮ್ಮಿಬ್ಬರಿಗೂ ಒಂದೇ ಅಂಕಗಣಿತ ಕಲೆಯ ಸಹಾಯದಿಂದ ಗೊತ್ತಾಯಿತೋ ಎಂದು ನಾನು ಕೇಳಿದರೆ, ಹೌದು ಎಂದು ನೀನು ಒಪ್ಪುತ್ತೀಯೋ?

ಇ. ಹೂಂ.

ಸೋ. ಹಾಗಾದರೆ ನಾನು ನಿನ್ನನ್ನು ಕೇಳಬೇಕೆಂದಿದ್ದುದನ್ನು ಹೇಳು—ಇದು ಸಾರ್ವತ್ರಿಕ ವಾಗಿ ಅನ್ವಯಿಸುತ್ತದೆಯೋ? ಒಂದು ಕಲೆ ಒಂದೇ ಜ್ಞಾನವಿಷಯವನ್ನು ಮತ್ತು ಬೇರೆ ಕಲೆಗಳು ಬೇರೆ ಬೇರೆ ಜ್ಞಾನವಿಷಯಗಳನ್ನು ಹೊಂದಿರಬೇಕೇ?

ಇ. ನನ್ನ ಅಭಿಪ್ರಾಯ ಹಾಗಿದೆ, ಸೋಕ್ರೆಟಿಸ್.

ಸೋ. ಹಾಗಾದರೆ, ಕಲೆಯೊಂದರ ಅರಿವಿಲ್ಲದವನು ಆ ಕಲೆಯ ನಡೆನುಡಿಗಳ ವಿಷಯದಲ್ಲಿ ಸರಿಯಾದ ನಿರ್ಣಯಶಕ್ತಿ ಹೊಂದಿರುವುದಿಲ್ಲವಷ್ಟೆ?

ಇ. ಬಹಳ ನಿಜ.

ಸೋ. ಹಾಗಾದರೆ, ಹೋಮರನಿಂದ ನೀನು ಪಠಿಸುತ್ತಿದ್ದ ಪಂಕ್ತಿಗಳ ಉತ್ತಮ ನಿರ್ಣಾಯಕ ಯಾರು? ನೀನೋ ಅಥವಾ ಸಾರಥಿಯೋ?

ಇ. ಸಾರಥಿ.

ಸೋ. ಏಕೆ? ನೀನು ಗಮಕಿಯಾಗಿರುವುದರಿಂದ, ಸಾರಥಿಯಲ್ಲದಿರುವುದರಿಂದ.

ಇ. ಹೌದು.

ಸೋ. ಜೊತೆಗೆ, ಗಮಕಿಯ ಕಲೆ ಸಾರಥಿಯ ಕಲೆಗಿಂತ ಬೇರೆಯಾಗಿರುವುದರಿಂದಲೋ?

ಇ. ಹೌದು.

ಸೋ. ಬೇರೆ ಜ್ಞಾನವಾದರೆ ಬೇರೆ ವಿಷಯಗಳ ಜ್ಞಾನವೋ?

ಇ. ನಿಜ.

ಸೋ. ನೆಸ್ತರನ ಉಪಪತ್ನಿ, ಹೆಕಮದೆ, ಗಾಯಗೊಂಡ ಮಕವೊನನಿಗೆ ಔಷಧಿ ಕೊಡುವ ವರ್ಣನೆ ನಿನಗೆ ಗೊತ್ತಿದೆಯಷ್ಟೆ. ಹೋಮರ್ ಹೇಳುತ್ತಾನೆ:

> ಪ್ರಮ್ನಿಯದ ಮದ್ಯದಿಂದ ಅದನ್ನು ತಯಾರಿಸಿದಳು; ಕಂಚಿನ ತುರಿಮಣೆಯಲ್ಲಿ ಮೇಕೆಯ ಹಾಲಿನ ಗಿಣ್ಣನ್ನು ತುರಿದು ಅದಕ್ಕೆ ಹಾಕಿದಳು; ಮತ್ತು ಪಾನೀಯಕ್ಕೆ ರುಚಿಕೊಡುವ ಈರುಳ್ಳಿಯನ್ನು ಅವನ ಪಕ್ಕದಲ್ಲಿರಿಸಿದಳು. (ಇಲಿಯಡ್. xi 638)

ಈಗ, ಈ ಪಂಕ್ತಿಗಳ ಸಾಧುತ್ವವನ್ನು ತೀರ್ಮಾನಿಸಲು ಹೆಚ್ಚು ಸಮರ್ಥವಾದುದು ಗಮಕಿಯ ಕಲೆಯೋ ಅಥವಾ ವೈದ್ಯಕಲೆಯೋ?

ಇ. ವೈದ್ಯಕಲೆ.

ಸೋ.
> ಮೈದಾನದಲ್ಲಿ ಅಲೆದಾಡುವ ಎತ್ತಿನ ಕೊಂಬಿನಲ್ಲಿ ಹುದುಗಿಸಿದ ಸೀಸದ ಗುಂಡು ಸಾವನ್ನು ಹೊತ್ತು ಹೊಟ್ಟೆಬಾಕ ಮೀನುಗಳ ನಡುವೆ ನುಗ್ಗಿಹೋಗುವಂತೆ ಅವಳು ಸಮುದ್ರವನ್ನು ಹೊಕ್ಕಳು. (ಇಲಿಯಡ್ xxiv 80)

ಎಂದು ಹೋಮರನು ಹೇಳುವಾಗ ಈ ಪಂಕ್ತಿಗಳು ಸರಿಯಾದ ವರ್ಣನೆಯೋ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಲು ಹೆಚ್ಚುಶಕ್ತವಾದುದು ಮೀನುಗಾರನ ಕಲೆಯೋ ಅಥವಾ ಗಮಕಿಯ ಕಲೆಯೋ?

ಇ. ಸ್ಪಷ್ಟವಾಗಿಯೇ ಮೀನುಗಾರನ ಕಲೆ, ಸೋಕ್ರೆಟಿಸ್.

ಸೋ. ಹಾಗಾದರೆ ಈಗ ನೋಡು. ನೀನು ನನಗೆ: "ಸೋಕ್ರೆಟಿಸ್, ಹೋಮರನಲ್ಲಿನ ವಿವಿಧಭಾಗಗಳನ್ನು ಅವುಗಳಿಗೆ ಸಂಬಂಧಿಸಿದ ಕಲೆಗಳಿಗೆ ಹಂಚಲು ನೀನು ಶಕ್ತನಾಗಿರುವುದರಿಂದ ಅವುಗಳಲ್ಲಿ ಯಾವುದರ ಗುಣವನ್ನು ಭವಿಷ್ಯವಾದಿ ಮತ್ತು ಭವಿಷ್ಯಕಲೆ ನಿರ್ಣಯಿಸಬೇಕು ಎನ್ನುವುದನ್ನು ನನಗೆ ತಿಳಿಸಿದರೆ ಒಳ್ಳೆಯದು" ಎಂದು ಹೇಳುತ್ತೀಯೆಂದು ಭಾವಿಸು. ನಾನು ಎಷ್ಟು ಶೀಘ್ರವಾಗಿ ಮತ್ತು ನಿಜವಾಗಿ ನಿನಗೆ ಉತ್ತರಕೊಡುತ್ತೇನೆಂಬುದು ನಿನಗೆ ಗೊತ್ತಾಗುತ್ತದೆ. ಏಕೆಂದರೆ ಅಂತಹ ಭಾಗಗಳು ಅನೇಕ, ಅದರಲ್ಲೂ ಮುಖ್ಯವಾಗಿ ಒಡಿಸ್ಸಿಯಲ್ಲಿ, ಇವೆ.

ಉದಾಹರಣೆಗೆ, ಮೆಲಂಪಸನ ಮನೆಯ ಭವಿಷ್ಯವಾದಿ ಥಿಯೊಕ್ಲ್ಮೆನಸನು ವರರಿಗೆ ಹೇಳುವ ಭಾಗ :

> ಹಾಳಾದವರೇ! ನಿಮಗೇನಾಗುತ್ತಿದೆ? ನಿಮ್ಮ ತಲೆ, ಮುಖ ಮತ್ತು ಕೆಳಗಿನ ಅಂಗಗಳನ್ನು ಕತ್ತಲೆ ಆವರಿಸಿವೆ. ರೋದನದ ಧ್ವನಿ ಹೊರಟಿದೆ. ನಿಮ್ಮ ಕೆನ್ನೆಗಳು ಕಣ್ಣೀರಿಂದ ತೊಯ್ದಿವೆ. ಪ್ರೇತಲೋಕದ ಅಂಧಕಾರಕ್ಕೆ ಇಳಿಯುತ್ತಿರುವ ಪ್ರೇತಗಳಿಂದ ಪಡಸಾಲೆ ತುಂಬಿದೆ ಮತ್ತು ಅಂಗಳ ತುಂಬಿದೆ. ಸೂರ್ಯ ಆಕಾಶದಿಂದ ಹಾಳಾಗಿದ್ದಾನೆ. ಕೆಟ್ಟ ಮಂಜು ಸುತ್ತಲೂ ಆವರಿಸಿದೆ. (ಒಡಿಸ್ಸಿ. xx. 351)

ಇಂತಹ ಅನೇಕ ಭಾಗಗಳು ಇಲಿಯಡ್ಡಿನಲ್ಲೂ ಇವೆ. ಉದಾಹರಣೆಗೆ, ಕೋಟೆಯ ಹತ್ತಿರದ ಕಾಳಗದ ವರ್ಣನೆಯಲ್ಲಿ ಹೋಮರನು ಹೇಳುವಾಗಿನದು :

> ಅವರು ಕಂದಕವನ್ನು ದಾಟಲು ಆತುರರಾಗಿದ್ದಾಗ ಅವರಿಗೊಂದು ಶಕುನವಾಯಿತು. ಎಡಭಾಗದಲ್ಲಿದ್ದ ಜನಗಳನ್ನು ಹಿಂದಕ್ಕೆ ಒತ್ತಿ, ಒಂದು ರಣಹದ್ದು ಇನ್ನೂ ಜೀವಂತವಾಗಿ ನಿಟ್ಟುಸಿರುಬಿಡುತ್ತಿದ್ದ ಒಂದು ದೊಡ್ಡ ರಕ್ತಸಿಕ್ತ ವಿಷಸರ್ಪವನ್ನು ಕಾಲಲ್ಲಿ ಹಿಡಿದುಕೊಂಡು ಹಾರಿತು. ಆದರೆ ಆ ಸರ್ಪ ಇನ್ನೂ ಹೋರಾಟ ನಿಲ್ಲಿಸಿರಲಿಲ್ಲ, ಏಕೆಂದರೆ ಅದು ಹಿಂದಕ್ಕೆ ಬಗ್ಗಿ ತನ್ನನ್ನು ಎದೆಯಮೇಲೆ ಒಯ್ಯುತ್ತಿದ್ದ ಆ ಹಕ್ಕಿಯ ಕೊರಳನ್ನು ಕಚ್ಚಿತು. ಹಕ್ಕಿ ನೋವಿನಿಂದ ಅದನ್ನು ಜನಗಳ ಗುಂಪಿನ ನಡುವೆ ನೆಲದಮೇಲೆ ಕೆಡವಿಬಿಟ್ಟು ಕೂಗಿಡುತ್ತಾ ಗಾಳಿಯಲ್ಲಿ ತೇಲಿ ಹೋಯಿತು. (ಇಲಿಯೆಡ್ xii. 200)

ಭವಿಷ್ಯವಾದಿಯೊಬ್ಬ ಗಮನಿಸಿ, ನಿರ್ಧರಿಸಬೇಕೆಂದು ನಾನು ಹೇಳುವುದು ಇಂತಹವನ್ನೇ.

ಇ. ನೀನು ಹೇಳುವುದು ಸರಿ, ಸೋಕ್ರೆಟಿಸ್.

ಸೋ. ನಿಜ, ಇಯೋನ್. ಆದರೆ ನೀನೂ ಸರಿ. ಇಲಿಯಡ್ ಮತ್ತು ಒಡಿಸ್ಸಿಗಳಿಂದ ಭವಿಷ್ಯವಾದಿ, ವೈದ್ಯ, ಮತ್ತು ಮೀನುಗಾರನ ಕಸುಬುಗಳ ವರ್ಣನೆಯ ಭಾಗಗಳನ್ನು ನಾನು ನಿನಗಾಗಿ ಆಯ್ದಿರುವಂತೆ, ನನಗಿಂತ ಎಷ್ಟೋ ಚೆನ್ನಾಗಿ ಹೋಮರನನ್ನು ಅರಿತಿರುವ ನೀನು ಗಮಕಿಗೆ ಮತ್ತು ಗಮಕಿಯ ಕಲೆಗೆ ಸಂಬಂಧಿಸಿದ, ಮತ್ತು ಇತರರಿಗೆಂತಲೂ ಸಮರ್ಥವಾಗಿ ಗಮಕಿಯು ಪರೀಕ್ಷಿಸಿ ನಿರ್ಣಯಿಸಬೇಕಾದ ಭಾಗಗಳನ್ನು ನನಗೆ ಆಯ್ದುಕೊಡು.

ಇ. ನನ್ನ ಪ್ರಕಾರ ಎಲ್ಲ ಭಾಗಗಳೂ, ಸೊಕ್ರೆಟಿಸ್.

ಸೋ. ಖಂಡಿತವಾಗಿ ಎಲ್ಲ ಅಲ್ಲ, ಇಯೋನ್. ಈಗತಾನೆ ನೀನು ಹೇಳುತ್ತಿದ್ದುದನ್ನು ಆಗಲೇ ಮರೆತುಬಿಟ್ಟೆಯೋ? ಗಮಕಿಗೆ ಜ್ಞಾಪಕಶಕ್ತಿ ಸ್ವಲ್ಪ ಚೆನ್ನಾಗಿರಬೇಕು.

ಇ. ಏಕೆ, ನಾನು ಏನು ಮರೆತಿರುವುದು?

ಸೋ. ಗಮಕಿಯ ಕಲೆ ಸಾರಥಿಯ ಕಲೆಗಿಂತ ಬೇರೆಯಾದುದು ಎಂದು ನೀನು ಹೇಳಿದ್ದು ನಿನಗೆ ಜ್ಞಾಪಕವಿಲ್ಲವೇ?

ಇ. ಹೌದು, ಜ್ಞಾಪಕವಿದೆ.

ಸೋ. ಬೇರೆಯಾದುದರಿಂದ ಅವುಗಳ ವಿಷಯಗಳು ಬೇರೆಬೇರೆಯಾಗಿರುತ್ತವೆ ಎಂದು ನೀನು ಒಪ್ಪಲಿಲ್ಲವೇ?

ಇ. ಹೌದು.

ಸೋ. ಹಾಗಾದರೆ ನೀನು ಹೇಳಿದ ಪ್ರಕಾರಕ್ಕೆ ಅನುಸಾರವಾಗಿಯೇ, ಗಮಕಿ ಮತ್ತು ಗಮಕಿಕಲೆ ಎಲ್ಲವನ್ನೂ ತಿಳಿಯಲಾರವಷ್ಟೆ?

ಇ. ನಾನು ಕೆಲವಕ್ಕೆ ವಿನಾಯತಿ ಕೊಡುತ್ತೇನೆ, ಸೊಕ್ರೆಟಿಸ್.

ಸೋ. ಸ್ಥೂಲವಾಗಿ ಒಟ್ಟನಲ್ಲಿ ಬೇರೆ ಕಲೆಗಳ ವಿಷಯಗಳಿಗೆ ವಿನಾಯಿತಿಕೊಡುತ್ತೀಯೆಂದು ನಿನ್ನ ಅಭಿಪ್ರಾಯ. ಗಮಕಿಗೆ ಎಲ್ಲವೂ ಗೊತ್ತಿಲ್ಲದಿರುವುದರಿಂದ, ಅವನಿಗೆ ಗೊತ್ತಿರುವುದು ಯಾವುದು?

ಇ. ಒಬ್ಬ ಗಂಡಸು ಮತ್ತು ಒಬ್ಬಳು ಹೆಂಗಸು ಹೇಳಬೇಕಾದುದು ಯಾವುದು, ಒಬ್ಬ ಸ್ವತಂತ್ರವ್ಯಕ್ತಿ ಮತ್ತು ಒಬ್ಬ ಸೇವಕ ಹೇಳಬೇಕಾದ್ದು ಯಾವುದು, ಒಬ್ಬ ರಾಜ ಮತ್ತು ಒಬ್ಬ ಪ್ರಜೆ ಹೇಳಬೇಕಾದ್ದು ಯಾವುದು–ಇವು ಅವನಿಗೆ ಗೊತ್ತಿರುತ್ತವೆ.

ಸೋ. ಸಮುದ್ರ ಎತ್ತಿಸೆಯುತ್ತಿರುವ ಹಡಗಿನ ಯಜಮಾನ ಹೇಳಬೇಕಾದ್ದನ್ನು ಚಾಲಕನಾವಿಕನಿಗಿಂತಲೂ ಗಮಕಿ ಚೆನ್ನಾಗಿ ತಿಳಿದಿರುತ್ತಾನೆ ಎಂದು ನಿನ್ನ ಅಭಿಪ್ರಾಯವೋ?

ಇ. ಅಲ್ಲ. ಚಾಲಕನಾವಿಕ ಉತ್ತಮವಾಗಿ ತಿಳಿದಿರುತ್ತಾನೆ.

ಸೋ. ಅಥವಾ ರೋಗಿಯ ಮೇಲ್ವಿಚಾರಕನೊಬ್ಬ ಹೇಳಬೇಕಾದ್ದನ್ನು ವೈದ್ಯನಿಗಿಂತಲೂ ಗಮಕಿ ಚೆನ್ನಾಗಿ ತಿಳಿದುಕೊಂಡಿರುತ್ತಾನೆಯೇ?

ಇ. ಇಲ್ಲ.

ಸೋ. ಆದರೆ ಸೇವಕನೊಬ್ಬ ಹೇಳಬೇಕಾದ್ದನ್ನು ತಿಳಿದಿರುತ್ತಾನಷ್ಟೆ?

ಇ. ಹೂಂ.

ಸೋ. ಹಾಗಾದರೆ, ಆ ಸೇವಕ ಒಬ್ಬ ದನಕಾಯುವವನೆಂದು ಭಾವಿಸೋಣ. ಆಗ, ರೊಚ್ಚಿಗೆದ್ದ ದನಗಳನ್ನು ಸಮಾಧಾನಮಾಡಲು ಹೇಳಬೇಕಾದ್ದನ್ನು ದನಕಾಯುವವನಿಗಿಂತಲೂ ಚೆನ್ನಾಗಿ ಗಮಕಿ ತಿಳಿದುಕೊಂಡಿರುತ್ತಾನೆಯೇ?

ಇ. ಇಲ್ಲ.

ಸೋ. ಉಣ್ಣೆಯ ಕೆಲಸದ ವಿಷಯದಲ್ಲಿ ನೂಲುವವಳು ಹೇಳಬೇಕಾದ್ದು ಅವನಿಗೆ ಗೊತ್ತಿರುತ್ತದೆಯಷ್ಟೆ?

ಇ. ಇಲ್ಲ.

ಸೋ. ಹೋಗಲಿ, ಸೈನಿಕರನ್ನು ಹುರಿದುಂಬಿಸುವಾಗ ಸೇನಾಪತಿಯೊಬ್ಬ ಹೇಳಬೇಕಾದ್ದನ್ನಾದರೂ ಅವನು ಅರಿತಿರುತ್ತಾನಷ್ಟೆ?

ಇ. ಹೂಂ. ಗಮಕಿಗೆ ಖಂಡಿತವಾಗಿ ಗೊತ್ತಿದೆ ಎನ್ನುವುದು ಅಂಥ ವಿಷಯವನ್ನೇ.

ಸೋ. ಸರಿ. ಹಾಗಾದರೆ ಗಮಕಿಯ ಕಲೆ ಸೇನಾಪತಿಯ ಕಲೆಯೋ?

ಇ. ಸೇನಾಪತಿಯೊಬ್ಬ ಏನು ಹೇಳಬೇಕೆಂಬುದು ನನಗೆ ಗೊತ್ತಿರುತ್ತದೆ ಎನ್ನುವುದು ನನಗೆ ಖಚಿತ.

ಸೋ. ನಿಜ, ಇಯೋನ್. ಏಕೆಂದರೆ ನಿನಗೆ ಗಮಕಿಕಲೆಯ ಅರಿವಿನ ಜೊತೆಗೆ ಸೇನಾಪತಿ ಕಲೆಯ ಅರಿವೂ ಇರಬಹುದು. ವೀಣೆಯ ಪರಿಜ್ಞಾನದ ಜೊತೆಗೆ ಕುದುರೆ ಸವಾರಿಯ ಪರಿಚಯವೂ ಇರಬಹುದು. ಆಗ ನಿನಗೆ ಕುದುರೆಗಳು ಸರಿಯಾದ ಅಥವಾ ತಪ್ಪು ಹತೋಟಿಯಲ್ಲಿರುವುದು ತಿಳಿಯುತ್ತದೆ. ಆದರೆ ನಾನು ನಿನ್ನನ್ನು ಹೀಗೆ ಪ್ರಶ್ನಿಸುತ್ತೇನೆಂದು ಭಾವಿಸು : ಕುದುರೆಗಳು ಸರಿಯಾದ ಹತೋಟಿಯಲ್ಲಿವೆ ಎನ್ನುವುದನ್ನು, ಇಯೋನ್, ಯಾವ ಕಲೆಯ ಸಹಾಯದಿಂದ ನೀನು ಅರಿಯುತ್ತೀಯೆ? ನಿನ್ನ ಸವಾರಿಕೌಶಲದಿಂದಲೇ ಅಥವಾ ವೀಣಾವಾದನಕೌಶಲದಿಂದಲೇ? ನಿನ್ನ ಉತ್ತರ ಏನು?

ಇ. ನನ್ನ ಸವಾರಿ ಕೌಶಲದಿಂದ ಎಂದು ನನ್ನ ಉತ್ತರ.

ಸೋ. ವೀಣಾವಾದಕರ ಯೋಗ್ಯತೆಯನ್ನು ನೀನು ನಿರ್ಣಯಿಸುವಾಗ ಅವರನ್ನು ಒಬ್ಬ ವೀಣಾವಾದಕನಂತೆ ಪರೀಕ್ಷಿಸುತ್ತೀಯೆ, ಕುದುರೆ ಸವಾರನಂತೆ ಅಲ್ಲ ಎಂಬುದನ್ನು ಒಪ್ಪುತ್ತೀಯಷ್ಟೆ?

ಇ. ಹೂಂ.

ಸೋ. ಸೇನಾಪತಿಯ ಕೌಶಲವನ್ನು ನಿರ್ಣಯಿಸುವಾಗ ಅದನ್ನು ಒಬ್ಬ ಸೇನಾಪತಿಯಂತೆ ಪರೀಕ್ಷಿಸುತ್ತೀಯೋ ಅಥವಾ ಒಬ್ಬ ಗಮಕಿಯಂತೆಯೋ?

ಇ. ಅವುಗಳ ನಡುವೆ ನನಗೆ ಯಾವ ವ್ಯತ್ಯಾಸವೂ ಕಾಣಿಸುವುದಿಲ್ಲ.

ಸೋ. ಏನು ನೀನು ಹೇಳುತ್ತಿರುವುದು? ಗಮಕಿಯ ಕಲೆ ಮತ್ತು ಸೇನಾಪತಿಯ ಕಲೆ ಎರಡೂ ಒಂದೇ ಎಂದು ನಿನ್ನ ಅಭಿಪ್ರಾಯವೋ?

ಇ. ಹೌದು. ಒಂದೇ ಎಂದು.

ಸೋ. ಹಾಗಾದರೆ ಒಬ್ಬ ಒಳ್ಳೆಯ ಗಮಕಿಯಾಗಿರುವವನು ಒಳ್ಳೆಯ ಸೇನಾಪತಿಯೂ ಆಗಿರುತ್ತಾನೆಯೇ?

ಇ. ಖಂಡಿತವಾಗಿ, ಸೋಕ್ರೆಟಿಸ್.

ಸೋ. ಒಳ್ಳೆಯ ಸೇನಾಪತಿಯೊಬ್ಬ ಒಳ್ಳೆಯ ಗಮಕಿಯೂ ಆಗಿರುತ್ತಾನೆಯೋ?

ಇ. ಇಲ್ಲ. ಹಾಗೆ ನಾನು ಹೇಳುವುದಿಲ್ಲ.

ಸೊ. ಆದರೆ, ಒಳ್ಳೆಯ ಗಮಕಿಯಾಗಿರುವವನು ಒಳ್ಳೆಯ ಸೇನಾಪತಿಯೂ ಆಗಿರುತ್ತಾನೆಂದು ನೀನು ಹೇಳುತ್ತೀಯೆ.

ಇ. ಧಾರಾಳವಾಗಿ.

ಸೊ. ಗ್ರೀಕ್ ಗಮಕಿಗಳಲ್ಲೆಲ್ಲಾ ಶ್ರೇಷ್ಠನಾದವನು ನೀನೇನೋ?

ಇ. ಅತ್ಯಂತ ಶ್ರೇಷ್ಠ, ಸೋಕ್ರೆಟೀಸ್.

ಸೊ. ಮತ್ತು ನೀನು ಶ್ರೇಷ್ಠ ಸೇನಾಪತಿಯೋ, ಇಯೋನ್?

ಇ. ಖಂಡಿತವಾಗಿ, ಸೊಕ್ರೆಟೀಸ್. ಹೋಮರ್ ನನ್ನ ಗುರುವಾಗಿದ್ದ.

ಸೊ. ಹಾಗಿದ್ದಲ್ಲಿ, ಇಯೋನ್, ಇಡೀ ಗ್ರೀಸಿನಲ್ಲೇ ಅತ್ಯಂತ ಶ್ರೇಷ್ಠ ಸೇನಾಪತಿ ಹಾಗೂ ಅತಿ ಶ್ರೇಷ್ಠ ಗಮಕಿ ಆಗಿರುವ ನೀನು ಒಬ್ಬ ಸೇನಾಪತಿ ಆಗಿರಬಹುದಾಗಿರುವಾಗ ಒಬ್ಬ ಗಮಕಿಯಂತೆ ಸುತ್ತುತ್ತಿರುವುದಕ್ಕೆ ಕಾರಣವಾದರೂ ಏನು? ಗ್ರೀಕರಿಗೆ ಹೊಂಗಿರೀಟದ ಗಮಕಿ ಬೇಕು, ಸೇನಾಪತಿ ಬೇಡ ಎಂದು ನಿನ್ನ ಅಭಿಪ್ರಾಯವೇ?

ಇ. ಏಕೆ ಎನ್ನುವುದಕ್ಕೆ ಕಾರಣ, ಸೋಕ್ರೆಟೀಸ್, ನನ್ನ ನಾಡು ಎಫೆಸಿಯದವರು ಅಥೆನ್ಸಿನ ಸೇವಕರು ಮತ್ತು ಸೈನಿಕರು. ಅವರಿಗೆ ಸೇನಾಧಿಪತಿ ಬೇಕಿಲ್ಲ. ನೀವು ಮತ್ತು ಸ್ಪಾರ್ತ ನನ್ನನ್ನು ಇಟ್ಟುಕೊಳ್ಳುವ ಸಂದರ್ಭ ಇಲ್ಲ, ಏಕೆಂದರೆ ನಿಮಗೆ ನಿಮ್ಮವರೇ ಸಾಕಷ್ಟು ಸೇನಾಧಿಪತಿಗಳಿದ್ದಾರೆ.

ಸೊ. ಪ್ರಿಯ ಇಯೋನ್, ಸಿಜಿಕಸನ ಅಪೊಲ್ಲೊಡೊರಸನ ಹೆಸರನ್ನು ನೀನು ಕೇಳಿಯೇ ಇಲ್ಲವೇ?

ಇ. ಅವನು ಯಾರು?

ಸೊ. ಪರದೇಶೀಯನಾಗಿದ್ದರೂ ಅಥೀನಿಯನರಿಂದ ಅನೇಕ ಬಾರಿ ತಮ್ಮ ಸೇನಾಪತಿಯಾಗಿ ಆರಿಸಲ್ಪಟ್ಟಿರುವ ಒಬ್ಬ. ಅವನ ಜೊತೆಗೆ ಆಂಡ್ರೋಸನ ಫನೊಸ್ತೆನೆಸ್ ಮತ್ತು ಕ್ಲಜೊಮೆನ್ಸೈಯ ಹೆರಾಕ್ಲಿಡೆಸ್ ಕೂಡ ಇದ್ದಾರೆ. ಅವರು ವಿದೇಶೀಯರಾಗಿದ್ದರೂ, ತಮ್ಮ ಅರ್ಹತೆಯನ್ನು ಪ್ರಕಟಿಸಿದ ಅನಂತರ ಅವರನ್ನೂ ಅಥೀನಿಯನರು ತಮ್ಮ ಸೈನ್ಯಗಳ ಆಧಿಪತ್ಯಕ್ಕೆ ನೇಮಿಸಿದರು. ಆದ್ದರಿಂದ ಅವರು ಎಫೆಸಿಯದ ಇಯೋನನ್ನೂ, ಅವನು ತನ್ನ ಅರ್ಹತೆಯನ್ನು ಸ್ಥಾಪಿಸಿಕೊಂಡರೆ, ತಮ್ಮ ಸೇನಾಪತಿಯಾಗಿ ಆರಿಸಿ ಗೌರವಿಸುವುದಿಲ್ಲವೇ? ಎಫೆಸಿಯದವರು ಮೊದಲಿಗೆ ಅಥೀನಿಯನರೇ ಆಗಿರಲಿಲ್ಲವೇ? ಎಫೆಸಿಸ್ ಕೂಡ ಕುಗ್ರಾಮವೇನೂ ಅಲ್ಲವಷ್ಟೆ? ಆದರೆ, ನಿಜವಾಗಿ, ಇಯೋನ್, ಹೋಮರನನ್ನು ಪ್ರಶಂಸಿಸಲು ನಿನಗೆ ಸಾಧ್ಯವಾಗಿರುವುದು ಕಲೆಯ ಮತ್ತು ಜ್ಞಾನದ ಮೂಲಕ ಎಂದು ಹೇಳುವಲ್ಲಿ ನೀನು

ಸರಿಯಾಗಿದ್ದರೆ, ನೀನು ನನ್ನೊಡನೆ ನ್ಯಾಯವಾಗಿ ವರ್ತಿಸುತ್ತಿಲ್ಲ. ಹೋಮರನ ಬಗ್ಗೆ ಅನೇಕ ಅದ್ಭುತ ವಿಷಯಗಳನ್ನು ಅರಿತಿದ್ದೀಯೆಂಬ ಘೋಷಣೆಗಳ, ಅವನ್ನು ನನ್ನೆದುರು ಪ್ರಕಟಿಸುತ್ತೀಯೆಂಬ ಆಶ್ವಾಸನೆಗಳ ಎಲ್ಲದರ ಕೊನೆಯಲ್ಲಿ, ನೀನು ಒಬ್ಬ ಶುದ್ಧ ಮೋಸಗಾರ. ನೀನು ಕೈವಶಮಾಡಿಕೊಂಡಿರುವ ಕಲೆಯನ್ನು ಪ್ರದರ್ಶಿಸುವುದು ಹಾಗಿರಲಿ, ನಾನು ಪದೇ ಪದೇ ಕೇಳಿಕೊಂಡ ಮೇಲೂ ನೀನು ಅದರ ಸ್ವರೂಪವನ್ನು ನನಗೆ ವಿವರಿಸಿಯೂ ಇಲ್ಲ. ಅಕ್ಷರಶಃ ನಿನಗೆ ಪ್ರೊಟ್ಯೂಸನಷ್ಟು ರೂಪಾಂತರಗಳಿವೆ. ಈಗ ನೀನು ಸುತ್ತ ತಿರುಗಿ, ನುಣುಚಿಕೊಳ್ಳುತ್ತಾ ಎಲ್ಲಾ ತರದ ಆಟಗಳನ್ನೂ ಆಡುತ್ತಿದ್ದೀಯೆ. ಪ್ರೊಟ್ಯೂಸನಂತೆ ಏಕಕಾಲದಲ್ಲಿ ಅನೇಕ ವ್ಯಕ್ತಿಗಳಾಗುತ್ತಿದ್ದೀಯೆ. ಕೊನೆಯಲ್ಲಿ, ನಿನ್ನ ಹೋಮರಿಕ್ ಪಾಂಡಿತ್ಯದ ಪ್ರದರ್ಶನದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸೇನಾಪತಿಯ ವೇಷದಲ್ಲಿ ನನ್ನಿಂದ ಜಾರಿಕೊಂಡು ಬಿಟ್ಟಿದ್ದೀಯೆ. ನಿನಗೆ ಕಲೆ ಇದ್ದರೆ, ಆಗ, ಹೋಮರನನ್ನು ಪ್ರದರ್ಶಿಸುತ್ತೇನೆಂದು ಕೊಟ್ಟ ಮಾತನ್ನು ನೀನು ಸುಳ್ಳಾಗಿಸಿರುವುದರಿಂದ, ನೀನು ನಾನು ಹೇಳುತ್ತಿದ್ದಂತೆ, ನನ್ನ ಸಂಗಡ ನ್ಯಾಯವಾಗಿ ವರ್ತಿಸುತ್ತಿಲ್ಲ. ಆದರೆ, ನಾನು ನಂಬಿರುವಂತೆ, ನಿನಗೆ ಕಲೆ ಇಲ್ಲ, ಆದರೆ ಹೋಮರನ ವಿಷಯವಾಗಿ ಈ ಎಲ್ಲ ಸುಂದರ ಮಾತುಗಳನ್ನು ಅರಿವಿಲ್ಲದೆ, ಅವನ ಸ್ಫೂರ್ತಿಯ ಪ್ರಭಾವಕ್ಕೊಳಗಾಗಿ ಆಡುತ್ತಿದ್ದರೆ, ಆಗ ಮೋಸಗಾರಿಕೆಯಿಂದ ನಿನ್ನನ್ನು ಪಾರುಮಾಡುತ್ತೇನೆ. ಮತ್ತು ನಿನ್ನನ್ನು ಆವಿಷ್ಟ ಎಂದಷ್ಟೇ ಹೇಳುತ್ತೇನೆ. ನಿನ್ನನ್ನು ಎಂಥವನೆಂದು ಭಾವಿಸುವುದು ನಿನಗೆ ಸಮ್ಮತ? ಮೋಸಗಾರನೆಂದೋ ಆವಿಷ್ಟನೆಂದೋ?

ಇ. ಈ ಎರಡು ವಿಕಲ್ಪಗಳ ನಡುವೆ ಬಹಳ ವ್ಯತ್ಯಾಸವಿದೆ, ಸೋಕ್ರೆಟೀಸ್. ಆದರೆ ಅನೇಕ ರೀತಿಯಲ್ಲಿ ಆವೇಶ ಹೆಚ್ಚು ಉತ್ತಮವಾದುದು.

ಸೋ. ಹಾಗಾದರೆ, ಇಯೋನ್, ನಾನು ಹೆಚ್ಚು ಉತ್ತಮವಾದ ವಿಕಲ್ಪವನ್ನು ಪರಿಗ್ರಹಿಸುತ್ತೇನೆ; ಮತ್ತು ಹೋಮರನನ್ನು ಹೊಗಳುವಾಗ ನಿನಗಿರುವುದು ಆವೇಶ, ಕಲೆ ಅಲ್ಲ ಎನ್ನುತ್ತೇನೆ.

ಅನುವಾದ: ಎನ್. ಬಾಲಸುಬ್ರಹ್ಮಣ್ಯ

# ಕಮ್ಮಟದ ಕಿಡಿಗಳು

## ಪಂಪನ ತಮ್ಮ ಜಿನವಲ್ಲಭನ ಶಿಲಾಶಾಸನ

ಆದಿಕವಿ ಪಂಪನ ತಮ್ಮನಾದ ಜಿನವಲ್ಲಭನ ಈ ಮಹತ್ವದ ಶಾಸನವನ್ನು ಡಾ. ಎನ್. ವೆಂಕಟರಮಣಯ್ಯನವರು ತೆಲುಗು ಮಾಸಪತ್ರಿಕೆಯಾದ 'ಭಾರತಿ'ಯ ೧೯೬೭ರ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಮೊಟ್ಟಮೊದಲು ಪ್ರಸಿದ್ಧಪಡಿಸಿದ್ದಾರೆ. ಅವರು ತಮ್ಮ ಲೇಖನದ ಜೊತೆಗೆ ಪ್ರಕಟಿಸಿದ ಶಾಸನದ ಪಡಿಯಚ್ಚುಗಳು (facsimiles) ಅಸ್ಪಷ್ಟವೂ ಅಸಮಾಧಾನಕರವೂ ಇದ್ದುದರಿಂದ ಶಾಸನದ ಮೂಲ ಪಾಠಕ್ರಮವನ್ನು ಗುರುತಿಸಿ ಪರೀಕ್ಷಿಸುವದು ಲಿಪಿಶಾಸ್ತ್ರಜ್ಞರಿಗೆ ಸಾಧ್ಯವಾಗುವಂತಿಲ್ಲ. ಡಾ. ವೆಂಕಟರಮಣಯ್ಯನವರು ಕೊಟ್ಟಿರುವ ಪಾಠವನ್ನೇ ಆಧಾರವಾಗಿಟ್ಟುಕೊಂಡು ಈ ಶಿಲಾಶಾಸನದ ಬಗ್ಗೆ ಕನ್ನಡದಲ್ಲಿ ಕೆಲವು ಲೇಖನಗಳು ಆಗಲೇ ಪ್ರಕಟವಾಗಿರುತ್ತವೆ.[1] ೧೯೬೮ನೆಯ ವರ್ಷದ ಡಿಶೆಂಬರ್ ತಿಂಗಳ ೨೬ ಮತ್ತು ೨೭ರಂದು ಪ್ರಸ್ತುತ ಶಾಸನವಿದ್ದ ಸ್ಥಳಕ್ಕೆ ಭೇಟಿಯಿತ್ತು ಶಾಸನದ ಮೂಲಪಾಠವನ್ನು ಅಲ್ಲಿಯೇ ಪರೀಕ್ಷಿಸಿ ನೋಡುವ ಸದವಕಾಶವು ನನಗೆ ದೊರೆಯಿತು. ಅದರಿಂದ ಡಾ. ವೆಂಕಟರಮಣಯ್ಯನವರ ಪಾಠಕ್ರಮದಲ್ಲಿ ಕೆಲವು ದೋಷಗಳಿರುತ್ತವೆಂಬುದು ಕಂಡುಬಂದಿದೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಶಾಸನದ ಪೂರ್ಣಪಾಠವನ್ನು ಅದರ ಬಗ್ಗೆ ವಿಸ್ತೃತವಾದ ಲೇಖನವನ್ನು ಸರಿಯಾದ ಪಡಿಯಚ್ಚುಗಳೊಡನೆ ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

ಮೇಲೆ ಹೇಳಿದ ಕನ್ನಡ ಲೇಖನಗಳಲ್ಲಿ ಪಂಪನ ತಮ್ಮ ಜಿನವಲ್ಲಭನ ವಂಶಾವಳಿಯನ್ನು ಕುರಿತು ವಿವೇಚಿಸಲಾಗಿದೆ. ಅದರ ಬಗ್ಗೆ ಡಾ. ವೆಂಕಟರಮಣಯ್ಯನವರೂ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದ ಶಾಸನದ ಪಾಠವನ್ನು ಅವರು ಈ ರೀತಿಯಾಗಿ ಓದಿದ್ದಾರೆ — "....ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೊಳ್ಪೊಲದಣ್ಣಿಗೆಜ್ಞ೩ಿಯ ಜೋಯಿಸ ಸಿಂಘನ ಮರ್ಮ [೦*] ವಬ್ಬಣಬ್ಬೆಯ ಮಗಂ....ಜಿನವಲ್ಲಭಂ". ಎರಡನೆಯ ಮರ್ಮ ಶಬ್ದದ ಮುಂದೆ

---

[1] Journal of the Karnatak University (Humanities), Vol. XI, 1967; 'ಕನ್ನಡ ನುಡಿ'ಯ ೧೯೬೮ನೆಯ ವರ್ಷದ ಮಾರ್ಚ್, ಏಪ್ರಿಲ್-ಮೇ ಹಾಗೂ ಆಗಸ್ಟ್ ಸಂಚಿಕೆಗಳು; 'ಪ್ರಜಾವಾಣಿ' ಪತ್ರಿಕೆಯ ದಿನಾಂಕ ೮-೧೨-೧೯೬೮ರ ಸಂಚಿಕೆ ಇವುಗಳನ್ನು ನೋಡಿರಿ. ಅಲ್ಲದೆ 'ಪ್ರಬುದ್ಧ ಕರ್ಣಾಟಕ'ದ ಸಂಪುಟ ೫೦, ಸಂಚಿಕೆ ೩ರಲ್ಲಿ ಡಾ. ವೆಂಕಟರಮಣಯ್ಯನವರ ತೆಲುಗು ಲೇಖನದ ಕನ್ನಡ ಅನುವಾದವನ್ನು ಪ್ರಕಟಿಸಲಾಗಿದೆ.

ಅನುಸ್ವಾರವನ್ನು ಕಲ್ಪಿಸಿ ಸೇರಿಸಿದ್ದಾರೆ. ಅವರ ಅಭಿಪ್ರಾಯದಂತೆ ಪಿತೃಕುಲದಲ್ಲಿ ಜಿನವಲ್ಲಭನು ಅಭಿಮಾನಚನ್ನ‌ನ ಮೊಮ್ಮಗನೂ ಭೀಮಪ್ಪಯ್ಯನ ಮಗನೂ ಆಗಿದ್ದನು. ಅದರಂತೆ ಮಾತೃಕುಲದಲ್ಲಿ ಅವನು ಜೋಯಿಸ ಸಿಂಘನ ಮೊಮ್ಮಗನೂ ವಬ್ಬಣಬ್ಬೆಯ ಮಗನೂ ಆಗಿದ್ದನೆಂದು ಅವರು ಭಾವಿಸಿದ್ದಾರೆ. ಅಂದರೆ ಭೀಮಪಯ್ಯನು ಅಭಿಮಾನ ಚನ್ನ‌ನ ಮಗನೆಂದು ಭಾವಿಸಿದಂತಾಯಿತು. ಈ ಸಂಬಂಧವು ಪಂಪ ಭಾರತದಲ್ಲಿ ಕೊಟ್ಟಿರುವ ಜಿನವಲ್ಲಭನ ಅಣ್ಣನಾದ ಪಂಪನ ವಂಶಾವಳಿಗೆ ವ್ಯತಿರಿಕ್ತ ವಾಗುವದೆಂದೂ ಡಾ. ವೆಂಕಟರಮಣಯ್ಯನವರು ಹೇಳಿದ್ದಾರೆ. ಯಾಕಂದರೆ ಅಲ್ಲಿ ಪಂಪನ ತಂದೆಯಾದ ಅಭಿರಾಮದೇವ ಅಥವಾ ಭೀಮನು (ಅಂದರೆ ಶಾಸನದ ಭೀಮಪಯ್ಯನು) ಅಭಿಮಾನ ಚನ್ನ‌ನ ಮೊಮ್ಮಗನೆಂದೂ ಕೊಮರಯ್ಯನ ಮಗನೆಂದೂ ಹೇಳಿದೆ. ಪಂಪ ಭಾರತದಲ್ಲಿ ಕವಿಯ ಮಾತೃಕುಲದ ಪೂರ್ವಜರ ಉಲ್ಲೇಖವಿಲ್ಲ.

ಕನ್ನಡ ಲೇಖನಗಳಲ್ಲಿ ಜಿನವಲ್ಲಭನ ತಾಯಿಯ ಹೆಸರಿನ ಬಗ್ಗೆ—ವಬ್ಬಣಬ್ಬೆ, ಪಬ್ಬಣಬ್ಬೆ, ಅಬ್ಬಣಬ್ಬೆ—ಮುಂತಾಗಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಮತ್ತು ಮೇಲೆ ಉದ್ಧರಿಸಿದ ಡಾ. ವೆಂಕಟರಮಣಯ್ಯನವರ ಪಾಠಕ್ರಮದಲ್ಲಿ ಕೆಲವು ತಿದ್ದು ಪಡಿಗಳನ್ನೂ ಸೂಚಿಸಲಾಗಿದೆ. ಅವುಗಳಲ್ಲಿ ಶ್ರೀ ಕಲಬುರ್ಗಿ ಅವರು ಸೂಚಿಸಿರುವ ತಿದ್ದುಪಡಿ ಗಮನಾರ್ಹವಾಗಿದೆ. ನಾನು ಓದಿರುವಂತೆ ಈ ಭಾಗದ ಶಾಸನದ ಮೂಲ ಪಾಠವು ಈ ರೀತಿಯಾಗಿರುತ್ತದೆ.– "....ಅಭಿಮಾನಚನ್ನ‌ನ ಮರ್ಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ.... ಜಿನವಲ್ಲಭಂ." ಇಲ್ಲಿ ಡಾ. ವೆಂಕಟರಮಣಯ್ಯನವರು ಓದಿದ 'ವಬ್ಬಣಬ್ಬೆ' ಶಬ್ದದ ಮೊದಲ ನೆಯ ಅಕ್ಷರವು 'ವ'ಕಾರವಾಗಿರದೆ 'ಳ'ಕಾರವಾಗಿರುತ್ತದೆಂದು ನಿಸ್ಸಂದೇಹವಾಗಿ ಹೇಳ ಬಹುದು. ಮತ್ತು ಇಲ್ಲಿ ಪಾಠವನ್ನು 'ಮರ್ಮಳಬ್ಬಣಬ್ಬೆ' ಎಂದು ಓದಬೇಕು. ಈ ಪಾಠವು ಯಾವ ತಿದ್ದುಪಡಿಯ ಅವಶ್ಯಕತೆಯೂ ಇಲ್ಲದೆ ಶ್ರೀ ಕಲಬುರ್ಗಿಯವರ ಸೂಚನೆ ಯನ್ನು ಸಮರ್ಥಿಸುತ್ತದೆ. ಅಂದರೆ ಜಿನವಲ್ಲಭನು ಮಾತೃಕುಲದಲ್ಲಿ ಜೋಯಿಸ ಸಿಂಘನ ಯನ್ನು ಮೊಮ್ಮಗಳಾದ ಅಬ್ಬಣಬ್ಬೆಯ ಮಗನೆಂದೂ ಅದರಂತೆ ಪಿತೃಕುಲದಲ್ಲಿ ಅಭಿಮಾನ ಚನ್ನ‌ನ ಮೊಮ್ಮಗನಾದ ಭೀಮಪಯ್ಯನ ಮಗನೆಂದೂ ಪ್ರಸ್ತುತ ಶಾಸನವು ಸ್ಪಷ್ಟ ಪಡಿಸುತ್ತದೆ. ಇಲ್ಲಿಯ 'ಅಭಿಮಾನಚನ್ನ‌ನ ಮರ್ಮ್ಮಂ ಭೀಮಪಯ್ಯನ' ಎಂಬ ವಾಕ್ಯದಲ್ಲಿರುವ 'ಮರ್ಮ್ಮಂ' ಶಬ್ದವನ್ನು ಭೀಮಪ್ಪಯ್ಯನಿಗೇ ಅನ್ವಯಿಸಬೇಕಲ್ಲದೆ ದೂರಾನ್ವಯದಿಂದ ಜಿನವಲ್ಲಭನಿಗಲ್ಲ. ಶಾಸನೋಕ್ತ ಈ ವಂಶಾವಳಿಯು ಡಾ. ವೆಂಕಟರಮಣಯ್ಯನವರು ಭಾವಿಸಿದಂತೆ ಪಂಪಭಾರತದಲ್ಲಿ ನಿರ್ದೇಶಿಸಿದ ವಂಶಾವಳಿಗೆ ವ್ಯತಿ ರಿಕ್ತವಾಗದೆ ಹೊಂದಾಣಿಕೆಯೇ ಆಗುತ್ತದೆ. ಯಾಕಂದರೆ ಅಲ್ಲಿಯೂ ಅಭಿರಾಮದೇವ ಅಥವಾ ಭೀಮನನ್ನು (ಪಂಪನ ತಂದೆ) ಅಭಿಮಾನಚನ್ನ‌ನ ಮಗನಾದ ಕೊಮರಯ್ಯನ ಮಗನೆಂದೇ ಅರ್ಥಾತ್ ಅಭಿಮಾನಚನ್ನ‌ನ ಮೊಮ್ಮಗನೆಂದೇ ಹೇಳಲಾಗಿದೆ. ಪ್ರಸ್ತುತ ಶಾಸನದಲ್ಲಿ ಜಿನವಲ್ಲಭನು ತನ್ನ ತಂದೆಯ ತಂದೆಯ ಅರ್ಥಾತ್ ಪಿತಾಮಹನ ಹೆಸರನ್ನೂ

ಅದರಂತೆ ತನ್ನ ತಾಯಿಯ ತಂದೆಯ ಅರ್ಥಾತ್ ಮಾತಾಮಹನ ಹೆಸರನ್ನೂ ಹೇಳಿರುವದಿಲ್ಲ. ಆದರೆ ಅವನ ಪಿತಾಮಹನ ಹೆಸರು ಕೊಮರಯ್ಯನೆಂಬುದು ಪಂಪ ಭಾರತದಿಂದ ತಿಳಿದಿದ್ದು ಮಾತಾಮಹನ ಹೆಸರೇನಿತ್ತೆಂಬುದು ಮಾತ್ರ ಇದುವರೆಗೆ ಗೊತ್ತಾಗಿಲ್ಲ. ಅಂತೂ ಪಂಪಭಾರತ ಮತ್ತು ಜಿನವಲ್ಲಭನ ಶಾಸನದಿಂದ ಪಂಪ–ಜಿನವಲ್ಲಭರ ವಂಶಾವಳಿಯನ್ನು ಈ ರೀತಿಯಾಗಿ ಕಾಣಿಸಬಹುದು :

ಮಾಧವ ಸೋಮಯಾಜಿ
|
ಅಭಿಮಾನಚನ್ದ್ರ          ಜೋಯಿಸ ಸಿಂಘ
|                              |
ಕೊಮರಯ್ಯ                    ×
|                              |
ಭೀಮಪಯ್ಯ       =       ಅಬ್ಬಣಬ್ಬೆ
|
ಪಂಪ                        ಜಿನವಲ್ಲಭ

ಇನ್ನೊಂದು ವಿಷಯ : ಡಾ. ವೆಂಕಟರಮಣಯ್ಯನವರು ಜಿನವಲ್ಲಭನ ಜೈನಗುರುಗಳ ವಿಷಯವನ್ನು ತಿಳಿಸುವ ಭಾಗವನ್ನು "ಕೊಣ್ಡಕುನ್ದೆಯ ದೇಸಿಗಗಣದ ಪೊತ್ತಗೆಯ ಬಳಿಯ ಪಣ್ಡರಂಗವಲ್ಲಿಯ ಜಯ[ಂ]ಗೊಣ್ಡ ಸಿದ್ಧಾನ್ತಭಟಾರರ ಗುಡ್ಡಂ ಜಿನವಲ್ಲಭಂ" ಎಂದು ಓದಿದ್ದಾರೆ. ಆದರೆ ಶಾಸನದ ಮೂಲಪಾಠವನ್ನು ಪರೀಕ್ಷಿಸಿದರೆ ಈ ಗುರುಗಳ ಹೆಸರು 'ಜಯಣನ್ದಿ ಸಿದ್ಧಾನ್ತ ಭಟಾರ' ಎಂದಾಗಿದ್ದು 'ಜಯಂಗೊಣ್ಡ' ಎಂಬ ಪಾಠವು ಸರಿಯಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಜಯಣನ್ದಿಯು ಪಂಪನ ಆದಿಪುರಾಣದ ೧ನೆಯ ಆಶ್ವಾಸದ ೧೩ನೆಯ ಪದ್ಯದಲ್ಲಿ ಉದ್ಧರಿಸಲ್ಪಟ್ಟ ಕವಿಯ ಗುರುಗಳಾದ ದೇವೇಂದ್ರಮುನಿಯ ಶಿಷ್ಯನಾಗಿದ್ದ ಜಯನನ್ದಿಯೇ ಆಗಿರಬೇಕು. ಇದರಿಂದ ಪಂಪ-ಜಿನವಲ್ಲಭರು ಒಂದೇ ಗುರುಕುಲದಲ್ಲಿದ್ದರೆಂದು ತಿಳಿಯುತ್ತದೆ.

—ಜಿ. ಎಸ್. ಗಾಯಿ

## ಉದ್ದಂಡಷಟ್ಪದಿ : ಒಂದು ಟಿಪ್ಪಣಿ

'ಪ್ರಬುದ್ಧ ಕರ್ಣಾಟಕ'ದ ಪ್ಲವಂಗಸಂವತ್ಸರದ ಆಷಾಢಸಂಚಿಕೆಯಲ್ಲಿ (೪೯-೨) ಪ್ರಕಟವಾಗಿರುವ 'ಉದ್ದಂಡಷಟ್ಪದಿಯ ಎರಡು ಮುಖಗಳು' ಎಂಬ ಲೇಖನದಲ್ಲಿ ಶ್ರೀ ಎಸ್. ಎನ್. ಕೃಷ್ಣಜೋಯಿಸರು 'ಉದ್ದಂಡಷಟ್ಪದಿ'ಯ ಮೇಲೆ ಹೊಸ ಬೆಳಕು ಹಾಯಿಸಿದ್ದಾರೆ. ಅವರ ಒಂದೆರಡು ಅಭಿಪ್ರಾಯಗಳನ್ನು ಇಲ್ಲಿ ವಿಚಾರಮಾಡಿ, ಒಂದು ಊಹೆಯನ್ನು ಮುಂದಿಡಬಹುದಾಗಿದೆ.

'ಉದ್ದಂಡಷಟ್ಪದಿ' ಚತುರ್ಮಾತ್ರಾಗಣಘಟಿತವೆಂಬುದು ಇದುವರೆಗೆ ಎಲ್ಲರಿಗೂ ಗ್ರಾಹ್ಯವಾಗಿರುವ ಸಂಗತಿ. ಈ ಷಟ್ಪದಿಯ ಒಂದು, ಎರಡು, ನಾಲ್ಕು, ಐದನೆಯ

ಚರಣಗಳಲ್ಲಿ ನಾಲ್ಕು ಮಾತ್ರೆಯ ಐದು ಗಣಗಳೂ ಮೂರು, ಆರನೆಯ ಚರಣಗಳಲ್ಲಿ ನಾಲ್ಕು ಮಾತ್ರೆಯ ಎಂಟು ಗಣಗಳೂ ಬರುತ್ತವೆ ಎಂದು ಹೇಳುವುದು ಪದ್ಧತಿ. ಆದರೆ ಇದು ಕೃಷ್ಣಜೋಯಿಸರಿಗೆ ಸಮ್ಮತವಾಗಿ ತೋರಿಲ್ಲ. ಹಿರಿಯ ಚರಣಗಳಲ್ಲಿ ಕಿರಿಯ ಚರಣಗಳ ಒಂದೂವರೆಯಷ್ಟು ಗಣಗಳೂ ಒಂದು ಗುರುವೂ ಇರಬೇಕಾದುದು ಎಲ್ಲ ಷಟ್ಪದಿಗಳ ಲಕ್ಷಣ; 'ಉದ್ದಂಡಷಟ್ಪದಿ' ಈ ಲಕ್ಷಣಕ್ಕೆ ಹೊರತಾಗಿದೆ ಎಂಬುದು ಅವರ ಆಕ್ಷೇಪಣೆ. ಆದ್ದರಿಂದ, ಅವರು ಸಾಮಾನ್ಯಷಟ್ಪದೀಲಕ್ಷಣಕ್ಕೆ 'ಉದ್ದಂಡ ಷಟ್ಪದಿ'ಯನ್ನು ಅಳವಡಿಸುವ ಸಲುವಾಗಿ, ಅದಕ್ಕೆ ಬೇರೆಯ ರೀತಿಯಲ್ಲಿ ಪ್ರಸ್ತಾರ ಹಾಕಿದ್ದಾರೆ. 'ಉದ್ದಂಡಷಟ್ಪದಿ'ನಾಲ್ಕು ನಾಲ್ಕು ಮಾತ್ರೆಗಳ ಗಣಗಳಿಂದ ಆದುದಲ್ಲ; ೪-೬-೪-೬ ಎಂಬಂತೆ ಅದರ ಗಣವಿನ್ಯಾಸವಿರಬೇಕು ಎಂಬುದು ಅವರ ಪ್ರತಿಪಾದನೆ. ಇದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನು ಯೋಚಿಸಬೇಕಾಗಿದೆ.

ಡಾ. ಡಿ. ಎಸ್. ಕರ್ಕಿಯವರು 'ಕನ್ನಡ ಛಂದೋವಿಕಾಸ'ದಲ್ಲಿ, "ಅದು (ಉದ್ದಂಡಷಟ್ಪದಿ) ಗಣದಿಂದ ಗಣಕ್ಕೆ ಒಂದೇ ಸಮನೆ ಉದ್ದಂಡವಾಗಿ ಉರುಳುತ್ತ ಹೋಗುತ್ತದೆ. ಆದುದರಿಂದ ಅದನ್ನು ಷಟ್ಪದಿಯ ಪಟ್ಟಿಗೆ ಜೋಡಿಸದೆ ಇರುವುದೇ ಒಳಿತು" ಎಂದಿರುವುದನ್ನೂ ನೆನಪುಮಾಡಿಕೊಳ್ಳಬಹುದು. ಅವರ ಅಭಿಪ್ರಾಯವೂ ಪರಿಶೀಲನಾರ್ಹ.

ಷಟ್ಪದಿಯ ಮೂರು, ಆರನೆಯ ಚರಣಗಳಲ್ಲಿ ಹಿಂದಿನ ಚರಣಗಳ ಒಂದೂವರೆ ಯಷ್ಟು ಗಣಗಳೂ ಒಂದು ಗುರುವೂ ಇರಬೇಕು ಎಂಬ ನಿಯಮ ಯಾವ ಛಂದೋಗ್ರಂಥ ದಲ್ಲಿ ಉಕ್ತವಾಗಿದೆ? ಅದು ನಮ್ಮ ಗ್ರಹಿಕೆಯಷ್ಟೆ. ಕುಮುದೇಂದುವಿನ ಪರಿವರ್ಧಿನೀ ಷಟ್ಪದಿಯ ಕೊನೆಯ ಚರಣದಲ್ಲಿ ಮಾತ್ರೆಗಳ ಸಂಖ್ಯೆ ಅಧಿಕವಾಗಿರುವುದನ್ನು ಗಮನಿಸ ಬಹುದು. ಅಲ್ಲಿ ಕವಿ ಒಂದು ಪ್ರಯೋಗಮಾಡಿದ್ದಾನೆಂದು ತಿಳಿಯಬೇಕಾಗುತ್ತದೆ. ರಾಘವಾಂಕನೂ 'ಉದ್ದಂಡಷಟ್ಪದಿ'ಯಲ್ಲಿ ಪ್ರಯೋಗ ನಡೆಸಿ ಸಾಂಪ್ರದಾಯಿಕವಾದ ಚೌಕಟ್ಟನ್ನು ಉಲ್ಲಂಘಿಸಿದ್ದಾನೆಂದು ತಿಳಿಯಬಾರದೇಕೆ? ಆದ್ದರಿಂದ, ೪-೬ರ ಲಯವನ್ನು 'ಉದ್ದಂಡಷಟ್ಪದಿ'ಯಲ್ಲಿ ಕಾಣಲು ಶ್ರೀ ಜೋಯಿಸರು ಮಾಡಿರುವ ಯತ್ನ ಅನಗತ್ಯವಾಗಿ ಕಾಣುತ್ತದೆ. ಅದರಲ್ಲಿ ನಾಲ್ಕು ಮಾತ್ರೆಯ ಲಯವೇ ಸಹಜವಾದುದು; ೪-೬ರ ಲಯ ಕೃತಕವಾಗಿ, ಪ್ರಯತ್ನಪೂರ್ವಕವಾಗಿ ತೋರುತ್ತದೆ. ನಾಲ್ಕು ಮತ್ತು ಆರು ಮಾತ್ರೆಯ ಗಣಗಳನ್ನು ಲಿಕ್ಕಾಚಾರದಂತೆ ಕಷ್ಟಪಟ್ಟು ಹೊರಡಿಸಲಾಗಿದೆಯೆ ಹೊರತು ಅವು ಸಹಜವಾಗಿ, ಕಿವಿಗೊಪ್ಪುವಂತೆ ಮೂಡಿಬಂದಿಲ್ಲವೆಂಬುದು ಸ್ಪಷ್ಟ. ಮಾತ್ರಾವೃತ್ತವಾದ ಷಟ್ಪದಿಯಲ್ಲಿ ಈರೀತಿ ಗಣಗಳನ್ನು ಅಳತೆಮಾಡಿ ಕತ್ತರಿಸಿ ಹೊರಡಿಸುವುದಾದರೆ, ಅಕ್ಷರವೃತ್ತಗಳಿಗೂ ಇದಕ್ಕೂ ವ್ಯತ್ಯಾಸವೇನು ಉಳಿಯಿತು? ಆದಕಾರಣ, ಕೃಷ್ಣಜೋಯಿಸರ ಪ್ರಯತ್ನ ಸ್ವಾರಸ್ಯಕರವಾಗಿದ್ದರೂ ಅದು ಮೂಲಭೂತ ವಾಗಿಯೆ ವಿಫಲವಾಗುತ್ತದೆ; 'ಉದ್ದಂಡಷಟ್ಪದಿ' ನಾಲ್ಕುಮಾತ್ರೆಯ ಗಣಗಳಿಂದ ನಿರ್ಮಿತವಾದುದೆಂಬ ಸ್ವೀಕೃತಸಿದ್ಧಾಂತಕ್ಕೆ ಅದರಿಂದ ಬಾಧಕವಿಲ್ಲ.

'ಷಟ್ಪದಿ' ಎಂಬ ಹೆಸರಿನಲ್ಲಿ ಸೂಚಿತವಾಗುವ ಪ್ರಧಾನಲಕ್ಷಣವೆಂದರೆ, ಯಾವುದೇ ಷಟ್ಪದಿಯಲ್ಲಿ ಆರು ಪಾದಗಳಿರಬೇಕೆನ್ನುವುದು ; ಉಳಿದುದೆಲ್ಲ ಆಮೇಲೆ. 'ಉದ್ದಂಡ ಷಟ್ಪದಿ'ಯಲ್ಲಿ ಆರು ಪಾದಗಳಿವೆ; ಅಲ್ಲದೆ, ಅದು ಪರಂಪರಾಗತವಾಗಿ ಷಟ್ಪದಿ ಎಂದೆ ಕರೆಯಿಸಿಕೊಳ್ಳುತ್ತ ಬಂದಿದೆ. ಆದ್ದರಿಂದ ಯಾವುದೇ ಕಾರಣಕ್ಕಾಗಿ ಅದನ್ನು ಷಟ್ಪದಿಗಳ ಪಂಕ್ತಿಯಿಂದ ಬಹಿಷ್ಕರಿಸುವ ಹಕ್ಕು ನಮಗೆ ಇಲ್ಲವೆಂದು ತೋರುತ್ತದೆ. ಉಳಿದ ಷಟ್ಪದಿಗಳಿಗಿಂತ 'ಉದ್ದಂಡಷಟ್ಪದಿ' ವಿಭಿನ್ನವೆಂಬುದನ್ನು ಒಪ್ಪಬಹುದು ; ಆದರೆ ಷಟ್ಪದಿಯೆ ಅಲ್ಲ ಎನ್ನಲಾದೀತೆ? ಒಂದರ್ಥದಲ್ಲಿ—ಮಾತ್ರೆಗಳ ಒಟ್ಟು ಸಂಖ್ಯೆಯ ದೃಷ್ಟಿಯಿಂದ–ಅದನ್ನು ವಾರ್ಧಕಷಟ್ಪದಿಯ ಒಂದು ಪ್ರಭೇದವೆಂದಿಟ್ಟುಕೊಳ್ಳಬಹುದು; ಆದರೆ ಅನೇಕ ಕವಿಗಳು ಭ್ರಮಿಸಿದಂತೆ ಅದೇ ವಾರ್ಧಕವಲ್ಲ.

ಈಗ 'ಉದ್ದಂಡಷಟ್ಪದಿ'ಯ ಮೂಲವನ್ನು ಕುರಿತು ಒಂದು ಊಹೆ—ಇದಕ್ಕೆ ಹೆಸರಿನಲ್ಲಿ ಅವಕಾಶವಿದೆ: 'ಉದ್ದಂಡ'ಕ್ಕೂ 'ದಂಡಕ'ವೆಂಬ ಪ್ರಕಾರಕ್ಕೂ ಏನಾದರೂ ಸಂಬಂಧವಿದೆಯೆ? ಇರುವುದು ಸಾಧ್ಯ. ದಂಡಕದಲ್ಲಿ ಪಾದವಿಭಾಗವಿರುವುದಿಲ್ಲ ; ಗಣಗಳು ದಂಡಾಕಾರವಾಗಿ ಉರುಳುತ್ತಹೋಗುತ್ತವೆ. 'ಉದ್ದಂಡಷಟ್ಪದಿ'ಯಲ್ಲಿ ಪಾದವಿಭಾಗವಿದ್ದರೂ ಅದು ಔಪಚಾರಿಕ; ಗಣಗಳು ಪಾದಾಂತ್ಯದಲ್ಲಿ ನಿಲ್ಲುವುದಿಲ್ಲ, ಅವಿರತವಾಗಿ ಹರಿಯುತ್ತವೆ. ಆದ್ದರಿಂದ, 'ಉದ್ದಂಡಷಟ್ಪದಿ' ಚತುರ್ಮಾತ್ರಾಗಣವುಳ್ಳ ದಂಡಕದಿಂದ ಜನ್ಯವೆ ಎಂಬುದು ವಿಚಾರಯೋಗ್ಯವಾಗಿದೆ. ಈ ದೃಷ್ಟಿಯಿಂದ ಅದು ಷಟ್ಪದಿಯಲ್ಲ, ದಂಡಕ ಎಂದು ವಾದಿಸಬಹುದೊ ಏನೊ. "ಅದು ಗಣದಿಂದ ಗಣಕ್ಕೆ ಒಂದೇ ಸಮನೆ ಉದ್ದಂಡವಾಗಿ ಉರುಳುತ್ತಹೋಗುತ್ತದೆ" ಎಂದಿರುವಲ್ಲಿ ಡಾ. ಕರ್ಕಿಯವರು ಅದರ ಮೂಲದ ಬಗೆಗೆ ಪ್ರಾಯಶಃ ಸತ್ಯವನ್ನು ಎಡವಿದ್ದಾರೆ, ಆದರೆ ಹಿಡಿದಿಲ್ಲ ಎನಿಸುತ್ತದೆ.

ಆರು–ಮಾತ್ರೆಯ ಗಣಗಳ ಕಲ್ಪನೆಯನ್ನಿಟ್ಟುಕೊಂಡರೆ 'ಉದ್ದಂಡ' ಎಂಬ ಹೆಸರೂ ಸಾರ್ಥಕವಾಗುತ್ತದೆ ಎನ್ನುತ್ತಾರೆ ಕೃಷ್ಣ ಜೋಯಿಸರು. ಆದರೆ ಅಲ್ಲಿ ಆರು ಮಾತ್ರೆಯ (ಎಂದರೆ ೪-೬) ಲಯಕ್ಕೆ ಅವಕಾಶವೇ ಇಲ್ಲವಲ್ಲ. ಬೇರೆಯೇ ಒಂದು ಅರ್ಥದಲ್ಲಿ—ದಂಡಕದ ಸಂಬಂಧವನ್ನು ಸೂಚಿಸುವುದರ ಜೊತೆಗೆ—'ಉದ್ದಂಡ'ವೆಂಬ ಹೆಸರು ಉಚಿತವಾಗುವುದನ್ನು ನೋಡಬಹುದು. ಅದರ ರಭಸಪೂರ್ಣವಾದ ನಡೆ ನಿಜವಾಗಿಯೂ ಉದ್ದಂಡವಾಗಿ ತೋರುತ್ತದೆ ; ರಾಘವಾಂಕ ಅದರ ಮೂಲಕ ನಿರೂಪಿಸಿದ ವಸ್ತುವೂ ಉದ್ದಂಡವೇ! ವೀರಭದ್ರನ ಆವೇಶಾಟೋಪಗಳಿಗೆ ತಕ್ಕ ಛಂದಸ್ಸು ಈ 'ಉದ್ದಂಡ ಷಟ್ಪದಿ'! ರಾಘವಾಂಕನ ಕೈಯಲ್ಲಿ, ಆ ವಸ್ತುವಿಗೆ ಮಾತ್ರ ಒಪ್ಪುವ ಛಂದಸ್ಸದು. ಆದ್ದರಿಂದಲೆ ಮತ್ತಾವ ಕವಿಯೂ ಅದನ್ನು ರಾಘವಾಂಕನಿಗಿಂತ ಹಿಂದೆ ರೂಪಿಸಿಕೊಂಡು ಬಳಸಿರಲಿಲ್ಲ ; ಮುಂದೆಯೂ ಇಡೀ ಕೃತಿಗೆ ಯಾರೂ ಅದನ್ನು ಬಳಸಿಕೊಳ್ಳಲಿಲ್ಲ. ಹೀಗಾಗಿ, 'ವೀರೇಶಚರಿತೆ'ಯನ್ನು ರಾಘವಾಂಕ 'ವಿಾಸಲುಗವಿತೆ' ಎಂದು ಕರೆದದ್ದು ಛಂದಸ್ಸಿನ ವಿಷಯದಲ್ಲೂ ಸತ್ಯವಾಗಿ ತೋರುತ್ತದೆ.

—ಸಿ.ಪಿ.ಕೆ.

## “ ಎನಿತ್ತೆನಿತ್ತಂಬುಜಪತ್ರನೇತ್ರೆಯಾ . . . ”

ಕನ್ನಡ ಲಕ್ಷಣ ಗ್ರಂಥಗಳಲ್ಲಿ ಉದಾಹರಣಾರ್ಥವಾಗಿ ನೂರಾರು ಪದ್ಯಗಳೂ ಪದ್ಯಭಾಗಗಳೂ ಉಲ್ಲೇಖಿಸಲ್ಪಟ್ಟಿವೆ, ಅವುಗಳಲ್ಲಿ,

ಎನಿತ್ತೆನಿತ್ತಂಬುಜ ಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುವಂ

—ಇದು ಅತ್ಯಂತ ಪ್ರಸಿದ್ಧವಾದುದು ಮತ್ತು ಅಷ್ಟೇ ಸ್ವಾರಸ್ಯವುಳ್ಳುದು. ಆದು ಕಾರಣವೇ ಇದು ನಾಲ್ಕು ಲಕ್ಷಣ ಗ್ರಂಥಗಳಲ್ಲಿಯೂ[1] ಒಂದು ಸಂಕಲನಗ್ರಂಥದಲ್ಲಿ[2]ಯೂ ಉಲ್ಲೇಖಿಸಲ್ಪಟ್ಟಿರುವುದು. ದಿವಂಗತ ತೀ.ನಂ.ಶ್ರೀ. ಅವರು ತಮ್ಮ ಒಂದು ಲೇಖನದಲ್ಲಿ[3] ಈ ಪದ್ಯದ ಹಲವು ಪಾಠಗಳನ್ನು ಪರೀಕ್ಷಿಸಿ ಅವರವೇ ಆದ ಕೆಲವು ಕಾರಣಗಳನ್ನೂ ಆಧಾರಗಳನ್ನೂ ಕೊಟ್ಟು ಈ ಪದ್ಯದ ನಾಲ್ಕನೆಯ ಪಾದದಲ್ಲಿರುವ “ಬಿಲ್ಲಾನದನಂತೆ ಕೀಸುವಂ” ಎಂಬೀ ಪಾಠವನ್ನು ಒಪ್ಪದೆ “ಬಿಲ್ಲಾನದನೊತ್ತಿ ಕೀಸುಗುಂ” ಎಂಬ ಪಾಠವೇ ಸರಿ ಎಂದು ತೀರ್ಮಾನಿಸಿರುವರು. ಇದರ ತಾತ್ಪರ್ಯವನ್ನು ವಿವರಿಸುತ್ತ ಅವರು ಹೀಗೆನ್ನುವರು: ಅರಣ್ಯವಾಸಿಗಳಾಗಿ ಬಿಲ್ಲಿನ ಬೇಟೆಯಿಂದ ಜೀವನ ನಡೆಸುವ ಬೇಡರಿಗೆ ಸಂಬಂಧಿಸಿದ ಒಂದು ಸಂಗತಿಯನ್ನು ಇಲ್ಲಿ ಕವಿ ಚಮತ್ಕಾರವಾಗಿ ಚಿತ್ರಿಸಿದ್ದಾನೆ. ಚೆಲುವೆಯಾದ ಬೇಡಿತಿಯ ಯವ್ವನವು ವರ್ಧಿಸಿದ ಹಾಗೆಲ್ಲ ಅವಳಲ್ಲಿ ಬೇಡನು ಅತ್ಯಾಸಕ್ತನಾಗಿ ದುರ್ಬಲನಾಗುತ್ತಾನೆ. ಮೊದಲು ಲೀಲಾಜಾಲವಾಗಿ ಅವನು ಬಾಗಿಸುತ್ತಿದ್ದ ಅವನ ಬಿಲ್ಲು ಈಗ ಅವನ ಅಳವಿಗೆ ಮೀರುತ್ತದೆ. ಅದನ್ನು ಆಗಿಂದಾಗ ಕೆತ್ತಿ ತೆಳ್ಳತೆಳ್ಳಗೆ ಮಾಡಿಕೊಂಡ ಹೊರತು ಅವನು ಉಪಯೋಗಿಸಲಾರನು. ಹೀಗೆ, ಬೇಡತಿಯ ಎದೆ ಎಷ್ಟೆಷ್ಟು ತುಂಬಿಕೊಳ್ಳುವುದೋ ಅಷ್ಟಷ್ಟೂ ತನ್ನ ಬಿಲ್ಲನ್ನು ಬೇಡನು ಹೆರೆಹೆರೆದು ತೆಳುವಾಗಿಸುತ್ತಾನೆ ಎಂಬುದೇ ಇಲ್ಲಿಯ ಅರ್ಥಚಮತ್ಕಾರ. ಬಿಲ್ಲ ಹೆರೆಯ ಪ್ರಸ್ತಾಪವಿರುವ ಎರಡು ಪ್ರಾಕೃತ ಪದ್ಯಗಳನ್ನು, ಸಂಸ್ಕೃತ ಛಾಯೆ ಕನ್ನಡ ಅನುವಾದಗಳೊಂದಿಗೆ ಉಲ್ಲೇಖಿಸಿ ತಮ್ಮ ವಿವರಣೆಯನ್ನು ಪುಷ್ಟಿಗೊಳಿಸಿರುವರು.

ಹೀಗೆ ವಿವರಣೆಯನ್ನು ಕೊಟ್ಟು, ಅದಕ್ಕನುಗುಣವಾಗಿ ಮೇಲ್ಕಂಡ ಪದ್ಯದ ನಾಲ್ಕನೆಯ ಪಾದದ ಪಾಠವನ್ನು ನಿರ್ಣಯಿಸಿರುವರು. ಪದ್ಯದಲ್ಲಿ ಉಪಲಬ್ಧವಿರುವ ಪಾಠಗಳಲ್ಲಿ “ಬಿಲ್ಲಾನದನಂತೆ” “ಬಿಲ್ಲಾನದನಂತು” “ಬಿಲ್ಲಾನದನೆತ್ತಿ,”

1 ಭಾಷಾಭೂಷಣ, ಕಾವ್ಯಾವಲೋಕನ, ಶಬ್ದಮಣಿದರ್ಪಣ, ಶಬ್ದಾನುಶಾಸನ
2 ಕಾವ್ಯಸಾರ.
3 ಸಮಾಲೋಕನ, ಪು. ೧೫೯-೧೬೮

"ಬಿಲ್ಲಾನದನೇಕೆ" "ಬಿಲ್ಲಾನದನೊತ್ತಿ" — ಈ ಪಾಠಗಳಲ್ಲಿ ಕಡೆಯದನ್ನು ಅಂಗೀಕರಿಸಿರುವರು "ಎನಿತ್ತು" ಮೊದಲಾದ ಪ್ರಮಾಣವಾಚಕಗಳ ಸಾಲಿನಲ್ಲಿ "ಅಂತು" "ಅಂತೆ" ಎಂಬ ರೀತಿವಾಚಕಗಳು ಇರಸಲ್ಲವೆಂದೂ "ಎತ್ತಿ" ಎಂಬುದು ಸಮುಚಿತವಲ್ಲವೆಂದೂ ಅವರ ಅಭಿಪ್ರಾಯ. "ಕೀಸುವಂ" ಸ್ಥಾನದಲ್ಲಿ "ಕೀಸುಗಂ" ಇರಬೇಕು ಎಂದಿದ್ದಾರೆ.

ಶ್ರೀ ಶೀ ನಂ ಶ್ರೀ ಅವರುಅಂಗೀಕರಿಸಿರುವ ಪಾಠ (ಒತ್ತಿ) ಒಂದೇ ಪ್ರತಿಯಲ್ಲಿರುವುದು. ಅದುವೆ ಒಂದು ಕೃತಿಯ ("ಭಾಷಾಭೂಷಣ"ದ) ಒಂದೇ ಪ್ರತಿಯಲ್ಲಿ. ಆದರೂ ಅದು ಸಮುಚಿತ ಪಾಠವಾಗಿದ್ದಿದ್ದರೆ ಗ್ರಹಿಸಬಹುದಾಗಿತ್ತು. ಪಾಠನಿರ್ಣಯಕ್ಕೆ ಅವರು ಮುಖ್ಯವಾಗಿ ಕೊಡುವ ಆಧಾರ ತಾವೇ ಕೊಟ್ಟಿರುವ ಪ್ರಾಕೃತ ಪದ್ಯದ ತಾತ್ಪರ್ಯ. ಆದರೆ ಇವರು ಕೊಟ್ಟಿರುವ ವಿವರಣೆಯೇ ಕವಿಯ ಇಂಗಿತವೆನ್ನುವುದಕ್ಕೆ ಏನು ಆಧಾರ?

ಮುಗ್ಧಳಾದ ಶಬರ ಬಾಲಿಕೆಯ ಸಹಜ ಸೌಂದರ್ಯವನ್ನು ನೋಡಿ ವನೇಚರನೊಬ್ಬನು ಮೋಹಿಸಿದನೆಂಬುದಕ್ಕೆ ಪದ್ಯದಲ್ಲಿ ಯಾವ ಸೂಚನೆಯೂ ಇಲ್ಲ. ಪ್ರಾಕೃತ ಪದ್ಯಗಳಲ್ಲಿ ಬಿಲ್ಲ ಹೆರೆಯ ಪ್ರಸ್ತಾಪವೇನೋ ಇದೆ. ಹೊಸವಾಗಿ ಬಿಲ್ಲುಮಾಡುವಾಗಲೆಲ್ಲ ಬಿಲ್ಲಕೋಲಿನಿಂದ ಹೆರೆಯುದುರುವುದು. ಬಗ್ಗಿಸಲಾಗದ ಬಿಲ್ಲನ್ನು ಹೆರೆದಾಗ ಮಾತ್ರ ಹೆರೆ ಉದುರುತ್ತದೆಯೆ? ಬಹುಕಾಲ ಬಳಸಿದ ಬಿಲ್ಲನ್ನು ಹೆರೆದುಬಿಟ್ಟರೆ ಅದು ಮತ್ತೆ ಪ್ರಯೋಜನಕ್ಕೆ ಬರುವುದೋ ಇಲ್ಲವೋ ಬಿಲ್ಲುಗಾರರಿಗೇ ಗೊತ್ತು. ಆದರೆ ಇಂತಹ ಯಾವ ಊಹಾಪೋಹಗಳೂ ಇಲ್ಲದೆ ಆ ಸುಂದರ ಶ್ಲೋಕವನ್ನು ಅರ್ಥೈಸಬಹುದು.

ಅತಿ ಚೆಲುವೆಯಾದ ಬೇಡರ ಬಾಲಿಕೆಯೊಬ್ಬಳು ಬಾಲ್ಯದ ಹೊಸ್ತಿಲನ್ನು ದಾಟುವುದರಲ್ಲಿರುತ್ತಾಳೆ. ಆ ಅಂಬುಜ ಪತ್ರನೇತ್ರೆಯ "ಘನಸ್ತನಂಗಳ್" ದಿನಕ್ಕೊಂದು ಚಂದವಾಗಿ ಹೊರವಾಗಿ ಹೊಗರಾಗಿ ರೂಪುಗೊಳ್ಳುತ್ತಿರುತ್ತವೆ. ಅವುಗಳ ಮಾಟವನ್ನು ದಿನದಿನವೂ ನೋಡುತ್ತಲಿದ್ದ ಕಿರಾತ ಬಿಲ್ಲುಗಾರನು ಆ ಘನಸ್ತನಗಳನ್ನೆ ಮಾದರಿಯಾಗಿಟ್ಟುಕೊಂಡು ಅವುಗಳ ರೂಪನ್ನೆ ಹೋಲುವಂತೆ ತನ್ನ ಬಿಲ್ಲನ್ನು ಮಾಡುತ್ತಿದ್ದನು. ಇಷ್ಟೆ ಆ ಪದ್ಯದ ಮಥಿತಾರ್ಥ. ಪದ್ಯದಲ್ಲಿ ಬಳಸಲ್ಪಟ್ಟಿರುವ "ಘನ," "ಅಂಬುಜ ಪತ್ರನೇತ್ರೆ" ಎರಡೂ ಅತ್ಯಂತ ಸಮುಚಿತ ಪದಗಳು. "ಘನ" ಎಂಬುದಕ್ಕೆ ಇಲ್ಲಿ ಗಟ್ಟಿ ಎಂದೆ ಹೇಳಬೇಕು. ಆ ಬಗೆಯ ಘನತೆ ವಿಾಸಲಳಿಯದ ಮುಗದೆಯರಿಗೆ ಮಾತ್ರ. ಪ್ರೌಢಳೋ ಪ್ರಗಲ್ಭೆಯೋ ಅಂತಹ ಸುಸ್ಪಷ್ಟ ಅವಿಚಲಿತ ರೇಖೆಗಳನ್ನು ತಳೆದಿರುವುದು ಅಸಂಭವನೀಯ. ಅಂಬುಜಪತ್ರಗಳೆರಡನ್ನು ಒಂದರ ಪಕ್ಕದಲ್ಲಿ ಒಂದನ್ನು ಅಡ್ಡಡ್ಡಲಾಗಿಟ್ಟರೆ ಅವೂ ಬಿಲ್ಲಿನ ಬಾಗುಬಳುಕುಗಳನ್ನೆ ಹೊಂದಿರುತ್ತವೆ. ನೇತ್ರಗಳೆ ಏಕೆ? ಹಣೆಯ ಮೇಲುಭಾಗ, ಹುಬ್ಬುಗಳೆರಡು, ಮೇಲ್ತುಟಿ ಕೆಳದುಟಿ—ಎಲ್ಲ ಬಿಲ್ಲಿನ ಮಾಟವೆ. ಬಿಲ್ಲಿನ ಮಾಟವನ್ನು ಹೋಲುವ ಅಂಗರೇಖೆಗಳ ಪಟ್ಟಿಯನ್ನು ಹೀಗೆಯೇ ಬೆಳೆಸಿಕೊಂಡು ಹೋಗಬಹುದು. ಆದರೆ ಇಲ್ಲಿ, ದಿನದಿನಕ್ಕೂ ಹೊಗರೇರುತ್ತ ಹೊರವಾಗುತ್ತ ಬೆಳೆಯುವ ಬೆಡಗನ್ನು ಬಣ್ಣಿಸುವುದು ಕವಿಯ ಉದ್ದೇಶ.

ಕವಿಯು ಇಲ್ಲಿ ಕಲೋಪಾಸಕನಾದ ವನೇಚರನ ದೃಷ್ಟಿಯಿಂದ ಆ ಬೇಡರ ಬಾಲಿಕೆಯನ್ನು ಕಂಡಿರುತ್ತಾನೆ. ಪದ್ಯದ ವಸ್ತುವ್ಯಾಂಶ ಚೆಲುವು; ವನೇಚರನ ವಿರಹ ವೇದನೆಯಲ್ಲ.

ಪದ್ಯದಲ್ಲಿನ "ಎನಿತ್ತೆನಿತ್ತು" ಎಂಬ ಮಾತಿಗೆ ಸಂವಾದಿಯಾಗಿ "ಅನಿತ್ತ ನಿತ್ತಂ" ಎಂಬ ಪ್ರಮಾಣವಚನವೂ "ಅಂತೆ" (ಅಂತಂತೆಯೆ) ಎಂಬ ರೀತಿ ವಾಚಕವೂ ನಿಂತು ಪದ್ಯದ ಅರ್ಥಸಂಪತ್ತನ್ನೂ ಭಾವ ಸೌಂದರ್ಯವನ್ನೂ ಹೆಚ್ಚಿಸಿರುತ್ತವೆ. ಆದುದ ರಿಂದ "ಬಿಲ್ಲಾನದನಂತೆ" ಎಂಬುದೆ ಪದ್ಯದ ಮೂಲಪಾಠವಿರಬೇಕೆಂದು ನಿರ್ಣಯಿಸ ಬಹುದು. ಇದರ ಮುಂದಿನ ಮಾತು "ಕೀಸುಗುಂ" "ಕುಂ" "ಗುಂ" ಎಂಬುವು ಸಾಧಾರಣವಾಗಿ ನಪುಂಸಕ ಲಿಂಗವನ್ನು ಸೂಚಿಸುವುದರಿಂದಲೂ "ಕೀಸುವಂ" ಇಲ್ಲಿ ಪುಲ್ಲಿಂಗಸೂಚಕವಾಗಿದ್ದು ಸಾಧಾರಣವಾಗಿ ಎಲ್ಲ ಕೃತಿಗಳಲ್ಲಿಯೂ ಸಿಗುವುದರಿಂದಲೂ "ಕೀಸುವಂ" ಅನ್ನೇ ಮೂಲಪಾಠವಾಗಿ ಅಂಗೀಕರಿಸಬೇಕಾಗುತ್ತದೆ.

**ಕಮ್ಮಱಿಯೊವಜ:**

ಬವರದೊಳೀಂ ಬಲ್ಲಂ ಕರ
ಮೆನಱುಗೆಯಲ್ ಪೆಱರ್ಗೆಗಂಡ ತನಗಱಿಯನವಂ
ತವೊ ನುಡಿತಪ್ಪದು ಕಮ್ಮಱಿ
ಯೊವಜಂ ಬಿಲ್ಲೊವಜನೆಂಬುದಂ ಮಾಡುವನೇ

–ವಿಕ್ರಮಾರ್ಜುನ ವಿಜಯದ ಹನ್ನೆರಡನೆಯ ಆಶ್ವಾಸದಲ್ಲಿನ ಒಂದು ಪದ್ಯ ಇದು. ಸೈಂಧವನು ವೀರಮರಣವನ್ನು ಪಡೆದ ಸಂದರ್ಭದಲ್ಲಿ ದ್ರೋಣನ ಮನದಲ್ಲಿ ಮೂಡಿದ ಭಾವನೆಗಳನ್ನು ಒಳಕೊಂಡುದು. ದ್ರೋಣಾಚಾರ್ಯ ಕೌರವೇಂದ್ರನಿಗೆ "ಸಿಂಧು ಕ್ಷಿತಿಪಂ ತಾನೇನಾದಂ ರಣದೊಳದನೆ ಪ್ರೋಗಾನುಮುಪ್ಪೆಂ" ಎಂದು ಭರವಸೆ ಇತ್ತಿದ್ದ ನಷ್ಟೆ. ಆದರೆ ಅವನು ಏನಾದನೊ "ಅದನೆ" ಇವನು ಆಗಿರಲಿಲ್ಲ ಇನ್ನೂ. ಆದುದ ರಿಂದಲೆ ನುಡಿದಂತೆ ನಡೆಯಲಿಲ್ಲವಲ್ಲಾ ಎಂದು ಹೊಯ್ದಾಡುವುದು. ಆ ಹೊಯ್ದಾಟವೇ ಮೇಲಿನ ಕಂದದಲ್ಲಿ ನಿರೂಪಿಸಲ್ಪಟ್ಟಿರುವುದು.

ರಣರಂಗದಲ್ಲಿ ಏನು ಕಡಿತಲೆಮಾಡಬೇಕೆಂದು? ಪರಾಕ್ರಮುವನ್ನು ಕುರಿತು ಮತ್ತೊಬ್ಬರಿಗೆ ಅಚ್ಚುಕಟ್ಟಾಗಿ ಬೋಧನೆ ಮಾಡುವುದರಲ್ಲಿ ಶೂರ; ತಾನು ಮಾತ್ರ ಅದರಂತೆ ಆಚರಿಸಲಾರ–ಎಂದರೆ ಹೇಗೆ? ನುಡಿದು ತಪ್ಪುವುದು ಕಮ್ಮಾರ; ಬಿಲ್ಲ ಗುರುವಾದ ನಾನು ನುಡಿದಂತೆ ನಡೆಯುವವನೆ–ಹೀಗೆಂದು ಮೇಲಿನ ಪದ್ಯಕ್ಕೆ ಸ್ಥೂಲವಾಗಿ ಅರ್ಥ ಹೇಳಬಹುದು. ಮುಖ್ಯವಾಗಿ ಬಿಲ್ಲೊವಜನಿಗೂ ಕಮ್ಮಱಿಯೋಜನಿಗೂ ಇರುವ ತಾರತಮ್ಯವನ್ನು ಮಾತ್ರ ಇಲ್ಲಿ ಪರಿಶೀಲಿಸಿದೆ.

'ಕಮ್ಮಱಿಯೋಜ' ಎಂಬ ಮಾತು ಮತ್ತೊಂದುಕಡೆ ಬೊಪ್ಪಣ ಪಂಡಿತನ ಗೊಮ್ಮಟಸ್ತುತಿಯಲ್ಲಿ ಬಳಕೆಯಾಗಿರುವುದು. ಗೊಮ್ಮಟನು 'ಕಮ್ಮಱಿಯೋಜ'

ಸಂತಸ್ಸ; 'ಕಪಟರಾಂತು ಉಪದೇಶಕನಾದುದು ಒಪ್ಪದೇ' ಎಂದು ಕವಿ ಗೊಮ್ಮಟೇಶ್ವರನನ್ನು ಹೊಗಳುವ ಸಂದರ್ಭವದು.

ಕಮ್ಮ ಕಣ್ಣುಗಳ್ಗೆ ಕುತ್ತದ ಸ್ವಿ ತಿಪೇಳ್ದ ಬಾಣಂ ಸಂಗಿಕಂ
ಕಮ್ಮ ಶರೀರಮಾಗಿ ಶೀಘ್ರ ಸ್ವಕರಾಸ್ಪದ ಕಷ್ಟ ಪ್ರತ್ರ ಕಂ
ಕಮ್ಮ ಸಾಂಪೀಠದಂಡಮಿಲ ಸ್ವರಾಜ್ಞೆಯ ಗಾಂಭ್ಯ ಶ್ರೀಕರಂ
ಗೊಮ್ಮಟ ದೇವ ನೀಂ ಕಪಟಕಾಂತ ಉಪದೇಶಕನಾದುದೊಪ್ಪದೇ

ಇದರಲ್ಲಿಯೂ 'ಕಮ್ಮಟಿಯೋಜ'ನು ನುಡಿದಂತೆ ನಡೆಯುವ ಸ್ವಭಾವವುಳ್ಳವನಲ್ಲವೆಂಬುದೇ ವ್ಯಕ್ತವಾಗುತ್ತದೆ. ಪಂಪನಲ್ಲಿ ಈ ಅಭಿಪ್ರಾಯ ಇಷ್ಟು ಸ್ಪಷ್ಟವಾಗಿಲ್ಲ. ನುಡಿದಂತೆ ನಡೆಯದಿರುವವ ಕಮ್ಮರಿಯೋಜ, ನುಡಿದಂತೆ ನಡೆಯುವವ, ತಾನೆಂದುದನ್ನು ಮಾಡುವವ ಬಿನ್ನಾಣಿವಜ ಎಂಬುದು ಕವಿಯ ಆಶಯವಾಗಿರಬಹುದು. ಕಮ್ಮಾರನು ಏಕಕಾಲದಲ್ಲಿ "ಎಂಬುದಂ" ಮಾಡುವುದು ಸಾಧ್ಯವಿಲ್ಲ ಎಂಬುದು ಅವನ ಕಾಯಕವನ್ನು ನೋಡಿದವರಿಗೆ ಅರಿವಾಗುತ್ತದೆ. ಅದು ಹೇಗೆಂಬುದನ್ನು ಇಲ್ಲಿ ಕೊಂಚಮಟ್ಟಿಗೆ ವಿವೇಚಿಸಬಹುದು.

ಒವಜ (ಓಜ) ಎಂಬ ಮಾತು ಉಪಾಧ್ಯಾಯ ಎಂಬ ಸಂಸ್ಕೃತ ಶಬ್ದದಿಂದ ಹುಟ್ಟಿತೆಂಬುದನ್ನು ಭಾಷಾಶಾಸ್ತ್ರಜ್ಞರೆಲ್ಲ ಒಪ್ಪಿಕೊಂಡಿರುವರು. ರೆ. ಕಿಟ್ಟೆಲ್ ಅವರ ಕೋಶದಲ್ಲಿ ಈ ಮಾತಿಗೆ ಗುರು ಆಚಾರ್ಯ ಎಂದು ಹೇಳಿರುವುದಲ್ಲದೆ ಬಡಗಿ ಕಮ್ಮಾರ ಅಕ್ಕಸಾಲೆ ಎಂದೂ ಹೇಳಿದೆ. ವಿಶ್ವಕರ್ಮ ಜನಾಂಗದವರಿಗೆ ಆಚಾರಿ, ನಾಜ, ಓಜ ಎಂದು ಸಂಬೋಧಿಸುವುದು ಇಂದೂ ರೂಢಿಯಲ್ಲಿದೆ. ಶಿಲ್ಪಿಗಳೂ ಇದೇ ಜನಾಂಗಕ್ಕೆ ಸೇರಿದವರಾದುದರಿಂದ ಅವರಿಗೂ ರೇವೋಜ, ಮಲ್ಲೋಜ, ದಾಸೋಜ ಜಕ್ಕಣಾಚಾರಿ ಎಂದು ಮುಂತಾಗಿ ಓಜ, ಆಚಾರಿ ಮುಂತಾದ ವಿಶೇಷಣಗಳನ್ನು ಸೇರಿಸಲಾಗುತ್ತಿದೆ.[2] ಈ ಕಸಬಿನವರ ಒಂದು ಗುಂಪಿಗೆ, ಅಂದರೆ ಕಬ್ಬಿಣದ ಕೆಲಸವನ್ನು ಮಾಡುವವರಿಗೆ ಮಾತ್ರ ಕಮ್ಮರಿಯೋಜ ಎಂದು ಕರೆಯುವುದು. ಇವರು ಹೇಳುವವರು ಮಾತ್ರ, ಹೇಳಿದಂತೆ ಮಾಡುವವರಲ್ಲ, ಎಂಬ ಭಾವನೆ ಪಂಪನ ಕಾಲಕ್ಕೆ ಕೊಂಚಮಟ್ಟಿಗಾದರೂ ಇದ್ದಿತೆಂದು ತೋರುತ್ತದೆ.

ಕನ್ನಡದ ಜನತೆಯಲ್ಲಿ ಒಂದು 'ನಾಣ್ಣುಡಿ' ಉಂಟು: ಅರಸು ಕಮ್ಮಾರ, ಆಳು ಅಕ್ಕಸಾಲೆ, ಬಡಗಿ ಎಡಬಿಡಂಗಿ (?)....ಕಬ್ಬಿಣದ ಕೆಲಸವನ್ನು ಮಾಡುವವನು ಹೇಗೆ ಅರಸ ಎಂದರೆ—ಕುಲುಮೆಯ ಮನೆಗೆ ವ್ಯವಸಾಯೋಪಕರಣಗಳನ್ನು ಮಾಡಿಸಿಕೊಳ್ಳಲು ಬರುವವನು, ಸಾಮಾನ್ಯವಾಗಿ ಒಕ್ಕಲುಮಗನೆ. ತಿದಿಯ ಪಿಡವನ್ನು ಎಳೆಯು

[1] ಶ್ರವಣಬೆಳಗೊಳದ ಬಸದಿಯ ಶಾಸನ (ಬೊಪ್ಪಣ ಪಂಡಿತ).

[2] ಡಾಕ್ಟರ್ ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೪೩೮; ಡಾಕ್ಟರ್ ಎಸ್. ಶ್ರೀಕಂಠಶಾಸ್ತ್ರೀ: ಹೊಯ್ಸಳವಾಸ್ತುಶಿಲ್ಪ ಪು. ೩೦, ೩೧ ಇತ್ಯಾದಿ.

ವವನು ಅವನು. ಕುಡ (ಕುಳ) ಕುಡುಗೋಲು ಹಾರೆ ಗುದ್ದಲಿಗಳನ್ನು ಮಾಡಿಸುವಾಗ ಬಂಡಿಯ ಗಾಲಿಗೆ ಹಳಿಗಳನ್ನು ಬಿಗಿಸುವಾಗ ಕಮ್ಮಾರನಿಗಿಂತ ಹೆಚ್ಚಾಗಿ ರೈತನೇ ಶ್ರಮಪಟ್ಟು ಕೆಲಸಮಾಡಬೇಕು. ಕಾದು ಕಾದು ಕೆಂಪಾದ ಕಬ್ಬಿಣವನ್ನು ಹೇರಿಕ್ಕುಳ ದಿಂದ ಹಿಡಿದು ಅಡಿಗಲ್ಲ ಮೇಲೆ ಇಡುವುದು, ಅದನ್ನು ಅಗತ್ಯತೆಗೆ ತಕ್ಕಂತೆ ಹೊರಳಿಸು ವುದು ಇತರ ಕೈಗಾರಿಕೆ-ಇಷ್ಟುಮಾತ್ರ ಕಮ್ಮಾರನ ಕೆಲಸ. ಬಹು ಭಾರವಾದ ಚಮ್ಮಟಿಗೆಯನ್ನು ಹಿಡಿದು ಆಯವರಿತು ಬಡಿಯುವವನು ರೈತನೆ. ಕಮ್ಮಾರನ ಕೆಲಸದ ಬಹುಭಾಗ ಆತನ ನಿರ್ದೇಶನದಂತೆ ಬೇರೆಯವರಿಂದಲೆ ಮಾಡಿಸಲ್ಪಡುವುದು. ಕುಲುಮೆಯ ಮುಂದೆ ಕುಳಿತೆ ಕಮ್ಮಾರನ ಕೆಲಸವೆಲ್ಲ. ಆದುದರಿಂದ 'ಅರಸು ಕಮ್ಮಾರ' ಎಂಬ ನುಡಿಯಲ್ಲಿ ಬಹುಮಟ್ಟಿನ ತಥ್ಯಾಂಶವಿದೆ. ಅಕ್ಕಸಾಲಿಗನ ಮಾತು ಹಾಗಲ್ಲ. ಎಲ್ಲ ಕೆಲಸಗಳನ್ನೂ ತಾನೇ ಮಾಡಿಕೊಳ್ಳಬೇಕು ಅವನು ಇಲ್ಲಿ ಗಿರಾಕಿಯೆ ಅರಸು. ಬಡಗಿಯ ಕೆಲಸ ಇನ್ನೊಂದು ಬಗೆಯದು. ತಾನೂ ಮಾಡುತ್ತಾನೆ, ಬಂದ ಗಿರಾಕಿಗಳಿಂದ ಆಗಬಹುದಾದ, ತಾನು ಮಾಡಲಾಗದ ಕೆಲಸಗಳನ್ನು ಗಿರಾಕಿ ಯಿಂದಲೂ ಮಾಡಿಸುತ್ತಾನೆ ಅತ್ತಲೂ ಇಲ್ಲ ಇತ್ತಲೂ ಇಲ್ಲ; ಆಳೂ ಅಲ್ಲ, ಅರಸೂ ಅಲ್ಲ. ಆದುದರಿಂದ ಅವನು 'ಎಡಬಿಡಂಗಿ' ಅಂತೂ ಕಮ್ಮಾರ ಸೂಕ್ತ ನಿರ್ದೇಶನವಿತ್ತು ಮಾಡಿಸುವನೆ ಹೊರತು ತಾನು ಮಾಡುವುದಿಲ್ಲ. ವಾಸ್ತವವಾಗಿ ಕಮ್ಮಾರಿಕೆಯು ಹಾಗೆಯೆ ನಡೆಯಬೇಕಾದುದು. ಈ ಕೆಲಸದ ನಿಜಸ್ವರೂಪವೆ, ಕಮ್ಮಾರನು ಹೇಳುವವನು ಮಾತ್ರ ಹೇಳಿದಂತೆ ಮಾಡುವವನು ಬೇರೆ ಎಂಬ ಕಲ್ಪನೆಗೂ ಆದೇ ಕಲ್ಪನೆ ಇನ್ನಷ್ಟು ಚಿಗುರಿ ಕುಡಿಯೊಡೆದು ಕಮ್ಮರಿಯೋಜನು ನುಡಿದಂತೆ ನಡೆಯು ವವನಲ್ಲ ಎಂಬ ನಾಣ್ನುಡಿಗೂ ಎಡೆಗೊಟ್ಟಿತೆಂದು ಊಹಿಸಬಹುದು.

ಬಿಲ್ಲೊವಜ ದ್ರೋಣಾಚಾರ್ಯನು "ಎಂದುದಂ ಮಾಡುವನೇ"; "ಮುನ್ನೆ ನುಡಿದುದ ನೀಗಳ್ ತಪ್ಪುವೆನೆ"? ಎಂದು, ಪಾಂಡವರನ್ನೆದುರಿಸಿ ಕಾದಲನುವಾದನು ಕಮ್ಮರಿಯೋಜನಂತೆ, 'ನುಡಿದು ತಪ್ಪಲಿಲ್ಲ.'

—ಎಚ್. ದೇವೀರಪ್ಪ

## ಸಬ್ಬಿಂಗ ಎಂದರೇನು?

ಶ್ರೀ ಎಂ. ಚಿದಾನಂದಮೂರ್ತಿ ಅವರು ಹಲ್ಮಿಡಿ ಶಾಸನದಲ್ಲಿ ಬರುವ 'ಸಬ್ಬಿಂಗ' ಶಬ್ದದ ನಿಷ್ಪತ್ತಿ, ಅರ್ಥ ಏನಿರಬಹುದೆಂದು ವಿಚಾರಮಾಡುತ್ತಾ [ಕಮ್ಮಟದ ಕಿಡಿಗಳು, 'ಸಬ್ಬಿಂಗ ಎಂದರೇನು?' ಪ್ರ. ಕ. ೪೭-೪, ೧೯೬೬, ಪು. ೧೨೫-೭] "ಮನು ಗೌತಮ ಮುಂತಾದವರು ಹೊಲಗಳಿಂದ ಬರುವ ಆದಾಯದ ಆರನೇ ಒಂದು ಭಾಗವನ್ನು ರಾಜನು ತೆಗೆದುಕೊಳ್ಳಬಹುದೆಂದು ನಿರೂಪಿಸುತ್ತಾರೆ" ಎಂದು ಹೇಳಿ, ಈ ಷಡ್ಭಾಗವೇ ಸಬ್ಬಿಂಗವಾಗಿರಬೇಕೆಂದೂ, "ಇರ್ವ್ವರುಂ ಸಬ್ಬಿಂಗದವರ್" ಎಂದರೆ 'ಇಬ್ಬರು

ಷಡ್ಭಾಗದವರು', ಎಂದರೆ 'ಇಬ್ಬರು ತೆರಿಗೆಯ ಅಧಿಕಾರಿಗಳು' ಎಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅಭಿಜ್ಞಾನ ಶಾಕುಂತಲದಲ್ಲಿ ಬರುವ (೨-೧೩) "ಯದುತ್ತಿಷ್ಠತಿ ವರ್ಣೇಭ್ಯೋ ನೃಪಾಣಾಂಕ್ಷಯಿ ತತ್ಫಲಮ್ । ತಪಃ ಷಡ್ಭಾಗಮಕ್ಷಯ್ಯಂ ದದತ್ಯಾರಣ್ಯಕಾಹಿ ನಃ॥" ಎಂಬ ಮಾತನ್ನೂ ಗಮನಿಸಬಹುದು. 'ವ್ಯಾಕರಣದ ಪ್ರಕಾರ "ಇರ್ವ್ವರುಂ ಸಬ್ಬಿಂಗದವರುಂ" ಎಂಬಂತಿರಬೇಕೆಂಬ ಆಕ್ಷೇಪಕ್ಕೆ ಅವಕಾಶವಿದೆ, ಶಾಸನಗಳಲ್ಲಿ ವ್ಯಾಕರಣಬದ್ಧ ಭಾಷೆಯನ್ನು ನಿರೀಕ್ಷಿಸಬಾರದು" ಎಂದಿರುವರು. ಸಮುಚ್ಚಯದ ಪ್ರಯೋಗ ಎರಡೂ ರೀತಿಗಳಲ್ಲಿರುವುದನ್ನು ಶಿಷ್ಟಭಾಷೆಯಲ್ಲಿ ಗಮನಿಸಿ, ಆ ಎರಡು ರೀತಿಗಳೂ ವ್ಯಾಕರಣದುಷ್ಟವಾಗುವುದಿಲ್ಲ ಎಂದು ಹೇಳಬಹುದು.

ಸಬ್ಬಿಂಗಕ್ಕೆ ಷಡ್ಭಾಗ ಎಂದು ಹೇಳಿರುವ ಅರ್ಥ ಸರಿ. ಆದರೆ 'ಷಡ್ಭಾಗ > * ಸಬ್ಬಿಗ್ಗ > ಸಬ್ಬಿಂಗ' ಎಂದು ಹೇಳಿರುವ ನಿರ್ವಚನ ಸರಿಯೆಂದು ತೋರುವುದಿಲ್ಲ. ತಾರ್ಕಿಕ ನಿರ್ವಚನಕ್ಕಿಂತ ಭಾಗ > ಬಗ್ಗ > ಬಂಗ ಆದ ಇತರ ಉದಾಹರಣೆಗಳು ಅಗತ್ಯವಾಗಿವೆ. ಮಿಗಿಲಾಗಿ, ವ್ಯಾಘ್ರದ ತದ್ಭವವಾದ 'ಬಗ್ಗ' ಎಂಬೊಂದು ರೂಪವು ತನ್ನನ್ನು ಹೋಲತಕ್ಕ ಇನ್ನೊಂದು ರೂಪವನ್ನು ಬರಮಾಡಿಕೊಳ್ಳಬೇಕಾಗುತ್ತದೆ. ಬರಮಾಡಿಕೊಳ್ಳಲಾಗದು ಎಂದಲ್ಲ, ಅಂಥ ಉದಾಹರಣೆಗಳು ಹೇರಳವಿಲ್ಲ. 'ಸಬ್ಬಿಗ್ಗ' ಎಂದು ರಚಿಸಿಕೊಂಡ ರೂಪವು 'ಸಿಕ್ಕಿಲ್ಲ' ಎಂದು ಶ್ರೀಯುತರೇ ಹೇಳಿದ್ದಾರೆ. ಭಂಗ ನೇರವಾಗಿ ಬಂಗ ಆದೀತು. ಭನ್ನ-ಬನ್ನ ಆದಂತೆ ಬಗ್ಗ ಆದೀತೇನೊ. ಆದರೆ ಭಾಗ-ಬಗ್ಗವಾಗಿ, ಅನಂತರ ಬಂಗವಾಗುವುದು ತುಂಬ ಸುತ್ತಿನ ಕಾರ್ಯ. ಭಾಗ-ಬಗ್ಗ-ಬಂಗ ಆಗುವುದಕ್ಕಿಂತ ಭಂಗ > ಬಂಗ ನೇರವಾದುದು. ಭಗ್ಗಾ (ಪ್ರಾ), ಭಗ್ಗೋ (ಪಾಲಿ) ಶಬ್ದಗಳೂ ಇವೆ.

ಈ ಸಂದರ್ಭದಲ್ಲಿ ಶ್ರೀ ಪಾಂಡುರಂಗರಾವ್ ದೇಸಾಯಿ ಅವರು ಬರೆದಿರುವ "ಪಾಂಗ-ಶಬ್ದ ನಿಷ್ಪತ್ತಿ ಮತ್ತು ಅರ್ಥವಿವೇಚನೆ" ಎಂಬ ಲೇಖನದೆಡೆಗೆ [ಅಭಿವಂದನೆ, ಎ.ಆರ್.ಕೃ. ಸಂಭಾವನಾಗ್ರಂಥ, ೧೯೫೬, ಪು. ೩೫೧-೪] ಗಮನ ಸೆಳೆಯ ಬಯಸುತ್ತೇನೆ. ಈ ಲೇಖನದಲ್ಲಿ ಪಾಂಗಶಬ್ದ ಸ್ವತಂತ್ರವಾಗಿ ಪ್ರಯುಕ್ತವಾದ ಎರಡು ಸಂಸ್ಕೃತ ಉದಾಹರಣೆಗಳನ್ನು ನೀಡಿದ್ದಾರೆ: "ಪಾಂಗೇ ಗದ್ಯಾಣಕಾ ಗ್ರಾಹ್ಯಾ ಗ್ರಾಮೇಸ್ಮಿನ್ ಮೇದಿನೀ ಭುಜಾ" (ಗೋವೆಯ ಕದಂಬವಂಶದ ಒಂದನೆಯ ಜಯಕೇಶಿಯ ತಾಮ್ರಶಾಸನ, ಕ್ರಿ.ಶ. ೧೦೫೩), ಮತ್ತು "ಶತಾತ್ ಕ್ರೀತ್ವಾ ದದೌ ಸರ್ವಮೇತತ್ ಪಾಂಗೌದಿ ವರ್ಜಿತಮ್" (ಒಂದನೆಯ ಜಯಕೇಶಿಯ ಮಗ ತ್ರಿಭುವನ ಮಲ್ಲ ಎಂದರೆ ಗೂವಲದೇವನ ತಾಮ್ರ ಶಾಸನ, (ಕ್ರಿ.ಶ. ೧೧೦೬). ಈ ಎರಡು ಪ್ರಯೋಗಗಳಲ್ಲೂ 'ಪಾಂಗ' ಎಂಬುದು ಒಂದು ಬಗೆಯ ತೆರಿಗೆಯಾಗಿದೆ.

"ಪಾಂಗ" ಶಬ್ದಕ್ಕೆ ನಿರ್ವಚನ ಹೇಳುವಲ್ಲಿ ಶ್ರೀ ದೇಸಾಯಿ ಅವರು "ನನ್ನ ತಿಳಿವಳಿಕೆಯಂತೆ ನನಗೆ ದೊರಿತ ಯಾವ ಸಂಸ್ಕೃತ ಇಲ್ಲವೆ ಪ್ರಾಕೃತ ಭಾಷಾಕೋಶಗಳಿಂದ" ಸಹಾಯವಾಗಿಲ್ಲವೆಂದು ಹೇಳಿ, ವಿಭಾಗಿಸು ಎಂಬರ್ಥದ ಪಕ್ (ಗು), ಕನ್ನಡದ

ಪಂಗು ಮೂಲವಿರಬಹುದೆಂದೂ, ಅದಕ್ಕೆ ಸಂಸ್ಕೃತದ ಭಜ್ ಇಲ್ಲವೆ ಭಞ್ಜ ಧಾತುವಿನಲ್ಲಿ ಮೂಲ ಕಂಡುಹಿಡಿಯಬಹುದೇನೋ ಎಂದೂ ಹೇಳಿ, ಕೊರತೆ, ಅಗತ್ಯ, ಚಿಂತೆ, ಕಷ್ಟ, ಪರಾಧೀನತೆ ಎಂಬರ್ಥದ ಮರಾಠಿಯ ಪಾಂಗ ಶಬ್ದವನ್ನೂ ಪ್ರಸ್ತಾಪಿಸಿದ್ದಾರೆ.

ಮಾನಿಯರ್ ವಿಲಿಯಂಸ್‌ರವರ ಸಂಸ್ಕೃತ–ಇಂಗ್ಲಿಷ್ ಕೋಶದಲ್ಲಿ ಪಾಂಗ ಶಬ್ದವಿಲ್ಲ; ಉಣಾದಿ ಪಂಗು ಶಬ್ದಕ್ಕೆ to be stiff ಎಂಬರ್ಥದ 'ಪಜ್' ಧಾತು ಮೂಲವಿದ್ದೀತೆಂದು ತೋರಿಸಿ, ವೈದಿಕ ಪಪಾಜವನ್ನು ಉದಾಹರಿಸಿದ್ದಾರೆ. ಇದಕ್ಕೂ ತೆರಿಗೆಗೂ ಸಂಬಂಧವಿರುವಂತೆ ತೋರುವುದಿಲ್ಲ. ಸಂಸ್ಕೃತಭಾಗಕ್ಕೆ ಪರ್ಯಾಯವಾಗಿ ದ್ರಾವಿಡ ದೇಶಭಾಷೆಗಳಲ್ಲಿ 'ಪಾಂಗ' ಶಬ್ದ ರೂಢಿಯಿದ್ದು, ಸಂಸ್ಕೃತ ಶಾಸನಕಾರರು ಹಾಗೆ ರೂಢಿಯಲ್ಲಿದ್ದ ದ್ರಾವಿಡಶಬ್ದವನ್ನೇ ಸ್ವೀಕರಿಸಿರಬಹುದೆಂದು ತೋರುತ್ತದೆ. ಹಲ್ಮಿಡಿ ಶಾಸನದ ಕಾಲದಲ್ಲಿ 'ಪಾಂಗ' ಅಥವಾ 'ಪಂಗ' ಎಂಬ ಶಬ್ದ, ತೆರಿಗೆಯೆಂಬರ್ಥದಲ್ಲಿ ರೂಢವಾಗಿದ್ದಿರಬೇಕು.

ಪ್ರೊ. ಬರೋ ಮತ್ತು ಎಮಿನೋ ಅವರ ದ್ರಾವಿಡಜ್ಞಾತಿ ಶಬ್ದಕೋಶದಲ್ಲಿ [ಪು ೩೫೭, ೩೧೫೪] ಪಕು (ಗು) ಶಬ್ದಕ್ಕೆ ಬೇರ್ಪಡಿಸು ಎಂಬರ್ಥ ಹೇಳಿ, ಪಗುದಿ, ಪಗದಿ (ತೆರಿಗೆ), ಪಂಗು (ಪಾಲು, ಭಾಗ), ಪಂಗವ್, ಪಗಿಯುನಿ (ತು) ಮೊದಲಾಗಿ ಉಲ್ಲೇಖಿಸಿದ್ದಾರೆ. ಪಾಂಗ ಎಂಬುದೂ ಇದಕ್ಕೇ ಸಂಬಂಧಿಸಿದ ಶಬ್ದವಾಗಿದ್ದು rent, tax ಎಂಬರ್ಥದಲ್ಲಿ ಬಳಕೆಯಿದ್ದಿರಬಹುದು. ಅದರ ಮೊದಲ ರೂಪ 'ಪಂಗ' ವಾಗಿದ್ದಿರಬಹುದು. ಹೀಗೆ ದ್ರಾವಿಡಭಾಷೆಗಳಲ್ಲಿ ತನ್ನದೇ ಆದ ಒಂದು ನುಡಿ ಬಳಗದಲ್ಲಿ ಸೇರಬೇಕಾದ ಪಾಂಗ/ಪಂಗ ಶಬ್ದವನ್ನು ಸಂಸ್ಕೃತ ಧಾತುವಿನಿಂದ ರೂಪಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಆದುದರಿಂದ ಪಾಂಗ/ಪಂಗ ಎಂಬಿವು ಭಾಗದ ತದ್ಭವವಾಗಿರದೆ ಅದೇ ಅರ್ಥದಲ್ಲಿ ಬಳಸಿದ ದ್ರಾವಿಡ ಶಬ್ದ. 'ಭಾಗ'ವು ತೆರಿಗೆಯನ್ನು ಸೂಚಿಸುವ ವಿಶೇಷಾರ್ಥದಲ್ಲಿ ಅರ್ಥವಿಸ್ತಾರವಾಗಿ ಸಂಸ್ಕೃತದಲ್ಲಿ ಬಳಕೆಯಾದಂತೆ ದ್ರಾವಿಡ ಪಾಂಗ/ಪಂಗ ಶಬ್ದಗಳೂ. ಸಂಸ್ಕೃತ ಶಾಸನಕಾರರು ಸ್ವೀಕರಿಸಿದಂತೆ ಪಾಂಗ ಶಬ್ದವನ್ನು ಗೋವಾ ಪ್ರದೇಶದಲ್ಲಿನ ಕೊಂಕಣಿಗರು ಕ್ರಮೇಣ ಸ್ವೀಕರಿಸಿ ಅನಂತರ ಮರಾಠಿಗೂ ಸೇರಿಬಂದಿರಬಹುದು. ಪಕ್ಷದ ತದ್ಭವವೆನ್ನಲಾಗುವ 'ಪಕ್ಕ'ವೂ ಬಹುಶಃ ಇದೇ ವರ್ಗಕ್ಕೆ ಸೇರುತ್ತದೋ ಏನೊ! ಅಥವಾ ಪಕ್ಷದಿಂದ ಬಂದ ಪಕ್ಕವೊಂದು, ಪಕ್ ನಿಂದ ಬಂದ ಪಕ್ಕವೊಂದು ಎರಡೂ ಇರುವುದು ಸಾಧ್ಯ. ಪಂಗ (ನಾಮ), ಪಂಗಡ, ಪಗೆ, ಬಗಿ ಒಂದು ಮೂಲದವಿರಬೇಕು. ಇಲ್ಲಿ ನಾವು ಹೇಳಬಹುದಾದುದು: ಷಡ್‌ಪಾಂಗ ಅಥವಾ ಷಡ್‌ಪಂಗ ಎಂಬುದು ಮೂಲವಿದ್ದು ಪಕಾರ ಬಕಾರವಾಗಿ ಡತ್ವ ಟತ್ವವಾಗಿ ಸಟ್ಬಂಗಕ್ಕೆ ಹಾದಿಯಾಗಿರಬೇಕು. ಸಟ್ಬಾಂಗವೇ ಸಟ್ಬಂಗವಾಯಿತೋ ಹೇಳುವಂತಿಲ್ಲ. ಸದ್ಯಕ್ಕೆ ಷಡ್ಭಾಗ=ಷಡ್ಪಂಗ/ಷಡ್ಪಾಂಗ>ಸಟ್ಬಂಗ ಎಂದಿಟ್ಟುಕೊಳ್ಳಬಹುದು.

—ಕೆ. ಶಿವರಾಮ ಐತಾಳ

# ಕಾವ್ಯಾವಲೋಕನ

**ಬಸವಣ್ಣನವರ ವ್ಯಕ್ತಿತ್ವ ಹಾಗು ಜೀವನಸಿದ್ಧಿ ;** ವಿವಿಧ ಉಪನ್ಯಾಸಕರಿಂದ ಆರು ಉಪನ್ಯಾಸಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪುಟ viii + ೧೨೨ ಬೆಲೆ ೧-೫೦ ಪೈಸೆ.

ಮಹಾಪುರುಷರ ಜೀವನ ಪರಿಚಯವು ಯಾರಿಗಾದರೂ ಲಾಭದಾಯಕವಾದುದೆ. ನಮ್ಮ ಬದುಕಿನ ಓರೆಕೋರೆಗಳನ್ನು ತಿದ್ದಿಕೊಂಡು ಆರೋಗ್ಯವಾಗಿ ಬದುಕುವುದಕ್ಕೆ ಮಾತ್ರವಲ್ಲದೆ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೂ ಸಾರ್ಥಕ ಜೀವನದ ಸ್ಪಷ್ಟರೂಪವನ್ನು ಚಿತ್ರಿಸಿಕೊಳ್ಳುವುದಕ್ಕೂ ಈ ಪ್ರಜ್ಞೆ ನೆರವಿಗೆ ಬರುತ್ತದೆ. ಇವರ ಚೇತನವು ಒಟ್ಟು ಯುಗಶಕ್ತಿಯ ಸಂಸ್ಕೃತಿ ಸತ್ವದ ಸಾರರೂಪವಾದ ಬಿಂಬದಂತಿರುತ್ತದೆ. ಅದು ಜನಮನದ ಸುಪ್ತಶಕ್ತಿಗಳನ್ನೆಲ್ಲ ಬಡಿದೆಬ್ಬಿಸಿ ದುಡಿಸುತ್ತದೆ. ಕೊರಡು ಕೊನರುತ್ತದೆ, ಗೊಡ್ಡು ಹಯನಾಗುತ್ತದೆ, ಮಾತು ಮುತ್ತಾಗುತ್ತದೆ, ಬಾಳು ಬಂಗಾರವಾಗುತ್ತದೆ.

ಇಂಥ ಪುರುಷತ್ವಕ್ಕೆ ಚೇತನಕ್ಕೆ ಆಶ್ರಯವಿತ್ತು ಪ್ರಸಿದ್ಧಿಯನ್ನು ಪಡೆದ ಮಹನೀಯರುಗಳಲ್ಲಿ ಬಸವಣ್ಣನವರೂ ಒಬ್ಬರಾಗಿದ್ದಾರೆ. ನಮ್ಮ ಹಿರಿಯರ ಸುಖ ದುಃಖಗಳಲ್ಲಿ ಪಾಲುಗೊಂಡು ಅವರ ಒಡನಾಡಿಯಾಗಿ ಬಾಳಿ ಬದುಕಿ ಈ ಚಾರಿತ್ರಿಕ ವ್ಯಕ್ತಿ ಜನಮನದಲ್ಲಿ ಅವತಾರಪುರುಷರಾಗಿ ಮೆರೆದಿದ್ದಾರೆ, ಕಾರಣಿಕರಾಗಿದ್ದಾರೆ. ಆತನನ್ನು ದೇವರ ಎತ್ತರದಲ್ಲಿ ನಿಲ್ಲಿಸಿ ಪೂಜಿಸಿದವರಿದ್ದಾರೆ, ದೇವರೇಯೆ ಎಂದವರಿದ್ದಾರೆ. ಹೇಗೊ ಅವರು ಉದಾತ್ತ ಜೀವನಕ್ಕೊಂದು ಉದಾಹರಣೆಯಾಗಿದ್ದಾರೆ.

ಈ ಮಹಾಪುರುಷನ 'ವ್ಯಕ್ತಿತ್ವ ಮತ್ತು ಜೀವನಸಿದ್ಧಿ'ಯನ್ನು ಕುರಿತ ಆರು ಪ್ರೌಢೋಪನ್ಯಾಸಗಳ ಈ ಸಂಕಲನ ಈ ದೃಷ್ಟಿಯಿಂದ ಮಹತ್ವದ್ದಾಗಿದೆ. ಬಸವಣ್ಣನವರ ವ್ಯಕ್ತಿತ್ವವನ್ನೂ ಜೀವನಶ್ರದ್ಧೆಯನ್ನೂ ವಿವಿಧ ದೃಷ್ಟಿಕೋನಗಳಿಂದ ಪರಿಶೀಲಿಸಿ ಉಪಯುಕ್ತ ಅಂಶಗಳನ್ನಷ್ಟೆ ಒಳಗೊಂಡಿರುವ ಈ ಉಪನ್ಯಾಸ ಬರಹಗಳು ಆ ವ್ಯಕ್ತಿ ಮತ್ತು ಜೀವನವನ್ನು ಕುರಿತು ಆತ್ಮೀಯವಾಗಿ ಅಭ್ಯಾಸ ಮಾಡಿರುವ ಆರು ಜನರೂ ಕನ್ನಡದ ಶ್ರೇಷ್ಠ ವಿದ್ವಾಂಸರುಗಳಾಗಿರುವುದರಿಂದ ಕೃತಿಯ ತೂಕ ಹೆಚ್ಚಾಗಿದ್ದಲ್ಲಿ ಆಶ್ಚರ್ಯವಿಲ್ಲ.

ಕೃತಿಯ ಪ್ರಥಮ ಉಪನ್ಯಾಸಕರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು 'ಬಸವಣ್ಣನವರ ಜೀವನದ ಚಾರಿತ್ರಿಕ ಅಂಶಗಳು' ಎಂಬ ವಿಷಯವನ್ನು ಕುರಿತು ಸಮರ್ಥವಾಗಿ ಪ್ರಸ್ತಾಪಿಸಿದ್ದಾರೆ. ಶ್ರೀಯುತರು ಕನ್ನಡದ ಬಹುದೊಡ್ಡ ಸಂಶೋಧಕ

ವಿದ್ವಾಂಸರು ; ಅದರಲ್ಲಿಯೂ ' ಶರಣ ಸಾಹಿತ್ಯ ' ಹಾಗೂ ' ಕರ್ಣಾಟಕ ಸಂಸ್ಕೃತಿ ' ಗಳನ್ನು ಕುರಿತು ಆಳವಾಗಿ ಅಭ್ಯಾಸ ನಡೆಸಿದ ಸಿದ್ಧರಿದ್ದಾರೆ ಅವರು. ಬಸವಣ್ಣನವರ ಕಾಲ ಹುಟ್ಟುಕುಲ ಕಾರ್ಯಕ್ಷೇತ್ರ ಮತ್ತು ಮಾಡಿದ ಕ್ರಾಂತಿ ಆದ ಪರಿಣಾಮ ಇವುಗಳನ್ನು ನಿರ್ದಿಷ್ಟಗೊಳಿಸಲು ಚರಿತ್ರೆಯಿಂದ ಒದಗುವ ಸಾಮಗ್ರಿಗಳನ್ನು ಕಲೆಹಾಕಿ ಯಾವ ನಿರ್ಣಯಗಳನ್ನು ನಿರೂಪಿಸಬಹುದಾಗಿದೆ ಎಂಬುದೆ ಈ ಉಪನ್ಯಾಸ ಬರಹದ ಮುಖ್ಯ ಉದ್ದೇಶವಾಗಿದೆ. ಈ ಗುರಿಯನ್ನು ಡಾ. ಸ್ವಾಮಿಗಳು ತಮ್ಮದೆ ಆದ ರೀತಿಯಲ್ಲಿ ನಿರರ್ಗಳವಾಗಿ ನಿರ್ವಹಿಸಿ ತಲುಪಿದ್ದಾರೆ. ಸಮಸ್ಯೆಯಂತು ತುಂಬ ಜಟಿಲವಾದುದು. ವಾದ ವಿವಾದಗಳಿಗೆ ಇಲ್ಲಿ ಬೇಕಾದಷ್ಟು ಅವಕಾಶವಿದೆ. ಚರಿತ್ರೆಯಿಂದ ಒದಗುವ ಆಧಾರಗಳಿಗೇ ತೀರ ಅಂಟದೆ ಅವುಗಳಿಂದ ದೂರವೂ ಸಿಡಿಯದೆ ಯಾವುದು ನಿಜ ವಿರಬಹುದು ಎಂಬುದನ್ನು ಪ್ರತಿಪಾದಿಸಲು ಉಪನ್ಯಾಸಕರು ಪ್ರಯತ್ನಿಸಿದ್ದಾರೆ. ಬಿಜ್ಜಳನ ಮರಣದ ವಿಷಯದಲ್ಲಿ ಬಸವಣ್ಣನವರ ಪಾತ್ರವಿದೆಯೆ ? ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಆದರೆ ಇದನ್ನು ಇಷ್ಟೆ ಸರಿ ಎಂದು ನಿರ್ಣಾಯಕವಾಗಿ ಹೇಳುವುದು ಸಾಧ್ಯವಾಗುತ್ತಿಲ್ಲ. ಉಪನ್ಯಾಸಕರು ಸೂಚಿಸಿರುವಂತೆ ಈ ದಿಕ್ಕಿನಲ್ಲಿ ಚಾರಿತ್ರಿಕ ಸಂಶೋಧನೆಯ ಅಗತ್ಯವಿದೆ. ಎಲ್ಲಿಯವರೆಗೆ ಖಚಿತವಾದ ಸಾಮಗ್ರಿಗಳು ದೊರೆಯುವು ದಿಲ್ಲವೊ ಅಲ್ಲಿಯವರೆಗೆ ಈ ಸಮಸ್ಯೆಯೂ ಸಂದಿಗ್ಧವಾಗಿಯೆ ಉಳಿಯುತ್ತದೆ.

ಬಿಜ್ಜಳನ ಭಂಡಾರದಿಂದ ಹಣವನ್ನು ಬಸವಣ್ಣನವರು ತಮ್ಮ ಶರಣ ಬಳಗಕ್ಕೆ ಬಳಸಿದರೆ ಹೇಗೆ ಎಂಬುದೂ ಒಂದು ಜಟಿಲ ಸಮಸ್ಯೆಯೆ ಆಗಿ ಉಳಿದಿದೆ. ಚಿದಾನಂದ ಮೂರ್ತಿಯವರ ಅಭಿಪ್ರಾಯ ತೀರ ತಪ್ಪೆಂದು ತಿಳಿಯುವುದಕ್ಕೂ ಆಧಾರಗಳಿಲ್ಲ. ಕರ್ಣಾಟಕದ ಮೂಲೆ ಮೂಲೆಯಿಂದ ಕಲ್ಯಾಣದ ಕಡೆಗೆ ತಂಡ ತಂಡವಾಗಿ ಬಂದ ಶಿವಶರಣರಿಗೆ ಬಸವಣ್ಣನವರು ಬಿಜ್ಜಳನ ಆಶ್ರಯದಲ್ಲಿ ' ಕಾಯಕ 'ವನ್ನಾದರೂ ಒದಗಿಸದೆ ವಿಧಿಯಿರಲಿಲ್ಲ. ಏಕೆಂದರೆ ಬಸವಣ್ಣನವರು ಯಾರನ್ನೂ ನಿರಾಶೆಗೊಳಿಸುವ ಮನುಷ್ಯರಲ್ಲ. ಇದೂ ಒಂದರ್ಥದಲ್ಲಿ ಚಿದಾನಂದ ಮೂರ್ತಿಯವರ ಅಭಿಪ್ರಾಯಕ್ಕೆ ಉಪಷ್ಟಂಭಕವಾಗುತ್ತದೆ. ವರ್ಣಸಂಕರದ ಸಮಸ್ಯೆಯಲ್ಲಿ ಬಿಜ್ಜಳನನ್ನು ಕಟಕಿ ಮಾತಾಡುವ ಕಾರಣ ಕಾಣುವುದಿಲ್ಲ. ಏಕೆಂದರೆ ಪರಿಸ್ಥಿತಿ ಬಿಜ್ಜಳನನ್ನು ಹಾಗೆ ಪ್ರೇರಿಸಿರಬಹುದು. ಎಷ್ಟಾದರೂ ಅದು ರಾಜಕೀಯ ; ಅಥವಾ ಬಿಜ್ಜಳ ಕರ್ಣಾಟಕದ ಪಿಲಾತನಿರಬಹುದೆ ? (ಆ ಸಂದರ್ಭಕ್ಕೆ ಹೊಂದಿಕೊಂಡಂತೆ ಮಾತ್ರ).

ನಮ್ಮ ಇಂದಿನ ಬದುಕು ಈ ಸ್ಥಿತಿಯಲ್ಲಾದರೂ ಇರುವುದಕ್ಕೆ ಬಸವಣ್ಣನವರಂಥ ಮಹನೀಯರುಗಳೆ ಕಾರಣ. ಕಾಲಾನುಕಾಲಕ್ಕೆ ಇವರು ಹುಟ್ಟಿ ಸಮಾಜದ ಓರೆ ಕೋರೆಗಳನ್ನು ತಿದ್ದಿ ತೀಡಿ ಓರಣಗೊಳಿಸಿದುದರ ಪರಿಣಾಮವೆ ಈ ಸಂಸ್ಕೃತಿ ಸಂಪನ್ನ ಕರ್ಣಾಟಕ ಸಮಾಜ. ಅಂಥ ಕಾರಣ ಪುರುಷರು ಜನಮನದ ಸ್ಮೃತಿಯಿಂದ ದೂರವುಳಿಯುವುದು ಸಾಧ್ಯವೆ ಅಲ್ಲದ ಮಾತು. ಜನತೆ ಅಂಥವರನ್ನು ಎಷ್ಟರಮಟ್ಟಿಗೆ ಕೊಂಡಾಡುತ್ತದೆಂದರೆ ಅವರಿಗೆ ಚಾರಿತ್ರಿಕ ಮಹತ್ವ ಬರುವುದಕ್ಕೆ ಮುಂಚೆಯೆ ಪೌರಾಣಿಕ

ಮಹತ್ವ ಸಂದುಬಿಡುತ್ತದೆ. ಯಾವಾಗ ಒಬ್ಬ ವ್ಯಕ್ತಿಯು ಜೀವನ ಜಾನಪದ ಸಂಗತಿಯಾಗಿ ಪರಿಣಮಿಸಿಬಿಡುತ್ತದೊ ಆಗ ಅದು ಯಾವ ಕವಿಗೆ ಆದರೂ ಸುಗ್ರಾಸ ಕಾವ್ಯ ವಸ್ತುವಾಗುವುದರಲ್ಲಿ ಅಚ್ಚರಿಪುಳಿಯುವುದಿಲ್ಲ. ಮತ್ತಾವ ಮಹಾಪುರುಷನ ವಿಷಯಕ್ಕೂ ಈ ಮಟ್ಟಿನ ಸಾಹಿತ್ಯ ಸೃಷ್ಟಿಯಾಗಿಲ್ಲವೆನ್ನುವಷ್ಟರ ಮಟ್ಟಿಗೆ ಆದರ ವಿಪುಲತೆಯಿದೆ ಎನ್ನುವುದೆ ತಿಳಿಸುತ್ತದೆ ಬಸವಣ್ಣನವರ ಜನಪ್ರಿಯತೆಯನ್ನು. ಇದೆ ಕಾರಣಕ್ಕಾಗಿಯೆ ಬಸವಣ್ಣನವರ ವ್ಯಕ್ತಿತ್ವವು ತಲೆಮಾರಿನಿಂದ ತಲೆಮಾರಿಗೆ ಕವಿಯಿಂದ ಕವಿಗೆ ರೂಪಾಂತರ ಹೊಂದಬೇಕಾಯಿತು.

ಎರಡನೆಯ ಉಪನ್ಯಾಸಕರಾದ ಶ್ರೀ ಹಂಡಿಯವರು 'ಕನ್ನಡ ಕಾವ್ಯಗಳಲ್ಲಿ ಬಸವಣ್ಣನವರ ವ್ಯಕ್ತಿ ಚಿತ್ರ' ಎಂಬ ಉಪಯುಕ್ತ ಭಾಷಣದಲ್ಲಿ ಹರಿಹರ ಪಾಲ್ಕುರಿಕೆ ಸೋಮನಾಥ ಭೀಮಕವಿ ಮತ್ತು ಸಿಂಗಿರಾಜ ಈ ಕವಿಗಳ ಕೈ ಕುಂಚದಲ್ಲಿ ಬಸವಣ್ಣನವರ ವ್ಯಕ್ತಿತ್ವ ಮುಖ್ಯವಾಗಿ ಯಾವ ಯಾವ ವರ್ಣ ವೈಚಿತ್ರ್ಯಗಳಿಂದ ಪಡಿಮೂಡಿದೆ ಎಂಬುದನ್ನು ರೇಖಿಸಲು ಪ್ರಯತ್ನಿಸಿದ್ದಾರೆ. ಉಪನ್ಯಾಸಕರು ಆಯಾ ಕವಿಗಳ ದೃಷ್ಟಿಕೋನ ಮತ್ತು ನಂಬಿಕೆಗಳ ನಿಲುವಿನಲ್ಲಿಯೆ ನಿಂತು ಬಸವಣ್ಣನವರ ವ್ಯಕ್ತಿತ್ವಚಿತ್ರಣಕ್ಕೆ ತೊಡಗಿರುವುದು ಅತ್ಯಂತ ಸಮಂಜಸ. ಜೀವಿತದ ಮಹತ್ವದ ಸನ್ನಿವೇಶಗಳನ್ನು, ನಾಲ್ಕೂ ಕವಿಗಳಲ್ಲಿ ಯಾವ ಯಾವ ಸ್ವರೂಪವನ್ನು ತಳೆದಿದೆ ಎಂಬ ಕುತೂಹಲದ ಹಿನ್ನೆಲೆಯಲ್ಲಿ, ಹೋಲಿಸಿ ವಿಚಾರಮಾಡಿದ್ದಾರೆ. ಜತೆಜತೆಯಲ್ಲಿಯೆ ಬಸವಣ್ಣನವರ ವ್ಯಕ್ತಿತ್ವ ವಿಕಾಸವನ್ನೂ ರೇಖಿಸಿದ್ದಾರೆ. ವೈಯಕ್ತಿಕ ವಿಮರ್ಶೆಯನ್ನೂ ಕೊಟ್ಟಿದ್ದಾರೆ. ಹರಿಹರ ಕೊಟ್ಟಿರುವ ವ್ಯಕ್ತಿಚಿತ್ರದ ಕಡೆಗೆ ತಮ್ಮ ಒಲವನ್ನು ತೋರಿರುವುದು ಗಮನಾರ್ಹವಾಗಿದೆ.

ಆದರೆ ಬಸವಣ್ಣನವರ ವ್ಯಕ್ತಿಚಿತ್ರದ ಒಂದು ಅಖಂಡರೂಪವನ್ನು ಚಿತ್ರಿಸಿಕೊಳ್ಳುವುದಕ್ಕೆ ಶ್ರೋತೃ ಕೊಂಚ ಕ್ಲೇಶಪಡಬೇಕಾದ ಪ್ರಮೇಯವಿದೆ. ಏಕೆಂದರೆ ಉಪನ್ಯಾಸಕರು ಸನ್ನಿವೇಶಗಳ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ವಿಚಾರಿಸುತ್ತಾ ವಿಮರ್ಶಿಸುತ್ತಾ ಅಭಿಪ್ರಾಯ ಸೂಚಿಸುತ್ತಾ ಹೆಜ್ಜೆಹೆಜ್ಜೆಗೂ ಕೇಳುಗನ ಮನಸ್ಸನ್ನು ಅಂಶ ಅಂಶಗಳ ಕಡೆಗೆ ಸೆಳೆಯುವುದರಿಂದ ಈ ಕ್ಲೇಶ ಸಂಭವಿಸುವಂತೆ ತೋರುತ್ತದೆ. ಇದರ ಬದಲಾಗಿ ನಾಲ್ಕೂ ಚಿತ್ರಗಳನ್ನು ಬೇರೆ ಬೇರೆಯಾಗಿಯೇ ಕೊಟ್ಟು ಕಡೆಯಲ್ಲಿ ತಮ್ಮ ಮತವನ್ನು ಸೂಚಿಸಿ ಬಿಟ್ಟಿದ್ದರೆ ಕೇಳುಗರು ಸರಳವಾಗಿ ಒಂದು ಚಿತ್ರವನು, ರೂಪಿಸಿಕೊಳ್ಳುತ್ತಿದ್ದರು. ಬಸವಣ್ಣನವರ ಒಂದು ಒಳ್ಳೆಯ ಚಿತ್ರವನ್ನು ಈ ಉಪನ್ಯಾಸದಿಂದ ರೂಪಿಸಿಕೊಳ್ಳುವುದಕ್ಕೆ ಕೊಂಚ ಕಷ್ಟವಾದರೂ ಸಾಧ್ಯ ಎಂಬುದು ಕಡಮೆಯ ಲಾಭವೇನೂ ಅಲ್ಲ.

'ಅನುಭಾವ'ವೆನ್ನುವುದೊಂದು ಯೌಗಿಕ ನಿಲವು. ಈ ನಿಲವು ಪುಗಸಟ್ಟೆ ಸಿಕ್ಕುವ ಪದಾರ್ಥವಲ್ಲ. ಅನೇಕ ಬಾಧನೆಗಳನ್ನು ಮೆಟ್ಟಿ ಮೇಲೇರಿ ನಿಲ್ಲಬೇಕಾದ ಸಾಧನೆ ಅದು. ಈ ಎತ್ತರವನ್ನು ಮುಟ್ಟಿ ನಿಜವಾದ ಸುಖವನ್ನು ಅನುಭವಿಸುವ

ಆತ್ಮಗಳು ಜಗತ್ತಿನಲ್ಲಿ ವಿರಳವಾಗಿ ದೊರೆಯುತ್ತಾರೆ. ಈ ವಿರಳ ಪಂಕ್ತಿಯಲ್ಲಿಯೂ ಅಗ್ರಮಾನ್ಯತೆಗೆ ಅರ್ಹರಿದ್ದಾರೆ ಬಸವಣ್ಣನವರು. ಪ್ರೊ. ಎಸ್. ಎಸ್. ಭೂಸನೂರಮಠ ಅವರು ತಮ್ಮ ವಿದ್ವತ್‌ಪೂರ್ಣ ಉಪನ್ಯಾಸದಲ್ಲಿ ಈ ಅಂಶವನ್ನು ಸವಿವರವಾಗಿ ಪ್ರಸ್ತಾಪಿಸಿ ಸ್ಪಷ್ಟಗೊಳಿಸಿದ್ದಾರೆ. ವ್ಯಾಖ್ಯಾನಕ್ಕೆ ಸಿಲುಕದ ಅನುಭಾವದ ನಿಲುವನ್ನು ಹೃದಯಂಗಮವಾಗಿ ವ್ಯಾಖ್ಯಾನಿಸಿದ್ದಾರೆ. ಅದರ ಗಂಧ ನಮ್ಮ ಮೂಗಿಗೆ ತೀಡಿ ಮನಸ್ಸಿಗೆ ಮುಟ್ಟಿ ಯಾವುದೊ ಒಂದು ಹೊಸ ಅನುಭವದ ಹೊಸ ಲೋಕಕ್ಕೆ ಕಾಲಿಟ್ಟಂತೆ ಭಾಸಗೊಳಿಸುತ್ತದೆ. ಶಿವಸೃಷ್ಟಿಯನ್ನು ಈ ಶಿವದೃಷ್ಟಿಯಿಂದಲೆ ಪರಿವೀಕ್ಷಿಸಿದಾಗ ಯಾವ ಬಗೆಯ ಉಸಿರಾಟ ಚೇತನದಲ್ಲಿ ಆರಂಭವಾಗುತ್ತದೆ ಎಂಬುದನ್ನು ಬಸವಣ್ಣನವರ ಅನುಭಾವದೃಷ್ಟಿ ಸಮರ್ಥವಾಗಿ ಸಹೃದಯರ ಮನಸ್ಸಿಗೆ ನಿವೇದಿಸುತ್ತದೆ.

ಬಸವಣ್ಣನವರ ಅಂತಃಕರಣ ಅತ್ಯಂತ ಕೋಮಲವಾದುದು. ಸಮಾಜವನ್ನು ಸುಧಾರಿಸುವ ಸಲುವಾಗಿ ಸೊಂಟಕಟ್ಟಿ ನಿಂತ ವ್ಯಕ್ತಿಗೆ ಅನಿವಾರ್ಯವಾಗಿ ಇರಬೇಕಾದ ಮೃದುತೆ ಸಹಾನುಭೂತಿ ಅನುಕಂಪೆ ಎಲ್ಲಕ್ಕಿಂತ ಮೇಲಾಗಿ ಸರಳ ಮನೋಧರ್ಮ ಇವುಗಳು ಬಸವಣ್ಣನವರಲ್ಲಿ ಉತ್ಕಟ ಪ್ರಮಾಣದಲ್ಲಿ ಆವಿಷ್ಕಾರಗೊಂಡಿದ್ದವು. ಇವಿಷ್ಟೆ ಸಾಕಾಗಿತ್ತು ಬಸವಣ್ಣನವರ ವ್ಯಕ್ತಿತ್ವವನ್ನು ಉಜ್ವಲಗೊಳಿಸುವುದಕ್ಕೆ. ಇವುಗಳ ಜತೆಗೆ ಸಂವೇದನಾಶೀಲವಾದ ಕವಿಮನೋಧರ್ಮವೂ ಸೇರಿದರೆ ಕೇಳಬೇಕೆ! ಬಂಗಾರಕ್ಕೆ ಬಂಗಾರವೆ ಬೆರೆತಂತಾಗಿ ಆಡಿದ ಮಾತೆಲ್ಲ ಸಾಹಿತ್ಯವಾಯಿತು. ಮಹತ್ವದ ಮಾತೆಂದರೆ ಅದರಲ್ಲಿ ಬಹು ಭಾಗ ಜನಪದ ಸಾಹಿತ್ಯದಲ್ಲಿ ಪರಿಣಾಮ ಹೊಂದಿತು—ಗಾದೆಗಳಾಗಿ ನುಡಿಗಟ್ಟುಗಳಾಗಿ, ಸೂಕ್ತಿಗಳಾಗಿ ಹಿತವಚನಗಳಾಗಿ ಮಿತವಚನಗಳಾಗಿ ಪುರಾಣವಾಗಿ ಪವಾಡವಾಗಿ ಕತೆಯಾಗಿ ಕಾವ್ಯವಾಗಿ ಇತ್ಯಾದಿಯಾಗಿ. ಪ್ರೊ. ಎಸ್. ಎಸ್. ಮಾಳವಾಡ ಅವರು 'ಬಸವಣ್ಣನವರ ಸಾಹಿತ್ಯ ಸೃಷ್ಟಿ'ಯನ್ನು ಹೇರಳವಾಗಿ ಉದ್ಧರಣೆಗಳೊಡನೆ ಪ್ರಸ್ತಾಪಿಸಿದ್ದಾರೆ. ಪ್ರತ್ಯೇಕವಾದ ಒಂದು ಕಾವ್ಯಮೀಮಾಂಸೆಗೆ ವಿಷಯವಾಗುವಷ್ಟರಮಟ್ಟಿನ ಹರಹುಳ್ಳ ಸಾಹಿತ್ಯಸೃಷ್ಟಿ ಬಸವಣ್ಣನವರದ್ದು. ಅದನ್ನು ಮಿತವಾದ ಮಾರ್ಗದಲ್ಲಿ ಹಿತವಾದ ರೀತಿಯಲ್ಲಿ ಅಡಕಗೊಳಿಸುವುದರಲ್ಲಿ ಉಪನ್ಯಾಸಕರು ಯಶಸ್ಸು ಪಡೆದಿದ್ದಾರೆ.

ರಾ. ಯ. ಧಾರವಾಡಕರರ 'ಬಸವಣ್ಣನವರ ಸಂದೇಶ ಮತ್ತು ಜೀವನಸಿದ್ಧಿ' ಎಂಬ ಉಪನ್ಯಾಸದಲ್ಲಿ ಬಸವಣ್ಣನವರ ಸಾಹಿತ್ಯಸೃಷ್ಟಿ ಮತ್ತೊಮ್ಮೆ ಮರುಕಳಿಸಿದಂತಾಗಿದೆ. ಸಂತ ಪಂಕ್ತಿಗೆ ಸೇರಿದ ಬಸವಣ್ಣನವರ ಬದುಕೆ ಒಂದು ಸಂದೇಶವಾಗಿದೆ. ಮಾನವತೆಯ ಆಧ್ಯಾತ್ಮ ಸಾಹಸದ ಒಂದು ಸಂಕೇತವಾಗಿದೆ. ಆರೋಗ್ಯಕರವಾದ ಮನಸ್ಸು ಆರೋಗ್ಯಕರವಾದ ಸಮಾಜ ನಿರ್ಮಾಣಕ್ಕೆ ತಳಹದಿಯಾಗುತ್ತದೆ. ಅಂಥ ಮನಸ್ಸನ್ನುಪಡೆಯಲು ಬಸವಣ್ಣನವರು ಮಾರ್ಗದರ್ಶಿಗಳಾಗಿದ್ದಾರೆಂಬುದನ್ನು ಈ ಉಪನ್ಯಾಸದಲ್ಲಿ ಮನಗಾಣಬಹುದು. ಬಸವಣ್ಣನವರು ತಮ್ಮ ಬದುಕಿನ ಪರಿಮಿತ ಕಾಲದಲ್ಲಿಯೆ ಈ ಸಿದ್ಧಿಯನ್ನು ಸಾಧಿಸಿರುವುದು ನಿಜಕ್ಕೂ ಆಶ್ಚರ್ಯಕರವಾಗಿದೆ.

ಅವರ ಬದುಕನ್ನು ನಿಗವಿಟ್ಟು ಅಭ್ಯಾಸ ಮಾಡಿದ ಯಾರೂ ತಮ್ಮ ಪೂರ್ವ ಸ್ವರೂಪದಲ್ಲಿಯೆ ಉಳಿಯುವುದು ಕಷ್ಟ. ಏನಾದರೊಂದು ಬದಲಾವಣೆ ಅನಿವಾರ್ಯ ವಾಗಿರುತ್ತದೆ. ಅಷ್ಟು ಪ್ರಭಾವಶಾಲಿ ಮತ್ತು ಪರಿಣಾಮಕಾರಿ ಅವರ ಸಾಧನೆ ಸಿದ್ಧಿಗಳು.

ಕಡೆಯದಾಗಿ 'ಬಸವಣ್ಣನವರ ವ್ಯಕ್ತಿತ್ವ ವಿಕಾಸ'ವನ್ನು ಕುರಿತು ಡಾ. ಆರ್. ಸಿ. ಹಿರೇಮಠ ಅವರು ಉಪನ್ಯಾಸಿಸಿದ್ದಾರೆ. ಬಸವಣ್ಣನವರು ಏನುಂಟು ಏನಲ್ಲ ಎಂಬುದರಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದೆ ಸಾಹಸದ ಸಂಗತಿಯಾಗುತ್ತದೆ. ಬಸವಣ್ಣನವರ ವ್ಯಕ್ತಿತ್ವ ರೂಪಣದಲ್ಲಿ ಯಾವ ಯಾವ ಪ್ರಕೃತಿ ಧಾತುಗಳು ಯಾವ ಯಾವ ಪ್ರಮಾಣದಲ್ಲಿ ಪಾತ್ರವಹಿಸಿ ಅಂಥ ಒಂದು ಬಂಗಾರದ ಬದುಕನ್ನು ರೂಪಿಸಿದುವೊ ಹೇಳುವುದು ಕಷ್ಟ. ಬಸವಣ್ಣನವರು ಪ್ರಥಮತಃ ಮನುಷ್ಯರು ತೀವ್ರ ಸಂವೇದನಾಶೀಲತೆಯುಳ್ಳ ಮರ್ತ್ಯರು. ಅವರು ಜೀವನವನ್ನು ಭೂಮಿಯ ಮೇಲೆ ಭದ್ರವಾಗಿ ನಿಂತು ಸಾರ್ಥಕತೆಯ ದೃಷ್ಟಿಯಿಂದ ಪರಿಭಾವಿಸಿದರು. ಅದರಂತೆ ತಮ್ಮ ತನುವ ತಾವು ತಿದ್ದಿಕೊಂಡರು; ತಮ್ಮ ಮನವ ತಾವು ಸಂತೈಸಿಕೊಂಡರು. ಆ ಮೂಲಕ ಸಂತರಾದರು ಸಿದ್ಧರಾದರು; ಬೇರೆಯವರಿಗೆ ಮಾದರಿಯಾದರು. ಅವರು ಹೇಳಿ ಮಾಡಿಸಿದವರಲ್ಲ, ಮಾಡಿ ತೋರಿಸಿದವರು. ಆಡಿದ್ದಕ್ಕೂ ಮಾಡಿದ್ದಕ್ಕೂ ಸಾಮರಸ್ಯವನ್ನು ಸಾಧಿಸಿದ ರೀತಿಯಲ್ಲಿಯೆ ಬಸವಣ್ಣನವರ ವ್ಯಕ್ತಿತ್ವದ ಮಹತ್ವವಿರುವುದು. ಇಂಥ ಮುಖ್ಯ ವಿವರಗಳನ್ನು ಉಪನ್ಯಾಸಕರು ಬಸವಣ್ಣನವರ ಜೀವನವನ್ನೆ ಒಳಹೊಕ್ಕು ನೋಡಿ ಅವರ ಮಾತುಗಳಲ್ಲಿಯೆ ವರ್ಣಿಸಲು ಪ್ರಯತ್ನಿಸಿದ್ದಾರೆ. ಇಂಥಲ್ಲೆಲ್ಲ ಆಯಾ ಸಂತರನ್ನು ಅವರ ಮಾತುಗಳಲ್ಲಿಯೆ ಹೇಳಿ ಕೈತೊಳೆದುಕೊಳ್ಳಬೇಕು. ಏಕೆಂದರೆ 'ಸಂಗನ ಬಸವಣ್ಣ ನಿಂದ ನಿಲವನುಪಮಿಸಬಾರದು.'

ಒಟ್ಟಿನಲ್ಲಿ ಈ ಉಪನ್ಯಾಸಗಳು ಹೆಚ್ಚು ಉಪಯುಕ್ತವಾಗಿದೆ. ಬಸವಣ್ಣನವರ ವ್ಯಕ್ತಿತ್ವದ ಎಲ್ಲ ವಿವರಗಳು ಇಲ್ಲಿ ದೊರೆಯದಿದ್ದರೂ ಆ ದಿಕ್ಕಿನಲ್ಲಿ ವಿಚಾರ ಮಾಡುವವರಿಗೆ ಒಂದು ಮಹತ್ವದ ಕೈಪಿಡಿಯಂತಿದೆ. ಕರ್ಣಾಟಕ ವಿಶ್ವವಿದ್ಯಾಲಯ ಇಂಥ ಸಂತರ ಮತ್ತು ಮಹಾಕವಿಗಳ ಜೀವನ ಹಾಗೂ ಕೃತಿಪರಿಚಯ ಮಾಡಿಕೊಡುವ ಸ್ತುತ್ಯಾಕಾರ್ಯವನ್ನು ಕೈಕೊಂಡಿರುವುದು ನಿಜವಾಗಿಯೂ ಅಭಿನಂದನೀಯ.

—ಎನ್. ಬೋರಲಿಂಗಯ್ಯ

**ಕಾವೇರಿಯ ಅರ್ತರವ ;** ಲೇಖಕಿಯರು, ಎನ್. ಪಂಕಜ ; ಪ್ರಕಾಶಕರು, ಕಾವ್ಯಾಲಯ, ಮೈಸೂರು ; ಪುಟ ೪೩೬ ಬೆಲೆ ಸಾದಾ ೫.೨೫, ಉತ್ತಮ ೭.೨೫.

ಜೀವನದಲ್ಲಿ ಬಾಹ್ಯಘಟನೆಗಳಿಗಿಂತಲೂ ಆಂತರಿಕ ಘಟನೆಗಳು ಹೆಚ್ಚು ಜಟಿಲ ಹಾಗೂ ಸಂಕೀರ್ಣ ಸ್ವರೂಪದವಾಗಿರುತ್ತವೆ. ಸಂಸಾರದ ಸಮೃದ್ಧಿ ಅಥವಾ ಅಶಾಂತಿಗೆ ಈ ಮಾನಸಿಕ ಸ್ಥಿತಿಗತಿಗಳೆ ಮೂಲಕಾರಣ. ಪ್ರೇಮಲ ವಾತಾವರಣದಿಂದ ಕೂಡಿದ

ನಿರ್ಮಲ ಸಂಸಾರದ ಕನಸು ಕಾಣುತ್ತಿರುವ ಈ ಲೇಖಕಿಯರು ಸಾಂಸಾರಿಕ ಜೀವನದ ಪ್ರಥಮ ಸೋಪಾನದಂತೆ ಇರುವ ದಾಂಪತ್ಯವನ್ನು ಕುರಿತು ಪ್ರಧಾನವಾಗಿ ಪ್ರಸ್ತಾಪಿಸುವುದರಿಂದ ಈ ಪ್ರಯತ್ನ ಸ್ವಾಗತಾರ್ಹವಾಗಿದೆ. ಕೃತಿಯನ್ನು ಕೈಗೆತ್ತಿಕೊಂಡ ಯಾವ ಓದುಗನೂ (ಅದರ ಬೀಸಿಗೆ ಕೊಂಚ ಬೇಸರಿಸಿದರೂ) ನಿರಾಶನಾಗುವ ಕಾರಣವಿಲ್ಲ. ಏಕೆಂದರೆ ಗಂಡಸಾಗಿ ತಿಳಿಯಲಾಗದ ಸ್ತ್ರೀಹೃದಯದ ಕೆಲವು ರಹಸ್ಯಗಳು ಇಲ್ಲಿ ಬಯಲುಬಿದ್ದಿರುವುದನ್ನು ಗಮನಿಸಿ ತೃಪ್ತಿ ಪಡೆಯಬಹುದಾಗಿದೆ.

ಲೇಖಕಿಯರ ಆಲೋಕನಕ್ಕೆ ಒಳಗಾಗಿರುವ ಸಮಾಜವು ಬಲುಮಟ್ಟಿಗೆ 'ಕಲಿತ ಮಂದಿ'ಗಳದ್ದಾಗಿರುವುದರಿಂದ ಹುಟ್ಟಿಕೊಳ್ಳುವ ಸಮಸ್ಯೆಗಳು ಸಹಜವಾಗಿಯೆ ಹಳತು-ಹೊಸತುಗಳ ತಾಕಲಾಟದ ಪರಿಣಾಮವಾಗಿರುತ್ತವೆ. ಹಳೆಯದನ್ನು ಸುಲಭವಾಗಿ ಬಿಡಲಾರದ ಹೊಸತನ್ನು ಧೈರ್ಯವಾಗಿ ಒಪ್ಪಿಕೊಳ್ಳಲಾರದ ಸಂದಿಗ್ಧ ಪರಿಸ್ಥಿತಿಯಲ್ಲಿ ಬಾಳು ಅಸಹನೆಯ ಕುಲುಮೆಯಾಗುತ್ತದೆ. 'ಕಾವೇರಿಯ ಆರ್ತರವ'ದ ಸಮಾಜ ಜೀವಿಗಳು ಎದುರಿಸುತ್ತಿರುವ ಸಮಸ್ಯೆ ಈ ನೆಲಗಟ್ಟಿಗೆ ಸಂಬಂಧಿಸಿದ್ದು ಓದುಗನ ಬದುಕಿಗೆ ತೀರ ಹತ್ತಿರವಾಗುವುದರಿಂದ ಕುತೂಹಲದ ಕೆರಳುವಿಕೆ ಅಪ್ರಯತ್ನಪೂರ್ವಕವಾದುದು.

ಉನ್ನತ ಮಟ್ಟದ ಉದಾತ್ತ ಸ್ನೇಹಕ್ಕೆ ನಾವು ಮದುವೆ ಎಂದು ಕರೆಯಬಹುದು. ಸ್ನೇಹ ಸಂಘಟಿಸುವುದೆ ಸಮಾನ ಮನೋಧರ್ಮಗಳಲ್ಲಿ ಮಾತ್ರ. ಆದರೆ ಇದು ತೀರ ವಿರಳ. ಇದಕ್ಕೆ ಕಾರಣಗಳು ಅನೇಕ. ಇದರಲ್ಲಿ ಕೆಲವನ್ನು ಮಾತ್ರ ಈ ಕಾದಂಬರಿ ಯಥಾವತ್ತೆ ರೇಖಿಸುತ್ತದೆ. ಮತ್ತೆ ಕೆಲವನ್ನು ಸೂಚಿಸುತ್ತದೆ. ಉಳಿದ ಹಲವನ್ನು ಓದುಗರ ಆಲೋಚನೆಗೇ ಬಿಡುತ್ತದೆ. ಭಾರತೀಯ ಸಮಾಜ ಜೀವನದಲ್ಲಿ ಇದುವರೆವಿಗೂ ಬಹುಶಃ ತಾತ್ವಿಕ ವಿಷಯವಾಗಿಯೆ ಉಳಿದಿದ್ದ ಈ ಪ್ರಶ್ನೆ ಇಂದು ವಿಚಾರಣೀಯ ಜ್ವಲಂತ ಸಮಸ್ಯೆಯಾಗಿದೆಯೆಂಬುದನ್ನು ಈ ಕೃತಿ ಸೂಚಿಸುವಂತೆ ತೋರುತ್ತದೆ. ಆದುದರಿಂದ ಇಲ್ಲಿಯ ಕತೆ ತೀರ ಗೌಣ. ಏನಿದ್ದರೂ ಅದು ಕೃತಿಯಲ್ಲಿ ಒಡೆದು ಕಾಣುತ್ತಿರುವ ಸಮಸ್ಯೆಯನ್ನು ಉಲ್ಬಣಗೊಳಿಸುವುದಕ್ಕೂ ತತ್ಪರಿಣಾಮದಿಂದ ಘಟನೆಗಳನ್ನು ಜೋಡಿಸುವುದಕ್ಕೂ ಪೋಷಕ ಸಾಧನ ಮಾತ್ರವಾಗಿದೆ. ಇಲ್ಲಿ ಘಟಿಸುವ ಎಲ್ಲ ಬಾಹ್ಯ ಘಟನೆಗಳೂ ಸಂಬಂಧಪಟ್ಟ ಪಾತ್ರಗಳ ಮಾನಸಿಕ ದೃಢತೆ ಹಾಗೂ ದೌರ್ಬಲ್ಯಗಳನ್ನು ಒರೆ ಹಚ್ಚುವ ಮಸೆಗಲ್ಲುಗಳಂತೆ ಬರುತ್ತವೆ. ಇಲ್ಲಿಯ ಘಟನೆಗಳಿಗೆಲ್ಲ ಮಾತೃಕೆಯಂತಿರುವ ನಾಗರಾಜನ ಸಾವು ಹೆಚ್ಚು ಶಕ್ತಿಯುತವಾದ ಸಂದರ್ಭವಾಗಿದೆ. ದುರ್ದೈವದ ಮಾತೆಂದರೆ ಯಾವ ಸಂದರ್ಭದ ಪರಿಣಾಮವಾಗಿ ಉಳಿದೆಲ್ಲ ಸನ್ನಿವೇಶಗಳೂ ಜೀವಂತಿಕೆಯನ್ನು ಪಡೆದುಕೊಳ್ಳುತ್ತವೊ ಅದೇ ಸಂದರ್ಭ ನಿರುತ್ಸಾಹವನ್ನು ಮೂಡಿಸುತ್ತದೆ. ನಾಗರಾಜನ ಶವದಷ್ಟೆ ನಿರ್ವೀರ್ಯವಾಗಿ ತೋರುತ್ತದೆ. ಕಾರಣ ಕಾದಂಬರಿಕಾರರ ಕಲ್ಪನೆಯಲ್ಲಿರುವ ನಾಗರಾಜನಿಗೂ ಓದುಗರ ಎದೆಯಲ್ಲಿ ಪ್ರತಿಬಿಂಬಿತವಾಗುವ ನಾಗರಾಜನಿಗೂ ಬಹು ದೊಡ್ಡ ಅಂತರವಿದೆ. ಆಶ್ಚರ್ಯದ ಸಂಗತಿಯೆಂದರೆ

ನಾಗರಾಜ ಸತ್ತಮೇಲೆ ಕಾದಂಬರಿಯಲ್ಲಿ ಹೆಚ್ಚು ಜೀವಂತವಾಗಿ ಸುಳಿಯುತ್ತಾನೆ. ಪರಿಣಾಮವಾಗಿ ಆ ಮುಂದಿನ ಘಟನೆಗಳೆಲ್ಲ ಜೀವಂತವಾಗುತ್ತವೆ.

ಘಟನೆಗಳಲ್ಲಿ ಕಂಡುಬರುವ ಗಟ್ಟಿತನ, ಪಾತ್ರ ಪರಿಕಲ್ಪನೆಯಲ್ಲಿ ಉಳಿಯುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಪಾತ್ರಗಳ ಸ್ವಭಾವಕ್ಕೂ ಅವುಗಳ ನಂಬಿಕೆಗೂ ಇರುವ ವಿರೋಧಾಭಾಸ. ಕ್ಷಣಿಕವೂ ಕ್ಷುಲ್ಲಕವೂ ಆದ ಕಾರಣಗಳಿಗೆಲ್ಲ ಪಾತ್ರಗಳ ಮನೋಧರ್ಮ ಬಿರುಕು ಬಿಟ್ಟುಕೊಳುತ್ತದೆ. ಹಾಗಾಗಿ ಪಾತ್ರಗಳು ಯಾವುದಾದರೊಂದು ಗಟ್ಟಿ ನೆಲವನ್ನು ಆಶ್ರಯಿಸಿರುವಂತೆಯೆ ತೋರುವುದಿಲ್ಲ. ಕಾದಂಬರಿಯ ಕೇಂದ್ರ ಪಾತ್ರವಾದ ಕಮಲುವನ್ನೆ ಇದಕ್ಕೆ ನಿದರ್ಶನವಾಗಿ ತೋರಬಹುದು. ತಂದೆಯ ಅನಾಚಾರದ ಪರಿಣಾಮವಾಗಿ ಶಾಮಣ್ಣನ ಬದುಕು ಹಾಳಾಯಿತು ಎಂಬುದು ಕಮಲೆಯ ಬಲವಾದ ನಂಬಿಕೆ. ಆದರೆ ಇದೆ ತಂದೆಯ ಇನ್ನೊಬ್ಬ ಮಗ ನಾಗರಾಜನನ್ನು ಪ್ರೀತಿಸುವಾಗ ಕಮಲೆಯಲ್ಲಿ ಈ ಸಮಸ್ಯೆಯ ಗಂಧವೂ ಸುಳಿಯುವುದಿಲ್ಲ. ಮಾತ್ರವಲ್ಲ ನಾಗರಾಜನ ಕೆಲವು ಲಕ್ಷಣಗಳು ಗೋಪಿಯಲ್ಲಿವೆ ಎಂಬ ಕಾರಣಕ್ಕಾಗಿ ಅವನನ್ನೆ ಪ್ರೀತಿಸುವ ಹುಚ್ಚು ಪರಿವರ್ತನೆ ಬೇರೆ ಇದೆ. ಹಾಗೆ ನೋಡಿದರೆ ಈ ಕಾದಂಬರಿಯಲ್ಲಿ ಶಾಮಣ್ಣನ ಪಾತ್ರದಲ್ಲಿಯೆ ಸ್ವಲ್ಪ ಗಟ್ಟಿತನವಿರುವಂತಿದೆ. ತನ್ನ ಆರಂಭದ ಅನಿಸಿಕೆಗಳನ್ನು ಬಹುಮಟ್ಟಿಗೆ ಕಡೆಯತನಕ ಉಳಿಸಿಕೊಳ್ಳುವುದಕ್ಕಾಗಿ ಹೋರಾಡುತ್ತಾನೆ. ಕಮಲೆ ನಿರಾಧಾರವಾಗಿ ಕಲ್ಪಿಸಿಕೊಂಡ ಧೂರ್ತತನ ಶಾಮಣ್ಣನಲ್ಲಿ ಇಲ್ಲವೆ ಇಲ್ಲ. ಆತನ ಋಜು ಸ್ವಭಾವವನ್ನು ಈಕೆ ಹಾಗೆ ತಪ್ಪು ಗ್ರಹಿಸಿದ್ದಾಳೆ. ತಂದೆಯ ಗುಣಶೀಲಗಳು ಇವನಲ್ಲಿ ಬಂದಿದ್ದ ಪಕ್ಷದಲ್ಲಿ ತಾರಿಣಿಯ ಅನುರಾಗವನ್ನು ನಿರಾಕರಿಸುವ ಕಾರಣವಿರಲಿಲ್ಲ. ಬಹುಶಃ ಶಾಮಣ್ಣನಷ್ಟು ಆಳವಾಗಿ ಕಮಲೆಯನ್ನು ನಾಗರಾಜನೂ ಪ್ರೀತಿಸಿರಲಿಕ್ಕಿಲ್ಲ. ಅವನ ಬದುಕು ನಿಜವಾಗಿ ಹಾಳಾದದ್ದು ಕಮಲೆಯ ದುರ್ವರ್ತನೆಯಿಂದ. ನಾಗರಾಜನ ಜತೆಯಲ್ಲಿ ಅವಳೂ 'ನೆಗೆದುಬಿದ್ದಿ'ದ್ದರೆ ತಾರಿಣಿಯ ಬದುಕಾದರೂ ಹೂವಿನ ಹಾಸಿಗೆಯಾಗುತ್ತಿತ್ತು. ಹಾಗಾಗಿ ಶಾಮಣ್ಣನೆ ಇಲ್ಲಿ ಓದುಗರ ಅನುಕಂಪೆಗೆ ಪಾತ್ರ. ಲೇಖಕಿಯರು ತಿಳಿದಿರುವಂತೆ ಕಮಲೆ ಅಲ್ಲವೆ ಅಲ್ಲ. ಉಳಿದ ಯಾವ ಪಾತ್ರಗಳೂ ಜೀವಂತವಾಗಿ ಸುಳಿಯುವುದಿಲ್ಲ; ಮರಣಶಯ್ಯೆಯಲ್ಲಿ ಮಲಗಿಬಿಟ್ಟಿವೆ. ಸಾವಿತ್ರಿಯ ಮೌಢ್ಯ ಅಥವಾ ಮೌಗ್ಧ್ಯವನ್ನು 'ಹಾಸ್ಯ ಪ್ರವೃತ್ತಿ' ಎಂದು ಕರೆದಿರುವುದು ನಗೆಗೇಡು.

ಭಾಷೆ ಮತ್ತು ನಿರೂಪಣೆಗಳಲ್ಲಿ ಹೇಳಿಕೊಳ್ಳುವ ನಾವೀನ್ಯವಿಲ್ಲ. ಸಂಭಾಷಣೆ ಕೆಲವು ವೇಳೆ ಕೃತಕವಾಗಿ ಕಂಡರೂ 'ಕಲಿತ ಸಮಾಜ'ವನ್ನು ಪ್ರತಿನಿಧಿಸುವಂತಿದೆ. ಕಾದಂಬರಿಕಾರರ ಆಶಯ ಉದಾತ್ತವಾಗಿದ್ದು ಮನಸ್ಸು ಮಹತ್ವಾಕಾಂಕ್ಷೆಯಿಂದ ಪ್ರಫುಲ್ಲಿತವಾಗಿರುವುದರಿಂದ ಕೃತಿಯಲ್ಲಿ ಅಚ್ಚುಗಟ್ಟು ಉಳಿದುಬರುತ್ತದೆ. ಎಲ್ಲಿಯೂ ವಿಕಾರವಾಗುವುದಿಲ್ಲ.

—ಎನ್. ಬೋರಲಿಂಗಯ್ಯ

ಆಧುನಿಕ ಭಾಷಾವಿಜ್ಞಾನ ; ಲೇಖಕರು, ಜಿ. ಎಸ್, ಕುಳ್ಳಿ, ಪ್ರಕಾಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ೧೯೬೪. ಬೆಲೆ : ೦-೨೫

ಭಾಷಾವಿಜ್ಞಾನವು ಪ್ರಪಂಚದ ನಾನಾ ಭಾಗಗಳಲ್ಲಿ ಆಶ್ಚರ್ಯಪಡುವಹಾಗೆ ವಿವಿಧ ಮುಖಗಳಲ್ಲಿ ಬೆಳೆಯುತ್ತಿರುವುದು ವಿಜ್ಞಾನದ ಸರ್ವತೋಮುಖವಾದ ಮುನ್ನಡೆಗೆ ಒಂದು ಸಾಕ್ಷಿಯಾಗಿದೆ. ಭೌತಿಕ ಹಾಗು ಪ್ರಾಕೃತಿಕ ವಿಜ್ಞಾನಗಳಂತೆಯೇ ಇದೂ ಕೂಡ ವಾಸ್ತವಾಂಶಗಳನ್ನೇ ವಿಶೇಷವಾಗಿ ಗಮನಿಸಿ ಬೆಳೆಯುತ್ತಿರುವುದರಿಂದ ಒಂದು ಸುವ್ಯವಸ್ಥಿತವಾದ ವೈಜ್ಞಾನಿಕ ವಿಷಯವೆಂದು ಪರಿಗಣಿಸುವುದರಲ್ಲಿ ಯಾವ ಅಭ್ಯಂತರವೂ ತೋರುವುದಿಲ್ಲ. ಇಂತಹ ವೈಜ್ಞಾನಿಕ ವಿಷಯಗಳನ್ನು ಸಮರ್ಥ ವಿದ್ವಾಂಸರುಗಳಿಂದ ಸಾಮಾನ್ಯ ಜನತೆಗೆ ಉಪನ್ಯಾಸಗಳ ಮುಖಾಂತರ ಪರಿಚಯ ಮಾಡಿಸಿಕೊಟ್ಟು, ಅವುಗಳನ್ನು ಪರಿಷ್ಕರಿಸಿ ಪುಟ್ಟ ಪುಟ್ಟ ಪುಸ್ತಿಕೆಗಳ ರೂಪದಲ್ಲಿ ಮುದ್ರಿಸಿ ಸಾಧ್ಯವಾದಷ್ಟೂ ಕಡಿಮೆ ಬೆಲೆಯಲ್ಲಿ ಜನತೆಗೆ ದೊರೆಯುವಂತೆ ಮಾಡಿರುವ, ಮಾಡುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಅಭಿನಂದನಾರ್ಹವಾಗಿದೆ.

"ಆಧುನಿಕ ಭಾಷಾವಿಜ್ಞಾನ"ದ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಈ ಪುಸ್ತಿಕೆಯು ಐವತ್ತೊಂಬತ್ತು ಪುಟಗಳಿಂದ ಕೂಡಿದೆ ಈ ಪುಸ್ತಿಕೆಯಲ್ಲಿ (೧) ಪ್ರವೇಶ, (೨) ಭಾಷೆಯ ಕಲ್ಪನೆ,-ಅಂದು, ಇಂದು (೩) ಭಾಷಾಧ್ಯಯನದ ಇತಿಹಾಸ (೪) ಹೊಸ ತತ್ವಗಳು (೫) ಧ್ವನಿಮಾ, ಆಕೃತಿಮಾ ಇತ್ಯಾದಿ ಮತ್ತು (೬) ಭಾಷೆಯ ಮುಂದು, ಎಂಬ ಆರು ಅಧ್ಯಾಯಗಳಿವೆ. ಇದು ಲೇಖಕರೇ ತಮ್ಮ ಪ್ರಾಸ್ತಾವಿಕದಲ್ಲಿಯೇ ಹೇಳಿಕೊಂಡಿರುವಂತೆ, ದಿನಾಂಕ ೬-೨-೧೯೬೪ರಂದು ಅಂಕೋಲ ತಾಲ್ಲೋಕಿನ ಬಟಗೇರಿಯಲ್ಲಿ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣೋಪನ್ಯಾಸ ಮಾಲೆಯಲ್ಲಿ ಅವರು "ಆಧುನಿಕ ಭಾಷಾವಿಜ್ಞಾನ"ವನ್ನು ಕುರಿತು ಮಾಡಿದ ಭಾಷಣ. ಈ ಭಾಷಣವನ್ನು ಪರಿಷ್ಕರಿಸಿ ಪುಸ್ತಕರೂಪದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯವರು ಪ್ರಕಟಿಸಿದ್ದಾರೆ. ಈ ಪುಸ್ತಿಕೆಯನ್ನು ಗಮನಿಸಿದಾಗ ಲೇಖಕರು ಭಾಷಾವಿಜ್ಞಾನದಲ್ಲಿ ಇಲ್ಲಿಯತನಕ ನಡೆದಿರುವ ಎಲ್ಲಾ ಮಹತ್ವಪೂರ್ಣವಾದ ಕೆಲಸ ಕಾರ್ಯಗಳನ್ನು ತಮ್ಮ ಉಪನ್ಯಾಸ ವ್ಯಾಪ್ತಿಗೆ ಒಳಪಡಿಸಿಕೊಳ್ಳುವ ಪ್ರಯತ್ನ ನಡೆಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದು ನಿಜಕ್ಕೂ ಮೆಚ್ಚುವಂತಹ ಸಂಗತಿಯೇ ಸರಿ. ಲೇಖಕರು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ನಿರೂಪಣೆಗೆ ಅಳವಡಿಸಿಕೊಂಡಿರುವ ಭಾಷೆಯಂತೂ ತುಂಬ ಸರಳವಾಗಿದೆ. ಇಂತಹ ವೈಜ್ಞಾನಿಕ ವಿಷಯಗಳನ್ನು ಕನ್ನಡದಲ್ಲಿ ಅದರಲ್ಲೂ ಸರಳವಾದ ಭಾಷೆಯಲ್ಲಿ ಸ್ಪಷ್ಟವಾಗಿ ಹೇಳುವಾಗ ಅಲ್ಲಲ್ಲಿ ಕೆಲವು ಎಡರು ತೊಡರುಗಳು ಬರುವುದು ಸಹಜವೇ. ಇದಕ್ಕೆ ಮುಖ್ಯ ಕಾರಣ ಪಾರಿಭಾಷಿಕ ಶಬ್ದಗಳ ಗೊಂದಲ. ಲೇಖಕ ಶ್ರೀ ಕುಳ್ಳಿಯವರು ಈ ಕಷ್ಟಕರವಾದ ಕೆಲಸದಲ್ಲಿಯೂ ಕೂಡ ತಕ್ಕಮಟ್ಟಿಗೆ ಜಯಶೀಲರಾಗಿದ್ದಾರೆ. ದಿನೇ ದಿನೇ ಹೆಚ್ಚು ಹೆಚ್ಚು ಕ್ಲಿಷ್ಟವಾಗಿ ಬೆಳೆಯುತ್ತಿರುವ ಈ ವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳನ್ನು

ವಿಸ್ತಾರವಾಗಿ ಹೇಳದಿದ್ದರೂ ಅಲ್ಲಲ್ಲಿ ಸುಗಮವಾಗಿ ಸ್ಪಷ್ಟವಾಗಿ ವಿವರಿಸಿದ್ದಾರೆ. ಈ ಪುಟ್ಟ ಪುಸ್ತಿಕೆ ಭಾಷಾವಿಜ್ಞಾನದಲ್ಲಿ ಆಸಕ್ತಿಯುಳ್ಳ ಕನ್ನಡ ಓದುಗರಿಗೆ ಉತ್ತಮ ಮಾರ್ಗದರ್ಶನವಾಗಬಲ್ಲದು ಮಾತ್ರವಲ್ಲ ಭಾಷಾವಿಜ್ಞಾನದ ಅರಿವಿಲ್ಲದ ಓದುಗರಲ್ಲಿಯೂ ಕೂಡ ಸಾಕಷ್ಟು ಆಸಕ್ತಿಯನ್ನು ಕೆರಳಿಸಬಲ್ಲದು ಎನ್ನುವುದರಲ್ಲಿ ಸಂದೇಹವಿಲ್ಲ. ಇದರ ಜೊತೆಗೆ ಭಾಷಾವಿಜ್ಞಾನವನ್ನು ಕನ್ನಡದಲ್ಲಿ ಬರೆಯುವುದು ಹಾಗೂ ಉಪನ್ಯಾಸ ಮಾಡುವುದು ಸಾಧ್ಯವಿಲ್ಲವೆಂಬ ಭ್ರಮೆಯನ್ನೂ ದೂರಮಾಡಬಲ್ಲದು.

'ಪ್ರವೇಶ'ದಲ್ಲಿ ಭಾಷೆಯು ಒಂದು ಸಾಮಾಜಿಕ ಕ್ರಿಯೆ, ಭಾಷೆ ಮತ್ತು ಸಮಾಜಗಳ ಬೆಳವಣಿಗೆಗೆ ಅವು ಹೇಗೆ ಪರಸ್ಪರ ಪೂರಕ ಹಾಗೂ ಪ್ರೇರಕವಾಗಿವೆ ಎಂಬುದನ್ನು ವಿವರಿಸಲು ಯತ್ನಿಸಿದ್ದಾರೆ. ಮಾನವ ಸಮಾಜದಲ್ಲಿ ಭಾಷೆಯ ವಿವಿಧ ಪ್ರಯೋಜನಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. "ಭಾಷೆಯ ಕಲ್ಪನೆ" ಎಂಬ ಎರಡನೇ ಅಧ್ಯಾಯದಲ್ಲಿ ಭಾಷೆಯ ಉಗಮದ ಬಗೆಗೆ ಇರುವ ದೈವಮೂಲ ಸಿದ್ಧಾಂತ ಹಾಗೂ ವೈಜ್ಞಾನಿಕ ಸಿದ್ಧಾಂತಗಳ ಕೆಲವು ವಿಚಾರಗಳನ್ನು ಉಲ್ಲೇಖಿಸಿ ಭಾಷೆ ಎಂದರೇನು? ಸಮಾಜದಲ್ಲಿ ಇದರ ಪಾತ್ರವೇನು? ಮುಂತಾದ ವಿವರಗಳನ್ನು ಕೆದಕಿ ನೋಡಿದ್ದಾರೆ. "ಭಾಷಾಧ್ಯಾಯನದ ಇತಿಹಾಸ" ಎಂಬ ಮೂರನೇ ಅಧ್ಯಾಯದಲ್ಲಿ ಭಾಷೆಯನ್ನು ಕುರಿತು ನಡೆದಿರುವ ಅಭ್ಯಾಸದ ಪೂರ್ಣ ಇತಿಹಾಸವನ್ನು ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರುಗಳ ಸಂಶೋಧಿತ ವಿಚಾರಗಳು ವಿಕಾಸಗೊಂಡ ರೀತಿಯನ್ನು ಪರಿವೀಕ್ಷಿಸಿದ್ದಾರೆ. ಅದು ಹೇಗೆ ಆಧುನಿಕ ಭಾಷಾವಿಜ್ಞಾನವಾಗಿ ರೂಪಗೊಂಡಿತು ಎಂಬುದನ್ನು ಅಡಕವಾಗಿ ಹೇಳಿರುವುದು ನಿಜವಾಗಿಯೂ ಮೆಚ್ಚುವಂಥದು. ಬಹುಶಃ ಈ ಆರು ಅಧ್ಯಾಯಗಳಲ್ಲಿ ಮೂರನೇ ಅಧ್ಯಾಯವೇ ಹೆಚ್ಚು ತೂಕವಾಗಿರುವಂತಿದೆ. ನಾಲ್ಕು ಮತ್ತು ಐದನೇ ಅಧ್ಯಾಯಗಳಲ್ಲಿ ಭಾಷೆಯಲ್ಲಿನ ವ್ಯಾಕರಣಾಂಶಗಳು, ಭಾಷೆಯ ಪರಿವರ್ತನೆ, ಪದಗಳ ಪ್ರಾದೇಶಿಕ ಭಿನ್ನತೆ ಮತ್ತು ಅವುಗಳ ರೀತಿ ನೀತಿಗಳನ್ನು ವಿವರಿಸಿದ್ದಾರೆ. ಅದು ಅಲ್ಲದೆ ಭಾಷೆಯಲ್ಲಿನ ಧ್ವನಿಮಾಗಳು ಮತ್ತು ಆಕೃತಿಮಾಗಳಿಗೆ ಸಂಬಂಧಪಟ್ಟ ನಿಯಮಗಳನ್ನು ವಿವರಿಸಿದ್ದಾರೆ. ನಿಜವಾಗಿಯೂ ಹೊಸ ತತ್ವಗಳು ಎನ್ನುವ ಮಾತಿಗೆ ಅನ್ವಯಿಸುವ ಟ್ರ್ಯಾನ್ಸ್‌ಫರ್ಮೇಶನ್ ರೀತಿ, ರಚನಾತ್ಮಕರೀತಿ, ಟ್ಯಾಗ್ಮಿಮಿಕ್ ರೀತಿ ಮುಂತಾದವುಗಳನ್ನು ಕೇವಲ ಹೆಸರಿಸಿ ಕೈಬಿಟ್ಟಿರುವುದು ಆಶ್ಚರ್ಯಕರವಾಗಿದೆ. ಕೊನೆಯದಾದ ಆರನೇ ಅಧ್ಯಾಯ "ಭಾಷೆಯ ಮುಂದು" ಎಂಬ ಭಾಗದಲ್ಲಿ ಲೇಖಕರು ಭಾಷಾವಿಜ್ಞಾನದ ಬೆಳವಣಿಗೆಗೆ ವೈಜ್ಞಾನಿಕವಾಗಿ ಸಂಬಂಧಿಸಿದ ಹಾಗೂ ಸಂಬಂಧಪಡದ ವಿಚಾರಗಳನ್ನು ಬೆರಸಿ ಹೇಳಿದ್ದಾರೆ.

ಈ ಆಧುನಿಕ ಭಾಷಾವಿಜ್ಞಾನದಲ್ಲಿ ಮೇಲೆ ಹೇಳಿದಂತೆ ಲೇಖಕರು ಆರಿಸಿಕೊಂಡಿರುವ ವಿಷಯದ ವ್ಯಾಪ್ತಿಯಂತೂ ದೊಡ್ಡದು, ಅವಕಾಶ ಮಾತ್ರ ಸೀಮಿತ. ಹೀಗಾಗಿ ಇದರಲ್ಲಿ ಎಷ್ಟೋ ವಿಷಯಗಳು ಹೆಚ್ಚು ಸಮರ್ಥಿತವಾಗದೆ ಅಲ್ಲಲ್ಲಿ ಭಿನ್ನಾಭಿಪ್ರಾಯಗಳಿಗೆ

ಎಡೆಗೊಡುವ ರೀತಿಯಲ್ಲಿ ನಿರೂಪಿತವಾಗಿವೆ. ಇಂತಹ ಕಡಿಮೆ ಅವಕಾಶದಲ್ಲಿ ಈ ವಿಷಯಗಳನ್ನು ಹೇಳಬೇಕೆಂಬ ಪ್ರಯತ್ನವಂತೂ ನಿಜಕ್ಕೂ ಬಹಳ ಒಳ್ಳೆಯದು.

—ಕೆ. ಕೆಂಪೇಗೌಡ

ಶಿವಾನಂದಲಹರಿ; ಅನುವಾದ: ಶ್ರೀ ಮೇವುಂಡಿ ಮಲ್ಲಾರಿ; ಪ್ರ: ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ; ಪುಟ: ೫೬: ಬೆಲೆ: ಎರಡು ರೂಪಾಯಿ.

ಅದ್ವೈತಸಿದ್ಧಾಂತ ಪ್ರವರ್ತಕರಾದ ಶ್ರೀ ಶಂಕರಾಚಾರ್ಯರದು ನಾನಾ ಮುಖವಾದ ವ್ಯಕ್ತಿತ್ವ. ಅದರಲ್ಲಿ ತರ್ಕಪ್ರಖರವಾದ ಬುದ್ಧಿಗೆ ಸ್ಥಾನವಿರುವಂತೆಯೇ ಆರ್ದ್ರಭಾವ ಸಂಪನ್ನವಾದ ಹೃದಯಕ್ಕೂ ಅವಕಾಶವಿದೆ; ಅವರು ಭಕ್ತರಂತೆಯೂ ಅಂತೆ ಕವಿಗಳೂ ಹೌದು. ಅವರಿಂದ ರಚಿತವಾಗಿರುವ ಹಲವಾರು ಸ್ತೋತ್ರಗಳು ಸ್ತೋತ್ರ ಸಾಹಿತ್ಯ ಪರಂಪರೆಗೆ ನಾಂದಿಯಾದುವು; ಅವುಗಳಲ್ಲಿ ಸೌಂದರ್ಯಲಹರಿ, ಶಿವಾನಂದಲಹರಿ ಮುಂತಾದುವು ತಮ್ಮ ಕಾವ್ಯಗುಣದಿಂದ ಚೇತೋಹಾರಿಯಾಗಿವೆ.

'ಶಿವಾನಂದಲಹರಿ'ಯೊಂದು ಸುಂದರವಾದ ಶತಕ. ಶಂಕರಾಚಾರ್ಯರ ಭಕ್ತಿ, ಆರ್ತತೆ, ಸಮರ್ಪಣಭಾವ, ಶರಣಾಗತಿಯ ನಿಲುವು ಇದರಲ್ಲಿ ಮನೋಜ್ಞವಾಗಿ ಅಭಿವ್ಯಕ್ತವಾಗಿವೆ; ಅವರು ತಮ್ಮ ಅಂತರಂಗವನ್ನಿಲ್ಲಿ ಪ್ರಾಮಾಣಿಕವಾಗಿ ನಿವೇದಿಸಿಕೊಂಡಿದ್ದಾರೆ. ಇಂಥದೊಂದು ಕೃತಿಯನ್ನು ಮೇವುಂಡಿ ಮಲ್ಲಾರಿಯವರು ಮೂಲಸಹಿತ ಕನ್ನಡಕ್ಕೆ ಅನುವಾದಿಸಿರುವುದು ಅಭಿನಂದನಾರ್ಹವಾದ ಕಾರ್ಯ.

ಮಲ್ಲಾರಿಯವರ ಅನುವಾದ ಬಹುಮಟ್ಟಿಗೆ ಜಯಶಾಲಿಯಾಗಿದೆ; ಮೂಲಭಾವಗಳನ್ನು ಅವರು ಸಮರ್ಥವಾಗಿ ಕನ್ನಡಿಸಿದ್ದಾರೆ ಎಂದು ಒಟ್ಟಿನ ಮೇಲೆ ಹೇಳಬಹುದು. ಅವರ ಅನುವಾದದ ಒಂದು ವೈಶಿಷ್ಟ್ಯವೆಂದರೆ ದೇಸಿಯ ಹೆಚ್ಚಳ. ಸಂಸ್ಕೃತ ಶಬ್ದವನ್ನು ಅನುವಾದದಲ್ಲಿ ಹಾಗೆಯೇ ಉಳಿಸಿಕೊಳ್ಳದೆ ಅಥವಾ ಅದಕ್ಕೆ ಪ್ರತಿಯಾಗಿ ಮತ್ತೊಂದು ಸಂಸ್ಕೃತ ಶಬ್ದವನ್ನು ಹಾಕದೆ ಅದನ್ನು ಕನ್ನಡಿಸುವ ಪ್ರಯತ್ನವನ್ನು ಮಲ್ಲಾರಿಯವರು ವಿಶೇಷವಾಗಿ ಮಾಡಿದ್ದಾರೆ. ಭಕ್ತಚೇತನದ ಕಳಕಳಿ, ತುಡಿತ ಮಿಡಿತಗಳು ಅವರ ಅನುವಾದದಲ್ಲಿ ಚೆನ್ನಾಗಿ ಒಡಮೂಡಿವೆ.

ಮೂಲಕೃತಿಯ ಸೊಗಸನ್ನು ಅನುವಾದದ ಗೆಲುವನ್ನು ತೋರಿಸಿಕೊಡುವಂಥ ಕೆಲವು ನಿದರ್ಶನಗಳನ್ನು ಲಕ್ಷಿಸಬಹುದು.

ತಮ್ಮ ಸರ್ವೇಂದ್ರಿಯಗಳೂ ಬುದ್ಧಿ ಮನಸ್ಸುಗಳೂ ಭಗವತ್ಪರವಾಗಿರುವ ಚಿತ್ರವನ್ನು ಆಚಾರ್ಯರು ಈ ಪದ್ಯದಲ್ಲಿ ಪರಿಣಾಮಕಾರಿಯಾಗಿ ಕೊಡುತ್ತಾರೆ:

ಮನಸ್ತೇ ಪಾದಾಬ್ಜೇ ನಿವಸತು ವಚ ಸ್ತೋತ್ರಫಣಿತೌ
ಕರೌ ಚಾಭ್ಯರ್ಚಾಯಾಂ ಶ್ರುತಿರಪಿ ಕಥಾ ಕರ್ಣನವಿಧೌ
ತವಧ್ಯಾನೇ ಬುದ್ಧಿರ್ನಯನಯುಗಲಂ ಮೂರ್ತಿವಿಭವೇ
ಪರಗ್ರಂಥಾನ್ ಕೈರ್ವಾ ಪರಮಶಿವ ಜಾನೇ ಪರಮತಃ (೭)

ಇದರ ಅನುವಾದ ಹೀಗೆ ಬಂದಿದೆ:

ನಿನ್ನ ಪದ ಮನವ ತುಂಬಿ, ನಿನ್ನ ಗುಣಕೀರ್ತನವೆ ಕಿವಿಯ ತುಂಬಿ
ನಿನ್ನ ನುತಿ ಬಾಯ ತುಂಬಿ, ನಿನ್ನ ಶ್ರೀರೂಪರುಚಿ ಕಣ್ಣ ತುಂಬಿ,
ಕರವು ಮುಡಿಪು ನಿನ್ನರ್ಚನಕ್ಕೆ, ಮತಿ ಧ್ಯಾನಕ್ಕೆ ಮೀಸಲಾಗೆ
ಅರಿವೆನೇತರಿಂದಿತರ ಗ್ರಂಥಗಳು? ಅದು ಏಕೆ ಮತ್ತು ಹೇಗೆ? *

ತಮ್ಮ ಚಿತ್ತ ಭಗವಂತನನ್ನು ಹೇಗೆ ಅನಿವಾರ್ಯವಾಗಿ ಬಯಸುತ್ತಿದೆಯೆಂಬುದನ್ನು ಹೇಳುವಾಗ ಶಂಕರಾಚಾರ್ಯರು ಅನೇಕ ದೃಷ್ಟಾಂತಗಳನ್ನು ಕೊಡುತ್ತಾರೆ:

ಹಂಸಂ ಪದ್ಮವನಂ ಸಮಿಚ್ಛತಿ ಯಥಾ ನೀಲಾಂಬುದಂ ಚಾತಕಃ
ಕೋಕಃ ಕೋಕನದಪ್ರಿಯಂ ಪ್ರತಿದಿನಂ ಚಂದ್ರಂ ಚಕೋರಸ್ತಥಾ
ಚೇತೋ ವಾಂಛತಿ ಮಾಮಕಂ ಪಶುಪತೇ ಚಿನ್ಮಾರ್ಗಮೃಗ್ಯಂ ವಿಭೋ
ಗೌರೀನಾಥ ಭವತ್ಪಾದಾಬ್ಜಯುಗಲಂ ಕೈವಲ್ಯಸೌಖ್ಯಪ್ರದಂ (೫೯)

ಅಂಚೆಗಂಬುಜದ ಕೊಳದಿಚ್ಛೆ, ಚಾತಕಕ್ಕೆ ಕಾರ್ಮುಗಿಲಿನಿಚ್ಛೆ,
ಎಣೆವಕ್ಕಿಗಿನನ ಮೂಡಿನಿಚ್ಛೆಯ್ಯೆ, ಚಗುರಕ್ಕೆ ತಿಂಗಳಿಚ್ಛೆ;
ಈ ನನ್ನ ಚಿತ್ತ ಕಾವಾಗಳೂನು ಪಶುಪತಿಯೆ, ಗೌರಿಯರಸ,
ಚಿನ್ಮಾರ್ಗಗಮ್ಯ, ಕೈವಲ್ಯರಮ್ಯ, ನಿನ್ನಡಿಗಳಿಚ್ಛೆ ಸರಸ.*

ದೇವನನ್ನು ಆದಿಕಿರಾತನೆಂದೂ ಅರಿಷಡ್ವರ್ಗವನ್ನು ದುಷ್ಟಮೃಗಗಳೆಂದೂ ರೂಪಕ ಮಾಡಿಕೊಳ್ಳಲಾಗಿದೆ ಈ ಪದ್ಯದಲ್ಲಿ:

ಮಾಗಚ್ಛ ತ್ವಮಿತಸ್ತತೋ ಗಿರಿಶಭೋ ಮಯ್ಯೇವ ವಾಸಂಕುರು
ಸ್ವಾಮಿನ್ನಾದಿಕಿರಾತ ಮಾಮಕ ಮನಃಕಾಂತಾರಸೀಮಾಂತರೇ
ವರ್ತಂತೇ ಬಹುಶೋ ಮೃಗಾ ಮದಜುಷೋ ಮಾತ್ಸರ್ಯಮೋಹಾದಯಸ್ತಾನ್
ಹತ್ವಾ ಮೃಗಯಾವಿನೋದ ರುಚಿತಾ ಲಾಭಂಚ ಸಂಪ್ರಾಪ್ಸ್ಯಸಿ (೪೩)

ಓ ಬೆಟ್ಟದೆರೆಯ, ನನ್ನಲ್ಲೆ ನೆಲೆಸೊ, ಅತ್ತಿತ್ತ ಹರಿಯಬೇಡ
ಈ ನನ್ನ ಮನದ ಹೆಗ್ಗಾಡಿನಲ್ಲಿ ಹೇ ಸ್ವಾಮಿ, ಆದಿ ಬೇಡ,
ಹುಯ್ಯಲಾಡುತಿವೆ ಕೊಬ್ಬಿ ಮೋಹಾದಿ ಹಿಂಸ್ರಪಶು ಲೆಕ್ಕವಿಲ್ಲ;
ಮೃಗಯಾವಿನೋದದಾಹ್ಲಾದ ನಿನಗೆ ದೊರೆಕೊಂಬುದಿವನು ಕೊಲ್ಲ.†

---

* ಈ ಪದ್ಯಗಳು 'ವಚನದಲ್ಲಿ ನಾಮಾಮೃತ ತುಂಬಿ....' ಮತ್ತು 'ಚಕೋರಕ್ಕೆ ಚಂದ್ರಮನ ಬೆಳಗಿನಾ ಚಿಂತೆ....' ಎಂಬ ಬಸವ ವಚನಗಳನ್ನು ನೆನಪಿಸುತ್ತವೆ. ಅನುಭಾವಿಗಳ ಹೃದಯದ ಮೊರೆತ ಹೇಗೆ ಒಂದೇ ಆಗಿರುತ್ತವೆ ಎಂಬುದಕ್ಕೆ ಈ ಸಾಮ್ಯ ಸಾಕ್ಷಿ.

† ಕುಮಾರವ್ಯಾಸ ಭಾರತದ ಅರಣ್ಯಪರ್ವದ ಕಿರಾತಾರ್ಜುನೀಯ ಪ್ರಸಂಗದಲ್ಲಿ ಬರುವ 'ಕೋಹಿದೊಡೆ ಬೆಸೆಬೆಸೆಗೆ ಹಾಯ್ವುದು ಮೋಹತಮಡಂಭಾದಿ ಮೃಗತತಿ' ಇತ್ಯಾದಿಯಾದ ರೂಪಕ ಪರಂಪರೆ ನೆನಪಾಗುತ್ತದೆ.

ಬಾಹ್ಯಪೂಜೆಯ ಆಗತ್ಯವಿಲ್ಲ, ಮಾನಸಿಕ ಪೂಜೆಯಷ್ಟೆ ಸಾಕು ಎಂಬ ಭಾವ ಇಲ್ಲಿದೆ:

ಗಭೀರೇ ಕಾಸಾರೇ ವಿಶತಿ ವಿಜನೇ ಘೋರವಿಪಿನೇ
ವಿಶಾಲೇ ಶೈಲೇ ಚ ಭ್ರಮತಿ ಕುಸುಮಾರ್ಥಂ ಜಡಮತಿಃ
ಸಮರ್ಪ್ಯೈಕಂ ಚೇತಸ್ಸರಸಿಜಮುಮಾನಾಥ ಭವತೇ
ಸುಖೇನೈವ ಸ್ಥಾತುಂ ಜನ ಇಹ ನಾ ಜಾನಾತಿ ಕಿಮಹೋ (೯)

ಆಳವಾದ ಕೊಳದಲ್ಲೀಜು, ನಿರ್ಜನಾರಣ್ಯದೊಳಗೆ ಹೊಕ್ಕು,
ಬೆಟ್ಟದಲಿ ಮತಿಗೇಡಿ ಜನವು ಹೂ ಹೂ ಎಂದು ತೊಳಲುತಿಕ್ಕು.
ನಿನ್ನ ಚೆನ್ನಡಿಯೊಳಿಟ್ಟು ತನ್ನಿಷ್ಟ ಚೇತಸ್ಸರೋಜವನ್ನೇ
ಅರಿಯಲೊಲ್ಲದೋ ಜನವು ನಿತ್ಯಸೌಖ್ಯದಲ್ಲಿರುವುದನ್ನೆ ?

ಶಿವನ ಶ್ರೀಮಂತಿಕೆಯನ್ನೂ ಭಕ್ತನ ದಾರಿದ್ರ್ಯವನ್ನೂ ಇಲ್ಲಿ ನಿರಪಿಸಲಾಗಿದೆ:

ಕರಸ್ಥೇ ಹೇಮಾದ್ರೌ ಗಿರಿಶ ನಿಕಟಸ್ಥೇ ಧನಪತೌ
ಗೃಹಸ್ಥೇ ಸ್ವರ್ಭೂಜಾಮರ ಸುರಭಿ ಚಿಂತಾಮಣಿಗಣೇ
ಶಿರಸ್ಥೇ ಶೀತಾಂಶೌ ಚರಣಯುಗಲಸ್ಥೇಽಖಿಲಶುಭೇ
ಕಮರ್ಥಂ ದಾಸ್ಯೇಽಹಂ ಭವತು ಭವದರ್ಥಂ ಮಮ ಮನಃ (೨೭)

ಹೊಂಬೆಟ್ಟವುಂಟು ಕೈಯಲ್ಲಿ, ನಿನ್ನ ನೆರೆಯಲ್ಲಿ ಉಂಟು ಧನದ,
ಮನೆಯಲ್ಲಿ ಉಂಟು ಕಾಮಧೇನು ಚಿಂತಾರತ್ನ ಕಲ್ಪ ಪದಪ
ತಿಂಗಳುಂಟು ತಲೆಯಲ್ಲಿ, ಜೋಡಡಿಯಲುಂಟು ಶುಭಗಳೆಲ್ಲ ;
ನಾನೇನು ನಿನಗೆ ಕೊಟ್ಟೇನು ? ನನ್ನ ಚಿತ್ತವನೆ ತೆತ್ತೆನಲ್ಲ

ಹೀಗೆಯೇ 'ಗುಹಾಯಾಂ ಗೇಹೇ ವಾ ಬಹಿರಪಿ ವನೇವಾಽದ್ರಿಶಿಖರೇ' (೧೨) ಎಂಬುದನ್ನು 'ವಾಸ ಗವಿಯಲೋ ಬೆಟ್ಟದುದಿಯಲೋ ಬೀಡು ಕಾಡಿನಲ್ಲೋ' ಎಂದೂ 'ವಟುರ್ವಾಗೇಹೀವಾ ಯತಿರಪಿ ಜಟೀ ವಾ ತದಿತರೋ' (೧೧) ಎಂಬುದನ್ನು 'ವಟುವಿದ್ದರೇನು ಜಟೆಯಾದರೇನು ಗೇಹಿಯೇನು ತಂದೆ' ಎಂದೂ 'ಚರತಿ ಯುವತೀನಾಂ ಕುಚಗಿರೌ' (೨೦) ಎಂಬುದನ್ನು 'ಮಾಳೆ ಮಲೆಗಳಲ್ಲಿ ನಲಿತ' ಎಂದೂ 'ಯಕ್ಷ್ಯೇತೋ ಮಣಿಪಾದುಕಾವಿಹರಣಂ ಶಂಭೋ ಸದಾಂಗೀಕುರು' (೬೪) ಎಂಬುದನ್ನು 'ನನ್ನ ಬಗೆಯೆಂಬ ಹಾವುಗೆಯ ಸತತ ಮೆಟ್ಟು' ಎಂದೂ ಅನುವಾದ ಮಾಡಿದ್ದಾರೆ. ಇಲ್ಲೆಲ್ಲ ಮಲ್ಲಾರಿಯವರು ಚೆನ್ನಾಗಿಯೆ ಮೂಲವನ್ನು ಕನ್ನಡಕ್ಕೆ, ಅಚ್ಚಗನ್ನಡಕ್ಕೆ, ತಿರುಗಿಸಿದ್ದಾರೆ.

ಆದರೆ ಇದೇ ಪ್ರಮಾಣದ ಯಶಸ್ಸು ಅವರಿಗೆ ಎಲ್ಲಕಡೆಯೂ ಸಿಕ್ಕಿದೆಯೆಂದು ಹೇಳುವಂತಿಲ್ಲ. ಮೂಲವನ್ನು ವಿಸ್ತರಿಸುವ, ಕುಗ್ಗಿಸುವ ಅಥವಾ ಕೈಬಿಡುವ ಪ್ರವೃತ್ತಿ ಎಷ್ಟೋ ಕಡೆ ಕಾಣುತ್ತದೆ. ಕೆಲವು ಉದಾಹರಣೆಗಳನ್ನು ಸೂಚಿಸಬಹುದು: 'ಹೃದಿಭಜೇ' (೩) ಎಂಬುದನ್ನು 'ಬಗೆ ಮೆಚ್ಚಿನಗೆ ನಿನ್ನ ಭಜನೆ' ಎಂದು ಕನ್ನಡಿಸಲಾಗಿದೆ. 'ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜ ಭಜನಂ' (೪) ಎಂಬ ಸಾಲನ್ನು

'ಶಿವ, ನಿನ್ನ ಪಾದಪಂಕಜದ ಭಜನ ಸತತ ನನ್ನ ಪಂಥ' ಎಂದು ಪರಿವರ್ತಿಸಿದ್ದಾರೆ; ಮೂಲದಲ್ಲಿ 'ಪಂಥ'ವೆಲ್ಲಿದೆ; 'ಭವದಧೀನಂ' (೧೧) ಎಂಬುದನ್ನು 'ಪದನಳಿನಲೀನ' ಎಂದು ಮಾರ್ಪಡಿಸಿದ್ದಾರೆ. 'ಕಪಾಲಿನ್‌ಭಿಕ್ಷೋ' (೨೦) ಎಂಬುದು 'ಓ ಭಿಕ್ಷು' ಎಂದಷ್ಟೆ ಆಗಿ, 'ಕಪಾಲಿನ್' ಲೋಪಗೊಂಡಿದೆ, 'ತಸ್ಕರಪತೇ' (೨೨) ಎಂಬುದನ್ನು ಕನ್ನಡಿಸಲು ಹೊರಟು 'ತಸ್ಕರಾಣಾಂ ಪತೇ' ಎಂದು ಮತ್ತೂ ಸಂಸ್ಕೃತೀಕರಿಸುವ ಆಗತ್ಯವೇನಿತ್ತು? ೨೫ನೆಯ ಪದ್ಯದಲ್ಲಿ 'ಖಂಡಪರಶುಂ' ಎಂಬ ಮಾತು ಅನುವಾದದಲ್ಲಿ ಬಿಟ್ಟುಹೋಗಿದೆ. ಸ್ಥೂಲವಾದ ಭಾವಾನುವಾದ ಇಲ್ಲೆಲ್ಲ ಇದೆಯಾದರೂ, ಮೂಲವನ್ನು ಯಥಾವತ್ತಾಗಿ ತಂದಿಲ್ಲ ಎಂಬುದಷ್ಟೆ ನಮ್ಮ ಅತೃಪ್ತಿ.

'ಶಿವಾನಂದಲಹರಿ'ಯಲ್ಲಿ ದೀರ್ಘವೃತ್ತಗಳಂತೆ ಹ್ರಸ್ವವೃತ್ತಗಳೂ ಬರುತ್ತವೆ. ಮಲ್ಲಾರಿಯವರು ಎರಡೂ ರೀತಿಯ ವೃತ್ತಗಳನ್ನು ಕನ್ನಡದಲ್ಲಿ ಒಂದೇ ಛಂದಸ್ಸಿಗೆ ಆಳವಡಿಸಿದ್ದಾರೆ. ಇದರಿಂದಾಗಿ, ಹ್ರಸ್ವವೃತ್ತಗಳನ್ನು ಕನ್ನಡಿಸುವಾಗ ಮೂಲದ ಅಭಿಪ್ರಾಯವನ್ನು ವಿಸ್ತರಿಸಬೇಕಾದ ಒತ್ತಾಯಕ್ಕೆ ಅವರು ಸಿಕ್ಕಿದ್ದಾರೆ. ಒಂದೇ ನಿದರ್ಶನ ಕೊಡಬಹುದು:

ಜಡತಾ ಪಶುತಾ ಕಲಂಕಿತಾ
ಕುಟಿಲಚರತ್ವಂ ಚ ನಾಸ್ತಿ ಮಯಿದೇವ
ಅಸ್ತಿಯದಿ ರಾಜಮೌಲೇ
ಭವದಾಭರಣಸ್ಯ ನಾಸ್ಮಿಕಿಂ ಪಾತ್ರಂ (೬೯)

ಜಡನಲ್ಲ ನಾನು ಪಶು ಮಾತ್ರನಲ್ಲ, ನನಗಿಲ್ಲ ಕೋರೆ ಕುಂದು,
ಕುಟಿಲಗತಿಯೆಂಬುದಿಲ್ಲವೆನ್ನಲ್ಲಿ ಶಶಿಮೌಳಿ, ದೀನಬಂಧು
ಇದ್ದಿದ್ದರಯ್ಯ ವಿಭುವೆ ನಿನ್ನ ತೊಡವಿಂಗೆ ಸಲುತಿದ್ದೆನೇನು
ಗಂಗೆಯಂತೆರಳೆಯಂತೆ ಎಳದಿಂಗಳಂತೆ ಹಾವಂತೆ ನಾನು ?

ಮೂಲದಲ್ಲಿ 'ಗಂಗೆಯಂತೆರಳೆಯಂತೆ....' ಎಂಬುದು ಇಲ್ಲವೇ ಇಲ್ಲ; ಅನುವಾದಕರು ಮಾಡಿದ ವ್ಯಾಖ್ಯಾನವದು. ಹೀಗೆಯೆ ಮೂಲವನ್ನು ಅನ್ವಯಾನುಸಾರವಾಗಿ ತುಸು ಒಗ್ಗಲಿಸಿ ಭಾಷಾಂತರಿಸುವುದಕ್ಕೆ ಕೆಳಗಿನ ಸುಂದರವಾದ ಪದ್ಯವನ್ನು ನೋಡಬಹುದು.

ಜಲಧಿಮಥನದಕ್ಷೋ ನೈವ ಪಾತಾಲ·ಭೇದೀ
ನಚ ವನಮೃಗಯಾಯಾಂ ನೈವಲುಬ್ಧಃ ಪ್ರವೀಣಃ
ಆಶನ ಕುಸುಮಭೂಷಾವಸ್ತ್ರ ಮುಖ್ಯಾಂ ಸಪರ್ಯಾಂ
ಕಥಯ ಕಥಮಹಂತೇ ಕಲ್ಪಯಾನೀಂದುಮೌಲೇ (೮೫)

ಕಡಲ ಕಡೆದು ತೆಗೆದೂಡೇನೊ ನಂಜ, ಸೂಡೇನೊ ಪೆರೆಯ ಮುಡಿಗೆ
ಪಾತಾಳ ಬಗಿದು ನಾ ತುಡುಕಿ ತಂದು ತೊಡಿಸೇನೊ ಹಾವತೊಡಿಗೆ?
ಬೇಟೆಯಾಡಿ ಹೆಬ್ಬುಲಿಯ ಕೊಂದು ಸುಲಿದುಡಿಸೇನೊ ತೊವಲಿನುಡೆಯ?
ಬಡಬಕುತನೆಂತು ತಕ್ಕಂತೆ ನಿನಗೆ ಸೇವೆ ಸಲಿಸೇನೊ ಒಡೆಯ?

ಮೂಲಪದ್ಯದ ಭಾವವನ್ನು ನಾಲ್ಕು ಪಂಕ್ತಿಗಳಲ್ಲಿ ಹಿಡಿದಿಡುವುದು ಅಶಕ್ಯವೆನಿಸಿದಾಗ ಮಲ್ಲಾರಿಯವರು ಆರು ಸಾಲಿನವರೆಗೂ ಬೆಳೆಸಿರುವುದೂ ಗಮನಾರ್ಹ (ಪದ್ಯ ೬೨). ಇದರಿಂದ ಸಾಧಕವೇನಿಲ್ಲ.

ಲಯದ ಬಗ್ಗೆ ಒಂದು ಮಾತು. ಈ ಭಾಷಾಂತರದ ಪದ್ಯಗಳಲ್ಲಿರತಕ್ಕದ್ದು ೩,೫ರ ಲಯ. ಆದರೆ ಇದು ಯಾಂತ್ರಿಕವಾಗದಂತೆ, ಬಹಳ ಕಡೆ ಎರಡು ಮಾತ್ರೆಗಳು ಅಧಿಕವಾಗಿ ಬಂದು ತಾಳದ ಹೊರಗೆ ನಿಲ್ಲುತ್ತವೆ, ಈ ವೈವಿಧ್ಯ ಸ್ವಾಗತಾರ್ಹವೇ. ಆದರೆ ಇದರಿಂದ ಕೆಲವೆಡೆ ಲಯ ಕೆಟ್ಟುಹೋಗಿದೆ. ಈ ಸಾಲುಗಳನ್ನು ನೋಡಬಹುದು :

ಬೆಳಗಿದೆನ್ನ ಮನಗಳಸದಲ್ಲಿ ಮುದಸುಧೆಯಿರೆದು ನಿನ್ನ ಅತಿಯು (೩೬)
ವೇದವೃಕ್ಷದಗ್ರದಲಿ ಇರುವ ದ್ವಿಜವರರಿಂದ ಸೇವ್ಯವಾದ (೪೫)

ಹಣ್ಣೆಲೆಗಳುದುರಿ, ಭಕ್ತಿಲತೆಗೆ ಪುಣ್ಯದ ಚಿಗುರು ಹೆಪ್ಪುವು ತುಂಬಿ,
ಗುಣದ ಮುಗುಳು, ಜಪ ಮಂತ್ರದಳು : ಸತ್ತಿನ ಕಂಪು ಸೂರೆಯಾಯ್ತು. (೪೭)

ಛಂದಸ್ಸಿನಲ್ಲಿ ಮತ್ತು ಭಾಷೆಯ ಬಳಕೆಯಲ್ಲಿ ಮಲ್ಲಾರಿಯವರ ಅನುವಾದ ಬೇಂದ್ರೆಯವರ 'ಕನ್ನಡ ಮೇಘದೂತ'ದಿಂದ ಪ್ರಭಾವಗೊಂಡಿದೆ. ಇದರಲ್ಲಿ ಆಕ್ಷೇಪಿಸುವಂಥದೇನೂ ಇಲ್ಲ.

ಇದು 'ಶಿವಾನಂದಲಹರಿ' ಕನ್ನಡಕ್ಕೆ ಹರಿದುಬಂದಿಸುವ ಪರಿ. ಈ ಕೃತಿಯ ಮುನ್ನುಡಿಯಲ್ಲಿ ಡಾ. ಆರ್. ಸಿ. ಹಿರೇಮಠರು "ಮಲ್ಲಾರಿಲಹರಿ ಕನ್ನಡಕ್ಕೆ ಒಂದು ವಿಶಿಷ್ಟ ಕೊಡುಗೆಯಾಗಿದೆ" ಎಂದು ಸತ್ಯವನ್ನೇ ನುಡಿದಿದ್ದಾರೆ.

—ಸಿ.ಪಿ.ಕೆ.

**ಲಾಲ್‌ಬಹಾದುರ್‌ಶಾಸ್ತ್ರಿ ;** (ಜೀವನ ಚರಿತ್ರೆ) ಲೇಖಕರು : ಬಿ. ಆರ್. ಪ್ರಾಣೇಶರಾವ್, ಕಮಲಾ ಪ್ರಕಾಶನ, ಮೈಸೂರು-೧ ; ಪುಟಗಳು : ೧೩೨, ಬೆಲೆ : ೨-೦೦ ರೂಪಾಯಿ (೧೯೬೬)

ನೆಹರೂನಂತರ ಯಾರು ? ಎಂಬ ಪ್ರಶ್ನೆ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಕೇಳಿಬರುತ್ತಿತ್ತು. ಪ್ರಧಾನಿ ನೆಹರೂರವರು ತೀರಿಕೊಂಡ ಕೂಡಲೇ, ಭಾರತದ ಜನತೆ ಕಂಗಾಲಾದರು. ಹಲವಾರು ಸಮಸ್ಯೆಗಳು ಆಗ ದೇಶದ ಮುಂದಿದ್ದುವು. ಅಂತಹ ಸಂದಿಗ್ಧ ಸಮಯದಲ್ಲಿ ಯೋಗ್ಯಜನನಾಯಕ ಆ ಗಾದಿಯನ್ನೇರಿದರು. ಅವರೇ ಲಾಲ್ ಬಹಾದುರ್‌ಶಾಸ್ತ್ರಿ. ಅಧಿಕಾರದಲ್ಲಿದ್ದ ೧೯ ತಿಂಗಳೂ, ಹಗಲೂ ಇರುಳೂ ದುಡಿದು ಹಲವಾರು ಸಮಸ್ಯೆಗಳನ್ನು ಪರಿಹರಿಸಿ, ವಿಶ್ವಶಾಂತಿಗೆ ಬುನಾದಿಹಾಕಿ, ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿ ಇತಿಹಾಸದಲ್ಲಿ ಲೀನವಾದರು. ಅಂತಹ ದಿ. ಲಾಲ್‌ಬಹಾದುರ್‌ಶಾಸ್ತ್ರಿಯವರ ಪವಿತ್ರವಾದ ಜೀವನದ ಚರಿತ್ರೆ ಕನ್ನಡಿಗರಿಗೆ ಅತ್ಯವಶ್ಯ. ಆ ಕಾರ್ಯವನ್ನು ಬಿ. ಆರ್. ಪ್ರಾಣೇಶರಾವ್‌ರವರು ಕೈಗೊಂಡು ಈ ಕೃತಿಯನ್ನು ನಮಗೆ ನೀಡಿರುವರು.

ಲಾಲ್‌ಬಹಾದುರ್‌ಶಾಸ್ತ್ರಿಯವರ ಜೀವನಚರಿತ್ರೆಯನ್ನು ಲೇಖಕರು ಇಪ್ಪತ್ತೊಂದು ಅಧ್ಯಾಯಗಳ ವ್ಯಾಪ್ತಿಯಲ್ಲಿ ವಿಸ್ತರಿಸಿ, ಅದರಲ್ಲಿ ಅವರ ಜೀವನದ ಎಲ್ಲಾ ಮುಖ್ಯ ಅಂಶಗಳನ್ನೂ ಪರಿಚಯಮಾಡಿಕೊಡಲು ಪ್ರಯತ್ನಿಸಿರುವರು. 'ನೆಹರೂ ನಂತರ ಯಾರು?' ಎಂಬ ಮೊದಲ ಅಧ್ಯಾಯದಿಂದ ಆರಂಭಿಸಿ 'ಅಮರ್ ಲಾಲ್ ಬಹಾದುರ್‌ಶಾಸ್ತ್ರಿ' ಎಂಬ ಅಧ್ಯಾಯದೊಡನೆ ಮುಕ್ತಾಯಗೊಳಿಸಿರುವರು. ಅವರ ಇಡೀ ಜೀವನದ ಸ್ಥೂಲವಾದ ರೂಪರೇಷೆಯನ್ನು ಹೀಗೆ ಸಂಗ್ರಹಿಸಬಹುದು.

ಉತ್ತರ ಭಾರತದಲ್ಲಿರುವ ಪವಿತ್ರಕ್ಷೇತ್ರವಾದ ವಾರಣಾಸಿಯ ಬಳಿಯಿರುವ ಮೊಗಲ್‌ಸಾರಾಯ್‌ನಲ್ಲಿದ್ದ ಶಾರದಾಪ್ರಸಾದ್ ಮತ್ತು ರಾಮದುಲಾರಿದೇವಿಯವರಿಗೆ ೧೯೦೪ರಲ್ಲಿ ಲಾಲ್‌ಬಹಾದುರ್ ಜನಿಸಿದರು. ಹುಟ್ಟಿದ ಒಂದೂವರೆ ವರುಷದಲ್ಲೇ ತಂದೆಯನ್ನು ಕಳೆದುಕೊಂಡು ತನ್ನ ತಾತನ ಮನೆಯಲ್ಲೇ ವಿದ್ಯಾಭ್ಯಾಸ ಮುಂದುವರಿಸಿದರು. ಉದ್ದಕ್ಕೂ ಬಡತನದಲ್ಲೇ ಬೆಳೆದುಬಂದರು. ಅವರಿನ್ನೂ ಮೆಟ್ರಿಕ್ಯುಲೇಶನ್ ತರಗತಿಯಲ್ಲಿ ಓದುತ್ತಿದ್ದಾಗಲೇ ಗಾಂಧೀಜಿಯವರು ಆರಂಭಿಸಿದ್ದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು. ಅನಂತರ ಗಾಂಧೀಜಿಯವರ ಯೋಜನೆಯ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಶಿಕ್ಷಣದ ವಿದ್ಯಾಪೀಠಕ್ಕೆ ಸೇರಿದರು. ಅಲ್ಲಿ ಶಾಸ್ತ್ರೀಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಪ್ರಶಸ್ತಿಯೇ, ಲಾಲ್‌ಬಹಾದುರ್ ಎಂಬ ಮುಂಚಿನ ಹೆಸರಿನ ಮುಂದೆ ಸೇರಿಹೋಯ್ತು. ೧೯೨೬ರಲ್ಲಿ ಲಾಲಾಲಜಪತ್‌ರಾಯ್ ಸ್ಥಾಪಿಸಿದ 'ಜನತಾಸೇವಕ ಸಂಘ'ದಲ್ಲಿ ಶಿಕ್ಷಣಪಡೆದರು. ಅಲ್ಲಿಂದ ಮುಂದೆ ಸಮಾಜಸೇವೆಮಾಡಲು ತೊಡಗಿದರು. ಜನತಾಸೇವಕಸಂಘದ ಅಧ್ಯಕ್ಷರಾಗಿದ್ದ, ಪುರುಷೋತ್ತಮಟಂಡನ್‌ರವರೆ ಶಾಸ್ತ್ರಿಯವರ ರಾಜಕೀಯ ಗುರುವಾದರು. ಅಲಹಾಬಾದಿನ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ವಿಶಾಲಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಬೇಕಾದ ತರಬಿಯತ್ತು ಪಡೆದರು. ಅನಂತರ ಜಿಲ್ಲಾ ಕಾಂಗ್ರೆಸ್ ಕೆಲಸಮಾಡಿ, ಪ್ರಾಂತೀಯ ಕಾಂಗ್ರೆಸ್ ಕಾರ್ಯದರ್ಶಿಯಾದರು. ೧೯೩೦ರಲ್ಲಿ ಗಾಂಧೀಜಿಯವರ ಮುಂದಾಳತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರವಹಿಸಿದರು. ೧೯೪೨ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದರು. ಇದರಿಂದ ಅನೇಕಬಾರಿ ಜೈಲುವಾಸ ಅನುಭವಿಸಿದರು. ೧೯೪೫ರಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಚುನಾಯಿತರಾದರು. ೧೯೪೬ರಲ್ಲಿ ಪಂತ್‌ರವರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯದರ್ಶಿಯಾದರು. ೧೯೪೭ರಲ್ಲಿ ಉತ್ತರ ಪ್ರದೇಶದ ಮಂತ್ರಿಮಂಡಲದಲ್ಲಿ ಪೋಲೀಸ್‌ಖಾತೆ ವಹಿಸಿಕೊಂಡರು. ಅನಂತರ ಕಾಂಗ್ರೆಸ್ ಅಧ್ಯಕ್ಷ ನೆಹರೂರವರಿಗೆ ಕಾರ್ಯದರ್ಶಿಯಾಗಿ ಅವರ ಗರಡಿಯಲ್ಲಿ ಪಳಗಿದರು. ೧೯೫೨ರ ಚುನಾವಣೆಯಲ್ಲಿ ಪ್ರಮುಖ ಪಾತ್ರವಹಿಸಿದರು. ೧೯೫೨ರಲ್ಲಿ ನೆಹರೂ ಮಂತ್ರಿಮಂಡಲ ಸೇರಿ, ಅಲ್ಲಿ ರೈಲ್ವೆ ಸಚಿವಖಾತೆ ವಹಿಸಿಕೊಂಡರು. ರೈಲ್ವೆ ದುರಂತದಿಂದಾಗಿ ಮನನೊಂದ ಶಾಸ್ತ್ರಿ ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು. ೧೯೫೭ರಲ್ಲಿ ಪುನಃ ಚುನಾವಣೆಯಲ್ಲಿ ಅಲಹಾಬಾದ್ ಕ್ಷೇತ್ರದಿಂದ ಚುನಾಯಿತರಾದರು. ಪಂತ್‌ರವರ

ನಿಧನದನಂತರ ಗೃಹಖಾತೆಯ ಸಚಿವರಾದರು. ೧೯೬೩ರಲ್ಲಿ ಕಾಮರಾಜರ ಯೋಜನೆಯಂತೆ ಸಚಿವ ಪದವಿಗೆ ರಾಜೀನಾಮೆ ನೀಡಿದರು. ೧೯೬೪ರ ಒರಿಸ್ಸಾ ಅಧಿವೇಶನದನಂತರ ನೆಹರೂರವರಿಂದ ಪುನಃ ಮಂತ್ರಿಮಂಡಲ ಸೇರಲು ಶಾಸ್ತ್ರಿಗೆ ಕರೆಬಂತು. ೧೯೬೪ರಲ್ಲಿ ನೆಹರೂರವರು ನಿಧನರಾದರು. ಅನಂತರ ಶಾಸ್ತ್ರಿಯವರೇ ಪ್ರಧಾನಿಯಾದರು. ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಮಸ್ಯೆಗಳನ್ನು ಚಾಣಕ್ಯತನದಿಂದ ಪರಿಹರಿಸಲು ಸಮರ್ಥರಾದರು. ನೆರೆಹೊರೆಯ ಆಕ್ರಮಣಪ್ರವೃತ್ತಿಯ ರಾಷ್ಟ್ರಗಳವರಿಗೆ ಸಕಾಲದಲ್ಲಿ ಪಾಠ ಕಲಿಸಿದರು. ೧೯೬೬ರಲ್ಲಿ ತಾಷ್ಕೆಂಟ್‌ನಲ್ಲಿ ಸೇರಿದ ಶಾಂತಿಸಮ್ಮೇಳನದಲ್ಲಿ ಭಾಗವಹಿಸಿ, ಆಯೂಬ್ ಖಾನ್‌ರೊಡನೆ ಬಿಚ್ಚುಮನಸ್ಸಿನಿಂದ ವಿಚಾರವಿನಿಮಯ ನಡೆಸಿ, ವಿಶ್ವಶಾಂತಿಗೆ ಬುನಾದಿಯಾದ ತಾಷ್ಕೆಂಟ್ ಘೋಷಣೆಗೆ ಕಾರಣರಾದರು. ವಿಶ್ವಶಾಂತಿಯ ಇತಿಹಾಸದಲ್ಲಿ ಈ ಘೋಷಣೆ ಒಂದು ಪ್ರಮುಖವಾದ ಮೈಲಿಗಲ್ಲಾಯಿತು. ಶಾಸ್ತ್ರಿಯವರು ಇಡೀ ವಿಶ್ವದ ಮನ್ನಣೆಗೆ ಪಾತ್ರರಾದರು. ಸಂತೋಷದ ಮರುಕ್ಷಣದಲ್ಲೇ ಶಾಸ್ತ್ರಿಯವರಿಗೆ ಹೃದಯವೇದನೆ. ಶಾಸ್ತ್ರಿಯವರು ಜನವರಿ ೧೧ರಂದು ಶಾಂತಿಯಜ್ಞಕ್ಕೆ ತಮ್ಮ ಪ್ರಾಣವನ್ನೇ ತೆತ್ತರು.–ಪ್ರಮುಖವಾದ ಈ ಘಟನೆಗಳ ಹಂದರದಮೇಲೆ ಶಾಸ್ತ್ರಿಯವರ ಜೀವನಚರಿತ್ರೆಯನ್ನು ವಿಸ್ತರಿಸಿರುವರು. ಇಲ್ಲಿ ಕೇವಲ ಇಸವಿಗಳ, ಘಟನೆಗಳ ಪಟ್ಟಿ ಮಾಡಿಲ್ಲ. ಗಾಂಧೀಜಿಯವರ ತತ್ವಗಳಲ್ಲಿ ವಿಶೇಷ ನಂಬಿಕೆ ಮತ್ತು ನಿಷ್ಠೆಯನ್ನು ಹೊಂದಿ, ಜವಹರ್‌ಲಾಲ್ ನೆಹರೂರವರು ನಡೆದ ಮಾರ್ಗವನ್ನೇ ಅನುಸರಿಸಿ, ಕೆಲವು ಸಂದರ್ಭಗಳಲ್ಲಿ ಅವರಿಗಿಂತಲೂ ಒಂದು ಹೆಜ್ಜೆ ಮುಂದೆಹೋಗಿ ರಾಜಕೀಯ ಇತಿಹಾಸದಲ್ಲಿ ಅಮರಕೀರ್ತಿಗಳಿಸಿದ ದಿ. ಶಾಸ್ತ್ರಿಯವರ ಜೀವನವು ಹೇಗೋ, ಅವರನ್ನು ಕುರಿತ ಈ ಚರಿತ್ರೆಯೂ ಅದನ್ನೇ ಪ್ರತಿಬಿಂಬಿಸುತ್ತದೆ. ಉದಾಹರಣೆಗೆ ಕೆಲವು ಪ್ರಮುಖ ಘಟನೆಗಳನ್ನು ಪರಿಶೀಲಿಸಬಹುದು.

'ಲಾಲ್‌ಬಹಾದುರ್‌ರ ಬಾಲ್ಯ ಮತ್ತು ವಿದ್ಯಾಭ್ಯಾಸ' ಎಂಬ ಅಧ್ಯಾಯದಲ್ಲಿ (ಪುಟ ೧೪). ಶಾಸ್ತ್ರಿಯವರ ಬಾಲ್ಯದಲ್ಲಿ ನಡೆದ ಘಟನೆ ಕುತೂಹಲಜನಕವೂ ಪವಾಡಸದೃಶವೂ ಆಗಿದೆ. ಇನ್ನೂ ಮೂರುತಿಂಗಳ ಮಗುವಾಗಿದ್ದ ಲಾಲ್‌ಬಹಾದುರ್‌ರವರನ್ನು ಎತ್ತಿಕೊಂಡು ಅವರ ತಾಯಿ ಸಮೀಪದಲ್ಲಿ ನಡೆಯುತ್ತಿದ್ದ ಜಾತ್ರೆಗೆ ಹೋಗಿದ್ದಾಗ, ಅಲ್ಲಿ ಸೇರಿದ್ದ ಜನರ ನೂಕುನುಗ್ಗಲಿನಲ್ಲಿ ಎಡವಿಬಿದ್ದರು. ಅವರ ಜೊತೆಯಲ್ಲೇ, ಕಂಕುಳಲ್ಲಿದ್ದ ಮಗುವೂ ಬಿದ್ದಿತು. ಜನಜಂಗುಳಿಯಲ್ಲಿ ಮಗು ಕಣ್ಣಿಗೆ ಕಾಣಿಸಲೇ ಇಲ್ಲ. ತಾಯಿ ಕಂಗಾಲಾದರು. ಕೊನೆಗೆ ಗೊಲ್ಲನೊಬ್ಬನ ಬುಟ್ಟಿಯಲ್ಲಿ ಸುರಕ್ಷಿತವಾಗಿದ್ದ ಮಗು, ಪೋಲೀಸರ ತನಿಕೆಯಿಂದ ದೊರಕಿತು. ಇದು ಪವಾಡದಂತಿದ್ದರೂ, ಮಹಾಪುರುಷರ ಜೀವನದಲ್ಲಿ ಇಂತಹ ವಿಚಿತ್ರ ಘಟನೆಗಳು ನಡೆಯುವುದು ಒಂದು ವೈಶಿಷ್ಟ್ಯ ಎನ್ನಬೇಕು. ನೆಹರೂರವರು ಓದುತ್ತಿರುವಾಗ್ಗೆ, ಒಮ್ಮೆ ಸಾರ್ವದೇಶದ ನದಿಯೊಂದರಲ್ಲಿ ಈಜಲುಹೋದಾಗ ನಡೆದ ಘಟನೆ ಈ ಸಮಯದಲ್ಲಿ ನೆನಪಾಗದಿರದು.

ಲಾಲ್‌ಬಹಾದುರ್ ಶಾಲೆಯಲ್ಲಿ ಓದುತ್ತಿರುವಾಗ್ಗೆ, ಒಂದುದಿನ ಮನೆಗೆ

ಹಿಂತಿರುಗುವುದು ತಡವಾಯ್ತು. ಗಂಗಾನದಿಯನ್ನು ದೋಣಿಯಲ್ಲಿ ದಾಟಬೇಕಾಗಿತ್ತು. ದೋಣಿಯವನಿಗೆ ಕೊಡಲು ಕೈಲಿ ಒಂದುಬಿಡಿಕಾಸೂ ಇಲ್ಲದ್ದರಿಂದ ಈಜಿಕೊಂಡೇ ಆಚೆದಡ ಸೇರಿದರು. ಹೆಸರಿನಲ್ಲೇ ವಿಶಿಷ್ಟತೆಯುಳ್ಳ ಶಾಸ್ತ್ರಿಯವರ ಬಾಲ್ಯದ ಈ ಘಟನೆ ಅವರ ಸಾಹಸವನ್ನು ಪ್ರತಿಬಿಂಬಿಸುತ್ತದೆ (ಪುಟ ೧೬).

೧೯೨೭ರಲ್ಲಿ ಶಾಸ್ತ್ರಿಯವರು ಲಲಿತಾದೇವಿಯವರನ್ನು ವಿವಾಹವಾದರು. ಇದೊಂದು ಆದರ್ಶವಿವಾಹ. ಅಳಿಯನಿಗೆ ವರೋಪಚಾರ ಮಾಡಬಯಸಿದ್ದ ಮಾವನಿಗೆ "ಒಂದು ಚರಖ ಸ್ವಲ್ಪ ಖಾದಿಬಟ್ಟೆ ಕೊಟ್ಟರೆ ಸಾಕು" ಎಂದು ಶಾಸ್ತ್ರಿಯವರು ಕೇಳಿದರಂತೆ (ಪುಟ ೨೧). ಶಾಸ್ತ್ರಿಯವರ ಈ ಆದರ್ಶಜೀವನ ನಿಜಕ್ಕೂ ಅನುಕರಣೀಯ.

ಅಲಹಾಬಾದ್ ಸತ್ಯಾಗ್ರಹದಲ್ಲಿ ಪೋಲೀಸರಿಗೇ ಮಣ್ಣುಮುಕ್ಕಿಸಿ, ಘೋಷಾ ಸ್ತ್ರೀಯರು ಕೂಡ್ರುವ ಜಟಕಾದಲ್ಲಿ ಬಂದು, ಗಡಿಯಾರದ ಬುರುಜನ್ನು ಹತ್ತಿ ಬಾವುಟ ಹಾರಿಸಿದ ಎದೆಗಾರರೆಂದರೆ ಪುಟ್ಟಲಾಲ್‌ಬಹಾದುರ್‌ಶಾಸ್ತ್ರಿ. ಪೋಲೀಸರ ಮುಂದೆ ಈ ಪುಟ್ಟವ್ಯಕ್ತಿಯನ್ನು ಕರೆತಂದು ನಿಲ್ಲಿಸಿದಾಗ "ನಾನು ಲಾಲ್‌ಬಹಾದುರ್, ನಾನೇ ಈ ಬಾವುಟ ಹಾರಿಸಿದ್ದು" ಎಂದು ದಿಟ್ಟತನದಿಂದ ಉತ್ತರಕೊಟ್ಟ ವ್ಯಕ್ತಿಯಲ್ಲಿ, ಮುಂದೆ ರಾಷ್ಟ್ರನಾಯಕನಾಗುವ ಚಿಹ್ನೆಗಳು ಯಾರಿಗಾದರೂ ಕಾಣಿಸದಿರವು.

೧೯೬೧ರಲ್ಲಿ ಪಂಜಾಬಿನ ತಾರಾಸಿಂಗರು 'ಪಂಜಾಬಿ ಸುಬಾ' ರಚನೆಗಾಗಿ ಆಮರಣಾಂತ ಉಪವಾಸ ಕೈಗೊಂಡರು. ಗೃಹಸಚಿವರಾಗಿದ್ದ ಶಾಸ್ತ್ರಿಯವರು ಆಗ ತಾಳಿದ ಅಚಲನಿರ್ಧಾರದ ಮುಂದೆ ಸಿಂಗರ ಆಟ ನಡೆಯಲಿಲ್ಲ (ಪುಟ ೩೯). ಶಾಸ್ತ್ರಿಯವರು ಮೆದುನುಡಿಯವರಾಗಿದ್ದರೂ ಬಲಿಷ್ಠವ್ಯಕ್ತಿ ಎನ್ನುವುದಕ್ಕೆ ಇದೊಂದು ನಿದರ್ಶನ.

ನೆಹರೂನಂತರ ಪ್ರಧಾನಿಯಾದಕೂಡಲೇ ಕೆಲವು ದುಷ್ಟ ಶಕ್ತಿಗಳು ಇವರನ್ನು ತಮ್ಮ ಬಲೆಗೆ ಕೆಡವಿಕೊಳ್ಳಲು ನಡೆಸಿದ ಒಳಸಂಚನ್ನು ಮೊಳಕೆಯಲ್ಲೇ ಚಿವುಟಿದರು ಶಾಸ್ತ್ರಿ (ಪುಟ ೫೮). ತಿಂಗಳಿಗೆ ೩೦೦ರೂ. ಸಂಬಳ ಪಡೆಯುತ್ತಿದ್ದ ಶಾಸ್ತ್ರಿಯವರ ಮಗ, ಹರಿಕೃಷ್ಣನನ್ನು ಕೈಗಾರಿಕೋದ್ಯಮಿಯೊಬ್ಬ ತಿಂಗಳಿಗೆ ೩೦೦೦ರೂ ಸಂಬಳದ ಹುದ್ದೆಗೆ ಏರಿಸುವೆನೆಂದು ಆಸೆ ತೋರಿದ....ಈ ಘಟನೆಯನ್ನು ಅರಿತ ಶಾಸ್ತ್ರಿಯವರು ಅದನ್ನು ಹತ್ತಿಕ್ಕಿದ ಅವರ ದಿಟ್ಟತನ, ನಿರ್ಲಿಪ್ತ ಮನೋಭಾವವನ್ನು ಪ್ರಕಟಿಸುವುದು.

ರಕ್ಷಣಾನಿಧಿಗೆ ಶಾಸ್ತ್ರಿಯವರ ತೂಕದ ಚಿನ್ನವನ್ನು ತೂಗುವುದಾಗಿ ಕೆಲವರು ಪ್ರಕಟಣೆ ಹೊರಡಿಸಿದರು. ಆಗ ಶಾಸ್ತ್ರಿಯವರು "ನನ್ನ ತೂಕದಷ್ಟು ಚಿನ್ನ ತೂಗಿದರೆ ಲಾಭವಿಲ್ಲ, ಏಕೆಂದರೆ ನನ್ನ ತೂಕ ಕಡಿಮೆ. ಆದುದರಿಂದ ನಿಮ್ಮ ಕೈಲಾದಷ್ಟನ್ನು ಕೊಡಿರಿ" ಎಂದರು ಶಾಸ್ತ್ರಿ. ವ್ಯಕ್ತಿಪೂಜೆಗೆ ವಿರುದ್ಧವಾದ ಅಭಿಪ್ರಾಯವುಳ್ಳ ವ್ಯಕ್ತಿ. ಶಾಸ್ತ್ರಿಯವರ ತೂಕ ಕಡಿಮೆಯಾದರೂ ಅವರ ಮಾತಿನ ತೂಕ ನಿಜಕ್ಕೂ ಅಪಾರ! (ಪುಟ ೫೦). 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆಯನ್ನು ಘೋಷಿಸಿ ಅದರ ಹಿನ್ನೆಲೆಯಲ್ಲಿರುವ ಮಹತ್ವವನ್ನು ನಾಡಿಗೆ ಅರುಹಿದ್ದು ಗಮನಾರ್ಹ (ಪುಟ ೧೧೧).

ಚೀಣಾದೇಶದವರು ಅಣ್ವಸ್ತ್ರಸ್ಫೋಟಿಗೊಳಿಸಿದಾಗ, ಅವರ ಅಮಾನುಷಕೃತ್ಯವನ್ನು ಖಂಡಿಸಿದ ರೀತಿ, ಕಾಶ್ಮೀರವನ್ನು ಪಾಕ್‌ಸೇನೆ ಆಕ್ರಮಿಸಿದಾಗ (ಪುಟ ೯೭). ರಾಷ್ಟ್ರದ ಜನತೆಯನ್ನು ಕುರಿತು ಮಾಡಿದ ಭಾಷಣ, ರೋಮಾಂಚನವನ್ನುಂಟುಮಾಡುವಂತಿವೆ. ಪಾಕೀಸ್ತಾನದೊಡನೆ ಯುದ್ಧ ಅನಿವಾರ್ಯವೆಂದರಿತಾಗ ದಿಟ್ಟತನದಿಂದ "ಅನಿರ್ಧಾರ ಅಥವಾ ವಿಾನಾಮೇಷಕ್ಕೆ ಕಾಲವಲ್ಲ ಇದು. ನೀವು ಮುನ್ನುಗ್ಗಬೇಕು" ಎಂದು ದೃಢವಾಗಿ ಹೇಳಿದರು ಶಾಸ್ತ್ರಿ (ಪುಟ ೧೦೪). ವಿರೋಧ ಪಕ್ಷಗಳೊಡನೆ ಶಾಸ್ತ್ರಿಯವರು ಬೆಳಸಿದ ಸೌಹಾರ್ದ ಹಾಗೂ ಒಡಂಬಡಿಕೆ ಆದರ್ಶವಾಗಿತ್ತು. ತಾಷ್ಕೆಂಟಿಗೆ ಹೊರಡುವ ಮುನ್ನ ಲಲಿತಾಶಾಸ್ತ್ರಿಯವರನ್ನೂ, ಹರಿಕೃಷ್ಣನನ್ನೂ ಜೊತೆಯಲ್ಲಿ ಕರೆದೊಯ್ಯಲು ನಿರಾಕರಿಸಿದ ರೀತಿ, ಅದರ ಹಿಂದಿರುವ ಮನೋಭಾವ ಮೆಚ್ಚತಕ್ಕುದೇ!

ಇದೇರೀತಿಯ ಹಲವಾರು ಘಟನೆಗಳು ಶಾಸ್ತ್ರಿಯವರ ಜೀವನದುದ್ದಕ್ಕೂ, ಅವುಗಳನ್ನು ಶಾಸ್ತ್ರಿಯವರು ಎದುರಿಸಿದ ರೀತಿ, ದಿಟ್ಟತನ, ನಿರ್ಲಿಪ್ತ ಮನೋಭಾವ, ಉತ್ಕಟ ರಾಷ್ಟ್ರಪ್ರೇಮ ಮುಂತಾದ ಗುಣಗಳನ್ನು ಶಾಸ್ತ್ರಿಯವರ ಜೀವನಚರಿತ್ರೆ ಪರಿಚಯಮಾಡಿಕೊಡುವುದು. ಇದರಲ್ಲಿ ಕೆಲವು ಅಧ್ಯಾಯಗಳು, ಅಂದರೆ 'ಕಾಮರಾಜರ ಯೋಜನೆ' 'ಚೀಣಾ ಅಣ್ವಸ್ತ್ರಸ್ಫೋಟ' 'ಆರ್ಥಿಕ ವಿಚಾರಧಾರೆ' 'ಅಲಿಪ್ತರಾಷ್ಟ್ರಗಳ ಸಮ್ಮೇಳನ' 'ಕಚ್ ಗಡೀವಿವಾದ' ಇತ್ಯಾದಿ ಅಧ್ಯಾಯಗಳು ಶಾಸ್ತ್ರಿಯವರ ಜೀವನಕ್ಕೆ ಹೊರತಾಗಿರುವಂತೆ ಕಂಡರೂ, ಅವುಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಲ್ಲಿ, ಶಾಸ್ತ್ರಿಯವರು ತಮ್ಮ ರಾಜಕೀಯ ಜೀವನದಲ್ಲಿ ತಾಳಿದ ಅವರ ಧೋರಣೆಯನ್ನು ಸಮರ್ಥಿಸಲು ಪೋಷಕವಾಗಿವೆ. ಇಂತಹ ಕೆಲವು ಅಧ್ಯಾಯಗಳಲ್ಲಿ ಶಾಸ್ತ್ರಿಯವರ ಚಿತ್ರ ಹಿಂದೆ ಸರಿದು, ರಾಜಕೀಯ ವಿಷಯಗಳೇ ಪ್ರಧಾನವಾಗಿ ಎದ್ದು ತೋರುವುವು. ರಾಷ್ಟ್ರನಾಯಕನ ಜೀವನಚರಿತ್ರೆಯಾದ್ದರಿಂದ, ಅದು ರಾಷ್ಟ್ರದ ಇತಿಹಾಸವನ್ನು ಬಿಟ್ಟು ಇರಲು ಸಾಧ್ಯವಿಲ್ಲವೆಂಬುದನ್ನು ಗಮನಿಸುವುದಗತ್ಯ.

ಲೇಖಕರು ಶಾಸ್ತ್ರಿಯವರ ಜೀವನಚರಿತ್ರೆಯನ್ನು, ಪತ್ರಿಕೆಗಳಲ್ಲಿ ದೊರೆತ ಅಂಶಗಳನ್ನಷ್ಟೇ ಅವಲಂಬಿಸಿ ರಚಿಸಿದಂತೆ ತೋರುವುದು ಸಹಜವಾದರೂ, ವಿಷಯನಿರೂಪಣೆಯ ದೃಷ್ಟಿಯಿಂದ ಗಮನಿಸಲರ್ಹವಾಗಿದೆ. ಜೀವನಚರಿತ್ರೆ ಬರೆಯುವ ಲೇಖಕರು, ವ್ಯಕ್ತಿಯ ನಿಕಟವರ್ತಿಗಳಾಗಿದ್ದರಾಗಲಿ, ಇಲ್ಲವೇ ಅವರ ವೈಯಕ್ತಿಕ ಡೈರಿಯಲ್ಲಿನ ಪ್ರಮುಖ ಅಂಶಗಳನ್ನು ಪಡೆದರಾಗಲಿ, ಅದರ ಸಹಾಯದಿಂದ ರೂಪಿತವಾದ ಜೀವನ ಚರಿತ್ರೆ ಇನ್ನೂ ಹೆಚ್ಚು ಸ್ವಾರಸ್ಯವಾಗುವುದರಲ್ಲಿ ಸಂದೇಹವಿಲ್ಲ. ಮೊದಲಿಂದ ಕೊನೇತನಕ ಬರೀ ಘಟನೆಗಳನ್ನೇ ವರದಿಯ ರೂಪದಲ್ಲಿ ಹೇಳುವುದರ ಜೊತೆಗೆ ಅಲ್ಲಲ್ಲೆ ಸಹಜವಾಗಿ ತುಸು ಸಂಭಾಷಣೆ ಇದ್ದರೆ ಓದುಗರಿಗೆ ಮತ್ತಷ್ಟು ಆಸಕ್ತಿಯನ್ನುಂಟುಮಾಡುತ್ತಿತ್ತು.

ಅಂತೂ ಪುಸ್ತಕ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಮುದ್ರಿತವಾಗಿದ್ದರೂ, ಅಚ್ಚಿನ ದೋಷಗಳು ಮತ್ತು ಲೇಖಕರು ಬಳಸಿರುವ ತಪ್ಪುಪ್ರಯೋಗಗಳು ಅಲ್ಲಲ್ಲೆ

ನುಸುಳದೆ ಬಿಟ್ಟಿಲ್ಲ. (ಪುಟ ೧೦೦) 'ಜಾತ್ಯಾತೀತ' ಮತ್ತು (ಪುಟ ಅದೇ) 'ಶತೃ' ಎಂಬ ಶಬ್ದಗಳಿಗೆ 'ಜಾತ್ಯತೀತ' ಮತ್ತು 'ಶತ್ರು' ಎಂಬ ಸರಿಯಾದ ರೂಪಗಳು ಪ್ರಾಯಶಃ ಲೇಖಕರಿಗೆ ಸಂದೇಹವನ್ನುಂಟುಮಾಡಿರಬಹುದು. ಒಟ್ಟಿನಲ್ಲಿ ಲೇಖಕರು ಆರಂಭದಲ್ಲಿ ಹೇಳಿಕೊಂಡಿರುವಂತೆ, ಅವರ ಹಾರೈಕೆ ತಕ್ಕಮಟ್ಟಿಗೆ ಪೂರೈಕೆಯಾಗಿದೆ ಎನ್ನಲಡ್ಡಿಯಿಲ್ಲ. ಪುಸ್ತಕದಲ್ಲಿ ಅಲ್ಲಲ್ಲಿ ಸೂಕ್ತ ಭಾವಚಿತ್ರಗಳನ್ನು ಮುದ್ರಿಸಿರುವುದು ಉಚಿತವಾಗಿದೆ. 'ಕಾಶ್ಮೀರ ಸಮಸ್ಯೆ' 'ಆಹಾರ ಸಮಸ್ಯೆ' ಎಂಬ ಕೃತಿಗಳ ಜೊತೆಗೆ ಪತ್ರಿಕೆಗಳಲ್ಲಿ ವೈಚಾರಿಕ ಲೇಖನಗಳನ್ನೂ ಬರೆದು ಪರಿಚಿತರಾಗಿರುವ ಈ ಲೇಖಕರು ಜೀವನ ಚರಿತ್ರೆ ಬರೆಯುವುದರಲ್ಲೂ ಕೈಕುದುರಿಸಿಕೊಂಡಿರುವರು ಎಂಬುದು ಈ ಕೃತಿಯಿಂದ ವ್ಯಕ್ತವಾಗುತ್ತದೆ. ಈ ಕೃತಿಯನ್ನೋದಲು ಕೆಲವೇ ಗಂಟೆಗಳು ಬೇಕಾದರೂ, ಅದರಿಂದುಂಟಾಗುವ ಪರಿಣಾಮ ಬಹಳಕಾಲ ಇರುವಂತಹುದು.

—ಮಹೇಶ್ವರಪ್ಪ

**ನಯನಾ ;** ಕಾದಂಬರಿಕಾರರು : ಜಿ. ಜ್ಞಾನಾನಂದ ; ಪ್ರಸನ್ನ ಪ್ರಕಾಶನ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ.

'ನಯನಾ' ಒಂದು ಕಿರುಕಾದಂಬರಿ. ಒಬ್ಬ ಚಿತ್ರಕಲಾವಿದನ ಬದುಕಿನ ಸುತ್ತ ಹೆಣೆದ ಕಥೆ. ಇಲ್ಲಿ ಬರುವ ಕಲಾವಿದ ಜಿತೇಂದ್ರ, ನಯನಾ ಮೊದಲಾದ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳು ಒಂದಲ್ಲ ಒಂದು ವಿಧದಲ್ಲಿ ನೊಂದವರು (ವಾಸವದತ್ತನ ಹೊರತು).

'ನಯನಾ'ಳ ವ್ಯಕ್ತಿತ್ವದಲ್ಲಿ ಎರಡು ಸ್ವರೂಪವನ್ನು ಕಾಣಬಹುದು. ಒಂದು ತನ್ನ ಗಂಡನನ್ನು ಅತಿಯಾಗಿ ಪ್ರೇಮಿಸಿದ್ದೇ ತನಗೆ ಉರುಳಾಗಬಹುದೆಂದು ಭಾವಿಸಲೂ ಅಶಕ್ತಳಾದ ಮುಗ್ಧಪ್ರೇಮಿ; ಆ ಮುಗ್ಧತೆಯೇ ತನ್ನ ಹೃದಯದಗ್ಧತೆಗೆ ಕಾರಣವಾದಾಗ–ತನ್ನ ಬದುಕಿನಲ್ಲಿ ಮತ್ತೊಂದು ತಿರುವು ಕಾಣುತ್ತಾಳೆ ; ಅದೇ–ತಾನು ನಿಲ್ಲಿಸಿದ್ದ ನೃತ್ಯ, ಚಿತ್ರಕಲೆಯ ಅಭ್ಯಾಸವನ್ನು ಮುಂದುವರಿಸುವುದು—ಇದು ಎರಡನೆಯದು. ಕಾದಂಬರಿಯಲ್ಲಿ ಇವಳ ಪಾತ್ರ ಚೆನ್ನಾಗಿ ನಿರೂಪಿಸಲ್ಪಟ್ಟಿದೆ.

ವೀಣಾಳ ಹೊರಮೈ ಎಷ್ಟು ಅಂದವೋ ಅಷ್ಟೇ ಕುರೂಪ ಅವಳ ಅಂತರಂಗ ; ಚಾಚಿದವರ ಕೈಹಿಡಿದು ಕುಪ್ಪಳಿಸುವ ಹೆಣ್ಣು.

ಚಿತ್ರಕಲಾವಿದ ಜಿತೇಂದ್ರನ ಬಗ್ಗೆ ಹೇಳುವುದಾದರೆ, ಮಹತ್ವಾಕಾಂಕ್ಷೆಯಿಂದ ತಂದೆ-ತಾಯಿಯಿಂದ ದೂರವಾಗಿ, ಚಿತ್ರಕಲೆ ಕಲಿತವನು. ಈತನು ಕಲೆಯ ಬಗ್ಗೆ ಮಾತನ್ನಾಡುವಲ್ಲಿ ವೈಚಾರಿಕ ಮನೋಭಾವನೆ ಕಾಣದು ; ಅಸಂಬದ್ಧ ಪ್ರಲಾಪದಂತಿದೆ. ಪರಿಚಯದಲ್ಲಿ ನಿರಂಜನ ಅವರು ಭಾರತೀಯ ಚಿತ್ರಕಲೆ ವಿಷಯವಿರುವುದರಿಂದ ನನಗೆ ಮೆಚ್ಚುಗೆ ಈ ಕೃತಿ–ಎಂಬಂತೆ ಮಾತನ್ನಾಡಿದ್ದಾರೆ. ಆದರೆ ನಮಗೆ ತಿಳಿದಂತೆ ಭಾರತೀಯ ಚಿತ್ರಕಲೆಯ ವಿಷಯ ಈ ಕಾದಂಬರಿಯಲ್ಲಿ ಎಲ್ಲೂ ಕಂಡುಬರುವುದಿಲ್ಲ. ಚಿತ್ರಕಲಾವಿದನ

ಒಳತೋಟಿಯನ್ನು ಅಷ್ಟು ಸಮರ್ಪಕವಾಗಿ ಲೇಖಕರು ಚಿತ್ರಿಸಿಲ್ಲವೆನ್ನಬಹುದು ಚಿತ್ರಕಲಾವಿದ ಜಿತೇಂದ್ರನು ನಯನಾಳನ್ನು ಪ್ರೇಮಿಸಲು ಮುಂದುವರಿದಾಗ ಆಕೆ ನಿರಾಕೃತಿ ತೋರಿಸುತ್ತಾಳೆ; ಖಿನ್ನನಾದ ಕಲಾವಿದ ವಿರಹದಿಂದ ಕವಿತೆ ರಚಿಸುತ್ತಾನೆ. (ಚಿತ್ರ ಬರೆಯಬಹುದಾಗಿತ್ತಲ್ಲ!) ಚಿತ್ರಕಲೆ ಕಲಿಯಲು ಬಂದ ನಯನಾಳಿಗೆ ಜಿತೇಂದ್ರ ಕುಂಚ ಹಿಡಿಯುವ ಬಗೆಯನ್ನು ಹೇಳಿಕೊಟ್ಟಂತೆ ಕಾಣದು—ಲೇಖಕರು ಚಿತ್ರಿಸಿಲ್ಲ.

'ನಯನಾ' ಕಾದಂಬರಿಯು ಓದುಗರ ಸಹನೆಯನ್ನು ಕೆಣಕಿ ಕಾಡಬಲ್ಲದು. ಕಾದಂಬರಿಯು ಪೂರ್ವಾರ್ಧಕ್ಕಿಂತ ಉತ್ತರಾರ್ಧ ಸರಸವಾಗಿಲ್ಲ-ನಿರೂಪಣೆಯ ದೃಷ್ಟಿಯಿಂದ. ಲೇಖಕರ ಭಾಷೆಯಲ್ಲಿ ಬನಿ ಇಲ್ಲ. ಅಚ್ಚಿನ ದೋಷ ಪ್ರತಿ ಪುಟಗಳಲ್ಲಿಯೂ ಇದೆ. ಒಟ್ಟಿನಲ್ಲಿ ಹೇಳುವುದಾದರೆ ಸಹೃದಯರಿಗೆ ಈ ಕಾದಂಬರಿ ತುಂಬಾ ನಿರಾಶೆಯನ್ನುಂಟುಮಾಡುತ್ತದೆ ಎನ್ನಬಹುದು.

ಸರಸ್ವತಿ ಅವತಾರ; ಕಾದಂಬರಿಕಾರರು: 'ಉದಯಾತ್ರೇಯ', ಪ್ರಸನ್ನ ಪ್ರಕಾಶ ಬಸ್ಸಿಮಂಗಳಪುರ; ಕೋಲಾರ ಜಿಲ್ಲೆ, ಬೆಲೆ—೩.೦೦, ಪುಟಗಳು ೨೪೦.

ಸರಸ್ವತಿ ಅವತಾರವು ಅತಿಕಾಮಿಯಾದ ಬಾಳಪ್ಪನ ಸಂಸಾರದ ಕಥೆಯನ್ನೊಳ ಗೊಂಡ ಕಾದಂಬರಿ.

ಬಾಳಪ್ಪನ ಬಾಳು ರಾಕ್ಷಸಪ್ರವೃತ್ತಿಗೆ ಸಮ್ಮತವಾದದ್ದು; ಕಾಮದ ಮತ್ತೊಂದ ರೂಪ ಈತ ಎನ್ನಬಹುದು. ಊರಿನ ಜನತೆಗೆ ಶತ್ರು. ಬಾಳಪ್ಪನ ಮಗ ಬ್ರಹ್ಮಾನಂದ ತಂದೆ ಮಗನ ವ್ಯಕ್ತಿತ್ವ ತದ್ವಿರುದ್ಧವಾದುದು. ತಂದೆ ಹುಟ್ಟು ಕಾಮಿಯಾದರೆ ಮ ಹುಟ್ಟು ಕುರುಡ. 'ಹೊರಗಿನ ಕಣ್ಣಿಗಿಂತಲೂ ಒಳಗಿನ ಕಣ್ಣು ಮುಖ್ಯ; ಅದನ್ನು ಸ ತೆರೆದಿರಬೇಕು' ಎಂದು ಗೌರಮ್ಮನ ಬಾಯಲ್ಲಿ ಲೇಖಕರು ಹೇಳಿಸಿದ್ದಾರೆ (ಪು. 33) ಮಾನವೀಯ ಹೃದಯ ಬ್ರಹ್ಮಾನಂದನಿಗಿತ್ತು. ತನ್ನ ಮಗನಿಂದಲೇ ಬಾಳಪ್ಪ ಅಂತ ಕಾಣುತ್ತಾನೆ.

ಬಾಳಪ್ಪನ ವ್ಯಕ್ತಿತ್ವದ ಚಿತ್ರಣವನ್ನು ಲೇಖಕರು ತಕ್ಕಮಟ್ಟಿಗೆ ಚಿತ್ರಿಸಿದ್ದಾರೆ ಬಾಳಪ್ಪ ಮತ್ತು ಅವನ ಸ್ನೇಹಿತರ ರಾಕ್ಷಸಪ್ರವೃತ್ತಿ ಅಸಹಜವೆನ್ನುವಂತಿದೆ. ಬಾಳ ಕೈಬೀಸಿದಾಗ, ಕಣ್ಸನ್ನೆ ಮಾಡಿದಾಗ ಓಡಿಬರುವ ಹೆಣ್ಣುಗಳ ಪಾತ್ರ, ಹಾಗೆ ಪ್ರಸಂಗಗಳು ಅಸಹಜವೆನ್ನಿಸುತ್ತವೆ.

ನಾರಾಣಪ್ಪ-ಸುಭದ್ರೆಯರ ಪ್ರಣಯಸನ್ನಿವೇಶ ವಾಸ್ತವಿಕತೆಯಿಂದ ದೂ ವಾಗಿದೆ.

ಸುಭದ್ರೆ, ಚಂದ್ರಮ್ಮ, ಬಸಮ್ಮ ಮೊದಲಾದ ಹೆಣ್ಣುಪಾತ್ರಗಳನ್ನು ಗಮನಿ ದಾಗ, ಯಾವ ಹೆಣ್ಣೇ ಆಗಲಿ ತನ್ನ ಶೀಲವನ್ನು ಸೂರೆಗೊಳ್ಳಲು ಅಷ್ಟು ಬೇಗ ಇತರ ಅವಕಾಶ ಕೊಡುತ್ತಾಳೆಯೆ ಎಂಬ ಪ್ರಶ್ನೆ ಬರುತ್ತದೆ ಕಾದಂಬರಿ ಓದಿದಾಗ.

ಹುಟ್ಟು ಕುರುಡನಾದ ಬ್ರಹ್ಮಾನಂದನು ಕಾಣುವ ಕನಸಿನ ಚಿತ್ರಣ (ಪು. 5

59) ಅಸಂಬದ್ಧ; ಕಾರಣ-ಮನಶ್ಶಾಸ್ತ್ರದ ಪ್ರಕಾರ ಹುಟ್ಟುಕುರುಡರಾದವರು ಆ ಬಗೆಯಲ್ಲಿ ಕನಸು ಕಾಣುವುದು ಅಸಾಧ್ಯ.

ಪದ್ಮಳನ್ನು ಪಡೆಯಬೇಕೆಂದು ಹವಣಿಸಿ ಸಾಯುತ್ತಾನೆ ಬಾಳಪ್ಪ. 'ಈ ಕಾದಂಬರಿಯಲ್ಲಿ ಬಾಳಪ್ಪ ಕೊನೆಯವರೆಗೂ ರಾವಣಾಸುರನಂತೆ ಜೀವನ ನಡೆಸಿ, ಹೃದಯವಿದ್ರಾವಕ ರೀತಿಯಲ್ಲಿ ಅಂತ್ಯವನ್ನು ಕಾಣುತ್ತಾನೆ'–ಎಂದಿದ್ದಾರೆ ಪ್ರಕಾಶಕರು. ಅವನ ಜೀವನದಬಗ್ಗೆ ಹೇಳುವುದೇನೋ ಸರಿ; ಆದರೆ ಅವನ ಮರಣದ ಬಗ್ಗೆ ಕೊಟ್ಟಿರುವ ಹೇಳಿಕೆಯಲ್ಲಿ ವಿಶ್ವಾಸವಿಲ್ಲ. ಬಾಳಪ್ಪನ ಅಂತ್ಯ ಮನಮುಟ್ಟುವಂತಿಲ್ಲ. ಅವನ ಮರಣದ ಬಗ್ಗೆ ಸಹೃದಯರಿಗೆ ಏನೂ ಅನ್ನಿಸದು; ಹೃದಯವಿದ್ರಾವಕತೆ ಕಾಣದು. ಬಾಳಪ್ಪನ ಮರಣ ಅನಿವಾರ್ಯವಾಗದೆ, ಬಹುಶಃ ಅಸಹಜವಾಗಿರುವುದನ್ನು ಕಾಣಬಹುದು.

'ಸರಸ್ವತಿಯ ಅವತಾರ'ವು ಸರಳ ಶೈಲಿಯಿಂದ ಕೂಡಿದೆ. ಕಥಾನಿರೂಪಣೆ ತಕ್ಕ ಮಟ್ಟಿಗಿದೆ. ಒಟ್ಟಿನಲ್ಲಿ ಸಹೃದಯರಿಗೆ ಕಾದಂಬರಿಯು ನಿರಾಶೆಯನ್ನುಂಟುಮಾಡುತ್ತದೆ, ಎನ್ನಬಹುದು.

ಇದು ಭಾರತದ ದಾರಿ; ನಾಟಕಕಾರರು: ಸಿಂಬತ್ತಹಳ್ಳಿ ಕಸ್ತೂರಿ ಪ್ರಕಾಶಕರು: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು ೩. ಬೆಲೆ: ೨-೦೦. ಪುಟಗಳು: ೧೪೧.

'ಇದು ಭಾರತದ ದಾರಿ'— ಎಂಟು ರೂಪಕಗಳನ್ನೊಳಗೊಂಡಿದೆ. ಐದು ಬಾನುಲಿಯಿಂದ ಪ್ರಸಾರವಾದ ರೂಪಕಗಳಿವೆ; ಎರಡು ಮಕ್ಕಳ ರೂಪಕಗಳಿವೆ, ಒಂದು ನಾಟಕವಿದೆ.

ಲೇಖಕರು, ಚಾರಿತ್ರಿಕ, ಪೌರಾಣಿಕ ಅಂಶಗಳನ್ನು ವಸ್ತುವಾಗಿ ತಮ್ಮ ರೂಪಕಗಳಲ್ಲಿ ಬಳಸಿಕೊಂಡಿದ್ದಾರೆ; ಅಲ್ಲದೆ ನೆಹರೂ, ಗಾಂಧಿ ಹಾಗೂ ಶಾಸ್ತ್ರಿಯವರ ವಾಣಿಯನ್ನು ಔಚಿತ್ಯಪೂರ್ವಕವಾಗಿ ಉಪಯೋಗಿಸಿಕೊಂಡಿರುವುದು ಗಮನಿಸಬೇಕಾದ ಅಂಶ.

'ಇದು ಭಾರತದ ದಾರಿ' ಎಂಬ ರೂಪಕದಲ್ಲಿ ನಿಷ್ಕಾಮ ಕರ್ಮಿಗಳಾಗಿ ದುಡಿಯುವುದೇ ಭಾರತೀಯನ ಕರ್ತವ್ಯ; ಧರ್ಮೋದ್ಧಾರ ಮಾಡುವುದು; ನೀತಿಯನ್ನು ನೆಲೆಗೊಳಿಸುವುದೇ ನಿಜವಾದ ಭಾರತೀಯನ ದಾರಿ. ಈ ರೂಪಕವನ್ನು ಓದುವಾಗ ಚಂದ್ರಗುಪ್ತನ ಭಾಗ್ಯ ನೆನಪಿಗೆ ಬರುತ್ತದೆ; ಅಂತೆಯೇ ಭಾರತದ ಭಾಗ್ಯದ ಬಗ್ಗೆ ಮನಸ್ಸು ಚಿಂತಿಸುತ್ತದೆ.

'ಜನನಾಯಕ' ರೂಪಕವು ದುಷ್ಟಶಕ್ತಿಯನ್ನು ನಿಗ್ರಹಿಸುವ ಮಾರ್ಗದಲ್ಲಿ ನಡೆದಿದೆ.

'ಮಾನವೀಯತೆಯ ಮಹಾಪುರುಷ' ಮಾನವೀಯ ಮೌಲ್ಯಕ್ಕೆ ನಿದರ್ಶನವಾಗಿ ನೆಹರೂ ಅವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ ಲೇಖಕರು.

ನಮ್ಮ ದೇಶವು ಭಿನ್ನ ಮನೋಭಾವನೆಯ, ಭಿನ್ನ ಅಭಿರುಚಿಯ, ಭಿನ್ನಮತೀಯ

ರಿಂದ ಕೂಡಿದೆ. ಮಾನವ ಜನಾಂಗ ಒಂದೇ, ಎಂಬ ಭಾವ ಬಂದಲ್ಲಿ ಏನನ್ನಾದರೂ ಎದುರಿಸಬಲ್ಲೆವು; ಸಾಧಿಸಬಲ್ಲೆವು—ಎಂಬುದನ್ನು 'ಒಗ್ಗಟ್ಟಿನಲ್ಲಿ ಬಲವುಂಟು' ಎಂಬ ರೂಪಕದಲ್ಲಿ ಕಾಣಬಹುದು.

ಬುದ್ಧನ ಬಗ್ಗೆ 'ಕರುಣೆಯ ಅವತಾರ' ಎಂಬ ರೂಪಕವಿದೆ. ಇಲ್ಲಿ ಬುದ್ಧನ ಪಾತ್ರನಿರೂಪಣೆಯಲ್ಲಿ ಲೇಖಕರು ಕೊಂಚ ಎಡವಿದ್ದಾರೆ. ಬುದ್ಧ : ಆನಂದ, ಇದೋ ಅತ್ತ ಕಾಲಿನಕಡೆ ಹಿಡಿದುಕೋ, ನಾನು ಇತ್ತ ತಲೆಯಕಡೆ ಹಿಡಿದುಕೊಳ್ಳುತ್ತೇನೆ (ಪು. 43) ಎಂದು ಹೇಳುತ್ತಾನೆ. ಕಾಲಿನಕಡೆ ಬುದ್ಧನೇ ಹಿಡಿದುಕೊಂಡಂತೆ ಲೇಖಕರು ನಿರೂಪಿಸಿದ್ದರೆ ಆ ಪಾತ್ರದ ಮಹತ್ವ ಇನ್ನೂ ಹೆಚ್ಚುತ್ತಿತ್ತು.

ಕೃಷ್ಣನ ಬಗ್ಗೆ 'ನವನೀತ ಚೋರ' ರೂಪಕವಿದೆ. ಸುಭಾಷ್ ಅವರ ಬಗ್ಗೆ 'ಬಾಲಸಾಹಸಿ ಸುಭಾಷ್' ರೂಪಕವಿದೆ ಕುತೂಹಲಪೂರಿತ ಮಕ್ಕಳ ಮನಸ್ಸಿಗೆ ಕನ್ನಡಿಯಂತಿದೆ, ನಿರೂಪಣೆಯ ದೃಷ್ಟಿಯಿಂದ. ಈ ರೂಪಕ ಪರಿಚಯದಲ್ಲಿ 'ಶಂಕರ್' ಪಾತ್ರವಿದೆ; ಆದರೆ ರೂಪಕದಲ್ಲಿ 'ಶರತ್' ಪಾತ್ರನಿರೂಪಣೆ ಇದೆ; ಇವರಲ್ಲಿ ಯಾವುದು ಸರಿಯೋ ತಿಳಿಯದು.

'ಕ್ರಾಂತಿವೀರ' ನಾಟಕದಲ್ಲಿ ಸ್ವಾತಂತ್ರ್ಯಕ್ಕೆ ಮುನ್ನ ಭಾರತೀಯರ ಮನೋಮಾರ್ಗ ಹೇಗಿತ್ತು—ಎಂಬುದನ್ನಿಲ್ಲಿ ಚಿತ್ರಿಸಿದ್ದಾರೆ. ಹುಟ್ಟು ಕ್ರಾಂತಿವೀರ ಶೇಖರ್ ಗಾಂಧಿಯವರ ದರ್ಶನದಿಂದ ಪರಿವರ್ತಿತನಾಗುವುದು ಗಮನಾರ್ಹ; ದುಷ್ಟಶಕ್ತಿಯು ಶಿಷ್ಟಶಕ್ತಿಗೆ ಎಂದಿದ್ದರೂ ಮಣಿಯಬೇಕೆಂಬ ಸಂದೇಶವಿರುವಂತಿದೆ.

ನೆನಪಿನ ಸುರುಳಿಯನ್ನು ಬಿಚ್ಚುವ ಪ್ರಯತ್ನಮಾಡಿದ್ದಾರೆ ಲೇಖಕರು. 'ನಾವು ನಿಜವಾಗಿ ಭಾರತೀಯರಾಗಿ ಉಳಿದು ಬಾಳಬೇಕೆಂಬ ಮಹಾಶಯದಿಂದ ಇವು ಪ್ರೇರಿತವಾಗಿವೆ' ಎಂಬ ಪು. ತಿ. ನ. ಅವರ ಹೇಳಿಕೆಯಲ್ಲಿ ಹುರುಳಿದೆ. ವಸ್ತುವೈವಿಧ್ಯದಿಂದ ರೂಪಕಗಳು ಕೂಡಿವೆ. ಲೇಖಕರ ಶೈಲಿ ಸರಳ; ನಿರೂಪಣೆ ಮನೋಜ್ಞವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಸಹೃದಯರು ಮೆಚ್ಚುವಂಥ ಕೃತಿ.

—ಜಿ.ವಿ.ಡಿ.

## ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಿಗೆ ಸಂಭಾವನಾಗ್ರಂಥ-'ದೇವಗಂಗೆ' ಅರ್ಪಣೆ ಸಮಾರಂಭ

ಕನ್ನಡ ನಾಡಿನಲ್ಲಿ ಪಂಡಿತರತ್ನಂ, ಆಸ್ಥಾನವಿದ್ವಾನ್, ಪದ್ಮಶ್ರೀ ಶ್ರೀ ಬಿ. ಶಿವಮೂರ್ತಿ ಶಾಸ್ತ್ರೀ ಅವರ ಹೆಸರನ್ನು ಕೇಳದವರು ವಿರಳ. ವೀರಶೈವ ಜಂಗಮ ಮನೆತನದ ತುಮಕೂರಿನ ಬಸವಯ್ಯಸ್ವಾಮಿ, ಹುಲ್ಲುಕುಂಟೆ ಮಠ ಇವರ ಪುತ್ರರಾಗಿ ದಿನಾಂಕ ೨೩-೨-೧೯೦೩ರಂದು ಜನಿಸಿದ ಶಾಸ್ತ್ರಿಗಳು ಜೀವನದ ಆರಂಭ ದೆಸೆಯಲ್ಲಿ ಉಪಾಧ್ಯಾಯ ರಾಗಿ, ಅನಂತರ ಕೀರ್ತನಕಾರರಾಗಿ, ವೃತ್ತಪತ್ರಿಕಾ ವ್ಯವಸಾಯಕ್ಕಿಳಿದು, 'ಶರಣ ಸಾಹಿತ್ಯ' ಪತ್ರಿಕೆಯ ಸಂಪಾದಕರಾಗಿ, ಕರ್ಣಾಟಕದ ಏಕೀಕರಣ ಚಳುವಳಿಯ ಮುಂದಾಳುಗಳಾಗಿ, ಗಡಿನಾಡು ಸಮಿತಿಯ ಸಕ್ರಿಯ ಸಚೇತಕರಾಗಿ, ಅರಮನೆ-ಗುರು ಮನೆಗಳಲ್ಲಿ ಮನ್ನಣೆ ಪಡೆದು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪಂಡಿತ ಪಾಮರರ ಪ್ರೀತ್ಯಾದರಗಳನ್ನು ಗಳಿಸಿದ್ದಾರೆ.

ಇಂಥ ಒಂದು ವ್ಯಕ್ತಿ ಜೀವನದ ಅರವತ್ತು ವಸಂತಗಳನ್ನು ಯಶಸ್ವಿಯಾಗಿ ದಾಟಿ, ನಾಡು-ನುಡಿಗಾಗಿ ಸೇವೆಮಾಡಿರುವುದನ್ನು ನೆನಸಿಕೊಂಡು ಅವರ ಬಂಧುಮಿತ್ರರು ೧೯೬೩ರಲ್ಲಿ ಶಾಸ್ತ್ರಿಗಳ ಷಷ್ಟ್ಯಬ್ಧಿ ಸಮಾರಂಭವನ್ನು ನಡೆಸಿದರು. ಅದರ ಸವಿನೆನಪಿಗಾಗಿ 'ದೇವಗಂಗೆ' ಸಂಭಾವನಾಗ್ರಂಥವನ್ನು ಅರ್ಪಿಸಲು ದಿನಾಂಕ ೧೪-೯-೧೯೬೮ರಂದು ಬೆಂಗಳೂರಿನ ಪುರಭವನದಲ್ಲಿ ಶಾಸ್ತ್ರಿಗಳ ಅಭಿಮಾನಿವೃಂದ ಸೇರಿ ವರ್ಣರಂಜಿತ ಸಮಾ ರಂಭವನ್ನು ಏರ್ಪಡಿಸಿದ್ದಿತು.

ಅಂದು ಸಂಜೆ ಆರಕ್ಕೆ ಸಮಾರಂಭ ಪ್ರಾರಂಭವಾಯಿತು. ಸಮಾರಂಭಕ್ಕೆ ಮುನ್ನ ಆಗಮಿಸಿದ ಮೈಸೂರಿನ ಶ್ರೀ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳನ್ನು ವಿಧ್ಯುಕ್ತವಾಗಿ ವೇದ ಮಂತ್ರ ಘೋಷಗಳಿಂದ ವೇದಿಕೆಯ ಮೇಲೆ ಕರೆತರಲಾಯಿತು. ಸಮಾರಂಭ ಶ್ರೀಮತಿ ರಂಗನಾಯಕಿ ಸಹೋದರಿಯವರ ಪ್ರಾರ್ಥನೆಯಿಂದ ಆರಂಭವಾಯಿತು. ಅನಂತರ ಪಂಡಿತ ಎಚ್. ಎಂ. ರಾಮಾರಾಧ್ಯರು ಸಂಸ್ಕೃತದಲ್ಲಿ ರಚಿಸಿದ ಸ್ವಾಗತ ಗೀತೆಗಳನ್ನು ಓದಿದರು. ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಹಾಗೂ ಕುಮಾರಿ ಕಾವೇರಿ ವೃಂದದವರಿಂದ ಸ್ವಾಗತಗೀತೆ ಹಾಗೂ ಭಾವಗೀತೆಯ ವಾಚನ ನಡೆಯಿತು.

ಸಂಭಾವನಗ್ರಂಥ ಸಮರ್ಪಣ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಡಿ. ಜತ್ತಿ ಯವರು ಸ್ವಾಗತಭಾಷಣ ಮಾಡುತ್ತ ಸಾಹಿತಿಯಾಗಿ, ಪತ್ರಿಕಾಕರ್ತರಾಗಿ,

ಭಾಷಣಕಾರರಾಗಿ, ಕೀರ್ತನಕಾರರಾಗಿ ಪರಿಚಿತರಾಗಿರುವ ಶಾಸ್ತ್ರಿಗಳನ್ನು ಪರಿಚಯ ಮಾಡಿಕೊಟ್ಟರು. ಅನಂತರ ಜಗದ್ಗುರು ಶಿವರಾತ್ರೀಶ್ವರ ಸ್ವಾಮಿಗಳನ್ನು, ಸಂಭಾವನಾ ಗ್ರಂಥ ಬಿಡುಗಡೆಮಾಡಲು ದಯಮಾಡಿಸಿದ ಎ. ಎಸ್. ಅಡಕೆಯವರನ್ನು, ಸಮಾರಂಭದ ಅಧ್ಯಕ್ಷತೆ ವಹಿಸಿದ ಪ್ರೊ. ವಿ. ಕೆ. ಗೋಕಾಕರನ್ನು, ಸಮಾರಂಭದ ಭಾಷಣಕಾರರಾಗಿ ಬಂದಿದ್ದ ಶ್ರೀಗಳಾದ ಕಡಿದಾಳ ಮಂಜಪ್ಪ, ಪ್ರೊ. ದೇ. ಜವರೇಗೌಡರು, ಮರಿಯಪ್ಪಭಟ್ಟರು, ಡಿ. ಕೆ. ಭೀಮಸೇನರಾಯರು, ಮಾಳವಾಡರು, ಕೃಷ್ಣಮೂರ್ತಿ ಪುರಾಣಿಕರು, ಶಂಕರನಾರಾಯಣರಾಯರು ಅವರನ್ನು ಕೃತಜ್ಞಪೂರ್ವಕ ಸ್ವಾಗತಿಸಿದರು.

ಅನಂತರ ಶ್ರೀ ಹಂ. ಪ. ನಾಗರಾಜಯ್ಯನವರು ನಾಡಿನ ವಿವಿಧ ಭಾಗಗಳಿಂದ ಬಂದ, ಮಠಾಧಿಪತಿಗಳ, ಮಂತ್ರಿಗಳ, ರಾಜಕಾರಣಿಗಳ, ಸಾಹಿತಿಗಳ ಬಂಧುಮಿತ್ರರ ಸಂದೇಶಗಳನ್ನು ಓದಿದರು.

ಸಂಭಾವನಾಗ್ರಂಥ ಸಮರ್ಪಣ ಸಮಿತಿಯ ಕಾರ್ಯದರ್ಶಿಯಾಗಿ, ಸಂಪಾದಕರಾಗಿ ಕೆಲಸ ನಿರ್ವಹಿಸಿದ ಶ್ರೀ ಎಸ್. ಬಸವಾರಾಧ್ಯರು ಐದು ವರುಷಗಳಿಂದ ನಡೆದು ಬಂದ ಸಂಭಾವನಗ್ರಂಥ ಪ್ರಕಟಣ ಕಾರ್ಯದ ವರದಿಯನ್ನು ನೀಡಿದರು.

ಅನಂತರ 'ದೇವಗಂಗೆ' ಸಂಭಾವನಗ್ರಂಥವನ್ನು ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಎ. ಎಸ್. ಅಡಕೆಯವರು ಬಿಡುಗಡೆಮಾಡುತ್ತ "ಶಾಸ್ತ್ರಿಗಳನ್ನು ಅರಿಯದವರು ಯಾರು ಇಲ್ಲ; ಅವರು ವ್ಯಕ್ತಿಯಲ್ಲ–ಶಕ್ತಿ–ಸಂಸ್ಥೆ" ಎಂದು ಹೇಳಿ ಅವರು ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ, ತಾವು ಸಮಾರಂಭದಲ್ಲಿ ಭಾಗಿಯಾಗುವ ಅವಕಾಶ ದೊರೆತದ್ದಕ್ಕೆ ಆನಂದ ವ್ಯಕ್ತಪಡಿಸಿ ಗ್ರಂಥವನ್ನು ಶ್ರೀ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಪದತಲಕ್ಕಿಟ್ಟು ಪ್ರಣಾಮಮಾಡಿದರು. ಶ್ರೀ ಶ್ರೀ ಸ್ವಾಮಿಗಳು ಸಂಭಾವನಗ್ರಂಥವನ್ನು ಶಾಸ್ತ್ರಿಗಳಿಗೆ ಅರ್ಪಿಸಿ ಆಶೀರ್ವದಿಸಿದರು.

ಅನಂತರ ಸಾಲಾಗಿ ನಿಂತಿದ್ದ ಶಾಸ್ತ್ರಿಗಳ ಅಭಿಮಾನಿತಂಡ ಆ ದಪ್ಪ ಕೊರಳು ಬಾಗುವಂತೆ ಪುಷ್ಪಾಹಾರಗಳನ್ನು ಹಾಕಿ ಗೌರವವನ್ನು ಸೂಚಿಸಿತು.

ಜಗದ್ಗುರುಗಳು ಅನುಗ್ರಹ ಭಾಷಣಮಾಡುತ್ತ "ಉಪನಿಷತ್ತಿನ ಮಾತಿನಂತೆ ಮನುಷ್ಯ ತನ್ನ ಪುಣ್ಯಫಲದಿಂದ ನೂರು ವರುಷಗಳು ಬದುಕಬಲ್ಲವನಾಗಿರುತ್ತಾನೆ. ಪಂಡಿತಶ್ರೇಷ್ಠ ಶ್ರೀ ಶಿವಮೂರ್ತಿಶಾಸ್ತ್ರಿಗಳು ನೂರು ವರುಷಗಳು ಬದುಕಿ ನಾಡು–ನುಡಿಯ ಸೇವೆಗೆ ಈಗ ದುಡಿದಿರುವಂತೆ ಮುಂದೆಯೂ ದುಡಿಯಲಿ. ಶಾಸ್ತ್ರಿಗಳು ನಾಡು–ನುಡಿಗಾಗಿ ಮಾಡಿರುವ ಸೇವೆ ಬಹುಮುಖವಾದುದು, ಅಸಾಧಾರಣವಾದುದು. ಇಂದು ರಾಷ್ಟ್ರದ ಇತಿಹಾಸವನ್ನು ನೋಡಬೇಕಾದರೆ ಆಯಾ ಕಾಲದ ಸಾಹಿತಿಗಳನ್ನು ನೋಡಬೇಕು. ಸಾಹಿತಿ ಚಿರಕಾಲ ಉಳಿಯುವಂತಹವನು.

....ನೀವೆಲ್ಲರೂ ಸೇರಿ ಈ ಗ್ರಂಥವನ್ನು ಶಾಸ್ತ್ರಿಗಳಿಗೆ ಕೊಟ್ಟಿರುವಿರಿ–'ದೇವಗಂಗೆ' ಒಳ್ಳೆಯ ಹೆಸರು. ಈ ಸಮಾರಂಭ ಕನ್ನಡ ನಾಡಿಗೆ ಮಾರ್ಗದರ್ಶಕವಾಗಲಿ ಶಾಸ್ತ್ರಿಗಳು ಚಿರಾಯುವಾಗಲಿ" ಎಂದು ತುಂಬುಹೃದಯದಿಂದ ಆಶೀರ್ವದಿಸಿದರು.

ಅನಂತರ ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಮರಿಯಪ್ಪಭಟ್ಟರು, ಮಾತನಾಡುತ್ತಾ "೧೯೦೮ರಿಂದ ನಾನು ಶಾಸ್ತ್ರಿಗಳನ್ನು ಬಲ್ಲೆ. ಮೊದಲಿಗೆ ಹೊಸಪೇಟೆಯಲ್ಲಿ ಶಾಸ್ತ್ರಿಗಳ ಕೀರ್ತನೆ ಕೇಳಿ ಹರ್ಷಪುಳಕಿತನಾದೆ. ಅಂದಿನಿಂದ ಇಂದಿನವರೆಗೂ ಹತ್ತಾರು ಕಡೆಯಿಂದ ಶಾಸ್ತ್ರಿಗಳ ಪರಿಚಯವಿದೆ. ಕನ್ನಡದ ಅಪರಾವತಾರ ಅವರು, ಅವರನ್ನು ಸನ್ಮಾನಿಸುವುದು ಕನ್ನಡವನ್ನು ಸನ್ಮಾನಿಸಿದಂತೆ. ಅವರು, ಕರ್ನಾಟಕ ಏಕೀಕರಣಕ್ಕೆ ತುಂಬಾ ದುಡಿದಿದ್ದಾರೆ. ಅದನ್ನು ಎಲ್ಲರೂ ಮೆಚ್ಚಬೇಕು. ಕೆಲವರ ವಿದ್ವತ್ತು ಮಾತನಾಡಲು ಬರುತ್ತೆ; ಬರೆಯಲು ಬರುವುದಿಲ್ಲ. ಕೆಲವರದು ಬರೆಯಲು ಬರುತ್ತೆ; ಮಾತನಾಡಲು ಬರುವುದಿಲ್ಲ. ಆದರೆ ಶಾಸ್ತ್ರಿಗಳು ಮಾತನಾಡಬಲ್ಲರು; ಬರೆಯಲೂ ಬಲ್ಲರು. ವೀರಶೈವ ಸಾಹಿತ್ಯದ ಬಗ್ಗೆ ಉತ್ಕೃಷ್ಟ ಗ್ರಂಥಗಳನ್ನು ಬರೆದಿದ್ದಾರೆ. ಕೆಲವು ಗ್ರಂಥಗಳನ್ನು ಸುಂದರವಾಗಿ ಸಂಪಾದಿಸಿಕೊಟ್ಟಿದ್ದಾರೆ. ಶರಣ ಸಾಹಿತ್ಯ ಪತ್ರಿಕೆಯಲ್ಲಿ ತರುಣ ಬರಹಗಾರರನೇಕವನ್ನು ಪ್ರೋತ್ಸಾಹಿಸಿ ಅವರ ಲೇಖನಗಳನ್ನು ಪ್ರಕಟಿಸಿದ್ದಾರೆ.

"ಇನ್ನೊಂದು ವಿಚಾರವೇನೆಂದರೆ—ಶಾಸ್ತ್ರಿಗಳು ಮಂದರಾಚಲದಂತಿದ್ದಾರೆ. ಮಥನಮಾಡಿ ನವನೀತವನ್ನು ತರುತ್ತಾರೆ. ಅವರು ದೊಡ್ಡ ಮನಸ್ಸಿನವರು ಸಂಕೋಚ ಭಾವವಿಲ್ಲ. ಯಾರೇ ಆಗಲಿ ಅವ ವಿದ್ಯಾರ್ಥಿಯಾಗಿರಲಿ ಅಥವಾ ಲೇಖಕನಾಗಿರಲಿ ತಾವೇ ಸ್ವಂತ ಖರ್ಚಿನಿಂದ ಉಪಕಾರ ಮಾಡುವ ಮಾನವೀಯತೆಯುಳ್ಳವರಾಗಿದ್ದಾರೆ. ಶಾಸ್ತ್ರಿಗಳಿಗೆ ಹೆಚ್ಚು ಆಯುರಾರೋಗ್ಯ ಭಾಗ್ಯಗಳನ್ನು ಪರಮಾತ್ಮ ಕರುಣಿಸಲಿ'' ಎಂದು ಆಶಿಸಿದರು.

ಅನಂತರ ರಾಜ್ಯದ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರು ಮಾತನಾಡಿ "ಈ ಸಭೆಯಲ್ಲಿ ಭಾಗವಹಿಸುವುದು ನನಗೆ ಸಂತೋಷದ ಸಂಗತಿ. ಶಾಸ್ತ್ರಿಗಳು ನನಗೆ ೧೯೫೭ರಿಂದಲೂ ಗೊತ್ತು. ಅವರು ವ್ಯಕ್ತಿಯಲ್ಲ-ಒಂದು ಸಂಸ್ಥೆ. ಅವರು ನಾನಾ ಕ್ಷೇತ್ರಗಳಲ್ಲಿ ನಾಡು-ನುಡಿ ಸೇವೆ ಮಾಡಿದ್ದಾರೆ. ವಿನಯಸಂಪನ್ನರು, ದೈವಭಕ್ತಿಯುಳ್ಳವರು. ಅವರು ಯಾವ ಅಧಿಕಾರ-ಅಂತಸ್ತುಗಳಲ್ಲಿ ಇಲ್ಲ. ಅಧಿಕಾರದಲ್ಲಿರುವವರನ್ನು ಹೊಗಳಿ ಸನ್ಮಾನಿಸುವುದು ಹೆಚ್ಚಲ್ಲ. ಬಡ ಜಂಗಮಯ್ಯನಂತಿರುವ ಶಾಸ್ತ್ರಿಗಳನ್ನು ಈ ರೀತಿ ಸನ್ಮಾನಿಸುತ್ತಿರುವುದು ಜನರು ಅವರ ಬಗ್ಗೆ ಇಟ್ಟಿರುವ ಪ್ರೀತಿ-ವಿಶ್ವಾಸಗಳನ್ನು ತೋರಿಸುತ್ತೆ. ಪರಮಾತ್ಮ ಅವರ ಸಕಲ ಅಭೀಷ್ಟಗಳನ್ನೂ ನೆರವೇರಿಸಲಿ" ಎಂದು ಆಶಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ನಿರ್ದೇಶಕರೂ, ಪ್ರಾಧ್ಯಾಪಕರೂ ಆದ ದೇ. ಜವರೇಗೌಡರು ಅನಂತರ ಮಾತನಾಡುತ್ತಾ "ಸಾತ್ವಿಕಶಕ್ತಿಯಿಂದ ಬಾಳಿ, ೬೫ ವಸಂತಗಳನ್ನು ದಾಟಿ, ತನುಕನ್ನಡ ಮನಕನ್ನಡವೆಂದು ದುಡಿಯುತ್ತಿರುವ ಶಾಸ್ತ್ರಿಗಳಿಗೆ ಅರ್ಪಿಸುವ ಸಂಭಾವನ ಗ್ರಂಥಾರ್ಪಣ ಸಮಾರಂಭದಲ್ಲಿ ಭಾಗವಹಿಸುವುದು ನನಗೆ ಸಂತೋಷದ ವಿಚಾರ.

"........ಶಾಸ್ತ್ರಿಗಳು ಬಹು ದೊಡ್ಡ ವ್ಯಕ್ತಿ. ಯಾವ ಪಂಡಿತ ಮಂಡಲಿಯಲ್ಲಾಗಲಿ ಇವರನ್ನು ಗುರುತಿಸಬಹುದು. ದೈಹಿಕವಾಗಿಯೂ ಎತ್ತರವಾದ ಚೇತನ. ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾಗಿದ್ದು ಏಳೆಂಟು ವರುಷಗಳಲ್ಲಿ ಅವರು ನಡೆಸಿದ ಕಾರ್ಯಗಳು, ಸಾಧಿಸಿದ ಗುರಿ ಅಪಾರವಾದುದು. ಕನ್ನಡಕೋಶಕ್ಕೆ ಸರಕಾರದ ಹಣವನ್ನು ಒದಗಿಸಿಕೊಟ್ಟಿದ್ದಾರೆ. ಮಂತ್ರಿಗಳ ಮನೆಗೆ ಹೋಗಿ ಅವರನ್ನು ಒಲಿಸಿಕೊಂಡು ಸರಕಾರದಿಂದ ಹಣ ತಂದಿದ್ದಾರೆ.

"ಒಮ್ಮೆ ಉತ್ತರ ಕರ್ಣಾಟಕದ ಕಡೆ ಹೋಗಿದ್ದೆ. ಆ ರಾತ್ರಿ ಹುಮನಾಬಾದಿಗೆ ಬಂದಾಗ ಎಲ್ಲಿ ತಂಗುವುದೆಂದು ಪರಿತಪಿಸುತ್ತಿರುವಾಗ ಒಮ್ಮೆಗೇ ಶಾಸ್ತ್ರಿಗಳ ಹೆಸರು ನೆನಪಿಗೆ ಬಂದಿತು. ತತ್‌ಕ್ಷಣ ಅಲ್ಲಿನ ತಹಶೀಲದಾರರನ್ನು ಕಂಡು ಶಾಸ್ತ್ರಿಗಳ ಹೆಸರು ಹೇಳಿದೆ. ನನ್ನನ್ನು ಅವರು ಹಾರ್ದಿಕವಾಗಿ ಸ್ವಾಗತಿಸಿದರು. ಪ್ರವಾಸಿ ಮಂದಿರದಲ್ಲಿ ತಂಗಲು ಜಾಗ ಮಾಡಿಕೊಟ್ಟರು. ಬೆಳಗ್ಗೆ ಅವರ ಜವಾನ ಬಂದು ಸಾಹೇಬರು ತಮ್ಮನ್ನು ತಿಂಡಿಗೆ ಕರೆದುಕೊಂಡು ಬಾ ಎಂದು ಹೇಳಿದ್ದಾರೆಂಬ ಮಾತು ಕೇಳಿದಾಗಲಂತು, ಇದೆಲ್ಲ ಶಾಸ್ತ್ರಿಗಳ ನಾಮದ ಬಲವೆಂದು ತಿಳಿದೆ. ಶಾಸ್ತ್ರಿಗಳ ಹೆಸರು ಹೇಳಿಕೊಂಡು ಇಡೀ ಕರ್ನಾಟಕವನ್ನು ಸುತ್ತಿ ಬರಬಹುದು.

"ಅವರ ಅನೇಕ ಒಳ್ಳೆಯ ಗುಣಗಳಲ್ಲಿ ಸ್ವರ ಮಾಧುರ್ಯವೂ ಒಂದು. ತಮಗೆಲ್ಲ ಗೊತ್ತಿರುವ ವಿಷಯು. ಕರ್ಣಾಟಕದ ಏಕೀಕರಣವಾಗುವಾಗ ಹಳೆಯ ಮೈಸೂರಿನವರು ವಿರೋಧ ವ್ಯಕ್ತಪಡಿಸಿದರು. ಆಗ ಶಾಸ್ತ್ರಿಗಳು ಅಲ್ಲಿಯ ಮತ್ತು ಇಲ್ಲಿನ ಜನಕ್ಕೆ ಸೇತುವೆಯಾಗಿ ನಿಂತು ಒಕ್ಕೂಟವನ್ನು ಸಾಧಿಸಿದರು. ಇಂಥ ನಾಲ್ಕಾರು ಜನ ಇಂದು ಇದ್ದಿದ್ದರೆ ಕರ್ಣಾಟಕವಾಗಿ ಎಷ್ಟೋ ವರುಷಗಳಾಗುತ್ತಿದ್ದವು.

"ಶಾಸ್ತ್ರಿಗಳು ರಾಜಕಾರಣದಲ್ಲಿ ಎಷ್ಟೆತ್ತರ ಬೇಕಾದರೂ ಮೇಲೇರಬಹುದಿತ್ತು. ಆದರೆ ಅದು ಅವರಿಗೆ ಬೇಕಿಲ್ಲ. ಇಂಥ ಶ್ರೀಮಂತ ಗುಣವುಳ್ಳ ಶಾಸ್ತ್ರಿಗಳು ಇನ್ನೂ ಅನೇಕ ಕಾಲ ಬದುಕಲಿ; ನಾಡು–ನುಡಿಗಳಿಗೆ ಸೇವೆಸಲ್ಲಿಸಲಿ" ಎಂದು ಆಶಿಸಿ ಅಭಿನಂದಿಸಿದರು.

ಅನಂತರ ಪ್ರೊ. ಡಿ. ಕೆ. ಭೀಮಸೇನರಾಯರು ಮಾತನಾಡಿ "ಹೈದರಾಬಾದ್ ಕನ್ನಡಿಗರ ಪರವಾಗಿ ಶಾಸ್ತ್ರಿಗಳಿಗೆ ಗೌರವವನ್ನು ಅರ್ಪಿಸಲು ನಾನು ಈ ಸಮಾರಂಭದಲ್ಲಿ ಭಾಗಿಯಾಗುತ್ತಿದ್ದೇನೆ. ಶಾಸ್ತ್ರಿಗಳು ಸುಮಾರು ೨೦ ವರುಷಗಳ ಕೆಳಗೆ ಹೈದರಾಬಾದಿಗೆ ಆಗಮಿಸಿದ್ದಾಗ ಅವರನ್ನು ಮೊದಲು ಕಂಡೆನು. ಆ ಕಡೆಯ ವಿದ್ವಜ್ಜನರು ಹಾಗೂ ಕನ್ನಡದ ಕೆಲಸಗಾರರನ್ನೂ ಅವರು ವಿಚಾರಿಸಿದರು. ಹೈದರಾಬಾದಿನ ಸುತ್ತಲೂ ಕನ್ನಡಕ್ಕೆ ಸಂಬಂಧಿಸಿದ್ದು-ನೋಡಬೇಕಾದ್ದು ಏನಾದರೂ ಇದೆಯೆ ಎಂದರು. ನಾನು ಹೈದರಾಬಾದಿನ ಪರಿಚಯ ಮಾಡಿಸಿ, ಅಂದೇ ವಿಶ್ವವಿದ್ಯಾನಿಲಯದ ಕನ್ನಡ ಸಂಘದಲ್ಲಿ ಅವರ ಭಾಷಣ ಏರ್ಪಡಿಸಿದೆ. ಅವರು ಕನ್ನಡ ವಿದ್ಯಾರ್ಥಿಗಳಿಗೆ ವೀರಸಂದೇಶವನ್ನು ನೀಡಿದರು. ಕನ್ನಡ ಸತ್ತವರನ್ನು ಬಡಿದೆಬ್ಬಿಸುವ ಭಾಷೆ ಎಂದು ಹೇಳಿ ಅದಕ್ಕೆ ಉಪಷ್ಟಂಭಕ

ವಾಗಿ ರಾಜಶೇಖರ ವಿಳಾಸದ ತಿರುಕೊಳವಿನಾಚಿ ಪ್ರಕರಣವನ್ನು ಹೇಳಿ ಒಂದು, ಎರಡು, ಮೂರು....ಹೀಗೆ ಏಳು ಎಂದ ತಕ್ಷಣ ಅಲ್ಲಿ ಸತ್ತವರೆಲ್ಲ ಎದ್ದು ಕುಳಿತುಬಿಡುವ ಪ್ರಸಂಗ ವನ್ನು ಹೇಳಿ, ಕನ್ನಡದ ಏಳು ಚೈತನ್ಯ ಪೂರ್ಣವಾದುದು ಎಂದು ತಿಳಿಸಿದರು.

"ಆಡು ಮುಟ್ಟದ ಸೊಪ್ಪಿಲ್ಲ ಎನ್ನುತ್ತಾರೆ. ಹಾಗೆಯೇ ಶಾಸ್ತ್ರಿಗಳು ಮುಟ್ಟದ ಸಾಹಿತ್ಯವಿಲ್ಲ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅವರದು ಸಿದ್ಧಹಸ್ತ. ಶಾಸ್ತ್ರಿಗಳು ಬರೀ ವಾಚಾಳಿಗಳಲ್ಲ; ಒಳ್ಳೆಯ ರಸಿಕರೂ ಹೌದು. ಪರಮೇಶ್ವರನ ಪಂಚಮುಖದಂತೆ, ಅವರು ಕನ್ನಡಕ್ಕೆ ಚಿರಕಾಲ ಸೇವೆಮಾಡಲಿ" ಎಂದು ಹಾರೈಸಿದರು.

ಅನಂತರ ಪ್ರೊ. ಎಸ್. ಎಸ್. ಮಾಳವಾಡರು ಮಾತನಾಡುತ್ತಾ "ದೇವ ಲೋಕದ ಗಂಗೆಯನ್ನು ಭೂಲೋಕಕ್ಕೆ ತಂದ ಭಗೀರಥನ ಆಶಾವಾದಿತ್ವವನ್ನು ಮೆಚ್ಚ ತಕ್ಕದ್ದು. ಶಾಸ್ತ್ರಿಗಳೂ ಕೂಡ ಅಂಥವರೇ. ಭಗೀರಥ, ಒಂದರಲ್ಲಿ ಪ್ರಶಸ್ತಿ ಪಡೆದರೆ ಶಾಸ್ತ್ರಿಗಳು ಅನೇಕದರಲ್ಲಿ ಪ್ರಶಸ್ತಿ ಪಡೆದಿದ್ದಾರೆ.

"ಶಾಸ್ತ್ರಿಗಳಲ್ಲಿ ಗುರುತ್ವಾಕರ್ಷಣ ಶಕ್ತಿಯಿದೆ. ಆ ಶಕ್ತಿಗೆ ನಾನು ೧೯೨೮ರಲ್ಲಿ ಒಳಗಾದೆ. ಬಿಜಾಪುರದಲ್ಲಿ ಅವರ ಕೀರ್ತನೆ ಕೇಳಿ ಮುಗ್ಧನಾದೆ. ಆಗ ನಾನು ಹೈಸ್ಕೂಲ್ ವಿದ್ಯಾರ್ಥಿ—ಈಗ ನಿವೃತ್ತನಾಗಿದ್ದೇನೆ. ಆದರೂ ಅವರ ಬಗ್ಗೆ ಪ್ರೀತಿ–ಗೌರವಗಳು ಮಾಸಿಲ್ಲ. ಅಖಿಲ ಕರ್ಣಾಟಕದ ಎಲ್ಲ ಭಾಗಗಳ ಪರಿಚಯ ಪಡೆದವ ರೆಂದರೆ ಶಾಸ್ತ್ರಿಗಳೊಬ್ಬರೆ.

"ಎರಡು ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ನಾಲ್ಕುಜನ ಪ್ರಾಧ್ಯಾಪಕರು, ಇಬ್ಬರು ಮಾಜಿ ಮಂತ್ರಿಗಳು ಸೇರಿರುವ ಈ ಸಮಾರಂಭ ಶಾಸ್ತ್ರಿಗಳ ವ್ಯಕ್ತಿತ್ವವನ್ನು ತೋರಿಸುತ್ತೆ. ಇವರು ಬಸವಪ್ಪಶಾಸ್ತ್ರಿ, ಕರಿಬಸವಶಾಸ್ತ್ರಿಗಳ ಪರಂಪರೆಯುಳ್ಳವರು.

"ಕನ್ನಡದ ಏಕೀಕರಣದ ಶಕ್ತಿಅವರು. ಕುವೆಂಪುರವರ ಕಾವ್ಯಶಕ್ತಿಯ ಪ್ರಭಾವ ಏಕೀಕರಣಕ್ಕೆ ಹೇಗೆ ಸಾಧಕವಾಯಿತೋ ಅಂಥದೇ ಶಕ್ತಿ ಶಾಸ್ತ್ರಿಗಳ ಭಾಷಣ ದಲ್ಲಿದೆ" ಎಂದು ತಿಳಿಸಿದರು.

ಸಾಹಿತಿ ಕೃಷ್ಣಮೂರ್ತಿ ಪುರಾಣಿಕರು ಮಾತನಾಡಿ ಶಾಸ್ತ್ರಿಗಳ ಹಾಗೂ ಅವರ ಬಗ್ಗೆ ಬಂದ ಹಲವು ಆತ್ಮೀಯ ಸನ್ನಿವೇಶಗಳನ್ನು ಹೇಳಿದರು. "ಶಾಸ್ತ್ರಿಗಳು ಕನ್ನಡ ದೇಶದ ಪ್ರತಿಯೊಂದು ಅಂಗುಲವನ್ನು ಅಳೆದಿದ್ದಾರೆ—ಸುತ್ತಿದ್ದಾರೆ. ಗಡಿನಾಡಿನಲ್ಲಿ ಅವರು ಮಾಡಿದ ಕೆಲಸ ಅಪ್ರತಿಮವಾದುದು. ನಮ್ಮನಾಡು ಯಾವುದಕ್ಕೂ ಕೊರತೆ ಯುಳ್ಳದ್ದಲ್ಲ. ಕುವೆಂಪು ಅವರ ಮಹಾಕಾವ್ಯ ಇಂಗ್ಲೆಂಡಿನ ಮಹಾಕವಿಗಳ ಮಹಾ ಕಾವ್ಯಗಳ ಸಾಲಿನಲ್ಲಿ ನಿಲ್ಲತಕ್ಕದ್ದು. ಅಂಥ ನಾಡಿನವರು ಶಾಸ್ತ್ರಿಗಳು" ಎಂದು ಹೇಳಿ ಅಭಿನಂದನೆಗಳನ್ನು ಅರ್ಪಿಸಿದರು.

ಅನಂತರ ಶಾರದಾವಿಲಾಸ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಚ್. ಎಂ. ಶಂಕರನಾರಾಯಣರಾಯರು ಮಾತನಾಡುತ್ತಾ "ಸಕಾಲದಲ್ಲಿ ಬಂದಮಳೆ ಪೈರಿನ ಬೆಳೆಗೆ ಹೇಗೆ ಪೋಷಕವಾಗುತ್ತದೆಯೋ ಹಾಗೇ ಶಾಸ್ತ್ರಿಗಳು ಎಳೆಯ ಲೇಖಕರಿಗೆ ಮಳೆ

ಯಿದ್ದಂತೆ. ಮೆಚ್ಚು-ನುಡಿ ತರುಣರಿಗೆ ಬಹಳ ಮುಖ್ಯ. ತಮ್ಮಲ್ಲಿ ಬಂದ ಎಳೆಯ, ಕಿರಿಯ ಹಿರಿಯ ಎನ್ನದೆ ಮೆಚ್ಚಿ, ಅವನ ಬೆನ್ನುತಟ್ಟುತ್ತಾರೆ. ಅಸೂಯೆ-ಅಧೈರ್ಯ-ಸೋಲು ಎಂಬ ಮಾತು ಅವರಲ್ಲಿ ಇಲ್ಲವೇ ಇಲ್ಲ.

"ಗಡಿನಾಡಿನ ಐಕ್ಯದ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ವೀರಯೋಧ ಶಾಸ್ತ್ರಿಗಳು, ಪ್ರತಿರೋಧಿಗಳಿಗೆ ಕೇಸರಿ. ಕನ್ನಡಕ್ಕಾಗಿ ೪೦ ವರುಷ ದುಡಿದ ಅವರ ಮೈಕಟ್ಟು ಕಂದಿಲ್ಲ. ಈ ನಂಜುಂಡರು ಶಿವಮೂರ್ತಿಯಾಗಿದ್ದಾರೆ. ಕನ್ನಡದ ಹರಿಹರ ಇವರಿಗೆ ಯಶಸ್ಸು ಕೊಡಲಿ" ಎಂದು ಶಾಸ್ತ್ರಿಗಳನ್ನು ಕೊಂಡಾಡಿದರು.

ಅನಂತರ ಶಾಸ್ತ್ರಿಗಳು ತಮಗೆ ಸಲ್ಲಿಸಿದ ಗೌರವಕ್ಕೆ ಉತ್ತರ ಕೊಡುತ್ತಾ "ನನ್ನ ಈಗಿನ ತಳಮಳವೆಂದರೆ, ಸ್ತೋತ್ರಮಾಡಿಸಿಕೊಳ್ಳುವುದು ಬಹಳ ಕಷ್ಟ. ಇವರುಗಳು ಹೇಳಿದ್ದೆಲ್ಲ ನನ್ನಲ್ಲಿ ಇದೆ ಎಂದರೆ ಅಹಂಕಾರವಾಗುತ್ತೆ; ಇಲ್ಲ ಎಂದಾಗ ಸ್ವೇಚ್ಛಾನುಸಂಧಾನವಾದೀತು.

"ನಾನು ೧೯೨೧ರಲ್ಲಿ ವಿದ್ಯಾರ್ಥಿಯಾಗಿದ್ದಾಗ ಆಗಿನ ಉಪಾಧ್ಯಾಯರು ಕನ್ನಡ ಹಿರಿಮೆ-ಗರಿಮೆಗಳನ್ನು ಹೇಳಿದರು. ಅಂದೇ ಕನ್ನಡನಾಡು ಒಂದಾಗುವಂತೆ ದುಡಿಯಬೇಕೆಂದು ಪ್ರತಿಜ್ಞೆಮಾಡಿದೆ. ಪದ್ಮಶ್ರೀ ಪ್ರಶಸ್ತಿ ಬಂದಾಗ ಕನ್ನಡಸಾಹಿತ್ಯ ಸೇವೆ ಮಾಡಿದವರಿಗೆ ಎಂದಿತ್ತು. ಇದರಿಂದ ಕನ್ನಡ ಸೇವೆ ಮಾಡುವವರನ್ನು ರಾಷ್ಟ್ರ ಗೌರವಿಸಿ ಮನ್ನಣೆ ನೀಡುತ್ತೆಂದು ತಿಳಿದೆ.

"ನಾನು ಜನ್ಮತಃ ಬಡವ-ಇಂದಿಗೂ ಬಡವನೇ. ಆದರೆ ಮನಸ್ಸಿನಲ್ಲಿ ಬಡವನಲ್ಲ. ನಾನು ಯಾವ ಕೆಲಸ ಮಾಡಲು ಹೊರಟರೂ ದೇವರ ಕೃಪೆಯಿರುತ್ತೆ. ಈ ೪೩ ವರುಷಗಳ ನನ್ನ ಅನುಭವ ಸಾವಿರಕಥೆ, ನೂರು ಕಾದಂಬರಿಗಳ ವಸ್ತುವಾಗುತ್ತೆ. ವಚನ ಸಾಹಿತ್ಯದ ಮೂಲಕ ೩೩ ವರುಷಗಳಿಂದ ಕನ್ನಡದ ಸೇವೆ ಮಾಡಿದ್ದೇನೆ. ಕನ್ನಡ ನಾಡಿನಲ್ಲಿ ಹುಟ್ಟಿರುವುದೇ ನನ್ನ ಪುಣ್ಯವೆಂದು ನಂಬಿದ್ದೇನೆ" ಎಂದು ಹೇಳಿ ತಮ್ಮನ್ನು ಗೌರವಿಸಲು ಆಗಮಿಸಿದ ಎಲ್ಲ ಹಿರಿಯ ಮಹನೀಯರಿಗೂ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು.

'ದೇವಗಂಗೆ' ಗ್ರಂಥದ ಸಂಪಾದಕರಾಗಿ ದುಡಿದ ಶ್ರೀ ಎನ್. ಬಸವಾರಾಧ್ಯರಿಗೆ ಶಾಲುಜೋಡಿ ಅರ್ಪಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಗೋಕಾಕರು ಮಾತನಾಡುತ್ತಾ "ಎಲ್ಲರೂ ಮಾತನಾಡುವುದಕ್ಕಿಂತ ಮೊದಲು ಮಾತನಾಡಬೇಕಿತ್ತು ನಾನು. ಇಲ್ಲಿ ಅಧ್ಯಕ್ಷನಾದುದರಿಂದ ಸಾಹಿತಿಗಳಿಂದ ದೂರವಿಟ್ಟಿದ್ದಾರೆ. ಈಹೊತ್ತಿನ ಸಮಾರಂಭದ ಫಲಶ್ರುತಿ ಅಂತಃಕರಣಪೂರ್ವಕವಾದುದು. ಅನೇಕ ಸಂಕೀರ್ಣತೆಯನ್ನು ಶಾಸ್ತ್ರಿಗಳ ಬಹುಮುಖ ಪ್ರತಿಭೆಯಲ್ಲಿ ಕಾಣಬಹುದು.

"ಪರಸ್ಪರ ಭಿನ್ನವಾದ ಒಟ್ಟಾರೆ ಪೋಷಕವಾದ ಅನೇಕ ಗುಣಗಳನ್ನು ಶಾಸ್ತ್ರಿಗಳಲ್ಲಿ ಕಾಣಬಹುದು. ಸಂಪ್ರದಾಯದ ಜಾಡುಹಿಡಿದು ಪಂಡಿತರಾದರು. ಕೀರ್ತನೆಮಾಡಿ

ಬಹುಮಾನಿತರಾಗಿದ್ದಾರೆ. ವೀರಶೈವ ಸಾಹಿತ್ಯವನ್ನು ಬರೆದು ಸಾಧಿಸಿದರು. ೧೯೩೬ರಲ್ಲಿ ಶಿವಮೊಗ್ಗದ ತುಂಗಾನದಿಯಲ್ಲಿ ಮುಳುಗಿಹೋಗುತ್ತಿದ್ದಾಗ ದೇವೂರಿನ ಕೆಂಚನಗೌಡರು ಶಾಸ್ತ್ರಿಗಳನ್ನು ಎಳೆದುತಂದು ಬದುಕಿಸಿದರು. ಆಗ ಸಾವಿನ ಜೊತೆಯಲ್ಲಿ ಗಂಗಾಪತಿಯ ಎದುರು ನಿಂತು ಇನ್ನುಮುಂದೆ ಶರಣರ ಹಾಗೂ ಕನ್ನಡದ ಸೇವೆ ಮಾಡುತ್ತೇನೆ ಎಂದರು. ೩೦ ವರುಷಗಳಿಂದ ಶರಣಸಾಹಿತ್ಯ ಸೇವೆ ಮಾಡುವುದರ ಜೊತೆಗೆ ಹರಿದಾಸ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ.

“ಇವರಲ್ಲಿ ವಿಶಾಲವಾದ ರಸಗ್ರಹಣ ಶಕ್ತಿಯಿದೆ. ಬೀದರಿನ ಬಗ್ಗೆ ತಾಜಮಹಲಿನ ಬಗ್ಗೆ ಕವಿತೆ ಬರೆದು ಕವಿಯಾಗಿದ್ದಾರೆ. ಅವರ ವಿಮರ್ಶೆಯಲ್ಲಿಯೂ ಆಧುನಿಕ ವಿಚಾರಗಳಿವೆ.”

“ಶಾಸ್ತ್ರಿಗಳು ಇಲ್ಲದಿದ್ದರೆ

‘ಕನ್ನಡಿಯೊಳಗಿನ ಗಂಟು
ಕನಸಿನೊಳಗಿನ ನಂಟು
–ಇದೇ ಕನ್ನಡ ನಿಘಂಟು’

“ಎನ್ನುವಂತಾಗುತ್ತಿತ್ತು. ಕನ್ನಡ ನಿಘಂಟಿನ ಕಾರ್ಯದಲ್ಲಿ ಅಪಾರವಾಗಿ ದುಡಿದಿದ್ದಾರೆ–ದುಡಿಯುತ್ತಿದ್ದಾರೆ. ಇಂಥವರ ಸೇವೆ ಕನ್ನಡ ನಾಡು-ನುಡಿಗೆ ಹೆಚ್ಚುಕಾಲ ಸಲ್ಲಲಿ” ಎಂದು ಆಶಿಸಿದರು.

ಅನಂತರ ಸಮಾರಂಭದ ಕಾರ್ಯದರ್ಶಿ ಶ್ರೀ ಎಂ. ಕೆ. ಶಿವಯೋಗಪ್ರಭುಗಳ ವಂದನಾರ್ಪಣೆಯೊಂದಿಗೆ ಸುಮಾರು ಮೂರೂವರೆ ತಾಸು ನಡೆದ ದೀರ್ಘ ಸಮಾರಂಭ ಮುಕ್ತಾಯಗೊಂಡಿತು.

—ಉಮಾಶಂಕರ

# ಸಂಪಾದಕೀಯ

## ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಚಿನ್ನದ ಹಬ್ಬ

ಕನ್ನಡ ನಾಡಿನ ಸಾಂಸ್ಕೃತಿಕ ಜೀವನದ ನವೋದಯಕ್ಕೆ ಕರ್ಣಾಟಕ ಸಂಘಗಳು ಸಲ್ಲಿಸಿರುವ ಸೇವೆ ಮಹತ್ತರವಾದುದು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ, ದಿವಂಗತ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ದೂರದರ್ಶಿತ್ವದ ಫಲವಾಗಿ ಆರಂಭವಾದ ಮೊದಲನೆಯ ಕರ್ಣಾಟಕ ಸಂಘ. ಈ ಸಂಘದಿಂದಾಗಿ ಒಂದು ಚಳವಳಿಯೇ ಆರಂಭವಾಯಿತು; ಒಂದು ಹೊಸ ಯುಗಕ್ಕೆ ನಾಂದಿಯಾಯಿತು.

'ಪ್ರಬುದ್ಧ ಕರ್ಣಾಟಕ'ಕ್ಕೆ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ತವರು. ಮೊದಲು ಈ ಪತ್ರಿಕೆ ಆ ಸಂಘದ ಮುಖಪತ್ರವಾಗಿಯೇ ಜನ್ಮವೆತ್ತಿತು. ಪತ್ರಿಕೆಯ ಚಿನ್ನದ ಹಬ್ಬದ ವರ್ಷದಲ್ಲಿಯೇ ಸಂಘದ ಚಿನ್ನದ ಹಬ್ಬವೂ ಜರುಗುತ್ತಿರುವುದು ನಮಗೆ ಇಮ್ಮಡಿ ಸಂತೋಷಕ್ಕೆ ಕಾರಣವಾಗಿದೆ.

ಕೆಲವಾರು ತಿಂಗಳುಗಳ ಕೆಳಗೇ ಆರಂಭವಾದ ಈ ಚಿನ್ನದ ಹಬ್ಬದ ಉತ್ಸವಗಳು ಈಚೆಗೆ ಮೂರು ದಿನಗಳ ಸಮಾರೋಪ ಸಮಾರಂಭದೊಡನೆ ಮುಕ್ತಾಯವಾದವು. ನಾಡಿನ ಹಿರಿಯ ಕಿರಿಯ ಲೇಖಕರನೇಕರು ಭಾಗವಹಿಸಿದ್ದ ಸಮಾರಂಭ ವಿಚಾರ ಸಂಕಿರಣ, ಕವಿಮೇಳ, ನಾಟಕ ಪ್ರದರ್ಶನ, ಗ್ರಂಥಪ್ರಕಟಣೆ ಮೊದಲಾದ ನಾನಾ ಕಾರ್ಯಕ್ರಮಗಳನ್ನೊಳಗೊಂಡಿತ್ತು. ಸಮಾರಂಭದ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಅಭಿನಂದನೆಗಳನ್ನರ್ಪಿಸುವುದು 'ಪ್ರಬುದ್ಧ ಕರ್ಣಾಟಕ'ಕ್ಕೆ ತುಂಬ ಸಂತೋಷ.

ಪ್ರತಿಭೆಯನ್ನು ಅನ್ವೇಷಿಸಿ, ಅದನ್ನು ಪೋಷಿಸಿ ಸಾಹಿತ್ಯ-ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ ಶ್ರಮಿಸಿ ಈ ಐವತ್ತು ವರ್ಷಗಳಲ್ಲಿ ಕರ್ಣಾಟಕ ಸಂಘ ಸಾರ್ಥಕವಾದ ಬದುಕನ್ನು ನಡೆಸಿದೆ. ಆದರ ಮುಂದಿನ ವರ್ಷಗಳು ಇನ್ನೂ ಮಹತ್ವಪೂರ್ಣದವಾಗಿರಲಿ ಎಂದು ನಾವು ಹಾರೈಸುತ್ತೇವೆ.

## ರಾಜರತ್ನಂ : ಅರುವತ್ತು

ಕನ್ನಡ ಸಾಹಿತ್ಯ ಪ್ರಪಂಚದ ಅತಿರಥರಲ್ಲಿ ಒಬ್ಬರಾದ ಶ್ರೀ ಜಿ. ಪಿ. ರಾಜರತ್ನಂ ಅವರಿಗೆ ಅರುವತ್ತು ವರ್ಷಗಳು ತುಂಬಿದವು (ಜನನ : ೧೯೦೯). ಅವರನ್ನು ಯಥೋಚಿತವಾಗಿ ಸತ್ಕರಿಸುವ ಸಮಾರಂಭವೊಂದು ಹಿರಿಯರಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಾಗೂ ಡಾ. ಡಿ. ವಿ. ಗುಂಡಪ್ಪ ಅವರ ಹಿರಿತನದಲ್ಲಿ ಈಚೆಗೆ ಬೆಂಗಳೂರಿನಲ್ಲಿ ನಡೆದದ್ದು ತುಂಬ ಉಚಿತವಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಉತ್ಕರ್ಷಕ್ಕೆ ಮುಖ್ಯ ಕಾರಣರಾದ, 'ಪ್ರಬುದ್ಧ ಕರ್ಣಾಟಕ'ಕ್ಕೆ ತೀರ ಹತ್ತಿರದವರಾದ ಶ್ರೀಯುತರನ್ನು ಅಭಿನಂದಿಸಿ ಅವರಿಗೆ ಸರ್ವ ಶುಭಗಳನ್ನೂ ಕೋರುವುದು ನಮಗೆ ಬಹು ಪ್ರಿಯವಾದ ಕೆಲಸವಾಗಿದೆ.

ಕಳೆದ ನಾಲ್ಕು ದಶಕಗಳಲ್ಲಿ ಶ್ರೀ ರಾಜರತ್ನಂ ಅವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳೂ, ನಡೆಸಿದ ಪ್ರಚಾರ ಕಾರ್ಯವೂ ಅದ್ವಿತೀಯವಾಗಿವೆ. ಬಗೆ ಬಗೆಯ ಸಾಹಿತ್ಯ ನಿರ್ಮಾಣಮಾಡಿದ ಅವರ ಕೆಲವು ಕೃತಿಗಳು ನಮ್ಮ ಸಾಹಿತ್ಯಚರಿತ್ರೆಯಲ್ಲಿಯೇ ವಿಶಿಷ್ಟ ಬಗೆಯವಾಗಿವೆ. ಹಳೆಯ ಸಾಹಿತ್ಯವನ್ನು ಹೊಸ ತಲೆಮಾರಿನವರಿಗೆ ಪರಿಚಯಮಾಡಿಕೊಡುವ ಅವರ ಯೋಜನೆಗಳು ಸ್ತುತ್ಯವಾಗಿವೆ. ನಮ್ಮ ಶಿಶು ಸಾಹಿತ್ಯದ ಕೆಲವೇ ಕೆಲವು ನಿರ್ಮಾಪಕರಲ್ಲಿ ಅವರು ಅಗ್ರಗಣ್ಯರಾಗಿದ್ದಾರೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಸ್ಫೂರ್ತಿಯೂ, ಶಕ್ತಿಯೂ ಆಗಿ ಅವರೆಲ್ಲ ಕನ್ನಡದ ಕೆಲಸವನ್ನು ಕೈಗೊಳ್ಳುವುದಕ್ಕೆ ರಾಜರತ್ನಂ ಕಾರಣರಾಗಿದ್ದಾರೆ.

ಶ್ರೀ ರಾಜರತ್ನಂ ಅವರ ಹುಟ್ಟುಹಬ್ಬ ಸಮಾರಂಭದಲ್ಲಿ ಡಾ. ಶಿವರಾಮ್ ಅವರು ತಮ್ಮ 'ಇಂದಾನೊಂದು ಕಾಲದಲ್ಲಿ' ಎಂಬ ಪುಸ್ತಕವನ್ನು ಅಚ್ಚುಮಾಡಿಸಿ ಅದರ ಪ್ರತಿಗಳನ್ನು ಉಡುಗೊರೆಯಾಗಿ ನೀಡಿದರು. ಇದರ ಮಾರಾಟದಿಂದ ಬರುವ ಹಣವನ್ನು ದಿವಂಗತ ಕೈಲಾಸಂ ಅವರ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ದತ್ತಿಯನ್ನು ಸ್ಥಾಪಿಸಲು ಬಳಸುವುದಾಗಿ ರಾಜರತ್ನಂ ಉಡುಗೊರೆಯನ್ನು ಸ್ವೀಕರಿಸಿದರು. ಇದು ಅನುಕರಣೀಯ ಆದರ್ಶವಾಗಿದೆ ; ರಾಜರತ್ನಂ ಅವರ ವ್ಯಕ್ತಿತ್ವಕ್ಕೆ ಅನುಗುಣವಾಗಿದೆ.

ಅರುವತ್ತು ವಸಂತಗಳನ್ನು ಕಂಡ ರಾಜರತ್ನಂ ನೂರನ್ನು ಕಾಣಲಿ ; ಅವರಿಗೆ ಆರೋಗ್ಯಭಾಗ್ಯಗಳಿರಲಿ ; ಅವರಿಂದ ಕನ್ನಡಿಗರ ಭಾಗ್ಯ ಹೆಚ್ಚುತ್ತಿರಲಿ.

## ಕಟ್ಟೀಮನಿಯವರಿಗೆ ಪ್ರಶಸ್ತಿ

ಕನ್ನಡದ ಪ್ರಖ್ಯಾತ ಲೇಖಕರಲ್ಲಿ ಒಬ್ಬರಾದ ಶ್ರೀ ಬಸವರಾಜ ಕಟ್ಟೀಮನಿ ಅವರಿಗೆ ಈ ಸಲದ 'ಸೋವಿಯೆತ್ ಲ್ಯಾಂಡ್' ಪತ್ರಿಕೆಯ ನೆಹರೂ ಪ್ರಶಸ್ತಿ ಲಭಿಸಿರುವುದು ಅಭಿನಂದನೀಯ ಸಂಗತಿಯಾಗಿದೆ. ಶ್ರೀಯುತರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯನ್ನು ಹೆಸರಿಸಿ ನೀಡಿರುವ ಈ ಪ್ರಶಸ್ತಿಯಿಂದ ಅವರಿಗೆ ಎಂಟು ಸಾವಿರ ರೂಪಾಯಿಗಳ ನಗದು ಬಹುಮಾನವೂ, ಕೆಲವು ವಾರಗಳ ಕಾಲ ಸೋವಿಯೆತ್ ರಷಿಯಾದಲ್ಲಿ ಸುತ್ತಾಡುವ ಅವಕಾಶವೂ ದೊರೆಯುತ್ತವೆ. ಈ ಪ್ರಶಸ್ತಿಯನ್ನು ಪಡೆದಿರುವ ಕನ್ನಡ ಲೇಖಕರಲ್ಲಿ ಶ್ರೀ ಕಟ್ಟೀಮನಿಯವರೇ ಮೊದಲಿಗರಾಗಿದ್ದಾರೆ.

ಮೈಸೂರು ಸರ್ಕಾರವು ಶ್ರೀ ಬಸವರಾಜ ಕಟ್ಟೀಮನಿಯವರನ್ನು ಸಾಹಿತ್ಯ ಕ್ಷೇತ್ರದ ಪ್ರತಿನಿಧಿಯೆಂದು ರಾಜ್ಯದ ವಿಧಾನಪರಿಷತ್ತಿಗೆ ನಾಮಕರಣ ಮಾಡಿದ ಕೆಲವೇ

ತಿಂಗಳುಗಳಲ್ಲಿ ಅವರಿಗೆ ಈ ಪ್ರಶಸ್ತಿಯೂ ಲಭಿಸಿರುವುದು ಕನ್ನಡಿಗರಿಗೆಲ್ಲ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ.

ಶ್ರೀಯುತರು ನಿರ್ಭೀತ ಲೇಖಕರೆಂದು ನಾಡಿನಲ್ಲಿ ಹೆಸರು ಮಾಡಿದ್ದಾರೆ. ಬಗೆ ಬಗೆಯ ಸಾಮಾಜಿಕ ದೋಷಗಳನ್ನೂ, ಕೊರತೆಗಳನ್ನೂ ಎತ್ತಿ ತೋರಿಸಿ, ಟೀಕಿಸಿ, ವಿಡಂಬಿಸಿ ಅದಕ್ಕೆ ಕಾರಣರಾದವರನ್ನು ನಾಚುವಂತೆ ಮಾಡುವಲ್ಲಿ ಅವರ ಲೇಖನಿ ಯಶಸ್ವಿಯಾಗಿದೆ. ಅನೇಕ ಪತ್ರಿಕೆಗಳನ್ನೂ ನಡೆಸಿ, ವಿಸ್ತಾರವಾದ ಅನುಭವವನ್ನು ಪಡೆದಿರುವ ಕಟ್ಟೀಮನಿಯವರು ವಾಸ್ತವಿಕತೆಗೆ ಕಲೆಯ ಬಣ್ಣ ಸವರಬಲ್ಲ ನಿಪುಣರು.

‘ಪ್ರಬುದ್ಧ ಕರ್ಣಾಟಕ’ ಶ್ರೀ ಕಟ್ಟೀಮನಿ ಅವರಿಗೆ ತನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ, ಅವರ ಈ ಮೊದಲ ಪ್ರಶಸ್ತಿ ಮುಂದಿನ ಹಲವು ಪ್ರಶಸ್ತಿಗಳಿಗೆ ನಾಂದಿಯಾಗಲೆಂದು ಹಾರೈಸುತ್ತದೆ.

## ಅಡಿಗರಿಗೆ ಶುಭಾಶಯಗಳು

ಈ ತಲೆಮಾರಿನ ಕನ್ನಡ ಕವಿಗಳಲ್ಲಿ ಅಗ್ರಗಣ್ಯರಾದ ಶ್ರೀ ಎಂ. ಗೋಪಾಲಕೃಷ್ಣ ಅಡಿಗರಿಗೆ ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ, ಕಳೆದ ನವಂಬರ್ ೮, ೯, ೧೦ ರಂದು ಉಡುಪಿಯ ಕರ್ಣಾಟಕ ಸಂಘದವರು ಸಮಾರಂಭವೊಂದನ್ನು ಏರ್ಪಡಿಸಿ ಕವಿಗಳನ್ನು ಸನ್ಮಾನಿಸಿದ್ದು ನಮ್ಮಲ್ಲಿ ಬೆಳೆಯುತ್ತಿರುವ ಒಳ್ಳೆಯ ಸಂಪ್ರದಾಯಕ್ಕೆ ಒಂದು ಉದಾಹರಣೆಯಾಗಿದೆ.

ಈ ಸಮಾರಂಭದ ಅಂಗವಾಗಿ ವಿಚಾರಗೋಷ್ಠಿಗಳನ್ನು ಏರ್ಪಡಿಸಿದ್ದೂ, ಗೋಷ್ಠಿಯಲ್ಲಿ ಓದಲಾದ ಪ್ರಬಂಧಗಳನ್ನು ಪ್ರಕಟಿಸಿದ್ದೂ, ಕವಿ ಅಡಿಗರಿಗೆ ನಿಧಿಯೊಂದನ್ನು ಸಮರ್ಪಿಸಿದ್ದೂ ಹರ್ಷದಾಯಕವಾದ ಸಂಗತಿಗಳಾಗಿವೆ. ಇದೇ ಸಂದರ್ಭದಲ್ಲಿ ಅಡಿಗರ ಆಯ್ದ ಕವನಗಳ ಪ್ರಾತಿನಿಧಿಕ ಸಂಕಲನವೊಂದನ್ನು ಸಿದ್ಧಗೊಳಿಸಿರುವುದಲ್ಲದೆ, ಅವರ ಕೆಲವು ಕವನಗಳ ಇಂಗ್ಲಿಷ್ ಅನುವಾದದ ಸಂಗ್ರಹವೊಂದನ್ನು ಪ್ರಕಟಿಸಿರುವುದು ಕೂಡ ಮೆಚ್ಚತಕ್ಕ ವಿಚಾರಗಳಾಗಿವೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಆಸಕ್ತರಾದ ಎಲ್ಲರಿಗೂ ಇಂಥ ಕೆಲಸಗಳು ನೆಮ್ಮದಿಯನ್ನು ತರುತ್ತವೆ.

ತನ್ನ ಕವಿ ಕಲಾವಿದರುಗಳನ್ನು, ವಿಚಾರವಂತರನ್ನು ಗೌರವಿಸುವುದು ಪ್ರಜ್ಞಾವಂತ ಸಮಾಜದ ಹೊಣೆಯಾಗಿದೆ. ಅಡಿಗರಂಥವರು ಎಲ್ಲ ಕಾಲಕ್ಕೂ ಸನ್ಮಾನ ಗೌರವಗಳಿಗೆ ಅರ್ಹರಾದವರು. ಅವರಿಗೆ ಐವತ್ತು ತುಂಬಿತು ಎನ್ನುವುದು ಒಂದು ನೆವ. ಈ ನೆವದಿಂದ ಉಡುಪಿಯ ಕರ್ಣಾಟಕ ಸಂಘದವರು ಅಡಿಗರಿಗೆ ಕನ್ನಡಿಗರ ಕೃತಜ್ಞತೆಗಳನ್ನು ಸಮರ್ಪಕವಾಗಿ ವ್ಯಕ್ತಗೊಳಿಸಿದ್ದಾರೆ.

ಈ ಸಂದರ್ಭದಲ್ಲಿ ‘ಪ್ರಬುದ್ಧ ಕರ್ಣಾಟಕ’ ಶ್ರೀ ಗೋಪಾಲಕೃಷ್ಣ ಅಡಿಗರಿಗೆ ತನ್ನ ಶುಭಾಶಯಗಳನ್ನು ಸಮರ್ಪಿಸುತ್ತದೆ. ಅವರು ಇನ್ನೂ ಅನೇಕ ಕಾಲ ಬಾಳಲೆಂದೂ, ಕನ್ನಡಕಾವ್ಯ ಸಂಪತ್ತನ್ನು ಬೆಳೆಸಲೆಂದೂ ಹೃತ್ಪೂರ್ವಕವಾಗಿ ಹಾರೈಸುತ್ತದೆ.

## ಗಳಗನಾಥರ ಸ್ಮರಣೆ

ಹೊಸಗನ್ನಡ ಸಾಹಿತ್ಯದ ಶಿಲ್ಪಿಗಳಲ್ಲಿ ಒಬ್ಬರಾದ ದಿವಂಗತ ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ ಅವರನ್ನು ಅವರ ಜನ್ಮಶತಮಾನೋತ್ಸವ (ಜನನ : ೧೮೬೯) ಸಂದರ್ಭದಲ್ಲಿ ಕನ್ನಡಿಗರು ನೆನಸಿಕೊಳ್ಳುತ್ತಿರುವುದು ಸಮಾಧಾನದ ಮಾತಾಗಿದೆ.

ಜನ್ಮಶತಮಾನೋತ್ಸವ ಸಮಾರಂಭವು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಮೊದಲಿಗೆ ನಡೆದು, ಆಮೇಲೆ ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ನಡೆದಂತೆ ವರದಿಯಾಗಿದೆ. ಕನ್ನಡ ಚಟುವಟಿಕೆಗಳ ಕೇಂದ್ರವಾಗಿರುವ ಮೈಸೂರು ವಿಶ್ವವಿದ್ಯಾನಿಲಯವೇ ಇದರಲ್ಲಿ ಮೇಲುಪಂಕ್ತಿಯನ್ನು ಹಾಕಿದ್ದು ಅರ್ಥವತ್ತಾಗಿದೆ. ಗಳಗನಾಥರು ಜೀವಂತರಾಗಿದ್ದಾಲೇ ಅವರನ್ನು ಕರೆದು ಗೌರವಿಸಿ ಸನ್ಮಾನಪತ್ರವನ್ನು ನೀಡಿದ ಹೆಮ್ಮೆ ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ್ದೇ ಆಗಿದೆ. ಈ ಪ್ರಸಂಗವನ್ನು ಗಳಗನಾಥರು ತುಂಬ ಸಂತೋಷದಿಂದ ಪದೇ ಪದೇ ಸ್ಮರಿಸುತ್ತಿದ್ದರೆಂದೂ ಹೇಳಲಾಗಿದೆ. ಆತ್ಮದ ಅಸ್ತಿತ್ವದಲ್ಲಿ ನಂಬುಗೆಯಿದ್ದವರು ಗಳಗನಾಥರು. ಆ ನಂಬುಗೆಯಂತೆ ಅವರ ಆತ್ಮ ಎಲ್ಲೋ ಇದೆ. ಆ ಆತ್ಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಈ ಕಾರ್ಯಕ್ರಮದಿಂದ ಖಂಡಿತವಾಗಿಯೂ ಸಂತೋಷವಾಗಬಹುದು.

ಅಲ್ಲಲ್ಲಿ ಸಂಸ್ಮರಣ ಸಮಾರಂಭಗಳು ನಡೆದರೂ, ಗಳಗನಾಥರ ಸಾಧನೆ-ಸಿದ್ಧಿಗಳ ಸಮತೂಕಕ್ಕೆ ಈ ಶತಮಾನೋತ್ಸವ ನಡೆಯಲಿಲ್ಲವೆಂದೇ ನಾವು ವಿಷಾದದಿಂದ ಹೇಳಬೇಕಾಗಿದೆ. ಗಳಗನಾಥರನ್ನು ಔಚಿತ್ಯಪೂರ್ಣವಾಗಿ ನೆನಸಿಕೊಳ್ಳುವುದಕ್ಕೆ ಅನೇಕ ಅವಕಾಶಗಳಿವೆ. ಕನ್ನಡಿಗರು ಅವನ್ನು ಕಾರ್ಯಗತಮಾಡಬೇಕು. ಗಳಗನಾಥರ ಎಷ್ಟೋ ಪುಸ್ತಕಗಳು ಅಚ್ಚೇ ಆಗಿಲ್ಲ; ಅಚ್ಚಾಗಿರುವ ಗ್ರಂಥಗಳಲ್ಲಿ ಅನೇಕವು ಈಗ ದೊರೆಯುವುದಿಲ್ಲ. ಅವರ ಎಲ್ಲ ಕೃತಿಗಳನ್ನೂ ಅಚ್ಚುಮಾಡಿಸಿ, ಎಲ್ಲರ ಕೈಗೂ ನಿಲುಕುವಂತೆ ಮಾಡಬೇಕಾದದ್ದು ಈಗ ಅಗತ್ಯವಾಗಿದೆ. ಕನ್ನಡ ನಾಡಿನ ಸರ್ಕಾರವೂ, ವಿಶ್ವವಿದ್ಯಾನಿಲಯಗಳೂ ಇತ್ತ ಗಮನಕೊಡಬೇಕೆಂದು ನಾವು ಸೂಚಿಸಬಯಸುತ್ತೇವೆ.

## ಸ್ವ-ವಿಷಯ

ಈ ಸಂಚಿಕೆಯೊಡನೆ 'ಪ್ರಬುದ್ಧ ಕರ್ಣಾಟಕ'ದ ಐವತ್ತನೆ ವರ್ಷ ಮುಗಿಯುತ್ತದೆ. ಅಚ್ಚುಕೂಟ ಚಿನ್ನದ ಸಂಚಿಕೆಗಳ ಸಿದ್ಧತೆಯ ಗಡಿಬಿಡಿಯಲ್ಲಿದ್ದುದರಿಂದ ಈ ಸಂಚಿಕೆಯ ಪ್ರಕಟಣೆ ವಿಳಂಬವಾಗಿದೆ. ಕಳೆದ ಕೆಲವು ಸಂಚಿಕೆಗಳನ್ನು ಸಕಾಲದಲ್ಲಿ ಪ್ರಕಟಿಸಲು ಪ್ರಯತ್ನಿಸಿ ನಾವು ತಕ್ಕಮಟ್ಟಿನ ಯಶಸ್ಸು ಪಡೆದಿದ್ದೆವು. ಆದರೆ ಮತ್ತೆ ಈ ಸಂಚಿಕೆ ತಡವಾಗಿ ವಾಚಕರ ಕೈಸೇರುತ್ತಿರುವುದರಿಂದ ನಮಗೆ ವಿಷಾದವಾಗಿದೆ. ವಾಚಕರ ಕ್ಷಮೆ ಕೇಳುವುದೊಂದೇ ನಮಗಿರುವ ದಾರಿಯಾಗಿದೆ.

ಯಾವ ಉದ್ದೇಶದಿಂದ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ಐವತ್ತು ವರ್ಷಗಳ ಹಿಂದೆ ಈ ಪತ್ರಿಕೆಯನ್ನು ಸ್ಥಾಪಿಸಿದರೋ, ಆ ಉದ್ದೇಶಗಳನ್ನು ಪತ್ರಿಕೆ ಈ ಅರ್ಧ

ಶತಮಾನದ ಅವಧಿಯಲ್ಲಿ ಬಹುಪಾಲು ಈಡೇರಿಸಿದೆಯೆಂದು ಹೇಳಿದರೆ ಆತ್ಮಪ್ರಶಂಸೆ ಯಾಗಲಾರದು. ಈ ಸಾರ್ಥಕತೆ ಹಲವಾರು ಜನ ಹಿರಿಕಿರಿಯರು ಬೆಂಬಲ ನೀಡಿದ್ದರಿಂದ ಶ್ರಮಿಸಿದ್ದರಿಂದ ಸಾಧ್ಯವಾಗಿದೆ. ಜೊತೆಗೆ ಉದ್ದಕ್ಕೂ ಮೈಸೂರು ವಿಶ್ವವಿದ್ಯಾನಿಲಯ ಈ ಪತ್ರಿಕೆಯನ್ನು ಬಹು ಔದಾರ್ಯದಿಂದ ಪೋಷಿಸಿಕೊಂಡು ಬಂದಿದೆ. ಪತ್ರಿಕೆಯ ಹೆಮ್ಮೆಗೆ ಅದನ್ನು ಸಂಪಾದಿಸಿದ ಹಿರಿಯರು, ಅದಕ್ಕೆ ಲೇಖನ ಬರೆದ ವಿದ್ವಾಂಸರು ಮುಖ್ಯ ಕಾರಣರಾಗಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಈ ಸಂಚಿಕೆಯೊಡನೆ ಪ್ರಕಟವಾಗಿರುವ "ವಿಜ್ಞಾನ ವಿಭಾಗ" ಕೊನೆಯದು. ಇನ್ನು ಆ ವಿಭಾಗ ಪ್ರಕಟವಾಗುವುದಿಲ್ಲ. ವಿಶ್ವವಿದ್ಯಾನಿಲಯ ವಿಜ್ಞಾನ ಬರಹಗಳಿಗೆಂದೇ 'ವಿಜ್ಞಾನ ಕರ್ಣಾಟಕ' ವೆಂಬ ಹೊಸ ಪತ್ರಿಕೆಯೊಂದನ್ನು 'ಪ್ರಬುದ್ಧ ಕರ್ಣಾಟಕ'ದ ಜೊತೆ ಪತ್ರಿಕೆಯನ್ನಾಗಿ ಆರಂಭಿಸಿರುವುದರಿಂದ ವಿಜ್ಞಾನವನ್ನು ಕುರಿತ ಲೇಖನಗಳೆಲ್ಲ ಅದರಲ್ಲಿ ಪ್ರಕಟವಾಗುತ್ತವೆ. 'ಮಾನವಿಕ ಕರ್ಣಾಟಕ' ಎಂಬ ಮತ್ತೊಂದು ಪತ್ರಿಕೆ ಯನ್ನೂ ಪ್ರಕಟಿಸಬೇಕೆಂಬ ಯೋಜನೆ ವಿಶ್ವವಿದ್ಯಾನಿಲಯಕ್ಕಿದೆ. ಆ ಪತ್ರಿಕೆ ಅಸ್ತಿತ್ವಕ್ಕೆ ಬರುವವರೆಗೆ ಮಾನವಿಕ ವಿಷಯಗಳಿಗೆ 'ಪ್ರಬುದ್ಧ ಕರ್ಣಾಟಕ'ದಲ್ಲಿ ಸ್ಥಾನವಿರುತ್ತದೆ. ಆ ಪತ್ರಿಕೆ ಆರಂಭಗೊಂಡಮೇಲೆ 'ಪ್ರಬುದ್ಧ ಕರ್ಣಾಟಕ' ಶುದ್ಧ ಸಾಹಿತ್ಯಕ ಪತ್ರಿಕೆ ಯಾಗಿ ಉಳಿಯುತ್ತದೆ.

ಪತ್ರಿಕೆಯ ಆತ್ಮಕಥೆ ಸಾಕಷ್ಟು ವಿವರವಾಗಿ ಚಿನ್ನದ ಸಂಚಿಕೆಯಲ್ಲಿ ಪ್ರಕಟವಾಗು ವುದರಿಂದ ಇಲ್ಲಿ ಹೇಳಬೇಕಾದ ಹೆಚ್ಚಿನ ಮಾತುಗಳಿಲ್ಲ. ಆದರೆ ಒಂದು ವಿಷಯವನ್ನು ಹೇಳಲೇಬೇಕು: ಅದು 'ಪ್ರಬುದ್ಧ ಕರ್ಣಾಟಕ'ದ ಚಂದಾದಾರ ಸಂಖ್ಯೆಗೆ ಸಂಬಂಧಿ ಸಿದ್ದು. ಐವತ್ತು ವರ್ಷ ಬಾಳಿದ ಇಂಥ ಒಂದು ಪತ್ರಿಕೆಗೆ ಒಂದು ಸಾವಿರದಷ್ಟೂ ಚಂದಾದಾರರಿಲ್ಲ ಎನ್ನುವ ಮಾತು ಕನ್ನಡಿಗರಿಗೆ ಗೌರವ ತರುವಂಥದಲ್ಲ. ವಿಶ್ವವಿದ್ಯಾ ನಿಲಯ ಇದನ್ನು ಲಾಭದ ದೃಷ್ಟಿಯಿಂದ ನೋಡುವುದಿಲ್ಲವಾದರೂ, ಈ ಸಂದರ್ಭ ವಿದ್ಯಾವಂಥ ಕನ್ನಡಿಗರ ವಾಚನ ಹವ್ಯಾಸವನ್ನೇ ಪ್ರಶ್ನಿಸುವಂಥವಾಗಿದೆ. ಈ ಐವತ್ತನೆ ಸಂಪುಟದ ಚಂದಾದಾರರ ಸಂಖ್ಯೆ ಮೊತ್ತಮೊದಲಬಾರಿಗೆ ಸಾವಿರದ ಗಡಿಯನ್ನು ದಾಟಿರುವುದು ನಮಗೆ ಹೊಸ ಆಸೆಯನ್ನೇನೊ ಮೂಡಿಸಿದೆ; ಅದನ್ನು ಉಳಿಸಿ ಬೆಳೆಸುವುದು ಈಗ ಕನ್ನಡ ಜನತೆಗೆ ಬಿಟ್ಟದ್ದು.

# ಪ್ರಬುದ್ಧ ಕರ್ಣಾಟಕ

## ವಿಜ್ಞಾನ ವಿಭಾಗ

ಸಂಪುಟ ೫೦ ಸಂಚಿಕೆ ೪

೧೯೮

ಕೀಲಕ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೯

# ವಿಷಯ ಸೂಚಿಕೆ

ಸಂ. ಸ. ರಾಮಸ್ವಾಮಿ

# ಸಸ್ಯಪ್ರಪಂಚದಲ್ಲಿ ಆಶ್ಚರ್ಯಕರ ವಿಷಯಗಳು

## ವೃಕ್ಷಗಳ ಆಯುಃಪರಿಮಿತಿ, ಎತ್ತರ, ದಪ್ಪ ಮುಂತಾದವುಗಳು

ಮಾನವ ದಿನದಿನವೂ ಸಣ್ಣಪುಟ್ಟ ಅನೇಕಾನೇಕ ತರುಲತೆಗಳೂ, ವೃಕ್ಷಗಳೂ ನಶಿಸಿ ಹೋಗುತ್ತಿರುವುದನ್ನು ನೋಡುತ್ತಿದ್ದಾನೆ. ಕೆಲವನ್ನಂತೂ ತಾನೇ ಬೆಳೆಸಿ ಅವುಗಳ ಫಲವನ್ನುಂಡು ಅನಂತರ ಅವು ನಶಿಸಿಹೋದಮೇಲೆ, ಅವುಗಳ ಆಯುಸ್ಸಿಷ್ಟೇ, ಅಲ್ಪಾಯುಗಳು! ಎಂದು ನಿಟ್ಟುಸಿರು ಬಿಟ್ಟಿದ್ದಾನೆ. ಆದರೆ ನೂರಾರು ಸಾಮ್ರಾಜ್ಯಗಳೂ, ಮಾನವ ಪೀಳಿಗೆಗಳೂ ಅಳಿದುಳಿದದ್ದನ್ನೆಲ್ಲಾ ಮೂಕಸಾಕ್ಷಿಗಳಂತೆ ನೋಡಿಕೊಂಡು ಇಂದಿಗೂ ತಲೆಯೆತ್ತಿ ನಿಂತುಕೊಂಡಿರುವ ಕೆಲವು ಪ್ರಾಚೀನಕಾಲದ ಅಪೂರ್ವವೃಕ್ಷಗಳಿವೆ ಎಂದರೆ ನಂಬುವುದು ಕಷ್ಟವಾದೀತು.

ವೃಕ್ಷಗಳ ಆಯುಸ್ಸನ್ನು ಹೇಗೆ ನಿರ್ಣಯಿಸಲಾಗುತ್ತದೆ? ಎಂದು ಆಶ್ಚರ್ಯ ಪಡಬಹುದು. ಆದರೆ ಮೇಲುನೋಟಕ್ಕೆ ಇದು ಎಷ್ಟು ಕಷ್ಟವೆಂದೆಣಿಸುತ್ತದೆಯೋ ಅಷ್ಟೇ ಸುಲಭವಾದುದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಾಮಾನ್ಯವಾಗಿ ಎಲ್ಲ ಮರಗಳೂ ತಾವು ವರ್ಷ ವರ್ಷಕ್ಕೆ ಗಾತ್ರದಲ್ಲಿ ಹಿಗ್ಗಿದ್ದಕ್ಕೆ (Secondary growth) ತಮ್ಮಲ್ಲಿ ವಲಯಾಕಾರದ ಕುರುಹುಗಳನ್ನಿಟ್ಟುಕೊಂಡಿರುತ್ತವೆ. ಈ ವಲಯಾಕಾರದ ವರ್ತುಲಗಳನ್ನು ವಾರ್ಷಿಕ ವರ್ತುಲಗಳು (Annual rings) ಅಥವಾ ಋತುಚಕ್ರಗಳು ಎಂದು ಕರೆಯುತ್ತಾರೆ. ಈ ವರ್ತುಲಗಳನ್ನು ಅನುಭವಿಯಾದ ಸಸ್ಯಶಾಸ್ತ್ರಜ್ಞನೊಬ್ಬ ಪರಿಶೀಲಿಸಿದರೆ, ಆ ವೃಕ್ಷದ ವಯಸ್ಸೆಷ್ಟು ಎಂಬುದನ್ನು ಸ್ವಲ್ಪವೂ ತಪ್ಪಿಲ್ಲದೆ ಸರಿಯಾಗಿ ನಿರ್ಣಯಿಸಬಲ್ಲ (ಚಿತ್ರ ೧). ೧ನೇ ಚಿತ್ರದಲ್ಲಿ ಈ ವರ್ತುಲಗಳ ಒಳರಚನೆಯನ್ನು ತೋರಿಸಲಾಗಿದೆ. ಆದರೆ ದುರದೃಷ್ಟವಶಾತ್ ಇಂತಹ ಕೆಲಸಮಾಡಬೇಕಾದರೆ ಆ ವೃಕ್ಷವನ್ನು ಕೆಳಗುರುಳಿಸಿ, ಅದರ ಕಾಂಡವನ್ನು ಅಡ್ಡ ಸೀಳಿದನಂತರ ಅದನ್ನು ಪರಿಶೀಲಿಸಲಾಗುತ್ತದೆ. ಆದ್ದರಿಂದ ವಿಜ್ಞಾನಿಗಳು ವಾರ್ಷಿಕ ವರ್ತುಲಗಳಿಗೂ, ವರ್ಷವರ್ಷಕ್ಕೆ ಮರ ಗಾತ್ರದಲ್ಲಿ ಹೆಚ್ಚಿದ್ದಕ್ಕೂ ಸಂಬಂಧ ಕಲ್ಪಿಸಿಕೊಂಡು ಸುಲಭ ರೀತಿಯಲ್ಲಿ ಮರದ ಆಯುಸ್ಸನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ. ಇದರಿಂದಲೇ ಪ್ರಾಚೀನಕಾಲದಿಂದಲೂ ಇರುವ ಹಲಕೆಲವು ದೈತ್ಯಾಕಾರದ ವೃಕ್ಷಗಳು ಇಂದಿಗೂ ಉಳಿದಿವೆ.




ಚಿತ್ರ ೧. ೧೨ ವರ್ಷ ವಯಸ್ಸಾಗಿರುವ ಮರದ ಕಾಂಡದ ಒಂದು ಭಾಗ.
ಬಗೆ. ೧–೧೨ ವಾರ್ಷಿಕ ವರ್ತುಲಗಳು.

ವರ್ತುಲಗಳ ಸೂಕ್ಷ್ಮಪರೀಕ್ಷೆಯಿಂದ ಆ ವೃಕ್ಷದ ವಯಸ್ಸನ್ನಲ್ಲದೆ, ಕೆಲವು ಸನ್ನಿವೇಶಗಳಲ್ಲಿ ಆ ವೃಕ್ಷ ಹಿಂದಿನ ವರ್ಷಗಳಲ್ಲಿ ಯಾವ ಯಾವ ಹವಾಮಾನ ವೈಪರೀತ್ಯಗಳನ್ನನುಭವಿಸಿದೆ? ಆ ಕಾಲದಲ್ಲಿ ವಾಯುಗುಣ ಹೇಗಿತ್ತು? ಎಂಬುದನ್ನೆಲ್ಲಾ ಹೇಳಬಹುದು. ಹೀಗಾಗಿ, ಮೂಕರಂತೆ ತಮ್ಮ ಸ್ವಸ್ಥಾನದಲ್ಲೇ ನಿಂತಿದ್ದರೂ ಈ ವೃಕ್ಷಗಳು ಹವಾಮಾನವನ್ನು ಬರೆದಿಡುವ ಸೂಚಕಯಂತ್ರಗಳಾಗಿಯೂ ಕೆಲಸಮಾಡಬಲ್ಲುವು.

ಎತ್ತರವಾಗಿ, ದಪ್ಪವಾಗಿ ಬೆಳೆದಿರುವುವೆಲ್ಲಾ ಪ್ರಾಚೀನ ವೃಕ್ಷಗಳಲ್ಲ; ಅಂತೆಯೇ ಗಿಡ್ಡಾಗಿ ಹೆಚ್ಚು ಎತ್ತರ ಬೆಳೆಯದೆ ಇರುವುವೆಲ್ಲಾ ಇತ್ತೀಚಿನವುಗಳಾಗಲಾರವು. ಭೂಮಿಯಲ್ಲಿ ಸುಮಾರು ೧೫೫ ಮಿಲಿಯ ವರ್ಷಗಳಷ್ಟು ಇತಿಹಾಸ ಹೊಂದಿರುವ ತಾಳಕಲ್ಪ (Cycas)ದ ಜಾತಿಗೆ ಸೇರಿದ ಸಸ್ಯಗಳು ಎತ್ತರ ದಪ್ಪಗಳಲ್ಲಿ ಅಷ್ಟೇನೂ ಪ್ರಶಂಸನಾರ್ಹಗಳಲ್ಲದಿದ್ದರೂ ಚಿರಂಜೀವಿಗಳಂತೆ ಇರಬಲ್ಲವುಗಳಾಗಿವೆ. ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಸಿ. ಜೆ. ಛೇಂಬರ್ಲಿನ್ ಎಂಬುವವರು [ಇವರು ಅನಾವೃತಬೀಜ ಸಸ್ಯಗಳ (Gymnosperms) ಮೇಲೆ ಕೆಲವು ಪುಸ್ತಕಗಳನ್ನೂ, ಅನೇಕ ಸಂಶೋಧನಾತ್ಮಕ ಪತ್ರಿಕೆಗಳನ್ನೂ ಬರೆದಿದ್ದಾರೆ] ಆಸ್ಟ್ರೇಲಿಯಾದಲ್ಲಿ ಬೆಳೆಯುವ ಮ್ಯಾಕ್ರೋಜಾಮಿಯ (Macrozamia) ಎಂಬ ವೃಕ್ಷವು ಸುಮಾರು ೧೨,೦೦೦ ವರ್ಷಗಳಿಂದ ೧೫,೦೦೦ ವರ್ಷಗಳವರೆಗೂ ಬದುಕಬಲ್ಲುದು ಎಂದು ಅಂದಾಜು ಮಾಡಿದ್ದಾರೆ. ಇಂತಹವುಗಳ ಆಯುಃಪರಿಮಿತಿಯು ಮುಂದೆ ಮಾನವನ ಆಯುಷ್ಯ ಅಣುಸದೃಶ. ಇದನ್ನು ಬಿಟ್ಟರೆ ದಕ್ಷಿಣ ಮೆಕ್ಸಿಕೋನ ಆಕ್ಸೆಕಾದಲ್ಲಿ ೬,೦೦೦ ವರ್ಷ

ಗಳಿಂದಲೂ ಜೀವಿಸಿರುವ ಸಿಪ್ರೆಸ್ (Cupressus) ಎಂಬ ದೈತ್ಯಾಕಾರದ ವೃಕ್ಷವಿದೆ. ಆಫ್ರಿಕದ ಬ್ಯಾಬಬ್ (Adansonia) ಎಂಬ ಮರವು ೫೧೫೦ ವರ್ಷಗಳವರೆಗೂ ಜೀವಿಸಬಲ್ಲುದು. ಅಮೆರಿಕದ ಸಿಕೋಯ (Sequoia ಚಿತ್ರ ೩) ೪,೦೦೦ ವರ್ಷದಿಂದ



ಚಿತ್ರ ೨. ೪ನೇ ವರ್ಷಕ್ಕೆ ಕಾಲಿಟ್ಟಿರುವ ಕಾಂಡದ ಸೂಕ್ಷ್ಮರಚನೆ.
(೧. ತೊಗಟೆ. ೨. ಮೂರನೇ ವರ್ಷದ ವಾರ್ಷಿಕ ವರ್ತುಲ. ೩. ಎರಡನೇ ವರ್ಷದ ವಾರ್ಷಿಕ ವರ್ತುಲ.)

೫,೦೦೦ ವರ್ಷಗಳವರೆಗೂ ಬದುಕಬಲ್ಲುದು ಎಂದು ತಿಳಿದುಬಂದಿದೆ. ಇವಿಷ್ಟೇ ಅಲ್ಲದೆ ಅಲ್ಲಲ್ಲಿ ಕಂಡುಬರುವ ಕೆಲವು ಪ್ರಸಿದ್ಧ ವೃಕ್ಷಗಳ ಆಯುಃಪರಿಮಿತಿಯನ್ನು ಈ ಕೆಳಗಿನ ಪಟ್ಟಿ ತಿಳಿಸುತ್ತದೆ.

| | | |
|---|---|---|
| ಅರಳಿಮರ (Ficus religiosa) | .... | ೨೦೦೦–೩೦೦೦ ವರ್ಷಗಳು |
| ಕ್ಯುಪ್ರೆಸಸ್ (Cupressus) | .... | ೨೦೦೦–೬೦೦೦ ,, |
| ಟಾಕ್ಸಸ್ (Taxus baccata) | .... | ೯೦೦–೩೦೦೦ ,, |
| ಜ್ಯೂನಿಪರ್ (Juniperus Communis) | .... | ೨೦೦೦ ,, |



ಚಿತ್ರ ೪. ಅಮೇರಿಕದಲ್ಲಿರುವ ಗಗನಚುಂಬಿಗಳಾದ ಸಿಕೋಯಾಗಳು.

| | | |
|---|---|---|
| ಸಿಡ್ರಸ್ (Cedrus labani) | .... | ೧೨೦೦-೪೦೦೦ ವರ್ಷಗಳು |
| ಪೈಕಾ (Pieca excelsa) | .... | ೨೦೦-೧೨೦೦ ,, |
| ಓಕ್ (Quercus) | .... | ೨೦೦- ೪೦೦ ,, |

ಪ್ರಕೃತದಲ್ಲಿ ಕೆಲವೇ ಸೂಕ್ತ ಉದಾಹರಣೆಗಳನ್ನು ಮಾತ್ರ ಮೇಲೆ ಆಯ್ದು ತೆಗೆದುಕೊಳ್ಳಲಾಗಿದೆ. ನಮ್ಮ ದೇಶದ ಎಲ್ಲ ಸಸ್ಯಗಳ ಆಯುಃಪರಿಮಿತಿಯನ್ನೊಳಗೊಂಡ ಪುಸ್ತಕವೊಂದನ್ನು ಬೇರೆಯಾಗಿಯೇ ಪ್ರಕಟಿಸಲಾಗುವುದು.

ಈಗ ಪ್ರಪಂಚದ ಅತಿ ದೀರ್ಘಜೀವಿ ವೃಕ್ಷಗಳ ವಿಷಯ ತಿಳಿದುದಾಯಿತು. ಹಾಗಾದರೆ ಅತ್ಯಂತ ಎತ್ತರವಾಗಿ ಬೆಳೆಯುವ ವೃಕ್ಷ ಯಾವುದು? ಮೊದಲು ಆಸ್ಟ್ರೇಲಿಯಾದ ಯೂಕಲಿಪ್ಟಸ್ ಅಮಿಗ್ಡಾಲಿಯಾನ (Eucalyptus amygdaliana) ಎಂಬುದೇ ಮೊದಲನೆಯದು ಎಂದು ತಿಳಿದಿದ್ದರು. ಇದು ೪೫೦ರಿಂದ ೪೮೦ ಅಡಿಗಳಷ್ಟು ಎತ್ತರ ಬೆಳೆಯಬಲ್ಲುದು. ಆದರೆ ಈಗ ೫೦೦ ಅಡಿಗಳಿಗಿಂತಲೂ ಹೆಚ್ಚು ಬೆಳೆದು ಗಗನ ಚುಂಬಿಗಳಂತೆ ಅಮೆರಿಕದಲ್ಲಿ ನಿಂತಿರುವ ಸಿಕೋಯಾ(Sequoia)ಗಳು ಇವನ್ನು

ಮೀರಿಸಿವೆ. ಬರೀ ಎತ್ತರವನ್ನು ಗಣನೆಗೆ ತೆಗೆದುಕೊಂಡರೆ ವೃಕ್ಷಸಮೂಹದಲ್ಲಿ ಮಾತ್ರ ಇವು ದೊಡ್ಡವು. ಆದರೆ ಉದ್ದದಲ್ಲಿ ಇವನ್ನು ಮೀರಿಸುವ ಅನೇಕ ಸಸ್ಯಗಳಿವೆ. ಎಷ್ಟೋ ಬಳ್ಳಿಗಳೂ ಹಾಗೂ ಸಾಗರಸಸ್ಯಗಳೂ ಉದ್ದದಲ್ಲಿ ಇವುಗಳ ಎರಡರಷ್ಟು ಮೂರರಷ್ಟಿರುತ್ತವೆ. ಉದಾಹರಣೆಗೆ ಮಾಕ್ರೊಸಿಸ್ಟಿಸ್ (Macrocystis) ಎಂಬ ಸಾಗರಸಸ್ಯವು ಸುಮಾರು ೧೫೦೦ ಅಡಿಗಳಿಗಿಂತಲೂ ಹೆಚ್ಚು ಬೆಳೆಯುತ್ತದೆ. ಕೆಲವು ಜಾತಿಯ ಬಿದಿರುಗಳು ೭೦೦ ಅಡಿಗಳವರೆಗೂ ನಿಮಿರಿನಿಲ್ಲುತ್ತವೆ.

ಇನ್ನು ದಪ್ಪದಲ್ಲಿ: ಕ್ಯಾಸ್ಟೀನಿಯಾ ವಲ್ಗಾರಿಸ್ (Castenea vulgaris) ಎಂಬ ಮರವು ೬೫ ಅಡಿಗಳಷ್ಟು (೨೫ ಮೀಟರ್) ಸುತ್ತಳತೆ ಪಡೆಯಬಲ್ಲುದು. ಹಿಂದೆಯೇ ತಿಳಿಸಿ ದಕ್ಷಿಣ ಮೆಕ್ಸಿಕೋದ ಸಿಪ್ರೆಸ್ (Cupressus) ಮರದ ಸುತ್ತಳತೆ ೧೭೪ ಅಡಿಗಳು. ಮೆಕ್ಸಿಕೋದಲ್ಲೇ ಇರುವ ಟಾಕ್ಸೋಡಿಯಂ (Taxodium) ಎಂಬ ವೃಕ್ಷದ ಸುತ್ತಳತೆ ೫೨ (೧೬.೫ ಮೀಟರ್) ಅಡಿಗಳು. ಬ್ಯಾಬಬ್ (Adansonia) ವೃಕ್ಷವು ೯ ಮೀಟರ್ ಸುತ್ತಳತೆ ಹೊಂದುವುದಂತೂ ಸಾಮಾನ್ಯ.



ಚಿತ್ರ ೪. ಕಲ್ಕತ್ತೆಯ ಸಸ್ಯಗಳ ತೋಟದಲ್ಲಿರುವ ಆಲದಮರ.
ಇದರ ಸುತ್ತಳತೆ ೧,೦೦೦ ಅಡಿಗಳು.

ಇನ್ನೊಂದು ಸೋಜಿಗಕರ ವೃಕ್ಷ ಎಂದರೆ ಆಲದಮರ (Ficus benghalensis). ನಮ್ಮ ದೇಶದಲ್ಲಂತೂ ಪ್ರಾಚೀನಕಾಲದಿಂದಲೂ ಇರುವ ಆಲದಮರಗಳಿಗೇನೂ ಕೊರತೆಯಿಲ್ಲ. ಫೋರ್ಬ್ಸ್ (Forbes) ಎಂಬುವನು ತನ್ನ 'Oriental Memoirs' ಎಂಬ ಪುಸ್ತಕದಲ್ಲಿ ತಾನು ಭಾರತದ ನರ್ಮದ ನದಿಯ ತೀರದಲ್ಲಿ ಕಂಡ ಆಲದಮರವನ್ನು ಈ ರೀತಿ ವರ್ಣಿಸಿದ್ದಾನೆ: " ಈ ಆಲದಮರದ ಕೆಳಗೆ ನಾನೆಷ್ಟೋ ಸಂತೋಷದ ದಿನ

ಗಳನ್ನು ಕಳೆದಿದ್ದೇನೆ. ಇದರ ಸುತ್ತಳತೆ (೧೮೩೪ರಲ್ಲಿ) ೨,೦೦೦ ಅಡಿಗಳಿಗೂ ಜಾಸ್ತಿಯಾಗಿದೆ. ನದೀ ತೀರದ ಬಹಳಷ್ಟು ಭಾಗವನ್ನು ಆಕ್ರಮಿಸಿಕೊಂಡಿರುವ ಈ ಮಹಾನ್ವೃಕ್ಷದ ಹಲಕೆಲವು ಬುಡಗಳು ಪ್ರವಾಹದ ಹೊಡೆತದಿಂದ ಆಗಾಗ್ಗೆ ನಾಶವಾಗುತ್ತಿದ್ದರೂ ಈ ಮರದ ಬೆಳವಣಿಗೆ ಅಗಾಧ ಮತ್ತು ಸರ್ವತೋಮುಖ. ಸುಮಾರು ೩೦೦, ೩೫೦ಕ್ಕೂ ಹೆಚ್ಚು ಬುಡ(Trunk)ಗಳಿರುವ ಈ ಹೆಮ್ಮರದಿಂದ ರೆಂಬೆಗಳಂತೂ ಸುತ್ತಲೂ ಚಾಚಿಕೊಂಡಿವೆ".

ಇನ್ನೊಂದು ಜಗತ್ಪ್ರಸಿದ್ಧ ಆಲದಮರ ಎಂದರೆ ನಮ್ಮ ದೇಶದ ಕಲ್ಕತ್ತೆಯ ಸಸ್ಯಗಳ ತೋಟದಲ್ಲಿರುವುದು (ಚಿತ್ರ ೪). ಆದರೆ ಇದರ ಸುತ್ತಳತೆ ಒಂದು ಸಾವಿರ ಅಡಿಗಳಷ್ಟು ಮಾತ್ರ. ಒಂದು ವಿಧದಲ್ಲಿ ಆಲದಮರಗಳನ್ನು ಚಿರಂಜೀವಿಗಳೆಂದೇ ಕರೆಯಬಹುದು. ಆದರೆ ತಾಯಿ ಕಾಂಡವೇ ಇಷ್ಟು ವರ್ಷಗಳು ಜೀವಿಸಲಾರದು. ಅದರ ಬಿಳಲುಗಳು ಮೊದಮೊದಲು ನೆಲಸೇರಿದಮೇಲೆ ಅದರ ಬೃಹದ್ರೆಂಬೆಗಳಿಗೆ ಆಧಾರ ಸ್ತಂಭಗಳಂತೆ ವರ್ತಿಸಿದರೂ ಕ್ರಮೇಣ ತಾವೇ ಬುಡ(Trunk)ಗಳಂತೆ ವರ್ತಿಸಿ ಸುತ್ತಲೂ ಹರಡಿಕೊಳ್ಳುತ್ತವೆ.

ಅನುಬಂಧ

# ಭಾಷಾವಿಜ್ಞಾನ ಕೋಶ

(ಪಾರಿಭಾಷಿಕ ಶಬ್ದಸಂಕಲನ)

ಕೆ. ಕೆಂಪೇಗೌಡ

# ಭಾಷಾವಿಜ್ಞಾನ ಕೋಶ

(ಕಳೆದ ಸಂಚಿಕೆಯಿಂದ ಮುಂದುವರಿದುದು)

| | |
|---|---|
| Subjective psychology | —ಆತ್ಮನಿಷ್ಠ ಮನೋವಿಜ್ಞಾನ |
| Subjectmatter | —ವಾದವಿಷಯ, ಪ್ರಧಾನ ವಿಷಯ |
| Subjunctive | —ಅಭಿಪ್ರಾಯಾತ್ಮಕ |
| Subjunctive mood | —ಅಭಿಪ್ರಾಯಾತ್ಮಕವಿಧಿ, ಸಂಯೋಜಕವಿಧಿ |
| Sublative case | —ನಿಮ್ನಾರ್ಥವಿಭಕ್ತಿ |
| Sublinguistic area | —ಉಭಾಷಾಕ್ಷೇತ್ರ |
| Subminimal | —ಉಪಅಲ್ಪತಮ |
| Subminimal pair | —ಉಪ ಅಲ್ಪತಮಯುಗ್ಮ |
| Submit | —ನಿವೇದಿಸು, ಮಂಡಿಸು, ಮುಂದಿಡು, ಸಲ್ಲಿಸು |
| Submitted | —ನಿವೇದಿಸಿದ, ಮಂಡಿಸಿದ, ಮುಂದಿಟ್ಟ |
| Subordinate | —ಆಶ್ರಿತ, ಅಪ್ರಧಾನ, ಅಧೀನಸ್ಥ |
| Subordinate root | —ಆಶ್ರಿತಮೂಲ |
| Subordinate clause | —ಅಪ್ರಧಾನ ಉಪವಾಕ್ಯ, ಆಶ್ರಿತ ಉಪವಾಕ್ಯ |
| Subordinating | —ಸಂಯೋಜಕ, ಆಶ್ರಿತ |
| Subordinating language | —ಆಶ್ರಿತಭಾಷೆ |
| Subponemic variant | { ಸಂಸ್ವನಿಮಾಂಗ<br>ಧ್ವನಿ ವ್ಯತ್ಯಾಸ |
| Subprimary | —ಅಪ್ರಧಾನ |
| Subscription | —ಚಂದಾ |
| Subsection | —ಉಪಭಾಗ |
| Subscquent | —ಪರವರ್ತಿ ಸ್ಥಿತಿ |
| Subscquent change | —ಪರವರ್ತಿಸ್ಥಿತಿ ಪರಿವರ್ತನೆ |
| Subsidiary | —ಉಪ, ಗೌಣ |
| Subsidiary group | —ಉಪವರ್ಗ |
| Subsidiary language | —ಉಪಭಾಷೆ |
| Subsidiary phoneme | —ಉಪಸ್ವನಿಮ |
| Subsidiary member | —ಉಪಸದಸ್ಯ |
| Subsidiary morphene | —ಉಪರೂಪಿಮ, ಉಪಾಕೃತಿಮ |
| Subsidiary organ | —ಸಹಾಯಕಾಂಗ |
| Substandard | —ಅಪ್ರಧಾನ |
| Substantive | —ನಾಮಪದ, ವಿಶೇಷ್ಯಾತ್ಮಕ, ಮೌಲಿಕ, ಸಾರಭೂತ |

Substantive form —ಮೌಲಿಕರೂಪ, ವಿಶೇಷ್ಯಾತ್ಮಕ ರೂಪ
Substantive verb —ಸಹಾಯಕ ಕ್ರಿಯಾಪದ
Substantive theory —ಸಾರಭೂತ ಸಿದ್ಧಾಂತ, ಮೌಲಿಕ ಸಿದ್ಧಾಂತ
Substitute —ಆದೇಶ, ಪ್ರತಿಸ್ಥಾಪಿಸು
Substitute, grammatical form —ವ್ಯಾಕರಣರೂಪ ಪ್ರತಿಸ್ಥಾಪನೆ
Substitution —ಪ್ರತಿಸ್ಥಾಪನೆ, ಪ್ರತಿನಿಧಾನ
Substitution, linguistic —ಭಾಷಾ ಪ್ರತಿಸ್ಥಾಪನೆ
Substitution pattern —ಪ್ರತಿಸ್ಥಾಪನಾನುಕ್ರಮ
Substitution, sound —ಧ್ವನಿ ಪ್ರತಿಸ್ಥಾಪನೆ
Substitution practice —ಪ್ರತಿಸ್ಥಾಪನಾಭ್ಯಾಸ
Substitution alternant —ಅನ್ಯಪ್ರತ್ಯನ್ಯ ಪ್ರತಿಸ್ಥಾಪನೆ
Substitution theory —ಪ್ರತಿಸ್ಥಾಪನಾ ಸಿದ್ಧಾಂತ
Substitution drill —ಪ್ರತಿಸ್ಥಾಪನಾಭ್ಯಾಸ
Subtratum —ಆಧಾರ
Substratum theory —ಆಧಾರ ಸಿದ್ಧಾಂತ
Substracting —ಕಳೆಯುವುದು, ವ್ಯವಕಲನ
Subsystem of vowel —ಗೌಣಸ್ವರ ವ್ಯವಸ್ಥೆ
Subvocal —ಅರ್ಧಸ್ವರಾತ್ಮಕ, ಅರ್ಧಮೌಖಿಕ
Successful —ಸಫಲ
Succession —ಅನುಕ್ರಮ, ಉತ್ತರಾಧಿಕಾರಿ
Successive —ಅನುಕ್ರಮಿಕ
Suction —ಅಂತಃಸ್ಫೋಟ
Suction fricative —ಅಂತಃಸ್ಫೋಟ ಸಂಘರ್ಷಿ
Suction plosive —ಅಂತಃಸ್ಫೋಟ ಸ್ಪರ್ಶ
Suction sound —ಅಂತಃಸ್ಫೋಟ ಧ್ವನಿ
Suction stop —ಅಂತಃಸ್ಫೋಟ ಸ್ಪರ್ಶ
Sudden phonetic change —ಆಕಸ್ಮಿಕ ಧ್ವನಿಪರಿವರ್ತನೆ
Sudden sound change —ಆಕಸ್ಮಿಕ ಧ್ವನಿಪರಿವರ್ತನೆ
Sufficient —ಸಾಕಷ್ಟು
Sufficient Cause —ಸಾಕಷ್ಟು ಕಾರಣ
Sufficient data —ಸಾಕಷ್ಟು ಸಾಮಗ್ರಿ
Suffix —ಅಂತ್ಯ ಪ್ರತ್ಯಯ
Suffixing language —ಪ್ರಾತ್ಯಯಿಕ ಭಾಷೆ
Summary —ಸಾರಾಂಶ
Superior —ಉತ್ಕೃಷ್ಟ, ಉಚ್ಚತರ, ಶ್ರೇಷ್ಠ, ಉತ್ತಮ,

Superior analysis —ಉಚ್ಚತಮ ವಿಶ್ಲೇಷಣೆ, ಉಚ್ಚತರ ವಿಶ್ಲೇಷಣೆ
Superior Comparison —ಉಚ್ಚತರ ತುಲನೆ, ಉತ್ತಮ ತುಲನೆ
Superior language —ಶ್ರೇಷ್ಠಭಾಷೆ
Superior Character —ಉತ್ತಮ ಗುಣ
Superior intelligence —ಉತ್ಕೃಷ್ಟ ಬುದ್ಧಿ
Super —ಅತಿ, ಬಾಹ್ಯ
Super structure —ಬಾಹ್ಯರಚನೆ
Superavise —ಪರಿವೀಕ್ಷಿಸು
Superlative degree —ಉತ್ತಮಾವಸ್ಥೆ, ಉತ್ತಮ ಶ್ರೇಣಿ, ಅತ್ಯುತ್ತಮ ಶ್ರೇಣಿ, ತನುಭಾವ
Supplement —ಅನುಪೂರ್ಣ
Supplemental —ಅನುಪೂರಕ
Supplementary —ಅನುಪೂರಕ
Supplementary examination —ಅನುಪೂರಕ ಪರೀಕ್ಷೆ
Suppletion —ಭಿನ್ನಪದಾಗಮ, ಪೂರ್ತಿ, ಪೂರಕ
Suppletive —ಪೂರಕ, ಪೂರ್ವಾಗಮ
Suppletive form —ಪೂರಕ ರೂಪ
Suppletive alternant —ಅನ್ಯಪ್ರತ್ಯನ್ಯ ಪೂರಕರೂಪ
Support —ಸಹಾಯ, ಅವಲಂಬನೆ
Supra segmental —ಅಖಂಡ
Supra segmental phoneme —ಅಖಂಡ ಧ್ವನಿಮ, ಅಖಂಡ ಸ್ವನಿಮ
Supra segmental feature —ಅಂಖಂಡಾವಯವ
Survival —ಅವಶೇಷ, ಜೀವಿತವಾಗಿರು, ಬದುಕಿರು
Survival form —ಶೇಷರೂಪ, ಅವಶೇಷರೂಪ, ಜೀವಿತರೂಪ
Survival root —ಅವಶೇಷಧಾತು, ಜೀವಿತಧಾತು
Survey —ಸರ್ವೇಕ್ಷಣೆ, ಪರಿವೀಕ್ಷಣೆ
Survey, dialect —ಉಪಭಾಷಾ ಪರಿವೀಕ್ಷಣೆ
Survey, linguistic —ಭಾಷಾಪರಿವೀಕ್ಷಣೆ, ಭಾಷಾಸರ್ವೇಕ್ಷಣೆ
Survey, field —ಕ್ಷೇತ್ರ ಪರಿವೀಕ್ಷಣೆ, ಕ್ಷೇತ್ರ ಸರ್ವೇಕ್ಷಣೆ
Survey, Language —ಭಾಷಾಪರಿವೀಕ್ಷಣೆ
Survey, Sociological —ಸಾಮಾಜಿಕ ಪರಿವೀಕ್ಷಣೆ
Survey, historical —ಐತಿಹಾಸಿಕ ಪರಿವೀಕ್ಷಣೆ
Surd —ಅಘೋಷ
Suspicious —ಸಂಶಯಾಸ್ಪದ, ಸಂದಿಗ್ಧ, ಸಂದೇಹಾಸ್ಪದ
Suspicious pair —ಸಂಶಯಾತ್ಮಕ ಯುಗ್ಮ, ಸಂದೇಹಾಸ್ಪದ ಯುಗ್ಮ

Suspicious phoneme —ಸಂಶಯಾತ್ಮಕ ಧ್ವನಿಮ
Suspicious Sound —ಸಂಶಯಾತ್ಮಕ ಧ್ವನಿ
Syllabary —ವರ್ಣಮಾಲೆ, ಅಕ್ಷರ ಮಾಲೆ
Syllabation —ಅಕ್ಷರೀಕರಣ
Syllabication —ಅಕ್ಷರೀಕರಣ
Syllabic —ಅಕ್ಷರಿಕ, ವರ್ಣಯುಕ್ತ, ಅಕ್ಷರಾತ್ಮಕ
Syllabic division —ಅಕ್ಷರಿಕ ವಿಭಜನೆ, ವರ್ಣವಿಭಜನೆ
Syllabic Junctue —ಅಕ್ಷರಿಕ ಸಂಗಮ, ವರ್ಣಸಂಗಮ
Syllabic boundry —ಅಕ್ಷರಿಕ ಎಲ್ಲೆ, ವರ್ಣಾತ್ಮಕ ಸೀಮೆ
Syllabic sign —ಅಕ್ಷರಿಕ ಚಿಹ್ನೆ, ವರ್ಣಾತ್ಮಕ ಚಿಹ್ನೆ
Syllabic stress —ಅಕ್ಷರಿಕ ಬಲಾಘಾತ, ವರ್ಣಾತ್ಮಕ ಬಲಾಘಾತ
Syllabic sound —ಅಕ್ಷರಿಕ ಧ್ವನಿ, ಅಕ್ಷರಧ್ವನಿ
Syllabic syncope —ಸಮಾಕ್ಷರಲೋಪ, ವರ್ಣಲೋಪ
Syllabic writting —ಅಕ್ಷರ ಬರಹ, ವರ್ಣಾತ್ಮಕ ಬರಹ
Syllable —ಅಕ್ಷರ, ವರ್ಣ
Syllable, open —ಸ್ವರಾಂತ್ಯ ವರ್ಣ
Syllable, free —ಸ್ವರಾಂತ್ಯ ವರ್ಣ
Syllable, Checked —ವ್ಯಂಜನಾಂತ್ಯ ವರ್ಣ
Syllable, close —ವ್ಯಂಜನಾಂತ್ಯ ವರ್ಣ
Symbol —ಸಂಕೇತ, ಪ್ರತೀಕ
Symbol, linguistic —ಭಾಷಾಸಂಕೇತ
Symbol, language —ಭಾಷಾಸಂಕೇತ, ಭಾಷಾಪ್ರತೀಕ
Symbol, auditory —ಶ್ರವಣಾತ್ಮಕ ಸಂಕೇತ
Symbol, Vocal —ಮೌಖಿಕ ಸಂಕೇತ
Symbol, Phonetic —ಧ್ವನಿ ವಿಜ್ಞಾನ ಸಂಕೇತ, ಧ್ವನಿಪ್ರತೀಕ
Symbol, Phonemic —ಧ್ವನಿಮೀಯ ಸಂಕೇತ
Symbol, visible —ದೃಶ್ಯಾತ್ಮಕ ಸಂಕೇತ
Symbolic —ಪ್ರತೀಕಾತ್ಮಕ, ಸಾಂಕೇತಿಕ
Symbolic language —ಸಾಂಕೇತಿಕ ಭಾಷೆ
Symmetry —ಸುಸಾಮ್ಯ, ಸಾಮ್ಯ, ಸಮಮಿತಿ
Symmetrical —ಸುಸಾಮ್ಯ, ಸುಸಮ, ಸಮಮಿತಿ
Synchronic —ಏಕಕಾಲಿಕ ವರ್ಣನೆ, ಸಂಕಾಲಿಕ ವರ್ಣನೆ
Synchronic grammar —ಸಂಕಾಲಿಕ ವ್ಯಾಕರಣ, ಏಕಕಾಲಿಕ ವ್ಯಾಕರಣ
Synchronic linguistics —ಏಕಕಾಲಿಕ ಭಾಷಾವಿಜ್ಞಾನ, ಸಂಕಾಲಿಕ ಭಾಷಾವಿಜ್ಞಾನ

Synchronic phonetics —ಏಕಕಾಲಿಕ ಧ್ವನಿವಿಜ್ಞಾನ, ಸಂಕಾಲಿಕ ಧ್ವನಿವಿಜ್ಞಾನ
Synchronic phonol ogy —ಸಂಕಾಲಿಕ ಧ್ವನಿಮ ವಿಜ್ಞಾನ, ಏಕಕಾಲಿಕ ವರ್ಣನಾತ್ಮಕ ಧ್ವನಿಮ ವಿಜ್ಞಾನ
Synchronic morphology —ಏಕಕಾಲಿಕ ವರ್ಣನಾತ್ಮಕ ಆಕೃತಿಮಶಾಸ್ತ್ರ ಸಂಕಾಲಿಕ ರೂಪಿಮ ವಿಜ್ಞಾನ
Synchronic Syntax —ಏಕಕಾಲಿಕ ವರ್ಣನಾತ್ಮಕ ವಾಕ್ಯ ವಿಜ್ಞಾನ ಸಂಕಾಲಿಕ ವಾಕ್ಯವಿಜ್ಞಾನ
Synchronic analysis —ಏಕಕಾಲಿಕ ವಿವರಣೆ, ಸಂಕಾಲಿಕ ವಿಶ್ಲೇಷಣೆ
Synchronic study —ಏಕಕಾಲಿಕ ವಿವರಣಾಭ್ಯಾಸ, ಸಂಕಾಲಿಕ ವಿವರಣಾಭ್ಯಾಸ
Syncope —ಸ್ವರಲೋಪ, ಸಮಾಕ್ಷರ ಲೋಪ
Syncope vowel —ಮಧ್ಯಸ್ವರಲೋಪ
Synonymous —ಸಮಾನಾರ್ಥಪದ, ಸಮಾನಾರ್ಥಕ, ಪರ್ಯಾಯಪದ, ಏಕಾರ್ಥಪದ
Synonymous form —ಸಮಾನಾರ್ಥರೂಪ, ಪರ್ಯಾಯರೂಪ
Synonymous word —ಏಕಾರ್ಥಪದ
Synonym —ಪರ್ಯಾಯ, ಸಮಾನಾರ್ಥ, ಸಮಾನರೂಪ
Synonymy —ಏಕಾರ್ಥತೆ, ಸಮಾನಾರ್ಥತೆ
Syntactic —ವಾಕ್ಯಾತ್ಮಕ, ವಾಕ್ಯಕ್ರಮ
Syntatic category —ವಾಕ್ಯವರ್ಗ, ಪ್ರಯೋಗವರ್ಗ
Syntactic change —ವಾಕ್ಯಪರಿವರ್ತನೆ, ವಾಕ್ಯವ್ಯತ್ಯಾಸ
Syntactic campound —ವಾಕ್ಯಕ್ರಮಸಮಾಸ
Syntactic order —ವಾಕ್ಯಕ್ರಮ
Syntactic language —ವಾಕ್ಯಪ್ರಧಾನ ಭಾಷೆ
Syntactic regimen —ವಾಕ್ಯನಿಯಂತ್ರಣ
Syntactical —ವಾಕ್ಯಾತ್ಮಕ
Syntactical classification —ವಾಕ್ಯ ಮೂಲವರ್ಗೀಕರಣ
Syntactical construction —ವಾಕ್ಯರಚನೆ
Syntactical level —ವಾಕ್ಯಾಂತಸ್ತು, ವಾಕ್ಯಸ್ತರ
Syntactical pattern —ವಾಕ್ಯಾತ್ಮಕ ಅನುರೂಪ
Syntactical system —ವಾಕ್ಯಾತ್ಮಕ ಪದ್ಧತಿ
Syntactical structure —ಸಂರಚನಾತ್ಮಕ ವಾಕ್ಯ
Syntactics —ವಾಕ್ಯವಿಚಾರ, ವಾಕ್ಯವಿಜ್ಞಾನ
Syntagmatic —ವಾಕ್ಯರಚನಾತ್ಮಕ
Syntax —ವಾಕ್ಯವಿಜ್ಞಾನ

Synthetic —ಸಂಶ್ಲಿಷ್ಟ, ಸಂಯೋಗಾತ್ಮಕ, ಸಂಶ್ಲೇಷಣಾತ್ಮಕ
Synthetic division —ಸಂಶ್ಲೇಷಣಾತ್ಮಕ ವಿಭಾಗ
Synthetic language —ಸಂಯೋಗಾತ್ಮಕ ಭಾಷೆ, ಸಂಶ್ಲೇಷಣಾತ್ಮಕ ಭಾಷೆ
Synthetic order —ಸಂಯೋಗಾತ್ಮಕ ಕ್ರಮ
Synthctic material —ಸಂಶ್ಲಿಷ್ಟ ಪದಾರ್ಥ
Synthetic method —ಸಂಶ್ಲಿಷ್ಟ ವಿಧಿ, ಸಂಯೋಗಾತ್ಮಕ ವಿಧಿ
Synthetic, poly —ಬಹುಸಂಯೋಗಾತ್ಮಕ
Synthetic system —ಸಂಯೋಗಾತ್ಮಕ ಪದ್ಧತಿ
Synthetic way —ಸಂಯೋಗಾತ್ಮಕ ಮಾರ್ಗ
Synthetic stage —ಸಂಯೋಗಾವಸ್ಥೆ, ಸಂಶ್ಲಿಷ್ಟತೆ
Synthetic compound —ಸಂಯೋಗಾತ್ಮಕ ಸಮಾಸ
Synthesis —ಸಂಯೋಗಿಕ, ಸಂಶ್ಲೇಷಣೆ
System —ಅವಸ್ಥೆ, ಪದ್ಧತಿ, ನಿಯಮ, ಕ್ರಮ, ತಂತ್ರ, ವ್ಯವಸ್ಥೆ
Systematic —ಸುವ್ಯವಸ್ಥಿತ
Systematic analysis —ಸುವ್ಯವಸ್ಥಿತ ವಿಶ್ಲೇಷಣೆ
Systematic study —ಸುವ್ಯವಸ್ಥಿತ ಅಭ್ಯಾಸ
Systematic way —ಸುವ್ಯವಸ್ಥಿತ ಮಾರ್ಗ

## T

Ta-Ta Theory —ಟಾ, ಟಾ ಸಿದ್ಧಾಂತ
Taboo —ನಿಷಿದ್ಧ, ವರ್ಜಿತ, ಬಹಿಷ್ಕೃತ
Taboo word —ನಿಷಿದ್ಧ ಪದ, ವರ್ಜಿತ ಪದ
Tabulate —ಸಾರಣೀಕರಣ, ತಾಲಿಕೀಕರಣ
Tabulated —ಸಾರಣೀಬದ್ಧ, ತಾಲಿಕಬದ್ಧ
Tabulation —ಸಾರಣೀಕರಣ, ತಾಲಿಕೀಕರಣ
Tabulator —ತಾಲಿಕಬದ್ಧ
Tachography —ಸಂಕೇತಾಕ್ಷರ
Tactics —ತಂತ್ರ, ಸಮರತಂತ್ರ
Tactics, major —ಮುಖ್ಯತಂತ್ರ, ಪ್ರಧಾನ ತಂತ್ರ
Tactics, minor —ಗೌಣತಂತ್ರ
Tactile —ಸ್ಪರ್ಶಗ್ರಾಹ್ಯ
Tag —ಕಟ್ಟು, ಮುಳ್ಳು
Tagmeme —ರೂಪಿಮ, ಆಕೃತಿಮ, ಅರ್ಥಯುಕ್ತ ಘಟಕ, ವ್ಯಾಕರಣ ರೂಪ

Talent —ಪ್ರತಿಭಾಶಕ್ತಿ
Tally —ಗಣಿಸು, ತಾಳಿನೋಡು, ಹೋಲಿಸು
Tap —ಲಘುಘಾತ
Tap, single —ಏಕಲಘುಘಾತ
Tautological compound —ಪುನರುಕ್ತಿ ಸಮಾಸ
Tautology —ಪುನರುಕ್ತಿಶಾಸ್ತ್ರ, ದ್ವಿರುಕ್ತಿ
Target —ಗುರಿ, ಲಕ್ಷ್ಯ
Target language —ಪರಕೀಯ ಭಾಷೆ
Taxme —ಲಘುತಮ ರೂಪ, ರೂಪಿಮ
Teacher —ಅಧ್ಯಾಪಕ
